ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ (58) ಮತ್ತು ಸಾಯಿ ಸುದರ್ಶನ್ (61) ಅವರ ಶತಕದ ಬಲದಿಂದೊಂದಿಗೆ ಇಂಗ್ಲೆಂಡ್‌ನ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಭಾರತ 4 ವಿಕೆಟ್ ನಷ್ಟಕ್ಕೆ 264 ರನ್ ಗಳಿಸಿದೆ. ಜೈಸ್ವಾಲ್ 50 ವರ್ಷಗಳ ಬಳಿಕ ಮ್ಯಾಂಚೆಸ್ಟರ್‌ನಲ್ಲಿ 50ಕ್ಕೂ ಅಧಿಕ ರನ್ ಗಳಿಸಿದ ಭಾರತದ ಮೊದಲ ಆರಂಭಿಕ ಬ್ಯಾಟ್ಸ್‌ಮನ್ ಎಂಬ ಸಾಧನೆಗೆ ಭಾಜನರಾಗಿದ್ದಾರೆ. 1974ರಲ್ಲಿ ಕೊನೆಯ ಬಾರಿ ಮ್ಯಾಂಚೆಸ್ಟರ್‌ನಲ್ಲಿ ಬ್ಯಾಟಿಂಗ್ ದಿಗ್ಗಜ ಸುನೀಲ್ ಗವಾಸ್ಕರ್ ಅರ್ಧಶತಕ ದಾಖಲಿಸಿದ್ದರು.

ಸೊಂಪಾದ ಪುಟಗಳು

ಕಣ್ಣಿಗೆ ಕಾಣದ ಮೌಲ್ಯಗಳೇ ಸಂಸ್ಥೆಗಳ ನಡೆಸುವ ತೋರುದೀಪ !

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6



ಇಷ್ಟೊಂದು ಮಿನುಗುತಾರೆ, ಎಲ್ಲಿವರೆಗೆ ಇರುತಾರೆ?

ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ



ನೀವು ಖರ್ಚು ಮಾಡಿದ ನಂತರ ಮಿಗುವುದನ್ನು ಉಳಿತಾಯ ಮಾಡುವುದಕ್ಕಿಂತ, ಉಳಿತಾಯ ಮಾಡಿದ ನಂತರ ಮಿಗುವುದನ್ನು ಖರ್ಚು ಮಾಡುವುದು ಲೇಸು. ಹೀಗೆ ಮಾಡಿದರೆ ಎಂದೂ ಹಣಕಾಸಿನ ಸಮಸ್ಯೆ ಉದ್ಭವಿಸುವುದಿಲ್ಲ.

ವಕ್ರತುಂಡೋಕ್ತಿ

ಯಾರು ಪಾಸ್‌ವರ್ಡ್‌ಗಳನ್ನು ಮರೆಯುತ್ತಾರೋ, ಅವರು ಅದನ್ನು ಸರಿಯಾಗಿ ನೆನಪಿಟ್ಟುಕೊಂಡಿಲ್ಲ ಎಂದರ್ಥ.

ನೋಟಿಸ್ ವಾಪಸ್, ಜುಲೈ 25ರ ಸಣ್ಣ ವರ್ತಕರ ಬಂದ್ ರದ್ದು

ಸಿದ್ದು ಸಂಧಾನ ಸಫಲ

ಬೆಂಗಳೂರು: ಕಳೆದೊಂದು ವಾರದಿಂದ ರಾಜ್ಯದಲ್ಲಿ ವಿವಾದಕ್ಕೆ ಕಾರಣವಾಗಿದ್ದ ಜಿಎಸ್‌ಟಿ ನೋಟಿಸ್ ಗದ್ದಲಕ್ಕೆ ರಾಜ್ಯ ಸರಕಾರ ಕೊನೆಗೂ ಪರಿಹಾರ ಕಂಡುಕೊಂಡಿದೆ. ಇದರ ಬೆನ್ನಲ್ಲೇ ಪ್ರತಿಭಟನೆಗೆ ಕರೆ ನೀಡಿದ್ದ ಸಣ್ಣ ವ್ಯಾಪಾರಿ ಗಳು ತಮ್ಮ ಹೋರಾಟವನ್ನು ಕೈಬಿಟ್ಟಿದ್ದಾರೆ.

ಸಣ್ಣ ವ್ಯಾಪಾರಿಗಳಿಗೆ ವಾಣಿಜ್ಯ ತೆರಿಗೆ ಇಲಾಖೆ ನೀಡಿದ್ದ ನೋಟಿಸ್‌ಗೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಅವರ ನಿವಾಸದಲ್ಲಿ ಬುಧವಾರ ಸಂಜೆ ಮಹತ್ವದ ಸಭೆ ನಡೆಯಿತು. ಈ ಸಭೆಯಲ್ಲಿ, ನೋಟಿಸ್ ನೀಡಿರುವುದನ್ನು ಹಿಂಪಡೆಯುವ ಜತೆಜತೆಗೆ ಹಿಂದಿನ ತೆರಿಗೆ ಬಾಕಿಯನ್ನು ಮನ್ನಾ ಮಾಡಲು ಒಪ್ಪಿಗೆ ನೀಡಿದೆ. ಆದರೆ ಅದರ ಜತೆಗೆ ಎಲ್ಲ ವ್ಯಾಪಾರಿಗಳು ಕಡ್ಡಾಯವಾಗಿ ಜಿಎಸ್‌ಟಿ ನೋಂದಣಿ ಮಾಡಬೇಕು ಎನ್ನುವ ಸೂಚನೆ ನೀಡಲಾಗಿದೆ.

ಸಭೆಯಲ್ಲಿ ಭಾಗವಹಿಸಿದ್ದ ವ್ಯಾಪಾರಿಗಳು, ಸಣ್ಣ ವ್ಯಾಪಾರಿಗಳಲ್ಲಿ ಜಿಎಸ್‌ಟಿ ನೋಟಿಸ್ ಕುರಿತು ಗೊಂದಲವಿದೆ. ಸಾಲದ ಮೊತ್ತವೂ ಇದರಲ್ಲಿ ಸೇರಿಕೊಂಡಿದೆ. ವೈಯಕ್ತಿಕ ವಹಿವಾಟು ಹಣ ಸಹ ಇದರಲ್ಲಿ ಸೇರಿದೆ. ಜಿಎಸ್‌ಟಿ ನೋಟಿಸ್ ನೀಡುವುದು ತಪ್ಪಲ್ಲ. ಆದರೆ ವ್ಯಾಪಾರಿಗಳಿಗೆ ಪರಿ ಹಾರ ತೆರಿಗೆ ಪಾವತಿಸಲು ಅವಕಾಶ ನೀಡಬೇಕು. ಮಧ್ಯವರ್ತಿಗಳಿಗೆ ಅವಕಾಶ ನೀಡದೆ, ವ್ಯಾಪಾರಿ ಗಳು ನೇರವಾಗಿ ಇಲಾಖೆ ಸಂಪರ್ಕಿಸಿ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಕೆಲ ಪ್ರತಿನಿಧಿಗಳು ಮನವಿ ಮಾಡಿದರು. → 4

ಸಣ್ಣ ವ್ಯಾಪಾರಿಗಳಿಗೆ ವಾಣಿಜ್ಯ ತೆರಿಗೆ ಇಲಾಖೆ ನೀಡಿದ್ದ ನೋಟಿಸ್‌ಗೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಅವರ ನಿವಾಸದಲ್ಲಿ ಬುಧವಾರ ಸಂಜೆ ಮಹತ್ವದ ಸಭೆ ನಡೆಯಿತು.

- ವಿವಾದಕ್ಕೆ ಕಾರಣವಾಗಿದ್ದ ಜಿಎಸ್‌ಟಿ ನೋಟಿಸ್ ಗದ್ದಲಕ್ಕೆ ಪರಿಹಾರ
- ಹಳೇ ತೆರಿಗೆ ಮನ್ನಾ, ಆದರೆ ಜಿಎಸ್‌ಟಿ ನೋಂದಣಿ ಕಡ್ಡಾಯ
- ಹಾಲು, ತರಕಾರಿ ಸೇರಿ ವಿನಾಯಿತಿ ಇರುವ ವಸ್ತುಗಳಿಗೆ ತೆರಿಗೆ ವಿಧಿಸಲ್ಲ

ಹಳೆಯ ತೆರಿಗೆ ಬಾಕಿ ಮನ್ನಾ: ಸಿಎಂ

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಸಣ್ಣ ವ್ಯಾಪಾರಿಗಳಿಗೆ ನೋಟಿಸ್ ನೀಡಲಾಗಿರುವ ಹಳೆಯ ತೆರಿಗೆ ಬಾಕಿಯನ್ನು ಮನ್ನಾ ಮಾಡಲಾಗುವುದು. ಅದನ್ನು ಸರಕಾರ ವಸೂಲಿ ಮಾಡುವುದಿಲ್ಲ. ಆದರೆ, ಅವರೆಲ್ಲರೂ ಕಡ್ಡಾಯವಾಗಿ ಜಿಎಸ್‌ಟಿ ನೋಂದಣಿ ಮಾಡಬೇಕು ಎಂದು ಪ್ರಕಟಿಸಿದರು. ಹಾಲು, ತರಕಾರಿ, ಮಾಂಸ, ಹಣ್ಣಿನಂತಹ ಅಗತ್ಯ ಆಹಾರ ವಸ್ತುಗಳಿಗೆ ತೆರಿಗೆ ವಿನಾಯಿತಿ ಇದ್ದು, ಅಂತಹ ವ್ಯಾಪಾರಿಗಳಿಗೆ ನೋಟಿಸ್ ಕೊಟ್ಟಿದ್ದರೂ ಅವರಿಂದ ತೆರಿಗೆ ವಸೂಲಿ ಮಾಡುವುದಿಲ್ಲ. ಆದರೆ ಯಾರು ಕಾಯ್ದೆ ಪ್ರಕಾರ ತೆರಿಗೆ ಕಟ್ಟಬೇಕಾಗಿದೆಯೋ, ಅವರು ಕಟ್ಟಲೇಬೇಕು. ಯುಪಿಐ ವಹಿವಾಟು ಕೈಬಿಟ್ಟರೆ ವಹಿವಾಟಿನ ಮೇಲೆ ಪರಿಣಾಮ ಬೀರಲಿದೆ. ರಾಜ್ಯದಲ್ಲಿ ಕೇವಲ 9 ಸಾವಿರ ವ್ಯಾಪಾರಿಗಳಿಗೆ ಕಳೆದ 2-3 ವರ್ಷಗಳ ಅವಧಿಗೆ ಸಂಬಂಧಿಸಿದಂತೆ 18 ಸಾವಿರ ನೋಟಿಸ್ ಜಾರಿಗೊಳಿಸಲಾಗಿದೆ. ವ್ಯಾಪಾರ, ವಹಿವಾಟುಗಳಿಗೆ ಕಾನೂನುಬದ್ಧವಾಗಿ ಸರಕಾರ ಎಲ್ಲ ನೆರವು ನೀಡಲಿದೆ. ತೆರಿಗೆ ಸರಿಯಾಗಿ ಪಾವತಿಸಲು ಸಹಕಾರ ನೀಡಲಿದೆ. ವ್ಯಾಪಾರಿಗಳಿಗೆ ತೊಂದರೆ ನೀಡಬೇಕೆಂಬುವುದು ಸರಕಾರದ ಉದ್ದೇಶವಲ್ಲ. ಸರಕಾರ ಸಣ್ಣ ವ್ಯಾಪಾರಿಗಳ ಪರವಾಗಿದೆ ಎಂದು ಭರವಸೆ ನೀಡಿದರು.

ಪ್ರತಿಭಟನೆ ವಾಪಸ್

ಬಾಕಿ ತೆರಿಗೆ ಮನ್ನಾ ಮಾಡುವ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರು ಭರವಸೆ ನೀಡಿದ ಬೆನ್ನಲ್ಲೇ, ಫ್ರೀಡಂ ಪಾರ್ಕ್‌ನಲ್ಲಿ ಜು.25ಕ್ಕೆ ಕರೆದಿದ್ದ ಪ್ರತಿಭಟನೆಯನ್ನು ಹಿಂಪಡೆಯುವುದಾಗಿ ವ್ಯಾಪಾರಿಗಳ ಒಕ್ಕೂಟ ಪ್ರಕಟಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸಮಸ್ಯೆ ಆಲಿಸಿದ್ದು, ಪರಿಹರಿಸುವ ಭರವಸೆ ನೀಡಿದ್ದಾರೆ. ಆದ್ದರಿಂದ ವ್ಯಾಪಾರ ವಹಿವಾಟು ಬಂದ್‌ಗೆ ಯಾವುದೇ ಸಂಘಟನೆಗಳು ಬೆಂಬಲ ನೀಡಿಲ್ಲ ಎಂದು ಪ್ರತಿನಿಧಿಗಳು ಸ್ಪಷ್ಟಪಡಿಸಿದ್ದಾರೆ. ಈ ಹಿಂದೆ ನಿರ್ಧರಿಸಿದ್ದ ಎಲ್ಲ ರೀತಿಯ ಪ್ರತಿಭಟನೆಗಳನ್ನು ಕೈಬಿಡಲಾಗುವುದು ಎಂದು ಸಂಘ ಸಂಸ್ಥೆಗಳ ಪ್ರತಿನಿಧಿಗಳು ತಿಳಿಸಿದರು.

ಆರ್ಥಿಕ ಪರಿಸ್ಥಿತಿ, ಭೂ ಒಡೆತನ ಸೇರಿ ಸಮಗ್ರ ಸಮೀಕ್ಷೆ
ಸಿಎಂ ಸಿದ್ದರಾಮಯ್ಯ ನೇತೃತ್ವದ ಸಭೆಯಲ್ಲಿ ತೀರ್ಮಾನ

ಸೆ.22ರಿಂದ ಜಾತಿಗಣತಿ

ಬೆಂಗಳೂರು: ರಾಜ್ಯ ಸರಕಾರದ ವತಿಯಿಂದ ಈಗಾಗಲೇ ಸಿದ್ಧಪಡಿಸಿರುವ ಜಾತಿಗಣತಿಗೆ ಸಂಬಂಧಿಸಿದಂತೆ ಹಲವು ಗೊಂದಲಗಳು ವ್ಯಕ್ತವಾದ ಬೆನ್ನಲ್ಲೇ ಸೆ.22ರಿಂದ 15 ದಿನಗಳ ಕಾಲ ಮರುಸಮೀಕ್ಷೆ ನಡೆಸಲು ಸರಕಾರ ತೀರ್ಮಾನಿಸಿದೆ.

ಜಾತಿಗಣತಿ ಮರು ಸಮೀಕ್ಷೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸಿಎಂ ಅಧಿಕೃತ ನಿವಾಸ ಕಾವೇರಿಯಲ್ಲಿ ಮಹತ್ವದ ಸಭೆ ನಡೆಯಿತು. ಸಭೆಯ ಬಳಿಕ ಮಾತನಾಡಿದ ಸಿಎಂ, ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುವ ಕುರಿತಾಗಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಇದರಂತೆ, ರಾಜ್ಯದ ಪ್ರತಿಯೊಬ್ಬರ ಆರ್ಥಿಕ ಪರಿಸ್ಥಿತಿ, ಜಮೀನು ಇದೆಯೇ? ಇಲ್ಲವೇ? ಸೇರಿದಂತೆ ಸಮಗ್ರ ಸಮೀಕ್ಷೆ ನಡೆಯಬೇಕು. ಈ ಸಮೀಕ್ಷೆಯ ವರದಿ ಮುಂದಿನ ಬಜೆಟ್ ಸಿದ್ಧಪಡಿಸುವ ಸಂದರ್ಭದಲ್ಲಿ ಆಧಾರವಾಗಲಿದೆ. ಈ ಬಾರಿಯ ಸಮೀಕ್ಷೆ ದೇಶದಲ್ಲೇ ಮಾದರಿ ಸಮೀಕ್ಷೆಯಾಗಬೇಕು ಎಂದು ತಿಳಿಸಿದರು.

ಸೆಪ್ಟೆಂಬರ್ 22ರಿಂದ ಅಕ್ಟೋಬರ್ 7ರವರೆಗೆ 15 ದಿನ ಸಮೀಕ್ಷೆ ನಡೆಸುವ ನಿರ್ಧಾರ ಮಾಡಲಾಗಿದೆ. ಅಕ್ಟೋಬರ್ ಕೊನೆಯ ವಾರದೊಳಗೆ ಸಮೀಕ್ಷೆಯ ವರದಿ ಸಲ್ಲಿಸಬೇಕು. ತರಬೇತಿ ಸೇರಿದಂತೆ ಸಮೀಕ್ಷೆಗೆ ಪೂರ್ವಭಾವಿ ಸಿದ್ಧತೆಗಳನ್ನು ಈಗಲೇ ಆರಂಭಿಸಲು ಸೂಚನೆ ನೀಡಲಾಗಿದೆ. ಸಮೀಕ್ಷೆ ಅತ್ಯಂತ ಸಮರ್ಪಕವಾಗಿ ನಡೆಯಬೇಕು. ಸಮೀಕ್ಷೆ ಕುರಿತು ಯಾವುದೇ ದೂರುಗಳಿಗೆ ಆಸ್ಪದವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಸಮೀಕ್ಷೆಯಿಂದ ಯಾರೂ ಹೊರಗುಳಿಯದಂತೆ ಖಾತ್ರಿಪಡಿಸಬೇಕು ಎಂದರು.

ಮೊಬೈಲ್ ಆ್ಯಪ್‌ನಲ್ಲಿ ಸಮೀಕ್ಷೆ: ಕಾಂತರಾಜು ಆಯೋಗ 54 ಪ್ರಶ್ನೆಗಳನ್ನು ಸಿದ್ಧಪಡಿಸಿ ಈ ಹಿಂದೆ ಸಮೀಕ್ಷೆ ನಡೆಸಿತ್ತು. ಈ ಬಾರಿಯ ಸಮೀಕ್ಷೆಯಲ್ಲಿ ಇನ್ನಷ್ಟು ಅಂಶಗಳನ್ನು ಸೇರಿಸುವ ಕುರಿತು ಪರಿಶೀಲಿಸಲಾಗುವುದು. ಈ ಬಾರಿ ಮೊಬೈಲ್ ಆ್ಯಪ್ ಬಳಸಿಕೊಂಡು ಸಮೀಕ್ಷೆ ನಡೆಸಲಾಗುವುದು. ತೆಲಂಗಾಣದಲ್ಲಿ ಕೈಗೊಳ್ಳಲಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿ ಕುರಿತು ಅಧ್ಯಯನ ನಡೆಸಲು ಸೂಚನೆ ನೀಡಲಾಗಿದೆ. ಸಮೀಕ್ಷೆ ಕಾರ್ಯದ ಮೇಲುಸ್ತುವಾರಿಗೆ ಉನ್ನತಮಟ್ಟದ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ. ಸಮೀಕ್ಷೆಯು ವೈಜ್ಞಾನಿಕ ಹಾಗೂ ಪಾರದರ್ಶಕವಾಗಿ ನಡೆಯಬೇಕು. ಸಮೀಕ್ಷೆಯಲ್ಲಿ ಕೇಳಬೇಕಾದ ಪ್ರಶ್ನೆಗಳನ್ನು ಅಂತಿಮಗೊಳಿಸಲು ತಜ್ಞರ ಸಮಿತಿಯ ನೆರವು ಪಡೆಯಬೇಕು ಎಂದು ಹೇಳಿದರು.

ಸಭೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ತಂಗಡಗಿ, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯ್ಕ್, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಪೊನ್ನಣ್ಣ ಹಾಗೂ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಈ ಬಾರಿ ಸಮೀಕ್ಷೆ ಕಾರ್ಯಕ್ಕೆ 1.65 ಲಕ್ಷ ಗಣತಿದಾರರು ಸೇರಿದಂತೆ ಮಾನವ ಸಂಪನ್ಮೂಲ ಅವಶ್ಯಕತೆಯಿದೆ. ಸಮೀಕ್ಷೆಯ ಕಾರ್ಯಕ್ಕೆ ಶಿಕ್ಷಕರ ಸೇವೆಯೊಂದಿಗೆ ಇತರ ಇಲಾಖೆಗಳ ಸಿಬ್ಬಂದಿಯನ್ನು ಸಹ ಬಳಸಿಕೊಳ್ಳಲಾಗುವುದು. ಸಂಬಂಧಪಟ್ಟ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ, ಸಮೀಕ್ಷೆ ಕಾರ್ಯವನ್ನು ಯಶಸ್ವಿಗೊಳಿಸಬೇಕು. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಮೀಕ್ಷೆ ಕಾರ್ಯವನ್ನು ಯಶಸ್ವಿಗೊಳಿಸಲು ಯೋಜನೆ ರೂಪಿಸಿ ಕಾರ್ಯನಿರ್ವಹಿಸಬೇಕು.
-ಸಿದ್ದರಾಮಯ್ಯ ಮುಖ್ಯಮಂತ್ರಿ

- ದೇಶಕ್ಕೆ ಮಾದರಿಯಾಗುವ ರೀತಿಯಲ್ಲಿ ಸಮೀಕ್ಷೆ ನಡೆಸಲು ತೀರ್ಮಾನ
- ಸಮೀಕ್ಷೆಗೆ ಸುಮಾರು 1.65 ಲಕ್ಷ ಜನರನ್ನು ಬಳಸಿಕೊಳ್ಳಲು ನಿರ್ಧಾರ
- ಅಕ್ಟೋಬರ್ ಕೊನೆಯ ವಾರದೊಳಗೆ ಸಮೀಕ್ಷೆ ವರದಿ ಸಲ್ಲಿಸಲು ಸೂಚನೆ

ಮಾವು ಖರೀದಿ 200 ಕ್ವಿಂಗೆ ಹೆಚ್ಚಳ

ಬೆಂಗಳೂರು: ಬೆಲೆ ಕುಸಿತದಿಂದ ಕಂಗೆಟ್ಟಿರುವ ರಾಜ್ಯದ ಮಾವು ಬೆಳೆಗಾರರ ನೆರವಿಗೆ ಧಾವಿಸಿರುವ ಸರಕಾರ ಈ ಹಿಂದಿನ ಆದೇಶವನ್ನು ಮಾರ್ಪಾಡು ಮಾಡಿ ಬೆಂಬಲ ಬೆಲೆಯೊಂದಿಗೆ ಪ್ರತಿ ಎಕರೆಗೆ 40 ಕ್ವಿಂಟಾಲ್‌ನಂತೆ ಗರಿಷ್ಠ 5 ಎಕರೆಗೆ 200 ಕ್ವಿಂಟಾಲ್‌ವರೆಗೆ ಮಿತಿಗೊಳಿಸಿ ಖರೀದಿಸಲು ಆದೇಶ ಹೊರಡಿಸಿದೆ. ಈ ಆದೇಶವು ಈಗಾಗಲೇ ನೋಂದಾಯಿಸಿರುವ ರೈತರಿಗೂ ಸಹ ಅನ್ವಯವಾಗಲಿದೆ.

2 ಕಾರಿಗೆ 38 ಲಕ್ಷ ತೆರಿಗೆ ಕಟ್ಟಿದ ಬಾಬು

ಬೆಂಗಳೂರು: ಬಾಲಿವುಡ್ ನಟ ಅಮಿತಾಬ್ ಬಚ್ಚನ್, ಅಮೀರ್ ಖಾನ್ ಅವರಿಂದ ಖರೀದಿಸಿದ್ದ ರೋಲ್ಸ್ ರಾಯ್ಸ್ ಕಾರುಗಳಿಗೆ ಉದ್ಯಮಿ ಕೆಜಿಎಫ್ ಬಾಬು ಬರೋಬ್ಬರಿ 38 ಲಕ್ಷ ರು. ತೆರಿಗೆ ಪಾವತಿ ಮಾಡಿದ್ದಾರೆ. ಅಮೀರ್ ಖಾನ್ ಅವರಿಂದ ಖರೀದಿಸಿದ್ದ ರೋಲ್ಸ್ ರಾಯ್ಸ್ ಕಾರಿಗೆ 19.73 ಲಕ್ಷ ರು., ಅಮಿತಾಬ್ ಬಚ್ಚನ್ ಅವರಿಂದ ಖರೀದಿಸಿದ್ದ ಕಾರಿಗೆ 18.53 ಲಕ್ಷ ರು. ತೆರಿಗೆ ಪಾವತಿ ಸಿದ್ದಾರೆ.

ಡಿಜಿಟಲ್ ಅರೆಸ್ಟ್ ವಿವಸ್ತ್ರ, ವಸೂಲಿ

ಬೆಂಗಳೂರು: ಮನಿ ಲಾಂಡರಿಂಗ್ ಆರೋಪದ ಹೆಸರಲ್ಲಿ ಕರೆ ಮಾಡಿದ ವ್ಯಕ್ತಿಯೊಬ್ಬ ಡಿಜಿಟಲ್ ಬಂಧನಕ್ಕೊಳಪಡಿಸಿ ದೈಹಿಕ ತಪಾಸಣೆ ನೆಪದಲ್ಲಿ ಇಬ್ಬರು ಮಹಿಳೆಯರನ್ನು ವಿವಸ್ತ್ರಗೊಳಿಸಿ ಕಿರುಕುಳ ನೀಡಿದ್ದಲ್ಲದೆ, 58,477 ರು. ವರ್ಗಾಯಿಸಿ ಕೊಂಡಿದ್ದಾರೆ. 9 ಗಂಟೆ ಕಿರುಕುಳ ನೀಡಿದ್ದಾರೆಂದು ಆರೋಪಿಸಿ ಇಬ್ಬರು ಸಂತ್ರಸ್ತೆಯರು ಪೂರ್ವ ವಿಭಾಗದ ಸಿಇಎನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ವಿದ್ಯುತ್ ತಂತಿ ತಗುಲಿ 3 ಸಾವು

ಚಿತ್ರದುರ್ಗ: ಚಿತ್ರದುರ್ಗದ ಹೊಳಲ್ಕೆರೆ ತಾಲೂಕಿನ ಕಾಳಘಟ್ಟ ಗ್ರಾಮದ ಬಳಿ ವಿದ್ಯುತ್ ತಂತಿ ತಗುಲಿ ಮೂವರು ಸಾವನ್ನಪ್ಪಿರುವಂತಹ ಘಟನೆ ನಡೆದಿದೆ. ಮೃತರನ್ನು ದಾವಣಗೆರೆ ಮೂಲದ ಕಾರ್ಮಿಕರಾದ 30 ವರ್ಷದ ನಜೀರ್, 30 ವರ್ಷದ ಫಾರೂಕ್ ಮತ್ತು ಹೊಳಲ್ಕೆರೆ ತಾಲೂಕಿನ ಗ್ಯಾರೆಹಳ್ಳಿ ನಿವಾಸಿ 35 ವರ್ಷದ ಶ್ರೀನಿವಾಸ್ ಎಂದು ಗುರುತಿಸಲಾಗಿದೆ.

ಉಪರಾಷ್ಟ್ರಪತಿ ಚುನಾವಣೆ ಪ್ರಕ್ರಿಯೆ ಆರಂಭ

ದೆಹಲಿ: ಜಗದೀಪ್ ಧನ್‌ಕರ್ ಅವರ ರಾಜೀನಾಮೆಯಿಂದ ತೆರವಾದ ಉಪರಾಷ್ಟ್ರಪತಿ ಸ್ಥಾನಕ್ಕೆ ಚುನಾವಣೆ ನಡೆಸುವ ಪ್ರಕ್ರಿಯೆಯನ್ನು ಭಾರತೀಯ ಚುನಾವಣಾ ಆಯೋಗ ಬುಧವಾರ ಪ್ರಾರಂಭಿಸಿದೆ. ಗೃಹ ಸಚಿವಾಲಯ ಜುಲೈ 22, 2025ರಂದು ಹೊರಡಿಸಿದ ಗೆಜೆಟ್ ಅಧಿಸೂಚನೆಯ ಮೂಲಕ ಧನ್‌ಕರ್ ಅವರ ರಾಜೀನಾಮೆ ಅಂಗೀಕರಿಸಿರುವುದನ್ನು ಅಧಿಕೃತವಾಗಿ ತಿಳಿಸಿದ್ದು, ಈ ಮೂಲಕ ಸಾಂವಿಧಾನಿಕ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಚುನಾವಣಾ ಪ್ರಕ್ರಿಯೆಗೆ ದಾರಿ ಮಾಡಿ ಕೊಟ್ಟಿದೆ. ಸಂವಿಧಾನದ 324ನೇ ವಿಧಿಯ ಪ್ರಕಾರ, ಉಪರಾಷ್ಟ್ರಪತಿ ಹುದ್ದೆಗೆ ಚುನಾವಣೆ ನಡೆಸಲು ಚುನಾವಣೆ ಆಯೋಗಕ್ಕೆ ಅಧಿಕಾರವಿದೆ. ಈ ಚುನಾವಣೆಗಳು 1952ರ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣಾ ಕಾಯ್ದೆ ಮತ್ತು 1974ರ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣಾ ನಿಯಮಗಳಿಂದ ನಿಯಂತ್ರಿಸಲ್ಪಡುತ್ತವೆ ಎಂದು ಚುನಾವಣೆ ಆಯೋಗ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

ಭಾರೀ ಅಕ್ರಮ ಸಂಪತ್ತು ವಶ । ಐಎಎಸ್ ವಾಸಂತಿ 9 ಕೋಟಿ ರು. ಒಡತಿ

ರಾಜ್ಯದ 8 ಕಡೆ ಲೋಕಾ ದಾಳಿ

ಬೆಂಗಳೂರು: ಪ್ಯಾಕೆಟ್‌ಗಳಲ್ಲಿ ಚಿನ್ನದ ಬಿಸ್ಕತ್, 15ಕ್ಕೂ ಹೆಚ್ಚು ಚಿನ್ನದ ಕಿವಿಯೋಲೆಗಳು, ಸಾಲು ಸಾಲು ಚಿನ್ನದ ಸರಗಳು, ಬೆಳ್ಳಿಯ ಆಭರಣಗಳು, ಬೆಳ್ಳಿಯ ಬಟ್ಟಲು, ಬೆಳ್ಳಿ ತಟ್ಟೆ, ಬೆಳ್ಳಿಯ ದೀಪ, ಕಂತೆ ಕಂತೆ ನಗದು ಹಣ! ಇವೆಲ್ಲ ರಾಜ್ಯದ ವಿವಿಧೆಡೆ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳಿಗೆ ಸಿಕ್ಕ ಅಕ್ರಮ ಸಂಪತ್ತು.

ಬೆಂಗಳೂರು, ಮೈಸೂರು, ಕೊಪ್ಪಳ ಸೇರಿದಂತೆ ಎಂಟು ಭ್ರಷ್ಟ ಅಧಿಕಾರಿಗಳಿಗೆ ಸಂಬಂಧಿಸಿದ 41 ಕಡೆಗಳಲ್ಲಿ ಮಂಗಳವಾರ ಬೆಳ್ಳಂಬೆಳಗ್ಗೆಯೇ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಭ್ರಷ್ಟರ ಬೇಟೆಯಾಡಿದ್ದಾರೆ. ಈ ವೇಳೆ ಲಕ್ಷಾಂತರ ರು. ಮೌಲ್ಯದ ಅಕ್ರಮ ಆಸ್ತಿ, ಸಂಪತ್ತು ಪತ್ತೆಯಾಗಿದೆ. ಬೇಟೆಯಲ್ಲಿ ಐಎಎಸ್ ಅಧಿಕಾರಿ ಬಿ.ವಿ.ವಾಸಂತಿ ಅಮರ್ ಅವರಿಗೆ ಸೇರಿದ ಕೋಟ್ಯಂತರ ರು. ಪತ್ತೆಯಾಗಿದ್ದು 9 ಕೋಟಿ ರು. ಆಸ್ತಿ ಇರುವುದು ಬೆಳಕಿಗೆ ಬಂದಿದೆ.

ರೈಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಕಂಪನಿ (ಕರ್ನಾಟಕ) ಲಿಮಿಟೆಡ್‌ನ ವಿಶೇಷ ಉಪ ಆಯುಕ್ತರಾದ ಡಾ. ಬಿ.ವಿ.ವಾಸಂತಿ ಅಮರ್ ಅವರಿಗೆ ಸೇರಿದ 5 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದ್ದು, ಮೂರು ನಿವೇಶನ, ನಾಲ್ಕು ವಾಸದ ಮನೆಗಳು, ಮೂರು ಎಕರೆ ಕೃಷಿ ಜಮೀನು ಸೇರಿದಂತೆ ಒಟ್ಟು 7.40 ಕೋಟಿ ರು. ಸ್ಥಿರಾಸ್ತಿ ಪತ್ತೆಯಾಗಿದೆ. 66 ಸಾವಿರ ರು. ನಗದು, 12 ಲಕ್ಷ ರು. ಬೆಲೆಬಾಳುವ ಚಿನ್ನಾಭರಣ ಗಳು, 90 ಸಾವಿರ ರು. ಬೆಲೆಬಾಳುವ ವಾಹನಗಳು, 60 ಸಾವಿರ ರು. ಬೆಲೆಬಾಳುವ ಇತರ ವಸ್ತುಗಳು ಸೇರಿದಂತೆ ಒಟ್ಟು 1.62 ಕೋಟಿ ರು. ಚರಾಸ್ತಿ ಹೊಂದಿದ್ದು, ಒಟ್ಟಾರೆ 9.02 ಕೋಟಿ ರು. ಆಸ್ತಿ ಹೊಂದಿರುವುದು ಲೋಕಾಯುಕ್ತ ದಾಳಿ ವೇಳೆ ಬೆಳಕಿಗೆ ಬಂದಿದೆ.

ಬಿಬಿಎಂಪಿ ಸಿ.ವಿ.ರಾಮನ್ ನಗರ ವಿಭಾಗದ ಕಾರ್ಯಪಾಲಕ ಅಭಿಯಂತರ ಎಚ್.ವಿ.ಯರಪ್ಪ ರೆಡ್ಡಿಗೆ ಸೇರಿದ ಸೇರಿದ 3 ಸ್ಥಳಗಳಲ್ಲಿ ಶೋಧನಾ ಕಾರ್ಯ ನಡೆಸಿದೆ. 1.45 ಕೋಟಿ ರು. ಸ್ಥಿರಾಸ್ತಿ, 1.16 ಕೋಟಿ ರು. ಚರಾಸ್ತಿ ಸೇರಿದಂತೆ 2.62 ಕೋಟಿ ರು. ಆಸ್ತಿ ಇರುವುದು ಬೆಳಕಿಗೆ ಬಂದಿದೆ. → 4

ಚಿನ್ನಾಭರಣದ ರಾಶಿ ಪತ್ತೆ!

ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರಾದ ಬಗ್ಲಿ ಮಾರುತಿ ಅವರಿಗೆ ಸಂಬಂಧಿಸಿದ ಒಟ್ಟು 10 ಸ್ಥಳಗಳಲ್ಲಿ ದಾಳಿ ಮಾಡಿದ್ದು, 4.85 ಕೋಟಿ ರು, ಸ್ಥಿರಾಸ್ತಿ, 1.49 ಕೋಟಿ ರು. ಚರಾಸ್ತಿ ಸೇರಿದಂತೆ 6.34 ಕೋಟಿ ರು. ಆಸ್ತಿ ಇರುವುದು ತಿಳಿದುಬಂದಿದೆ. ಬಗ್ಲಿ ಮಾರುತಿ ನಿವಾಸದಲ್ಲಿ ಅಪಾರ ಪ್ರಮಾಣದಲ್ಲಿ ಚಿನ್ನಾಭರಣ ಪತ್ತೆಯಾಗಿದೆ. ದುಬಾರಿ ಬೆಲೆಯ ವಾಚ್‌ಗಳು, ಕೋಟಿ ಬೆಲೆಬಾಳುವ ಬಂಗಾರ, ಲಕ್ಷಾಂತರ ಮೌಲ್ಯದ ಬೆಳ್ಳಿ ವಸ್ತುಗಳು, ನಗದು ಹಣವನ್ನು ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ.

ವಿಶ್ವವಾಣಿ ಪುಸ್ತಕ
ವಿಶ್ವವಾಣಿ ಪುಸ್ತಕದಿಂದ
ಎಂಟು ಕೃತಿಗಳ
ಲೋಕಾರ್ಪಣೆ
ಸಾನ್ನಿಧ್ಯ : ಡಾ. ಎಸ್.ಎಲ್. ಭೈರಪ್ಪ
ಪ್ರಸಿದ್ಧ ಕಾದಂಬರಿಕಾರರು
ಪುಸ್ತಕಗಳ ಬಿಡುಗಡೆ : ಡಾ. ವೀರೇಂದ್ರ ಹೆಗ್ಗಡೆ
ಧರ್ಮಾಧಿಕಾರಿಗಳು, ಧರ್ಮಸ್ಥಳ ಮತ್ತು ಮಾನ್ಯ ರಾಜ್ಯಸಭಾ ಸದಸ್ಯರು
ಅಧ್ಯಕ್ಷತೆ : ಶ್ರೀ ಬಸವರಾಜ ಬೊಮ್ಮಾಯಿ
ಮಾಜಿ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಲೋಕಸಭಾ ಸದಸ್ಯರು
ಮುಖ್ಯ ಅತಿಥಿಗಳು : ಶ್ರೀ ತೇಜಸ್ವಿ ಸೂರ್ಯ
ಮಾನ್ಯ ಲೋಕಸಭಾ ಸದಸ್ಯರು
: ಶ್ರೀಮತಿ ಶೋಭಾ ಮಳವಳ್ಳಿ
ಸಂಪಾದಕರು, ರಿಪಬ್ಲಿಕ್ ಕನ್ನಡ ನ್ಯೂಸ್ ಚಾನೆಲ್
ಉಪಸ್ಥಿತಿ : ಶ್ರೀ ಎಸ್. ಷಡಕ್ಷರಿ
ಉದ್ಯಮಿ ಹಾಗೂ ಲೇಖಕರು
ಶ್ರೀ ಕಿರಣ್ ಉಪಾಧ್ಯಾಯ
ಉದ್ಯಮಿ ಹಾಗೂ ಅಂಕಣಕಾರರು
ಶ್ರೀ ರಾಜು ಅಡಕಳ್ಳಿ
ಪತ್ರಕರ್ತರು
ಶ್ರೀಮತಿ ರೂಪಾ ಗುರುರಾಜ್
ನಿರೂಪಕಿ ಹಾಗೂ ಲೇಖಕಿ
ಶ್ರೀ ವಿಶ್ವೇಶ್ವರ ಭಟ್
ಪ್ರಧಾನ ಸಂಪಾದಕರು, ವಿಶ್ವವಾಣಿ

ಜುಲೈ 26 ಶನಿವಾರ
ಸಂಜೆ 5 ಗಂಟೆಗೆ
ಎಫ್ ಕೆಸಿಸಿಐ ಸಭಾಂಗಣ
ಬೆಂಗಳೂರು
ಲೊಕೇಶನ್ ಗಾಗಿ ಸ್ಕ್ಯಾನ್ ಮಾಡಿ
ಸರ್ವರಿಗೂ ಸುಸ್ವಾಗತ
ಶ್ರೀಮತಿ ಸುಷ್ಮಾ ಭಟ್
ಪ್ರಕಾಶಕರು, ವಿಶ್ವವಾಣಿ ಪುಸ್ತಕ
ಶ್ರೀ ಚಿದಾನಂದ ಕಡಲಾಸ್ಕರ
ಮುಖ್ಯ ಕಾರ್ಯನಿರ್ವಹಣಾಧಿಕಾರಿ, ವಿಶ್ವವಾಣಿ

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಕನ್ನಡ ಓದಲೂ ಬರಲ್ಲ!

ಹೈಸ್ಕೂಲ್ ಮಕ್ಕಳಿಗೆ ಅ, ಆ, ಇ, ಈ ಪಾಠ

ವೀರೇಶ್ ಎಸ್ ಕೆಂಭಾವಿ ಯಾದಗಿರಿ

ಹಳೆಗನ್ನಡ ಪದ್ಯವನ್ನು ನಿರರ್ಗಳವಾಗಿ ಓದುತ್ತಾ ಇಂಗ್ಲಿಷ್ ವ್ಯಾಕರಣವನ್ನು ನಿರ್ಭೀತವಾಗಿ ಕಲಿಯಬೇಕಾದ ಎಸ್ ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಕನ್ನಡದ ವರ್ಣಮಾಲೆ ಅ, ಆ, ಇ, ಈ, ಇಂಗ್ಲಿಷ್ ಅಲ್ಫಾಬೆಟ್‌ಗಳಾದ ಎ, ಬಿ, ಸಿ, ಡಿಯನ್ನೇ ಸರಿಯಾಗಿ ಓದಲು, ಬರೆಯಲು ಬರುವುದಿಲ್ಲ ಎನ್ನುವ ಕಳವಳಕಾರಿ ವಿಷಯ ಹೊರಬಿದ್ದಿದೆ.

ಜಿಲ್ಲೆಯ ಕೆಂಭಾವಿ ಪಟ್ಟಣದ ಬಾಲಕರ ಪ್ರೌಢ ಶಾಲೆಯ ಶಿಕ್ಷಕರಿಗೆ, ಶಿಕ್ಷಣ ಇಲಾಖೆಯ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ (DIK) ಕಾರ್ಯಕ್ರಮದಡಿ ಓದಲು ಬರೆಯಲು ಬಾರದ ವಿದ್ಯಾರ್ಥಿಗಳನ್ನು ಗುರುತಿಸುವುದರ ಜತೆಗೆ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಕಳಪೆ ಸಾಧನೆಗೆ ಕಾರಣವೇನು ಎಂಬುದರ ಬೆನ್ನಟ್ಟಿದಾಗ ಈ ವಿಷಯದ ದರ್ಶನವಾಗಿದೆ.

ಸದ್ಯ ಎಸ್‌ಎಸ್‌ಎಲ್‌ಸಿ ಓದುತ್ತಿರುವ ನೂರಕ್ಕೂ ಹೆಚ್ಚು ಮಕ್ಕಳಲ್ಲಿ 30 ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯನ್ನೇ ಓದಲು ಬರುವುದಿಲ್ಲ, ಹೀಗಾಗಿ ಪಠ್ಯದ ಜತೆಗೆ ಅ, ಆ, ಇ, ಈ, ಎ, ಬಿ, ಸಿ, ಡಿ ಜತೆಗೆ ಸಂಕಲನ, ವ್ಯವಕಲನ, ಹಿಂದಿ ಭಾಷೆಯ ಬೇಸಿಕ್ ಪಾಠವನ್ನು ಕಲಿಸಬೇಕಾದ ಅನಿವಾರ್ಯತೆ ಇಲ್ಲಿನ ಶಿಕ್ಷಕರಿಗೆ ಒದಗಿಬಂದಿದೆ. ಇನ್ನು ಯಾದಗಿರಿ ಜಿಲ್ಲೆಯ ಒಂದೇ ಶಾಲೆಯಲ್ಲಿ 30ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಕನಿಷ್ಠ ಕನ್ನಡದ ಜ್ಞಾನ ಇಲ್ಲವೆಂದರೆ ಇಡೀ ಜಿಲ್ಲೆಯ ಶಾಲೆಗಳ ಪರಿಸ್ಥಿತಿಯೇನು ಎನ್ನುವ ಪ್ರಶ್ನೆ ಎದುರಾಗುವುದರ ಜತೆಗೆ ಇವರು ಹತ್ತನೇ ತರಗತಿವರೆಗೂ ಹೇಗೆ ದಾಟಿಕೊಂಡು ಬಂದರು ಎನ್ನುವ ಚಿಂತೆ ಸಹ ಇದೀಗ ಶಿಕ್ಷಣಪ್ರೇಮಿಗಳಲ್ಲಿ ಪ್ರಾರಂಭವಾಗಿದೆ. → 4



ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಸೇರಿದಂತೆ ಎಲ್ಲ ತರಗತಿ ಮಕ್ಕಳಲ್ಲಿ ಓದಲು, ಬರೆಯಲು ಬಾರದವರನ್ನು ಗುರುತಿಸುವ ಕೆಲಸ ಎಫ್‌ಎಲ್‌ಎನ್ ಮಾಹೆ ಕಾರ್ಯಕ್ರಮದಡಿ ರಾಜ್ಯಾದ್ಯಂತ ನಡೆಯುತ್ತಿದೆ. ಇದು ಒಂದು ಊರು, ಜಿಲ್ಲೆಯ ಸಮಸ್ಯೆಯಲ್ಲ. ಇಡೀ ರಾಜ್ಯದ ಸಮಸ್ಯೆಯಾಗಿದೆ.
-ಚನ್ನಬಸಪ್ಪ ಮುಧೋಳ ಡಿಡಿಪಿಐ, ಯಾದಗಿರಿ

ಮೇಲಧಿಕಾರಿಗಳು ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಮಾನದಂಡವನ್ನಾಗಿ ಪರಿಗಣಿಸಿ ಪ್ರೌಢಶಾಲಾ ಶಿಕ್ಷಕರ ಮೇಲೆ ಒತ್ತಡ ಹಾಕುತ್ತಾರೆ. ಆದರೆ ಪ್ರಾಥಮಿಕ ಹಂತದಲ್ಲಿ ಕಾಗುಣಿತ, ಒತ್ತಕ್ಷರಗಳು, ಓದುವುದು, ಬರೆಯುವುದು, ಗಣಿತ ಮೂಲ ಕ್ರಿಯೆಗಳು ಇತರ ಕನಿಷ್ಠ ಕಲಿಕಾಂಶಗಳು ಬಾರದಿದ್ದರೆ ವಿದ್ಯಾರ್ಥಿಗಳಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ನಿರೀಕ್ಷಿಸಲು ಸಾಧ್ಯವೇ?
-ಹೆಸರು ಹೇಳಲು ಇಚ್ಛಿಸದ, ಪ್ರೌಢಶಾಲಾ ಶಿಕ್ಷಕರು

- ಎಸ್‌ಎಸ್‌ಎಲ್‌ಸಿವರೆಗೆ ಬಂದರೂ ಕನ್ನಡದ ವರ್ಣಮಾಲೆ ಬಾರದ ವಿದ್ಯಾರ್ಥಿಗಳು
- ಒಂದೇ ಶಾಲೆಯಲ್ಲಿ 30 ಮಕ್ಕಳು, ಇನ್ನಷ್ಟು ಶಾಲೆಗಳಲ್ಲಿ ಇಂಥದ್ದೇ ಪರಿಸ್ಥಿತಿ ಸಂಭವ
- ಪಾಠದ ಜತೆಗೆ ಬೇಸಿಕ್ ಹೇಳಿಕೊಡುತ್ತಿವರುವ ಹೈಸ್ಕೂಲ್ ಶಿಕ್ಷಕರು
- ಯಾದಗಿರಿ ಜಿಲ್ಲೆಯ ಫಲಿತಾಂಶ ಹಿನ್ನಡೆಗೆ ಭಾಷಾ ಕಲಿಕೆಯ ಸಮಸ್ಯೆ

ಸಮಾಚಾರ ಸಣ್ಣದಲ್ಲ

ರಂಭಾಪುರಿ ಶ್ರೀಗಳ ಇಷ್ಟಲಿಂಗ ಪೂಜೆ

ಚನ್ನಗಿರಿ: ಲಿಂ. ಶ್ರೀಸಿದ್ದಲಿಂಗ ಶಿವಾಚಾರ್ಯರ 54 ನೇ ವಾರ್ಷಿಕ ಪುಣ್ಯ ಸಂಸ್ಕರಣೆ ಹಾಗೂ ಶ್ರೀಚಂದ್ರ ಶೇಖರ ಶಿವಾಚಾರ್ಯರ 72 ನೇ ವಾರ್ಷಿಕ ಪುಣ್ಯ ಸಂಸ್ಕರಣೆ ಮಹೋತ್ಸವದ ಅಂಗವಾಗಿ ಜು.24ರ ಬೆಳಗ್ಗೆ 7.30 ಕ್ಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಡಾ.ಅಭಿನವ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿ ಶಿಲಾಮಠ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮದ ಸಾನ್ನಿಧ್ಯವನ್ನು ಬಾಳೆ ಹೊನ್ನೂರು ರಂಭಾಪುರಿ ಜಗದ್ಗುರುಗಳು ವಹಿಸಲಿದ್ದು, ರೇಣುಕಾ ಶಿವಾಚಾರ್ಯ ಮಹಾಸ್ವಾಮಿಗಳು, ಡಾ. ಅಭಿನವ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸುವರು. ಉದ್ಘಾಟನೆಯನ್ನು ಶಾಸಕ ಬಸವರಾಜ್ ವಿ ಶಿವಗಂಗಾ ನೆರವೇರಿಸುವರು. ಅತಿಥಿಗಳಾಗಿ ಮಾಜಿ ಶಾಸಕ ಮಾಡಳು ವಿರೂಪಾಕ್ಷಪ್ಪ, ತಹಸೀಲ್ದಾರ್ ಎನ್.ಜಿ.ನಾಗರಾಜ್, ಕಾರ್ಯನಿರ್ವಾಹಣ ಅಧಿಕಾರಿ ಬಿ.ಕೆ. ಉತ್ತಮ್, ವೃತ್ತ ನಿರೀಕ್ಷಕರು ರವೀಶ್, ತಾವರೆಕೆರೆ ಗ್ರಾಪಂ ಅಧ್ಯಕ್ಷೆ ಮಂಜುಳಾ ಬಿ.ಕೆ ಉಪಸ್ಥಿತರಿರುವರು.

ಆರ್‌ಪಿಎಲ್ ಕಿಟ್ ವಿತರಣೆ

ಚಿತ್ರದುರ್ಗ: ತಾಲೂಕಿನಲ್ಲಿ ಆರ್‌ಪಿಎಲ್ (Recognition of Prior Learning) ತರಬೇತಿ ಪಡೆದ ಕಾರ್ಮಿಕರಿಗೆ ನಗರದ ಪ್ರವಾಸಿ ಮಂದಿರದಲ್ಲಿ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಆರ್‌ಪಿಎಲ್ ಕಿಟ್ ವಿತರಿಸಿದರು. ಕಾರ್ಮಿಕ ಇಲಾಖೆಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿವತಿಯಿಂದ ಸರಬರಾಜು ಆರ್.ಪಿ.ಎಲ್ ಕಿಟ್‌ಗಳನ್ನು ಚಿತ್ರದುರ್ಗ ತಾಲೂಕಿನಲ್ಲಿ ಆರ್.ಪಿ.ಎಲ್. ತರಬೇತಿ ಪಡೆದ ಕಾರ್ಮಿಕರಿಗೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಆರ್. ಶಿವಣ್ಣ, ಚಿತ್ರದುರ್ಗ ಕಾರ್ಮಿಕ ನಿರೀಕ್ಷಕ ಪಿ.ಭೀಮೇಶ್, ತಾಲೂಕು ಕೆಡಿಪಿ ಸದಸ್ಯ ನಾಗರಾಜ್ ಹಾಗೂ ನೊಂದಾಯಿತ ಫಲಾನುಭವಿಗಳು ಉಪಸ್ಥಿತರಿದ್ದರು.

ಮಾಜಿ ಸೈನಿಕರಿಂದ ಅರ್ಜಿ ಆಹ್ವಾನ

ಚಿತ್ರದುರ್ಗ: ಬೆಂಗಳೂರು ಭಾರತ್ ಎಲೆಕ್ಟ್ರಾನಿಕ್ ಲಿಮಿಟೆಡ್ ಅವರು 10 ಖಾಯಂ ಚಾಲಕ ಹುದ್ದೆಗಳಿಗೆ 43 ವರ್ಷದೊಳಗಿನ SHAPE-1ಮೆಡಿಕಲ್ ಕ್ಯಾಟಗೇರಿ ಹೊಂದಿರುವ ಅರ್ಹ ಮಾಜಿ ಸೈನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ. ವೇತನ ಶ್ರೇಣಿ 20500–3%–79000 ಮತ್ತು ಇತರೆ ಭತ್ಯೆಗಳು. ಅಭ್ಯರ್ಥಿಗಳು ಎಸ್‌ಎಲ್‌ಎಲ್‌ಸಿ ಉತ್ತೀರ್ಣರಾಗಿರಬೇಕು ಹಾಗೂ ಕನ್ನಡ ಭಾಷಾ ಜ್ಞಾನವನ್ನು ಕಡ್ಡಾಯವಾಗಿ ಹೊಂದಿರಬೇಕು. ಅರ್ಜಿ ಸಲ್ಲಿಸಲು ಆಗಸ್ಟ್ 06 ಕೊನೆಯ ದಿನವಾಗಿದೆ. ಅರ್ಜಿಯನ್ನು ವೆಬ್‌ಸೈಟ್ www.bel-india.in/careers ನಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂ. 080–22195650 ಅನ್ನು ಸಂಪರ್ಕಿಸಬಹುದು ಎಂದು ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪನಿರ್ದೇಶಕ ಡಾ.ಸಿ.ಎ.ಹಿರೇಮಠ ತಿಳಿಸಿದ್ದಾರೆ.

ಸಿಇಒ ಡಾ.ಆಕಾಶ್ ಅಧಿಕಾರ ಸ್ವೀಕಾರ

ಚಿತ್ರದುರ್ಗ: ಜಿಲ್ಲಾ ಪಂಚಾಯಿತಿ ನೂತನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಡಾ.ಎಸ್. ಆಕಾಶ್ ಅವರು ಬುಧ ವಾರ ಅಧಿಕಾರ ಸ್ವೀಕಾರ ಮಾಡಿದರು. ಜಿ.ಪಂ ಸಿಇಒ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಎಸ್.ಜೆ.ಸೋಮಶೇಖರ್ ಅವರನ್ನು ಸರಕಾರ ವರ್ಗಾವಣೆಗೊಳಿಸಿದ್ದು, ಡಾ.ಎಸ್.ಆಕಾಶ್ ಅವರನ್ನು ಚಿತ್ರದುರ್ಗ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕಗೊಳಿಸಿದೆ. ಡಾ.ಎಸ್.ಆಕಾಶ್ ಅವರು 2019ನೇ ಸಾಲಿನ ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿಯಾಗಿದ್ದಾರೆ.

ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳ ಮೆಕ್ಕೆಜೋಳ ವರ್ತಕರಿಗೆ ಸಚಿವ ಶಿವಾನಂದ ಪಾಟೀಲ ಭರವಸೆ

ಸೆಸ್ ಸಮಸ್ಯೆ ಇತ್ಯರ್ಥ್ಯಕ್ಕಾಗಿ ಶೀಘ್ರದಲ್ಲಿ ಉದ್ದಿಮೆದಾರರ ಸಭೆ

ಶಿವಮೊಗ್ಗ: ನಮೂನೆ 35ಬಿ ಗೆ ಸಂಬಂಧಿಸಿದ ಸೆಸ್ ಸಮಸ್ಯೆ ಇತ್ಯರ್ಥ್ಯಕ್ಕೆ ಶೀಘ್ರದಲ್ಲಿ ಎಥನಾಲ್ ಫ್ಯಾಕ್ಟರಿ ಮಾಲೀಕರು ಹಾಗೂ ಮೆಕ್ಕೆಜೋಳ ಖರೀದಿದಾರರ ಸಭೆ ಕರೆಯಲಾಗುವುದು ಎಂದು ಕಬ್ಬು ಅಭಿವೃದ್ಧಿ, ಸಕ್ಕರೆ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಭರವಸೆ ನೀಡಿದರು.

ಬೆಂಗಳೂರಿನ ಕೃಷಿ ಮಾರಾಟ ಇಲಾಖೆ ಕಚೇರಿ ಸಭಾಂಗಣದಲ್ಲಿ ಬುಧವಾರ ಎಂಎಲ್ಸಿ ಡಿ.ಎಸ್.ಅರುಣ್ ನೇತೃತ್ವದಲ್ಲಿ ಆಗಮಿಸಿದ್ದ ದಾವಣಗೆರೆ, ಶಿವಮೊಗ್ಗ ಚಿತ್ರದುರ್ಗ ಜಿಲ್ಲೆ ಎಪಿಎಂಸಿ ಮೆಕ್ಕೆಜೋಳ ಖರೀದಿದಾರರ ಅಹವಾಲು ಆಲಿಸಿದ ಸಚಿವರು, ಆನ್‌ಲೈನ್ ಮೂಲಕ ಸೆಸ್ ಪಾವತಿ ವ್ಯವಸ್ಥೆ ಈಗಾಗಲೇ ದಾವಣಗೆರೆ ಜಿಲ್ಲೆಯ ಎಲ್ಲ ಎಪಿಎಂಸಿಯಲ್ಲಿ ಜಾರಿಯಲ್ಲಿದ್ದು ಹಂತ ಹಂತವಾಗಿ ರಾಜ್ಯದ ಎಲ್ಲ ಎಪಿಎಂಸಿಗಳಲ್ಲಿ ಜಾರಿಗೆ ತರಲಾಗುವುದು ಎಂದು ಹೇಳಿದರು.

ಎಪಿಎಂಸಿ ವ್ಯಾಪ್ತಿಯ ಆಸ್ತಿಗಳಿಗೆ ಕಂದಾಯವನ್ನು ನಗರಪಾಲಿಕೆ ಇಲ್ಲವೆ ನಗರಸಭೆಗಳಿಗೆ ಪಾವತಿಸುವ ಬದಲಿಗೆ ಎಪಿಎಂಸಿಗಳಿಗೆ ಪಾವತಿ ಮಾಡಬೇಕು ಎಂಬ ವರ್ತಕರ ಬೇಡಿಕೆ ಗಮನದಲ್ಲಿದೆ. ಈ ಬಗ್ಗೆ ಸರಕಾರದ ಮಟ್ಟದಲ್ಲಿ ಚರ್ಚಿಸಿ ತೀರ್ಮಾನಕ್ಕೆಗೊಳ್ಳಲಾಗುವುದು ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಎಪಿಎಸಿಗಳಲ್ಲಿ ಸಾಕಷ್ಟುಸುಧಾರಣೆ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ರೈತರು ಮತ್ತು ವರ್ತಕ ಸ್ನೇಹಿ ಪರಿಸರವನ್ನು ನಿರ್ಮಿಸಲಾಗುತ್ತಿದೆ. ಎಲ್ಲ ವ್ಯವಸ್ಥೆಯನ್ನು ಸರಳೀಕರಣಗೊಳಿಸಲಾಗುತ್ತಿದ್ದು, ಮೆಚ್ಚುಗೆ ಕೂಡ ವ್ಯಕ್ತವಾಗುತ್ತಿದೆ ಎಂದರು.

ನಮೂನೆ 35 ಬಿ ಪದ್ಧತಿ ಬೇಡ, ನಮೂನೆ 35 ಎ ಪದ್ಧತಿ ಮಾತ್ರ ಜಾರಿಯಲ್ಲಿ ಇರಬೇಕು ಎಂದು ಮೆಕ್ಕೆಜೋಳ ಖರೀದಿದಾರರು ಬೇಡಿಕೆ ಇಟ್ಟರು. ನಮೂನೆ 35 ಬಿ ಆನ್‌ಲೈನ್‌ನಲ್ಲಿ ಪಡೆದಿದ್ದರೂ ಸಹಿ ಮತ್ತು ಸೀಲು ಇಲ್ಲ ಎಂಬ ಕಾರಣಕ್ಕೆ ಕೆಲವು ಎಥನಾಲ್ ಕಂಪನಿಯವರು ಮೆಕ್ಕೆಜೋಳ ಖರೀದಿ ಹಣ ಪಾವತಿ ಮಾಡಲು ವಿಳಂಬ ಮಾಡುತ್ತಿದ್ದಾರೆ ಎಂದು ವರ್ತಕರು ದೂರಿದರು.

ಸಂಸ್ಕರಣ ಘಟಕಗಳ ಮಾಲೀಕರು 35 ಬಿ ಪರಿಶೀಲಿಸಿದ ನಂತರ ಮೆಕ್ಕೆಜೋಳ ಖರೀದಿ ಹಣ ಪಾವತಿ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದರಿಂದ ಸಮಸ್ಯೆಯಾಗುತ್ತಿದ್ದು, ಮೂರುತಿಂಗಳು ವಿಳಂಬವಾಗುತ್ತಿದೆ. ಈ ಸಮಸ್ಯೆಯನ್ನು ತ್ವರಿತವಾಗಿ ಪರಿಹರಿಸಬೇಕು ಎಂದು ಮನವಿ ಮಾಡಿದರು.

ಚಿತ್ರದುರ್ಗದಲ್ಲಿ ವರ್ತಕರು ವಿದ್ಯುತ್ ಶುಲ್ಕವನ್ನು ಎಪಿಎಂಸಿಗೆ ಪಾವತಿ ಮಾಡುತ್ತಿದ್ದು, ಇದೇ ರೀತಿ ಆಸ್ತಿ ಕಂದಾಯವನ್ನೂ ಎಪಿಎಂಸಿಗೆ ಪಾವತಿ ಮಾಡುವ ವ್ಯವಸ್ಥೆ ಜಾರಿಗೆ ಬರಲಿ. ನಗರಸಭೆಯಗಳು ಎಪಿಎಂಸಿ ವ್ಯಾಪ್ತಿಯಲ್ಲಿ ಯಾವುದೇ ಸೌಲಭ್ಯ ಕೊಡುವುದಿಲ್ಲ. ಹೀಗಾಗಿ ಇದನ್ನುಬದಲ ಅವಣೆ ಮಾಡಿ ಎಂದು ಮನವಿ ಮಾಡಿದರು.

ವಿಧಾನಪರಿಷತ್ ಸದಸ್ಯ ಡಿ.ಎಸ್. ಅರಣ್, ರಾಜ್ಯ ಸರಕಾರ ಎಪಿಎಂಸಿಗಳಲ್ಲಿ ಹಲವಾರು ಸುಧಾರಣೆ ಮಾಡಿದೆ. ಈ ಸಮಸ್ಯೆಯನ್ನೂ ತ್ವರಿತವಾಗಿ ಪರಿಹರಿಸಬೇಕು ಎಂದು ಮನವಿ ಮಾಡಿದರು. ಕೃಷಿ ಮಾರಾಟ ಇಲಾಖೆ ನಿರ್ದೇಶಕ ಶಿವಾನಂದ ಕಾಪಸೆ, ಹೆಚ್ಚುವರಿ ನಿರ್ದೇಶಕ ನಜೀಬುಲ್ಲಾ ಖಾನ್, ವರ್ತಕರಾದ ಕೆ. ಜಾವಿದ್, ಶ್ರೀನಿವಾಸ್, ನಂಜನಗೌಡ, ಗಿರೀಸ್, ಕುಬೇರಪ್ಪ, ಪ್ರಕಾಶ್ ಇದ್ದರು.

ಸೆಸ್ ಸಮಸ್ಯೆಗೆ ಸಂಬಂಧಿಸಿದಂತೆ ಸಚಿವ ಶಿವಾನಂದ ಪಾಟೀಲ ಅವರು ಮೆಕ್ಕೆಜೋಳ ಖರೀದಿದಾರರ ಸಭೆ ನಡೆಸಿದರು.

> **ಆನ್‌ಲೈನ್‌ನಲ್ಲಿ ಸೆಸ್ ಪಾವತಿ ಮಾಡಿದ್ದರೆ ಸಂಬಂಧಪಟ್ಟ ರಸೀದಿಗೆ ಎಪಿಎಂಸಿ ಅಧಿಕಾರಿಗಳ ಸಹಿ ಮತ್ತು ಸೀಲಿನ ಅವಶ್ಯಕತೆ ಇರುವುದಿಲ್ಲ. ಈ ಸಂಬಂಧ ಎಲ್ಲ ಎಪಿಎಂಸಿ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು. ಈ ವಿಚಾರದಲ್ಲಿ ಖರೀದಿದಾರರು ಮತ್ತು ಸಂಸ್ಕರಣ ಘಟಕಗಳ ಮಾಲೀಕರ ಸಭೆಯಲ್ಲಿ ತಿಳಿವಳಿಕೆ ನೀಡಲಾಗುವುದು.**
> –ಶಿವಾನಂದ ಪಾಟೀಲ, ಸಚಿವ

ಮಲೆನಾಡಿನಲ್ಲಿ ಆರೋಗ್ಯ ಕೇಂದ್ರವಾಗಲಿರುವ ಶಿವಮೊಗ್ಗ

ಬೆಂಗಳೂರು: ಇಡೀ ಮಲೆನಾಡು ಪ್ರದೇಶದಲ್ಲಿ ಪ್ರಮುಖ ಆರೋಗ್ಯ ಸೇವೆ ಸಲ್ಲಿಸುವ ಆರೋಗ್ಯ ಕೇಂದ್ರವನ್ನಾಗಿ ಶಿವಮೊಗ್ಗವನ್ನು ಅಭಿವೃದ್ಧಪಡಿಸಲಾಗುವುದು ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ, ಜೀವನೋಪಾಯ ಸಚಿವ ಡಾ.ಶರಣಪ್ರಕಾಶ ಆರ್.ಪಾಟೀಲ್ ತಿಳಿಸಿದ್ದಾರೆ.

ಬುಧವಾರ ವಿಕಾಸ ಸೌಧದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರೊಂದಿಗೆ ಶಿವಮೊಗ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆ (ಸಿಮ್ಸ್) ಮತ್ತು ಮೆಗ್ಗಾನ್ ಆಸ್ಪತ್ರೆಯಲ್ಲಿ ಮೂಲಸೌಕರ್ಯ ಮತ್ತು ಸೇವಾ ವಿತರಣೆ ಹೆಚ್ಚಿಸುವ ಕುರಿತು ಸಚಿವರು ಪರಿಶೀಲನೆ ನಡೆಸಿದರು.

ಶಿವಮೊಗ್ಗ ನಗರವನ್ನು ಪೂರ್ಣ ಪ್ರಮಾಣದ ಪ್ರಾದೇಶಿಕ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಿಸಲು ಇದೇ ಸಂದರ್ಭದಲ್ಲಿ ಸಚಿವರು ನಿರ್ಧರಿಸಿದರು.

ಶಿವಮೊಗ್ಗ ಜಿಲ್ಲೆ ಕೇವಲ ಏಳು ತಾಲ್ಲೂಕುಗಳನ್ನು ಹೊಂದಿದ್ದರೂ, ಸಿಮ್ಸ್ ಮತ್ತು ಮೆಗ್ಗಾನ್ ಆಸ್ಪತ್ರೆಗಳಿಗೆ ನೆರೆಯ 26 ತಾಲೂಕುಗಳಿಂದಲೂ ರೋಗಿಗಳು ಬರುತ್ತಾರೆ. ಇದರಿಂದ ಹೊರೆ ಹೆಚ್ಚಿರುತ್ತದೆ ಎಂದು ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಈ ಒತ್ತಡವನ್ನು ಕಡಿಮೆ ಮಾಡಲು ಮತ್ತು ಗುಣಮಟ್ಟದ ಆರೈಕೆಯನ್ನು ಖಚಿತಪಡಿಸಿಕೊಳ್ಳಲು, ಸುಧಾರಿತ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸುವುದು ಅವಶ್ಯಕವಾಗಿದೆ ಎಂದು ಹೇಳಿದರು. ತಕ್ಷಣದ ನವೀಕರಣಗಳ ಭಾಗವಾಗಿ, ಮೆಗ್ಗಾನ್ ಆಸ್ಪತ್ರೆಗೆ ಹೆಚ್ಚುವರಿ ಎಂಆರ್‌ಐ ಯಂತ್ರ ಮತ್ತು ಶವ ಸಾಗಿಸುವ ವಾಹನವನ್ನು ಖರೀದಿಸಲು ಸರಕಾರ ಅನುಮೋದನೆ ನೀಡಿದೆ.

> **ಬರಲಿದೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ**
> **ಈ ಕೇಂದ್ರವು ಜಿಲ್ಲೆ ಮತ್ತು ಸುತ್ತಲಿನ ಪ್ರದೇಶಗಳ ಜನರ ಸಂಪೂರ್ಣ ಆರೋಗ್ಯ ಅಗತ್ಯಗಳನ್ನು ಪೂರೈಸಲು ವಿನ್ಯಾಸಗೊಳಿಸಲಾದ ವೈದ್ಯಕೀಯ ಕಾಲೇಜುಗಳು, ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಗಳು ಸೇರಿದಂತೆ ವೈದ್ಯಕೀಯ ಸಂಸ್ಥೆಗಳ ಸಮೂಹವನ್ನು ಒಳಗೊಂಡಿರುತ್ತದೆ. ಶಿವಮೊಗ್ಗವು ಈಗಾಗಲೇ ಅತ್ಯುತ್ತಮ ರಸ್ತೆ, ರೈಲು ಮತ್ತು ವಾಯು ಸಂಪರ್ಕವನ್ನು ಹೊಂದಿರುವುದರಿಂದ, ನಗರವು ಮಲೆನಾಡು ಪ್ರದೇಶಕ್ಕೆ ಆರೋಗ್ಯ ಕೇಂದ್ರವಾಗಲಿದೆ ಎಂದು ಸಚಿವರು ವಿವರಿಸಿದರು.**

ವಿಕಾಸ ಸೌಧದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಸಚಿವ ಮಧು ಬಂಗಾರಪ್ಪ ಮಾತನಾಡಿದರು.

ಟ್ರಸ್ಟಿಗಳ ವಜಾಕ್ಕೆ ಆಗ್ರಹ

ಹೊಳಲ್ಕೆರೆ: ಮಲ್ಲಾಡಿಹಳ್ಳಿ ಶ್ರೀರಾಘವೇಂದ್ರ ಸೇವಾಶ್ರಮದ ಟ್ರಸ್ಟಿಗಳನ್ನು ಸರಕಾರ ಕೂಡಲೇ ವಜಾಗೊಳಿಸಬೇಕು. ಟ್ರಸ್ಟಿಗಳು ನಡೆಸಿರುವ ಅವ್ಯವಹಾರದ ಸಮಗ್ರ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಹೊಳಲ್ಕೆರೆ ಮಾಜಿ ಶಾಸಕ ಎ.ವಿ. ಉಮಾಪತಿ ಒತ್ತಾಯಿಸಿದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯದರ್ಶಿ ಹೆಸರಲ್ಲಿ ಆಶ್ರಮದ ಆಸ್ತಿಗಳನ್ನು ಮಾರಾಟ ಮಾಡುವುದು, ಸಾಲ ತೆಗೆಯುವುದು, ಅಡಮಾನ ಹಾಕುವುದು, ಮಾರಾಟ ಮಾಡಲಾಗುತ್ತಿದೆ. ಎಲ್ಲವನ್ನೂ ಸಮಗ್ರ ತನಿಖೆ ಮಾಡಿ ಕ್ರಮ ಕೈಗೊಳ್ಳಬೇಕೆಂದರು. ಆಶ್ರಮ ಆಸ್ತಿಗಳನ್ನು ಮಾರಾಟ ಮಾಡಲು ತಹಸೀಲ್ದಾರ್ ಹಾಗೂ ದಿ.ಎಂ.ಪಿ. ಪ್ರಕಾಶ್ ಕಂದಾಯ ಸಚಿವರಾಗಿದ್ದಾಗ ಅನುಮತಿಗಾಗಿ ಪತ್ರ ಬರೆಯಲಾಗಿತ್ತು. ಅಶ್ರಮದ ಸ್ವತ್ತುಗಳನ್ನು ಮಾರಾಟ ಮಾಡಲು ಅವಕಾಶ ಇಲ್ಲ ಎಂದು ತಿಳಿಸಿದ್ದರಿಂದ ಆಸ್ತಿ ಮಾರಾಟ ಮಾಡಲು ಸಾಧ್ಯವಾಗಿಲ್ಲ. ಆದರೂ ಆಶ್ರಮದ ಮೂರು ಎಕರೆ ಜಮೀನನ್ನು ಅಕ್ರಮವಾಗಿ ಮಾರಾಟ ಮಾಡಿ ಹಣವನ್ನು ದುರ್ಬಳಕೆ ಮಾಡಿದ್ದಾರೆ. ಮಲ್ಲಾಡಿಹಳ್ಳಿ ಆಶ್ರಮದ ಟ್ರಸ್ಟಿಗಳು ಎಂದು ಹೇಳಿಕೊಳ್ಳುವವರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಆಶ್ರಮದಲ್ಲಿ ಅವ್ಯವಹಾರ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಹೋರಾಟ ಸಮಿತಿ ಮುಖಂಡ ಸಂತೋಷ್, ಧೋತಿ ಗೋವಿಂದಪ್ಪ ರವಿ ಮಲ್ಲಾಡಿಹಳ್ಳಿ, ರಾಷ್ಟ್ರೀಯ ಯುವ ಸಮ್ಮಾನ್ ಪ್ರಶಸ್ತಿ ಪುರಸ್ಕೃತರು ದುಮ್ಮಿ ಚಿತ್ತಪ್ಪ ಗ್ರಾಪಂ ಸದಸ್ಯ ವಿನೋದಕುಮಾರ್, ಚಂದ್ರಣ್ಣ, ತಿಪ್ಪೇಸ್ವಾಮಿ, ರಾಮಗಿರಿ ರಾಜಣ್ಣ ನಿವೃತ್ತ ಪ್ರಾಧ್ಯಾಪಕ ಪಾಂಡುರಂಗಪ್ಪ ಇದ್ದರು.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಹೊಳಲ್ಕೆರೆ ಮಾಜಿ ಶಾಸಕ ಎ.ವಿ. ಉಮಾಪತಿ ಮಾತನಾಡಿದರು.

ಗೇಟ್ ಒಡೆಯುವರೆಗೂ ಹೋರಾಟ ನಿಲ್ಲಲ್ಲ: ಮಾಜಿ ಸಚಿವ

ದಾವಣಗೆರೆ: ಭದ್ರಾ ಬಲದಂಡೆ ನಾಲೆ ಸೀಳಿ ನೆರೆಯ ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸಲು, ಅಳವಡಿಸಿರುವ ಗೇಟ್ ಒಡೆಯುವ ವರೆಗೂ ನಮ್ಮ ಹೋರಾಟ ನಿಲ್ಲಲ್ಲ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, 'ಭದ್ರಾ ಜಲಾಶಯದಿಂದ ದಾವಣಗೆರೆ ಭಾಗಕ್ಕೆ ನೀರು ಹರಿಸುವ ಬಲದಂಡೆ ನಾಲೆ ಸೀಳಿ, ನೆರೆಯ ಜಿಲ್ಲೆಗಳಿಗೆ ನೀರು ಕೊಡಲು ಅವೈಜ್ಞಾನಿಕ ಕಾಮಗಾರಿ ನಡೆಸುತ್ತಿದ್ದುದ್ದನ್ನು ವಿರೋಸಿ, ನಾವು ನಿರಂತರ ನಡೆಸಿದ ಹೋರಾಟದ ಫಲವಾಗಿ ಸೀಳಿದ್ದ ನಾಲೆ ಬಳಿ ತಡೆ ಗೋಡೆ ಕಟ್ಟಿ, ನಾಲೆಯಲ್ಲಿ ನೀರು ಹರಿಸುತ್ತಿರುವುದು ಸ್ವಾಗತಾರ್ಹ. ಆದರೆ, ಗೋಡೆ ಕಟ್ಟುವ ವೇಳೆ ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಕುಡಿಯುವ ನೀರು ಹರಿಸಲು ಗೇಟ್ ಅಳವಡಿಸಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

'ನಾವು ಮನವಿ ಸಲ್ಲಿಸಿದ್ದ ವೇಳೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಿಎಂ ಹಾಗೂ ಡಿಸಿಎಂ ಭರವಸೆ ನೀಡಿದ್ದರು. ಆದರೆ, ಇದುವರೆಗೂ ಭೇಟಿ ನೀಡಿಲ್ಲ. ಈ ಗೇಟ್ ಮೂಲಕವೇ ಕುಡಿಯುವ ನೀರು ಪೂರೈಸುವುದರ ಜತೆಗೆ ಹಿರಿಯೂರು ತಾಲೂಕಿನ ಕೆರೆಗಳನ್ನು ತುಂಬಿಸಲು ಯೋಜನೆ ರೂಪಿಸುತ್ತಿರುವ ಬಗ್ಗೆ ತಮಗೆ ಮಾಹಿತಿ ಇದೆ. ತಕ್ಷಣವೇ ಸಿಎಂ, ಡಿಸಿಎಂ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಗೇಟ್ ತೆರವುಗೊಳಿಸಬೇಕು. ಇಲ್ಲದಿದ್ದರೆ, ಮಾಜಿ ಸಚಿವ ಎಸ್.ಎ.ರವೀಂದ್ರನಾಥ್ ನೇತೃತ್ವದಲ್ಲಿ ಹೋರಾಟದ ರೂಪರೇಷೆ ತಯಾರಿಸಿ, ಜಿಲ್ಲೆಯ ಜನರನ್ನು ಕರೆದುಕೊಂಡು ಹೋಗಿ ಗೇಟ್ ಒಡೆಯುತ್ತೇವೆ ಎಂದು ಎಚ್ಚರಿಸಿದರು.

ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಎಂ.ಬಸವರಾಜ ನಾಯ್ಕ, ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್.ರಾಜಶೇಖರ್, ಮುಖಂಡರುಗಳಾದ ಚಂದ್ರಶೇಖರ್ ಪೂಜಾರ್, ಧನಂಜಯ ಕಡ್ಲೇಬಾಳ್, ರಾಜು ತೊಟ್ಟಪ್ಪನವರ್ ಇದ್ದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿದರು.

> **ಯೂರಿಯಾ ಅಭಾವಕ್ಕೆ ನಿರ್ಲಕ್ಷ್ಯ ಕಾರಣ**
> **ಪ್ರಸ್ತುತ ಎಲ್ಲೆಡೆ ಯೂರಿಯಾ ಅಭಾವ ಆಗಿರುವುದಕ್ಕೆ ಕೃಷಿ ಸಚಿವರ ನಿರ್ಲಕ್ಷ್ಯ ಕಾರಣ. ಸಚಿವರು ಮುಂಚಿತವಾಗಿಯೇ ಅಧಿಕಾರಿಗಳ ಸಭೆ ನಡೆಸಿ ಯೂರಿಯಾ ದಾಸ್ತಾನು ಮಾಡಿಕೊಳ್ಳಲು ಕ್ರಮ ಕೈಗೊಳ್ಳಬೇಕಿತ್ತು. ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಜೂನ್ ಮತ್ತು ಜುಲೈ ತಿಂಗಳಲ್ಲಿ ಜಿಲ್ಲೆಗೆ 21,479 ಮೆಟ್ರಿಕ್ ಟನ್ ಯೂರಿಯಾ ಬೇಕಾಗಿತ್ತು. ಆದರೆ, 8,825 ಟನ್ ಮಾತ್ರ ದಾಸ್ತಾನು ಇತ್ತು. ಈಗ ಅದು ಖಾಲಿಯಾಗಿರುವುದರಿಂದ ರೈತರಿಗೆ ಯೂರಿಯಾ ಸಿಗುತ್ತಿಲ್ಲ. ಅನ್ನದಾತರ ಈ ಅಸಹಾಯಕತೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ರಸಗಿಬ್ಬರ ಮಾರಾಟಗಾರರು ದುಪ್ಪಟ್ಟು ದರಕ್ಕೆ ಮಾರಾಟ ಮಾಡುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಕೋಳೇನಹಳ್ಳಿ ಬಿ.ಎಂ. ಸತೀಶ್ ಆರೋಪಿಸಿದರು.**

ಮಕ್ಕಳ ಸಾಧನೆಗೆ ಕಾರ್ಯಕ್ರಮ ರೂಪಿಸಿ: ಶ್ರೀ

ಹೊಸದುರ್ಗ: ಸಮಾಜದ ಬಡಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು ಹೆಚ್ಚು ರೂಪಿಸುವುದು ಅವಶ್ಯಕ ಎಂದು ಕುಂಚಿಟಿಗ ಮಹಾಸಂಸ್ಥಾನ ಮಠದ ಶ್ರೀ ಶಾಂತವೀರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಸಿದ್ದರಾಮೇಶ್ವರ ಸಮುದಾಯ ಭವನದಲ್ಲಿ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ, ಅಭಿನಂದನೆ, ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿ, ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಒಂದು ಕಟ್ಟಡ ನಿರ್ಮಿಸಿ ಅಲ್ಲಿ ಸಮಾಜದ ಸಂಘಟನೆ ಹಾಗೂ ಬಡಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಿ ಎಂದು ಹೇಳಿದರು.

ಕರಡಿ ಗವಿಮಠದ ಶಿವಶಂಕರ ಶಿವಯೋಗಿ ಸ್ವಾಮೀಜಿ, ಎಂಎಲ್ಸಿ ಕೆ.ಎಸ್.ನವೀನ್, ಖನಿಜ ನಿಗಮದ ಮಾಜಿ ಅಧ್ಯಕ್ಷ ಎಸ್.ಲಿಂಗಮೂರ್ತಿ, ಗೌರವಾಧ್ಯಕ್ಷ ಎಲ್.ಜಯಪ್ಪ ಮಾತನಾಡಿದರು. ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಶಶಿಧರ್ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಈ. ಅಶೋಕ್, ಉಪಾಧ್ಯಕ್ಷ ಮಂಜುನಾಥ್, ಖಜಾಂಚಿ ಟಿ.ಪ್ರಕಾಶ್, ನಿವೃತ್ತ ಐಪಿಎಸ್ ಅಧಿಕಾರಿ ಸಿದ್ದರಾಮಪ್ಪ, ಮಾಜಿ ಶಾಸಕ ಟಿ.ಎಚ್.ಬಸವರಾಜಪ್ಪ, ಮರಿದಿಮ್ಮಪ್ಪ, ಬಿ.ಪಿ.ಓಂಕಾರಪ್ಪ, ದ್ಯಾಮಪ್ಪ, ವಕೀಲರಾದ ಎಂ. ಶಿವಲಿಂಗಪ್ಪ, ಸಫಾರಿ ಶಿವಲಿಂಗಪ್ಪ ಹಾಜರಿದ್ದರು. ಕಾರ್ಯಕ್ರಮದಲ್ಲಿ ದಾನಿಗಳನ್ನು ಪ್ರತಿಭಾವಂತ ಮಕ್ಕಳನ್ನು ಸನ್ಮಾನಿಸಿ ಗೌರವಿಸಲಾಯಿತು.

> **ವೀರಶೈವ ಲಿಂಗಾಯತದಲ್ಲಿನ ಒಳಪಂಗಡಗಳನ್ನು ಒಟ್ಟುಗೂಡಿಸುವ ಕೆಲಸವನ್ನು ನೌಕರರ ಕ್ಷೇಮಭಿವೃದ್ಧಿ ಸಂಘ ಮಾಡುತ್ತಿದೆ. ಕಲುಷಿತ ರಾಜಕೀಯ ವ್ಯವಸ್ಥೆಯಲ್ಲಿ ಸ್ವಾಭಿಮಾನಿ ಸಮಾಜವನ್ನು ಕಟ್ಟುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕಿದೆ.**
> –ಎಸ್.ಲಿಂಗಮೂರ್ತಿ, ಮಾಜಿ ಅಧ್ಯಕ್ಷ ರಾಜ್ಯ ಖನಿಜ ನಿಗಮ

ಪ್ರತಿಭಾ ಪುರಸ್ಕಾರ, ಅಭಿನಂದನೆ, ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಪ್ರತಿಭಾವಂತ ಮಕ್ಕಳನ್ನು ಸನ್ಮಾನಿಸಿ ಗೌರವಿಸಿದರು.

ನಮ್ಮ ನಡೆ ಜಾಗೃತಿ ಕಡೆ ಅಭಿಯಾನ

ಚಳ್ಳಕೆರೆ: ನಗರದ ರಾಘವೇಂದ್ರ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಚಳ್ಳಕೆರೆ, ತಳಕು, ನಾಯಕನಹಟ್ಟಿ ಮತ್ತು ಪರಶಾಪುರ ,ಪೊಲೀಸ್ ಸಿಬ್ಬಂದಿ ನಮ್ಮ ನಡೆ ಜನ ಜಾಗೃತಿ ಕಡೆ ಎನ್ನುವ ಅಭಿಯಾನಕ್ಕೆ ಹಿರಿಯ ಜೆಎಂಎಫ್‌ಸಿ, ಸಿವಿಲ್, ನ್ಯಾಯಾಧೀಶ ಜಮೀರ್ .ಪಿ.ನಂದ್ಯಾಳ್ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಇತ್ತೀಚಿನ ದಿನಗಳಲ್ಲಿ ಮೊಬೈಲ್ ಹಾವಳಿಗಳಿಂದಾಗಿ ಸೈಬರ್ ಕ್ರೈಂ ಗಳು ನಡೆಯುತ್ತಿವೆ. ಇದನ್ನು ತಡೆಗಟ್ಟಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಭಂಡಾರಿ ನೇತೃತ್ವದಪೊಲೀಸ್ ಸಿಬ್ಬಂದಿಗಳು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿದರು.

ಅಲ್ಲದೆ ಫೇಸ್‌ಬುಕ್ ಇನ್ ಸ್ಟಾಗ್ರಾಂನಲ್ಲಿ ಹಣದ ವಿಚಾರವಾಗಿ ವಂಚನೆ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಇಂದಿನ ಯುವಕರು ಇದಕ್ಕೆ ಮಾರುಹೋಗದೆ ವಿದ್ಯಾಭ್ಯಾಸದ ಕಡೆ ಗಮನ ಕೊಡಿ, ಅಲ್ಲದೆ ಹಿಂದಿನ ವಿದ್ಯಾರ್ಥಿಗಳು ಮಾದಕ ವಸ್ತುಗಳಾದ ಬಿಡಿ ಸಿಗರೇಟ್ ಗುಟ್ಕಾ ಸೇರಿದಂತೆ ಮಧ್ಯಪಾನಗಳನ್ನು ಸೇವಿಸಿ ತಮ್ಮ ಜೀವನದ ಮೌಲ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಇದು ಅಲ್ಲದೆ ಗ್ರಾಮಾಂತರ ಪ್ರದೇಶದಲ್ಲಿ ಮೌಢ್ಯತೆಗೆ ಒಳಗಾಗಿ ಬಾಲ್ಯ ವಿವಾಹವನ್ನು ಮಾಡುತ್ತಿರುವುದು ಅಕ್ಷಮ್ಯ ಅಪರಾಧವಾಗಿರುತ್ತದೆ. ಈ ಹಿನ್ನೆಲೆ ನಮ್ಮ ಪೊಲೀಸ್ ಸಿಬ್ಬಂದಿಗಳು ದುಶ್ಚಟ ಸೇರಿದಂತೆ ಆನ್‌ಲೈನ್ ಮೋಸ ಮಾಡುತ್ತಿರುವ ಹಿನ್ನೆಲೆ ಜನ ಜಾಗೃತಿ ಮೂಡಿಸಿದ್ದಾರೆ. ಇದನ್ನು ತಿಳಿದು ಇಂದಿನ ಯುವ ಪೀಳಿಗೆ ದುಶ್ಚಟಕ್ಕೆ ಬಲಿಯಾಗದೆ ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಿ ಎಂದರು.

ಇನ್ನು ಈ ವೇಳೆ ಪ್ರಧಾನ ಸಿವಿಲ್ ಹಿರಿಯ ನ್ಯಾಯಾಧೀಶೆ ಎಚ್.ಆರ್. ಹೇಮಾ ಮತ್ತು ಡಿವೈಎಸ್‌ಪಿ ರಾಜಣ್ಣ ಮಾತನಾಡಿದರು. ಈ ಸಮಾರಂಭದಲ್ಲಿ ಪೊಲೀಸ್ ವತಿಯಿಂದ ಆಯೋಜಿಸಿದ್ದ ರೈಫಲ್ ಪ್ರದರ್ಶನವನ್ನು ನ್ಯಾಯಾಧೀಶರಿಗೆ ಹಾಗೂ ಶಾಲಾ ಕಾಲೇಜ್ ವಿದ್ಯಾರ್ಥಿಗಳಿಗೆ ಪ್ರದರ್ಶಿಸಲಾಯಿತು.

ಇನ್ನು ಈ ಸಮಾರಂಭದಲ್ಲಿ ಸಿಪಿಐ ಕೆ ಕುಮಾರ್, ಪಿಎಸ್‌ಐ ಶಿವರಾಜ್, ಪಿಎಸ್‌ಐ ದಡಿಯಪ್ಪ ಸೇರಿದಂತೆ ಅನೇಕ ಪೊಲೀಸ್ ಸಿಬ್ಬಂದಿ ಶಾಲಾ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ನಮ್ಮ ನಡೆ ಜನ ಜಾಗೃತಿ ಕಡೆ ಎನ್ನುವ ಅಭಿಯಾನದಲ್ಲಿ ಪೊಲೀಸ್ ವತಿಯಿಂದ ಆಯೋಜಿಸಿದ್ದ ರೈಫಲ್ ಪ್ರದರ್ಶಿಸಿದರು.

ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ–577 527. ಚಿತ್ರದುರ್ಗ ಜಿಲ್ಲೆ.

ಪ್ರಧಾನ ಶಾಖೆ : ಹೊಸದುರ್ಗ–577527 ದೂ. 7022276822
ಶಾಖೆಗಳು : ಕಡೂರು–577548, ಚಿಕ್ಕಮಗಳೂರು ಜಿಲ್ಲೆ. ದೂ. 7022276834
ಭದ್ರಾವತಿ –577 301, ಶಿವಮೊಗ್ಗ ಜಿಲ್ಲೆ. ದೂ. 9148197581
ರಾಜಾಜಿನಗರ, ಬೆಂಗಳೂರು – 560 010. ದೂ. 7022276825.

2024–25ನೇ ಸಾಲಿನ 27ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ನೋಟೀಸ್

ಮಾನ್ಯ ಸದಸ್ಯರೇ,
ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ ಇದರ 2024–25 ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ : 31.07.2025ರ ಗುರುವಾರ ಬೆಳಿಗ್ಗೆ 10.30 ಗಂಟೆಗೆ ಹೊಸದುರ್ಗದ ಬಸ್ ನಿಲ್ದಾಣದ ಬಳಿ ಇರುವ "ಶ್ರೀ ಗಣೇಶ ಸದನ" ದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹಂಜಿ ಶಿವಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಬೇಕಾಗಿ ಕೋರಲಾಗಿದೆ.

ಕಾರ್ಯಕಾರಿ ಮಂಡಲಿ ಆದೇಶದ ಮೇರೆಗೆ,
ಸಹಿ/– ಪ್ರಧಾನ ವ್ಯವಸ್ಥಾಕರು.

ವಿಶೇಷ ಸೂಚನೆ :
ವಾರ್ಷಿಕ ಮಹಾಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳನ್ನು ಲಿಖಿತವಾಗಿ ಸಭೆ ನಡೆಯುವ ದಿನಾಂಕಕ್ಕಿಂತ 5 ದಿನಗಳ ಮುಂಚಿತವಾಗಿ ಪ್ರಧಾನ ವ್ಯವಸ್ಥಾಪಕರಿಗೆ ಸಲ್ಲಿಸುವುದು. ಸಭೆಯ ನೋಟೀಸ್ ಮತ್ತು ವಿವರಗಳನ್ನು ಸದಸ್ಯರಿಗೆ ಅಂಚೆ ಮೂಲಕ ಕಳಿಸಲಾಗಿದೆ ಹಾಗೂ ವೆಬ್‌ಸೈಟ್ https://seethabank.in & WhatsApp ನಲ್ಲಿ ಪ್ರಚುರಪಡಿಸಲಾಗಿದೆ. ಒಂದು ವೇಳೆ ನೋಟೀಸ್ ತಲುಪದಿದ್ದಲ್ಲಿ ಈ ತಿಳುವಳಿಕೆಯೇ ನೋಟೀಸ್ ಎಂದು ಪರಿಗಣಿಸಿ ಮೇಲ್ಕಂಡ ಮಹಾಸಭೆಗೆ ಹಾಜರಾಗಲು ಕೋರಿದೆ. ಬ್ಯಾಂಕಿನ ಸೂಚನಾ ಫಲಕದಲ್ಲಿ ನೋಟೀಸ್ ಪ್ರತಿಯನ್ನು ಹಾಕಲಾಗಿದೆ.

ಧರ್ಮಸ್ಥಳದ ವೀರೇಂದ್ರ ಹೆಗಡೆ ಕೊಡುಗೆ ಅಪಾರ

ಹೊಸದುರ್ಗ: ಶ್ರೀಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆಯವರು ಸಮಾಜದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಹೊಸದುರ್ಗ ತಾಲೂಕಿಗೆ ಪೂಜ್ಯರ ಸಹಕಾರ ಅಪಾರವಾಗಿದೆ ಎಂದು ಕಾಂಗ್ರೆಸ್ ಮುಖಂಡ ಆಗ್ರೋಶಿವಣ್ಣ ತಿಳಿಸಿದರು.

ತಾಲೂಕಿನ ಮಾಡದಕೆರೆ ಹೋಬಳಿಯ ಹಾಲುರಾಮೇಶ್ವರ ಯೋಜನಾ ಕಚೇರಿಯ ಜಾನಕಲ್ ವಲಯದ ಬನ್ನಿಹಳ್ಳಿ ಗ್ರಾಮದ ಶ್ರೀ ಏಕನಾಥೇಶ್ವರದೇವಿ ದೇವಸ್ಥಾನದ ಸಮುದಾಯ ಭವನ ನಿರ್ಮಾಣಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳದಿಂದ ಮಂಜೂರಾತಿ ಮಾಡಿದ 2 ಲಕ್ಷ ರು. ಸಹಾಯ ಧನವನ್ನು ಅವರು ಬುಧವಾರ ದೇವಸ್ಥಾನ ಕಮಿಟಿ ಅವರಿಗೆ ಹಸ್ತಾಂತರ ಮಾಡಿ ಮಾತನಾಡಿದರು.

ಮನೆ ಇಲ್ಲದ ನಿರ್ಗತಿಕ ಮಹಿಳೆಯರಿಗೆ ಪ್ರತಿವರ್ಷ ನಾಲ್ಕೈದು ಮನೆ ಕಟ್ಟಿಸಿ ಕೊಡುತ್ತಿದ್ದಾರೆ. ತಾಲೂಕಿನಲ್ಲಿ ಪ್ರತಿವರ್ಷ ಎರಡು ಕೆರೆಗಳನ್ನ ಹೂಳೆತ್ತುವ ಮುಖಾಂತರ ಅಂತರ್ಜಲ ಕಾಪಾಡುತ್ತಿದ್ದಾರೆ. ತಾಲೂಕಿನಲ್ಲಿ ದೇವಸ್ಥಾನಗಳಿಗೆ ಇನ್ನಿತರ ಸಮಾಜದ ಅಭಿವೃದ್ಧಿಗೆ ಅತಿಹೆಚ್ಚು ಸಹಾಯಧನವನ್ನು ಕೊಟ್ಟು ಹೊಸದುರ್ಗದ ತಾಲೂಕಿನ ಅಭಿವೃದ್ಧಿಗೆ ಸಹಕಾರಿಯಾಗಿದ್ದಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಜೈನ್ ಮಿಲನ್ ರಾಜ್ಯ ಉಪಾಧ್ಯಕ್ಷರಾದ ಇ.ವಿ ಅಜ್ಜಪ್ಪ. ಜಿಲ್ಲಾ ಜನ ಜಾಗೃತಿ ವೇದಿಕೆ ಅಧ್ಯಕ್ಷ ಬಿ.ಪಿ.ಓಂಕಾರಪ್ಪ. ತಾಲೂಕ ಯೋಜನಾಧಿಕಾರಿ ಚಂದ್ರಶೇಖರ್, ಸಮುದಾಯ ಭವನದ ಅಧ್ಯಕ್ಷ ಅಜ್ಜಪ್ಪ, ಸದಸ್ಯರು. ವಲಯದ ಮೇಲ್ವಿಚಾರಕ ಲೋಕೇಶ್, ಸೇವಾಪ್ರತಿನಿಧಿ ಕವಿತಾ, ಸ್ವಸಹಾಯ ಸಂಘದ ಸದಸ್ಯರು ಮತ್ತು ಊರಿನ ಗ್ರಾಮಸ್ಥರು ಭಾಗವಹಿಸಿದ್ದರು.

> **ಪೂಜ್ಯರು ಬಡವರಿಗೆ, ಮಧ್ಯಮ ವರ್ಗದವರಿಗೆ, ಕೂಲಿ ಕಾರ್ಮಿಕರಿಗೆ, ರಾಷ್ಟ್ರೀಕೃತ ಬ್ಯಾಂಕ್‌ನಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡಿಸುವುದಲ್ಲದೆ ಅವರ ಮಕ್ಕಳು ಕಲಿತ್ತಿರುವ ಶಿಕ್ಷಣಕ್ಕೆ ಶಿಷ್ಯವೇತನವನ್ನು ಕೊಡಿಸುತ್ತಿದ್ದಾರೆ. ತಾಲೂಕಿನ ನಿರ್ಗತಿಕ ಮಹಿಳೆಯರಿಗೆ ಪ್ರತಿತಿಂಗಳು ಒಂದು ಸಾವಿರ ಮಾಸಾಸನವನ್ನು 160 ತಾಯಂದಿರಿಗೆ ಕೊಡಿಸುತ್ತಿದ್ದಾರೆ.**
> –ಆಗ್ರೋಶಿವಣ್ಣ, ಕಾಂಗ್ರೆಸ್ ಮುಖಂಡ

ಶ್ರೀಕ್ಷೇತ್ರ ಧರ್ಮಸ್ಥಳದಿಂದ ಮಂಜೂರು ಹಣ ದೇವಸ್ಥಾನ ಕಮಿಟಿ ಅವರಿಗೆ ಹಸ್ತಾಂತರ ಮಾಡಲಾಯಿತು.

ಪರಿಷತ್‌ನಿಂದ ಆ.2ರಿಂದ 19ನೇ ಸುಗಮ ಸಂಗೀತ ಸಮ್ಮೇಳನ

ಶಿವಮೊಗ್ಗ: ಕರ್ನಾಟಕ ಸುಗಮ ಸಂಗೀತ ಬೆಂಗಳೂರು ಪರಿಷತ್ ವತಿಯಿಂದ ಆ.2 ಮತ್ತು 3 ರಂದು ಮೈಸೂರಿನ ಕಲಾಮಂದಿರ ಆವರಣದಲ್ಲಿ 19ನೇ ಸುಗಮ ಸಂಗೀತ ಸಮ್ಮೇಳನ ನಡೆಯಲಿದ್ದು, ಸಮ್ಮೇಳನಾಧ್ಯಕ್ಷರಾಗಿ ಹಿರಿಯ ಗಾಯಕ ನಗರ ಶ್ರೀನಿವಾಸ ಉಡುಪ ಅವರನ್ನು ಆಯ್ಕೆ ಮಾಡಲಾಗಿದೆ. ನಾಡಿನ 33 ಭಾಗಗಳಿಂದ 300ಕ್ಕೂ ಅಧಿಕ ಸುಗಮ ಸಂಗೀತ ಕಲಾವಿದರು, ಕವಿಗಳು ಭಾಗವಹಿಸಲಿದ್ದಾರೆ. ಸಾವಿರಾರು ಸಂಖ್ಯೆಯಲ್ಲಿ ಸುಗಮಸಂಗೀತ ಅಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಬಿ.ವಿ.ಪ್ರವೀಣ್ ತಿಳಿಸಿದ್ದಾರೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಆ.2 ರಂದು ಸಮ್ಮೇಳನ ಉದ್ಘಾಟಿಸಲಿದ್ದಾರೆ. ಪರಿಷತ್ತು ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಆ.3 ರಂದು ಸಮಾರೋಪದಲ್ಲಿ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ.ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ಸುಗಮ ಸಂಗೀತ ಪರಿಷತ್ತು ಬೆಂಗಳೂರು ಆಯೋಜಿಸಿರುವ ಗೀತೋತ್ಸವ –19, ಸುಗಮ ಸಂಗೀತ ಸಮ್ಮೇಳನದಲ್ಲಿ ಶಿವಮೊಗ್ಗ ಜಿಲ್ಲೆಯ ಸುಗಮ ಸಂಗೀತ ಸದಸ್ಯರು ಗೀತೋತ್ಸವ ವೇದಿಕೆಯಲ್ಲಿ ಹಾಡಲಿದ್ದಾರೆ. ಏಕವ್ಯಕ್ತಿ ಗಾಯನದಲ್ಲಿ ಕೆ.ಯುವರಾಜ್, ಸುರೇಖಾ ಹೆಗಡೆ, ಜಯಶ್ರೀ ಶ್ರೀಧರ್, ಮಧುರಾ ನಾಗರಾಜ್, ಶುಭಾ ಹರ್ಷ, ಧನಪಾಲ್ ಸಿಂಗ್ ರಜಪೂತ್, ಸಾಕೇತ ಶಾಸ್ತ್ರಿ, ಸಾಗರದ ಸುನೀತಾ ಶ್ರೀಪಾದ ರಾವ್ ಹಾಗೂ ವೃಂದಗಾನ ವಿಭಾಗದಲ್ಲಿ ಉಮಾದಿಲೀಪ್, ಲಕ್ಷ್ಮೀಮಹೇಶ್, ನಳಿನಾಕ್ಷಿ, ಬಿಂದು ವಿಜಯಕುಮಾರ್, ಹೇಮಾ ಟಿ., ಮಂಜುನಾಥ್, ಜಿ.ವಿಜಯಕುಮಾರ್ ಬಸವರಾಜ್,ರಾಜಕುಮಾರ್, ಮುರಳಿಧರ್ ಹಾಡಲಿದ್ದಾರೆ. 2023 ಮತ್ತು 2024ನೇ ಸಾಲಿನ 'ಕಾವ್ಯಶ್ರೀ' ಮತ್ತು 'ಭಾವಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. 'ಕಾವ್ಯಶ್ರೀ' ಪ್ರಶಸ್ತಿಗೆ ಕವಿಗಳಾದ ಬಿ.ಆರ್.ಲಕ್ಷ್ಮಣರಾವ್, ಡಾ. ನಾ.ದಾಮೋದರ ಶೆಟ್ಟಿ ಹಾಗೂ 'ಭಾವಶ್ರೀ' ಪ್ರಶಸ್ತಿಗೆ ಗಾಯಕಿಯರಾದ ರತ್ನಮಾಲಾ ಪ್ರಕಾಶ್ ಮತ್ತು ಕೆ.ಎಸ್.ಸುರೇಖಾ ಅವರನ್ನು ಆಯ್ಕೆ ಮಾಡಲಾಗಿದೆ.

ಸಮಾಚಾರ ಸಣ್ಣದಲ್ಲ

ಕೆ-ಕೋಕಾ ಕಾಯಿದೆ ಪ್ರಕರಣ ದಾಖಲು

ಮಂಗಳೂರು: ಜೈಲಿನಲ್ಲಿ ವಿಚಾರಣಾಧೀನ ಕೈದಿಗೆ ಹಲ್ಲೆ ನಡೆಸಿ, ಹಪ್ತ ವಸೂಲಿ ನಡೆಸಿದ ನಾಲ್ವರು ಸಹ ಕೈದಿಗಳ ವಿರುದ್ಧ ಕೆ-ಕೋಕಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಮಂಗಳೂರಿನ ಜೈಲಿನಲ್ಲಿರುವ ಆರೋಪಿ ಮಿಥುನ್ ಎಂಬಾತನಿಗೆ ಸಹ ಕೈದಿಗಳಾದ ಧನು ಯಾನೆ ಧನುಷ್ ಭಂಡಾರಿ, ಸಚಿನ್ ತಲಪಾಡಿ, ದಿಲೇಶ್ ಬಂಗೇರ ಯಾನೆ ದಿಲ್ಲು, ಲಾಯಿ ವೇಗಸ್ ಎಂಬವರು ಜು.9ರಂದು ಸಂಜೆ 5 ಗಂಟೆಗೆ ತೀವ್ರವಾಗಿ ಹಲ್ಲೆ ನಡೆಸಿದ್ದರು. ಅಲ್ಲದೆ 50 ಸಾವಿರ ರೂ. ಹಪ್ತಾ ನೀಡುವಂತೆ ಬೆದರಿಸಿದ್ದರು. ಈ ವಿಚಾರ ಜೈಲು ಅಧಿಕಾರಿಗಳಿಗೆ ಹೇಳಿದರೆ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದರು. ಮಿಥುನ್ ಪ್ರಾಣಭಯದಿಂದ ದೂರು ನೀಡುವ ಬದಲು ನಾಲ್ವರು ರೌಡಿಸಂ ಕೈದಿಗಳು ಹೇಳಿದಂತೆ ಹಣ ನೀಡಲು ಒಪ್ಪಿದ್ದ. ಕೈದಿ ಸಚಿನ್ ಎಂಬಾತ ಕೊಟ್ಟ ಎರಡು ಮೊಬೈಲ್ ಸಂಖ್ಯೆಗೆ ತನ್ನ ಪತ್ನಿಯ ಮೂಲಕ 20 ಸಾವಿರ ರೂ. ಫೋನ್ ಪೇ ಮಾಡಿಸಿದ್ದ.ಜು.12ರಂದು ಮಂಗಳೂರು ಸೆಂಟ್ರಲ್ ಡಿಸಿಪಿ, ಬರ್ಕೆ ಪೊಲೀಸ್ ಇನ್ಸ್ಪೆಕ್ಟರ್ ಜೈಲಿನ ತಪಾಸಣೆ ಮಾಡಲು ಹೋಗಿದ್ದ ವೇಳೆ ವೇಳೆ ಈ ಪ್ರಕರಣ ಬೆಳಕಿಗೆ ಬಂದಿದೆ. ಜಿಲ್ಲಾ ಜೈಲ್ ಸೂಪರಿಂಡೆಂಟ್ ಶರಣಬಸಪ್ಪ ಬರ್ಕೆ ಠಾಣೆಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಕೈದಿಗೆ ಜೈಲಿನಲ್ಲಿ ಹಲ್ಲೆ ನಡೆಸಿದ್ದ ಸಹಕೈದಿಗಳ ವಿರುದ್ಧ ಕೆ-ಕೋಕಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ನದಿಗೆ ಹಾರಿ ನಾಪತ್ತೆ: ಎಸ್‌ಡಿಆರ್‌ಎಫ್ ಶೋಧ

ಸುಬ್ರಹ್ಮಣ್ಯ: ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಅಂಬ್ಯುಲೆನ್ಸ್ ಚಾಲಕ ಹೊನ್ನಪ್ಪ ದೇವರಗದ್ದೆ ಕುಮಾರಧಾರ ನದಿಗೆ ಹಾರಿರುವ ಶಂಕೆ ವ್ಯಕ್ತವಾಗಿದೆ.

ಮೃತ ದೇಹಕ್ಕಾಗಿ ಎಸ್ ಡಿ..ಆರ್.ಎಫ್ ನಿಂದ ನದಿಯಲ್ಲಿ ಶೋಧ ಕಾರ್ಯ ಆರಂಭಗೊಂಡಿದೆ. ಜು.22 ರಂದು ಕರ್ತವ್ಯಕ್ಕೆಂದು ಮನೆಯಿಂದ ಬೆಳಗ್ಗೆ 09.00 ಗಂಟೆಗೆ ಹೋಗಿದ್ದು, ಬಳಿಕ ಕಾಣೆಯಾಗಿದ್ದಾರೆ. ಅಗ್ರಹಾರ ದೇವಸ್ಥಾನದ ಬಳಿಯಿಂದಾಗಿ ಕುಮಾರಧಾರ ನದಿ ಕಡೆ ಹೋಗಿರುವುದು ಸಿ.ಸಿ. ಕ್ಯಾಮರಾದಲ್ಲಿ ದಾಖಲಾಗಿದೆ. ನದಿಗೆ ಹಾರಿರುವುದು ಬಹುತೇಕ ಖಚಿತವಾಗಿದೆ ಹೀಗಾಗಿ ಈಜು ಪಟು ಈಶ್ವರ ಮಲ್ಪೆ ಕೂಡ ಸುಬ್ರಹ್ಮಣ್ಯ ಶೋಧಕ್ಕಾಗಿ ಬರಲಿದ್ದಾರೆ ಎಂದು ತಿಳಿದು ಬಂದಿದೆ.

ಚಿ.ರಮೇಶ್ ಕಲ್ಲಡ್ಕ ನಿಧನ

ಮಂಗಳೂರು: ಕಲಾ ಸಂಗಮದ ಶಿವ ದೂತ ಗುಳಿಗೆ ನಾಟಕದ ಬ್ರಾಹ್ಮಣ (ವಿವಾದಿತ) ಭೀಮರಾವ್ ಪಾತ್ರಧಾರಿ ಚಿ. ರಮೇಶ್ ಕಲ್ಲಡ್ಕ ಬುಧವಾರ ಬೆಳಗ್ಗೆ



ಹೃದಯಾಘಾತದಿಂದ ನಿಧನ ಹೊಂದಿದರು. ಮೂರು ದಶಕದಿಂದ ರಂಗ ಭೂಮಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ರಮೇಶ್ ಕಲ್ಲಡ್ಕ, ಕಲಾಸಂಗಮ ಸಂಸ್ಥೆಯಲ್ಲಿ ಕಳೆದ 20 ವರ್ಷಗಳಿಂದ ವಿವಿಧ ಪಾತ್ರಗಳಿಗೆ ಜೀವ ತುಂಬಿದ್ದರು. ಛತ್ರಪತಿ ಶಿವಾಜಿ ನಾಟಕದಲ್ಲಿ ದಾದಾಜಿ ಕೊಂಡ ದೇವ ಪಾತ್ರವನ್ನು ಅಭಿನಯಿಸುತ್ತಿದ್ದರು. ರಮೇಶ್ ಕಲ್ಲಡ್ಕ ನಿಧನಕ್ಕೆ ರಂಗಭೂಮಿಯ ಹಿರಿ ಕಿರಿ ಕಲಾವಿದರು ಕಂಬನಿ ಮಿಡಿದಿದ್ದಾರೆ. ರಮೇಶ್ ಕಲ್ಲಡ್ಕ ಅವರು, ಕಾಲೇಜು ದಿನಗಳಲ್ಲೇ ನಾಟಕದಲ್ಲಿ ಅಭಿನಯಿಸುತ್ತಿದ್ದರು. ರಂಗಕರ್ಮಿ ಶಾಂತಾರಾಮ ಕಲ್ಲಡ್ಕ ಅವರ ಮಿತ್ರಬಳಗ ಕಲಾತಂಡದ ಮೂಲಕ ತನ್ನ ರಂಗ ಪಯಣ ಆರಂಭಿಸಿದ್ದರು. ವಿಜಯಕುಮಾರ್ ಕೊಡಿಯಾಲಬೈಲ್ ಅವರ ಗರಡಿಯಲ್ಲಿ ಪಳಗಿದ ರಮೇಶ್ ಕಲ್ಲಡ್ಕ, ಕಲಾಸಂಗಮದ ಎಲ್ಲಾ ಸಾಮಾಜಿಕ, ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅದರಲ್ಲೂ ''ಶಿವದೂತಗುಳಿಗೆ'' ನಾಟಕದ ಭೀಮಾ ರಾವ್ ಬ್ರಾಹ್ಮಣನ ಪಾತ್ರ ಅವರಿಗೆ ಖ್ಯಾತಿ ತಂದು ಕೊಟ್ಟಿತ್ತು.

ಭಾವೈಕ್ಯತೆ ಮೂಡಿಸುವ ಸಿನಿಮಾ

ಸುಳ್ಯ: ತುಳು ಚಿತ್ರೋದ್ಯಮದಲ್ಲಿ ಸ್ಥಳೀಯ ಕಲಾವಿದರ ಕೂಡುವಿಕೆಯಲ್ಲಿ ಮೂಡಿಬಂದ ತುಳು ಸಿನಿಮಾ ಧರ್ಮ ಚಾವಡಿ ಬಗ್ಗೆ ಎಲ್ಲೆಡೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದ್ದು, ಬಿಡುಗಡೆಯಾದ ಎಲ್ಲಾ ಕಡೆ ಹೌಸ್ ಫುಲ್ ಪ್ರದರ್ಶನ ಕಾಣುತ್ತಿದೆ ಎಂದು ಚಿತ್ರ ತಂಡ ಹೇಳಿದೆ. ಅವರು ಸುಳ್ಯ ಪ್ರೆಸ್ ಕ್ಲಬ್ ನಲ್ಲಿ ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಚಿತ್ರದ ಸಹ ನಿರ್ದೇಶಕ ಕೀರ್ತನ್ ಶೆಟ್ಟಿ ಸುಳ್ಯ ಈ ಸಿನಿಮಾವು ಸ್ಥಳೀಯ ಪರಿಚಿತ ಕಲಾವಿದರು ಮತ್ತು ಹೊಸ ಮುಖಗಳ ಜೊತೆಗೆ ವಿಭಿನ್ನವಾದ ಒಂದು ಸಂಸ್ಕೃತಿ ಹಾಗೂ ಭಾವೈಕ್ಯತೆ ಮೂಡಿಸುವ ಸಿನಿಮವಾಗಿದೆ. ಜಗದೀಶ್ ಆಮೀನ್ ನಡುಬೈಲು ನಿರ್ಮಾಣದಲ್ಲಿ ನಿತಿನ್ ರೈ ಕುಕ್ಕುವಳ್ಳಿ ನಿರ್ದೇಶನದ ಧರ್ಮ ಚಾವಡಿ ಸಿನಿಮಾ ಜುಲೈ 11ರಂದು ತೆರೆ ಕಂಡು ಯಶಸ್ವಿಯಾಗಿ ಪ್ರದರ್ಶನಗೊಳ್ಳುತಿದೆ.

{ ಸಿದ್ದರಾಮಯ್ಯ } ಮುಖ್ಯಮಂತ್ರಿ

ನಾನು ಪ್ರಾಥಮಿಕ ಶಿಕ್ಷಣ ಓದುವಾಗ ನಮ್ಮ ಊರಲ್ಲಿ ವಿದ್ಯುತ್ ಇರಲಿಲ್ಲ. 7-8ನೇ ತರಗತಿಯಲ್ಲಿದ್ದಾಗ ವಿದ್ಯುತ್ ಬಂತು. ಆದರೆ, ಈಗ ವಿದ್ಯುತ್ ಸಂಪರ್ಕ ಇಲ್ಲದ ಗ್ರಾಮವೇ ಇಲ್ಲ. ರಾಜ್ಯದ ಮೂಲೆ ಮೂಲೆಗಳಿಗಳಿಗೆ, ಕೈಗಾರಿಕೆಗಳಿಗೆ, ಹೀಗೆ ಎಲ್ಲಾ ಕಡೆ ವಿದ್ಯುತ್ ಕೊಡುವಲ್ಲಿ ಕೆಪಿಸಿಎಲ್ ಅತ್ಯಂತ ಪ್ರಮುಖ ಪಾತ್ರ ವಹಿಸಿದೆ. ರಾಜ್ಯದ ಪ್ರಗತಿಯಲ್ಲೂ ಕೆಪಿಸಿಎಲ್ ನ ಕೊಡುಗೆ ಮಹತ್ವದ್ದಾಗಿದೆ.

ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆ | ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ

ಕನ್ನಡ ಭಾಷೆ ಸಮರ್ಪಕ ಅನುಷ್ಠಾನಕ್ಕೆ ಸೂಚನೆ

ಉಡುಪಿ: ಜಿಲ್ಲೆಯ ಆಡಳಿತದಲ್ಲಿ ಕನ್ನಡ ಭಾಷೆಯು ಪ್ರತಿಶತಃ ನೂರರಷ್ಟು ಅನುಷ್ಠಾನವಾಗಬೇಕು. ಕನ್ನಡ ಭಾಷೆಯ ಬಳಕೆ ನಿರಂತರವಾಗಿರಲು ಕನ್ನಡ ಭಾಷೆ ಪರಿಣಾಮಕಾರಿ ಪ್ರಚಲಿತದಲ್ಲಿರಲು ಒತ್ತು ನೀಡಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಕರೆ ನೀಡಿದರು.

ಅವರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕನ್ನಡ ಭಾಷೆಗೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಇಂತಹ ಭಾಷೆ ಉಳಿವಿಗಾಗಿ ಹೆಚ್ಚು ಸಂವೇದನಾಶೀಲತೆಯಿಂದ ಅಧಿಕಾರಿಗಳು ಕೆಲಸ ಮಾಡಬೇಕು. ಸರಕಾರ ಕನ್ನಡ ಭಾಷೆ ಅನುಷ್ಠಾನಕ್ಕೆ ಅನೇಕ ಆದೇಶ ಹೊರಡಿಸಿದೆ. ಇದು ಸಮರ್ಪಕವಾಗಿ ಕಾರ್ಯಗತವಾಗಬೇಕು. ಕನ್ನಡ ಭಾಷೆಯನ್ನು ಆಡಳಿತದಲ್ಲಿ ಸಮರ್ಪಕವಾಗಿ ಅನುಷ್ಠಾನ ಮಾಡದಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದರು.

ಜಿಲ್ಲಾಡಳಿತ ಕನ್ನಡ ಪರ ಸಂಘಟನೆಗಳೊಂದಿಗೆ ಕನಿಷ್ಠ ಮೂರು ತಿಂಗಳಿಗೊಮ್ಮೆಯಾದರೂ ಸಭೆ ನಡೆಸುವುದರೊಂದಿಗೆ ಕನ್ನಡ ಭಾಷಾ ಅನುಷ್ಠಾನದ ಸಮಸ್ಯೆಗಳ ಕುರಿತು ಚರ್ಚಿಸಿ, ಕಾನೂನಾತ್ಮಕವಾಗಿ ಕನ್ನಡ ಅನುಷ್ಠಾನಕ್ಕೆ ಒತ್ತು ನೀಡಬೇಕು ಎಂದ ಅವರು, ಕನ್ನಡ ಭಾಷೆಯ ಪರ ಕಾನೂನಾತ್ಮಕವಾಗಿ ಹೋರಾಟ ನಡೆಸಿದ ಕನ್ನಡ ಪರ ಹೋರಾಟ ಸಂಘಟನೆಗಳ ಸದಸ್ಯರುಗಳ ಮೇಲೆ ಹಾಕಿರುವ ಪ್ರಕರಣಗಳನ್ನು ಸರಕಾರ ವಾಪಾಸ್ ಪಡೆಯಲು ಸರಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬೇಕು ಎಂದರು.

ಕನ್ನಡ ಕಲಿಕಾ ಕೇಂದ್ರ:

ಜಿಲ್ಲೆಯಲ್ಲಿ ಶಿಕ್ಷಣ ಸೇರಿದಂತೆ ಉದ್ಯೋಗ ಅರಸಿ ಬಂದ ಹೊರ ರಾಜ್ಯದ ಕನ್ನಡಯೇತರಿಗೆ ಕನ್ನಡ ಕಲಿಯಲು ಉತ್ಸುಕರಾಗಿದ್ದರೆ 20 ಜನ ಮೇಲ್ಪಟ್ಟಿದ್ದಲ್ಲಿ ಕನ್ನಡ ಪ್ರಾಧಿಕಾರದ ವತಿಯಿಂದ ಕಲಿಕಾ ಕೇಂದ್ರಗಳನ್ನು ತೆರೆದು ಕನ್ನಡವನ್ನು ಕಲಿಸಿ ಕೊಡುವ ಕಾರ್ಯ ಮಾಡಲಾಗುವುದು ಎಂದ ಅವರು, ಜಿಲ್ಲಾ ತರಬೇತಿ ಕೇಂದ್ರಗಳು ಕ್ರಿಯಾಶೀಲವಾಗಿ ಕಾರ್ಯಚಟುವಟಿಕೆ ನಡೆಸುವುದರೊಂದಿಗೆ ಕನ್ನಡ ಅನುಷ್ಠಾನಕ್ಕೆ ಮುಂದಾಗಬೇಕು ಎಂದರು.

ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿದರು.

ನಾಮಫಲಕ ಕಡ್ಡಾಯ:

ಜಿಲ್ಲೆಯಲ್ಲಿರುವ ಮಲ್ಪೆ ಬೀಚ್‌ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಾಶಸ್ತ್ಯ ದೊರೆತಿದ್ದರೂ ವಾಣಿಜ್ಯ ಕಟ್ಟಡಗಳ ನಾಮಫಲಕಗಳು ಕನ್ನಡ ಭಾಷೆಯಲ್ಲಿ ಇರುವುದಿಲ್ಲ. ಈ ಬಗ್ಗೆ ಸ್ಥಳೀಯ ಸಂಸ್ಥೆಗಳು ಹಾಗೂ ಪ್ರವಾಸೋದ್ಯಮ ಇಲಾಖೆಯವರು ನಿಯಮಾನುಸಾರ ಕಡ್ಡಾಯವಾಗಿ ಕನ್ನಡದಲ್ಲಿ ನಾಮಫಲಕಗಳನ್ನು ಅಳವಡಿಸಲು ಕ್ರಮ ವಹಿಸಬೇಕು ಎಂದ ಅವರು, ಐತಿಹಾಸಿಕ ಪ್ರಸಿದ್ಧ ತಾಣಗಳ ಸವಿವರವನ್ನು ಕನ್ನಡ ಭಾಷೆಯಲ್ಲಿ ಪ್ರದರ್ಶಿಸುವ ಕೆಲಸವಾಗಬೇಕು ಎಂದರು.

ಜಿಲ್ಲೆಯ ವಾಣಿಜ್ಯ ಕೇಂದ್ರಗಳು ಹಾಗೂ ಕೈಗಾರಿಕಾ ಕೇಂದ್ರಗಳ ಮುಂಭಾಗದ ನಾಮಫಲಕದಲ್ಲಿ ಶೇ. 60 ರಷ್ಟು ಕನ್ನಡ ಭಾಷೆಯಲ್ಲಿ ಹಾಗೂ ಶೇ. 40 ರಷ್ಟು ಇತರೆ ಭಾಷೆಯಲ್ಲಿ ಅಳವಡಿಸಲು ಕ್ರಮವಹಿಸಬೇಕು. ಪರವಾನಿಗೆ ನೀಡುವ ಸಂದರ್ಭದಲ್ಲಿಯೇ ಅವರುಗಳಿಂದ ಛಾಯಾಚಿತ್ರಗಳನ್ನು ಪಡೆದುಕೊಂಡು ವೀಕ್ಷಿಸಿ, ಅನಂತರ ಅನುಮತಿ ನೀಡಬೇಕು. ಇವುಗಳ ಜೊತೆಯಲ್ಲಿ ಆಗಿಂದಾಗ್ಗೆ ಪರಿಶೀಲನೆ ಮಾಡಲು ಕ್ರಮವಹಿಸಬೇಕು ಎಂದರು.

ಕೆಲವು ಪ್ರಾಥಮಿಕ ಶಾಲಾ ಮಕ್ಕಳಿಗೆ ಕನ್ನಡ ಭಾಷೆಯ ಅಕ್ಷರಗಳನ್ನು ಗುರುತಿಸುವ ಪರಿಸ್ಥಿತಿಯಲ್ಲಿ ಇಲ್ಲ. ಶಿಕ್ಷಕರು ಗುಣಮಟ್ಟದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕಲಿಸುವ ಕಾರ್ಯ ಆಗಬೇಕು. ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಹೆಚ್ಚಿನ ಭಾಗ ಉತ್ತೀರ್ಣರಾಗಿರುತ್ತಾರೆ. ಆದರೆ ಕೆಲವೇ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆ ಕನ್ನಡ ವಾಗಿದ್ದರೂ ಸಹ ಅನುತ್ತೀರ್ಣವಾಗಿರುತ್ತಾರೆ. ಇದಕ್ಕೆ ಕಾರಣವನ್ನು ಕಂಡುಕೊಳ್ಳಬೇಕಿದೆ ಎಂದರು.

ಆಸ್ಪತ್ರೆಗಳಲ್ಲಿ ಮರಣೋತ್ತರ ಪರೀಕ್ಷೆಯ ವರದಿಗಳು ಅದಷ್ಟು ಕನ್ನಡದಲ್ಲಿಯೇ ಇರುವ ಹಾಗೆ ಕ್ರಮವಹಿಸಬೇಕು. ಕಡ್ಡಾಯವಾಗಿ ರೋಗಿಗಳ ಹೆಸರನ್ನು ಕನ್ನಡದಲ್ಲಿಯೇ ನಮೂದು ಮಾಡಬೇಕು. ವೈದ್ಯರುಗಳು ಸಹ ಕನ್ನಡ ಭಾಷಾಭಿಮಾನವನ್ನು ಬೆಳೆಸಿಕೊಳ್ಳುಬೇಕು ಎಂದರು.

ಕಾರ್ಯಪಾಲಕ ಅಭಿಯಂತರರ ಕಚೇರಿಯಿಂದ ಅಭಿವೃದ್ಧಿ ಕಾಮಗಾರಿಗಳ ಟೆಂಡರ್, ನೋಟಿಫಿಕೇಶನ್ ಗಳನ್ನು ಕನ್ನಡದಲ್ಲಿಯೆ ಕರೆಯುವುದರೊಂದಿಗೆ ಕಾರ್ಯಾದೇಶವನ್ನು ಕನ್ನಡ ಭಾಷೆಯಲ್ಲಿಯೇ ನೀಡಬೇಕು. ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ಟೆಂಡರ್ ಕಾರ್ಯಾದೇಶವನ್ನು ನೀಡಿದ್ದಲ್ಲಿ ಅವರು ಸ್ಥಳೀಯ ಕನ್ನಡಿಗರಿಗೆ ಉದ್ಯೋಗ ಅವಕಾಶಗಳು ಹೆಚ್ಚು ಇರುತ್ತದೆ. ಇದಕ್ಕೆ ಒತ್ತು ನೀಡಬೇಕು ಎಂದರು.

ಬ್ಯಾಂಕುಗಳಲ್ಲಿ ಕಡ್ಡಾಯವಾಗಿ ಸ್ಥಳೀಯ ಭಾಷೆಯನ್ನು ಮಾತನಾಡುವವರನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳುವುದು ಒಳಿತು. ಇದರಿಂದ ಸ್ಥಳೀಯ ಜನರು ದೈನಂದಿನ ಬ್ಯಾಂಕಿಂಗ್ ವ್ಯವಹಾರಗಳನ್ನು ಸರಳವಾಗಿ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಈ ಬಗ್ಗೆ ಜಿಲ್ಲೆಯ ಅಗ್ರಗಣ್ಯ ಬ್ಯಾಂಕ್ ಸಭೆಯನ್ನು ಕರೆದು, ಬ್ಯಾಂಕುಗಳಿಗೆ ಸೂಚನೆಯನ್ನು ನೀಡುವ ಕಾರ್ಯವಾಗಬೇಕೆಂದರು.

ಈ ಹಿಂದೆ ಶಾಲೆಗಳ ನಿರ್ಮಾಣಕ್ಕಾಗಿ ಅನೇಕ ದಾನಿಗಳು 5-10 ಎಕರೆವರೆಗೆ ಜಮೀನುಗಳನ್ನು ದಾನವಾಗಿ ನೀಡಿದ್ದು, ಅವುಗಳಲ್ಲಿ ಶಾಲಾ ಕಟ್ಟಡಗಳ ನಿರ್ಮಾಣವಾಗಿ ಕಳೆದ 35-40 ವರ್ಷಗಳಿಂದ ಬಳಕೆ ಮಾಡಿಕೊಳ್ಳಲಾಗಿದೆ. ಆದರೆ, ಕೆಲವು ಕನ್ನಡ ಶಾಲೆಗಳು ವಿದ್ಯಾರ್ಥಿಗಳ ಕೊರತೆಯಿಂದಾಗಿ ನಿಂತು ಹೋಗಿವೆ. ಶಾಲೆಗೆ ಸಂಬಂಧಿಸಿದ ಜಾಗವನ್ನು ಜನಸಾಮಾನ್ಯರು ಒತ್ತುವರಿ ಮಾಡಿಕೊಳ್ಳಲು ಮುಂದಾಗುತ್ತಾರೆ. ಆದ್ದರಿಂದ ದಾನದಿಂದ ಪಡೆದ ಭೂಮಿಯ ದಾಖಲಾತಿಗಳನ್ನು ಸರಕಾರದ ಹೆಸರಿಗೆ ಮಾಡಿಕೊಳ್ಳಬೇಕು. ಜಿಲ್ಲೆಯಲ್ಲಿ 8 ಶಾಲೆಗಳ ದಾಖಲೆಗಳು ಸಮರ್ಪಕವಾಗಿ ಆಗದೇ ಇರುವುದು ಕಂಡುಬಂದಿದೆ. ಸೂಕ್ತ ಅಧಿಕೃತ ದಾಖಲಾತಿಗಳನ್ನು ಜಿಲ್ಲಾ ಆಡಳಿತದಿಂದ ಮಾಡಿಕೊಳ್ಳಲು ಕ್ರಮವಹಿಸಬೇಕು ಎಂದರು.

> ಕನ್ನಡ ಭಾಷೆಯ ಪರ ಕಾನೂನಾತ್ಮಕವಾಗಿ ಹೋರಾಟ ನಡೆಸಿದ ಕನ್ನಡ ಪರ ಹೋರಾಟ ಸಂಘಟನೆಗಳ ಸದಸ್ಯರುಗಳ ಮೇಲೆ ಹಾಕಿರುವ ಪ್ರಕರಣಗಳನ್ನು ಸರಕಾರ ವಾಪಾಸ್ ಪಡೆಯಲು ಸರಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬೇಕು.
>
> -ಡಾ.ಪುರುಷೋತ್ತಮ ಬಿಳಿಮಲೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಮಾತನಾಡಿ, ಜಿಲ್ಲೆಯ ಆಡಳಿತದಲ್ಲಿ ಕನ್ನಡ ಅನುಷ್ಠಾನ ಸಮರ್ಪಕವಾಗಿ ಆಗುತ್ತಿದೆ. ಜಿಲ್ಲೆಯಲ್ಲಿ ನಡೆಸುವ ಕೆ.ಡಿ.ಪಿ. ಸಭೆಗಳಲ್ಲಿ ಕನ್ನಡ ಭಾಷೆಯ ಅನುಷ್ಠಾನ ಸಮಸ್ಯೆಯ ಕುರಿತು ಪ್ರಥಮ ಪ್ರಾಶಸ್ತ್ಯದ ಆದ್ಯತೆ ನೀಡಲಾಗುವುದು.

ಕನ್ನಡ ಭಾಷೆಯನ್ನು ಆಡಳಿತದ ಲ್ಲಿ ನಿಷ್ಠೆಯಿಂದ ಮಾಡಲು ಪ್ರತಿಯೊಬ್ಬ ಅಧಿಕಾ ರಿಗಳು ಮುಂದಾಗೋಣ ಎಂದ ಅವರು, ಇಂದಿನ ಸಭೆಯಲ್ಲಿ ನೀಡಿದ ಸಲಹೆ ಸೂಚನೆಗಳನ್ನು ಪಾಲಿಸುವುದರೊಂದಿಗೆ ಕನ್ನಡ ಭಾಷೆಗೆ ಮತ್ತಷ್ಟು ಒತ್ತು ನೀಡೋಣ ಎಂದರು.

ಸಭೆಯಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ್ ಹಾನ್‌ಗಲ್, ಸದಸ್ಯರಾದ ಯಾಕೂಬ್ ಖಾದರ್ ಗುಲ್ವಾಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ, ಆಪ್ತ ಕಾರ್ಯದರ್ಶಿ ಫಣಿ ಕುಮಾರ್, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶೋಭಾಯಾತ್ರೆಯ ಆಮಂತ್ರಣ ಪತ್ರ ಬಿಡುಗಡೆ

ಸುಳ್ಯ: ಸುಳ್ಯದಲ್ಲಿ ಆ.19ರಂದು ನಡೆಯುವ ಮೊಸರು ಕುಡಿಕೆ ಉತ್ಸವ ಮತ್ತು ಶೋಭಾಯಾತ್ರೆಯ ಆಮಂತ್ರಣ ಪತ್ರ ಬಿಡುಗಡೆ ಭಾನುವಾರ ಚೆನ್ನಕೇಶವ ದೇವಸ್ಥಾನದ ಎದುರಿನಲ್ಲಿ ನಡೆಯಿತು.

ವಿಶ್ವ ಹಿಂದೂ ಪರಿಷತ್ ಸ್ಥಾಪನಾ ದಿನಾಚರಣೆಯ ಅಂಗವಾಗಿ ವಿಶ್ವ ಹಿಂದೂ ಪರಿಷತ್, ಬಜರಂಗದಳ ಮಾತೃ ಶಕ್ತಿ ದುರ್ಗಾವಾಹಿನಿ ಸುಳ್ಯ ಪ್ರಖಂಡದ ಮತ್ತು ಮೊಸರು ಕುಡಿಕೆ ಉತ್ಸವ ಸಮಿತಿಯ ಆಶ್ರಯದಲ್ಲಿ ಪ್ರತಿ ವರ್ಷ ಅಟ್ಟಿ ಮಡಿಕೆ ಉತ್ಸವ ನಡೆಯಲಿದೆ.

ಅರ್ಚಕರ ನೇತೃತ್ವದಲ್ಲಿ ಚೆನ್ನಕೇಶವ ದೇವರಿಗೆ ಪೂಜೆಯನ್ನು ಸಲ್ಲಿಸಿದ ಬಳಿಕ ಸುಳ್ಯ ನಗರ ಪಂಚಾಯಿತಿ ಅಧ್ಯಕ್ಷೆ ಶಶಿಕಲಾ ನೀರಬಿದಿರೆ ಆಮಂತ್ರಣ ಪತ್ರ ಬಿಡುಗಡೆಗೊಳಿಸಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಮೊಸರು ಕುಡಿಕೆ ಉತ್ಸವ ಸಮಿತಿ ಗೌರವಾಧ್ಯಕ್ಷ ತೀರ್ಥಕುಮಾರ್ ಕುಂಚಡ್ಕ, ಅಧ್ಯಕ್ಷ ಬಾಲಚಂದ್ರ ಅಡ್ಕಾರ್, ವಿ.ಹೆಚ್.ಪಿ ಅಧ್ಯಕ್ಷ ಶ್ರೀಕಾಂತ್ ಗೋಳ್ವಾಲ್ಕರ್, ಉಪಾಧ್ಯಕ್ಷರಾದ ಹರಿಪ್ರಸಾದ್ ಸುಲಾಯ, ಸೋಮಶೇಖರ ಪೈಕ, ಮಾತೃಶಕ್ತಿ ಸಂಯೋಜಕಿ ರೀನಾ ಚಂದ್ರಶೇಖರ, ದುರ್ಗಾವಾಹಿನಿ ಸಂಯೋಜಕಿ ವಿಶಾಲ ಸೀತಾರಾಮ, ವ್ಯವಸ್ಥಾ ಪ್ರಮುಖ್ ಉಪೇಂದ್ರ ನಾಯಕ್, ವರ್ಷಿತ್ ಚೊಕ್ಕಾಡಿ, ಪ್ರಕಾಶ್ ಯಾದವ್ ಮೇನಾಲ, ಬಜರಂಗದಳ ಸಂಯೋಜಕ್ ಹರಿಪ್ರಸಾದ್ ಎಲಿಮಲೆ, ಪ್ರಧಾನ ಕಾರ್ಯದರ್ಶಿ ಭಾನುಪ್ರಕಾಶ್ ಪೆರುಮುಂಡ, ಕಾರ್ಯದರ್ಶಿ ಪಾರ್ವತಿ ಕುಂಚಡ್ಕ, ಸಹ ಕಾರ್ಯದರ್ಶಿ ಮಿಥುನ್ ಪಾಡಾಜೆ, ನವೀನ್ ಎಲಿಮಲೆ, ಹಿಂದೂ ಮುಖಂಡರಾದ ಮನೋಜ್ ಕಡಬ, ವಿನಯ್ ಕುಮಾರ್ ಕಂದಡ್ಕ, ಸುಭೋದ್ ಶೆಟ್ಟಿ ಮೇನಾಲ, ಕುಸುಮಾಧರ ಎ.ಟಿ, ಗಿರೀಶ್ ಕಲ್ಲುಗದ್ದೆ, ಮನೋಜ್ ಸುಳ್ಯ, ಜನಾರ್ದನ ದೋಳ, ಸತೀಶ್ ಟಿ.ಎನ್, ದೇವಿಪ್ರಸಾದ್ ಅತ್ಯಾಡಿ, ಪ್ರಭೋದ್ ಶೆಟ್ಟಿ ಮೇನಾಲ, ವಿನಯ್ ಪಾಡಾಜೆ, ಪುನೀತ್ ಸಂಕೇಶ ಹಾಗೂ ಸಂಘಟನೆಯ ಕಾರ್ಯಕರ್ತರು, ಮಾತೃ ಶಕ್ತಿ,ದುರ್ಗಾವಾಹಿನಿಯ ಮಹಿಳಾ ಸದಸ್ಯರು ಉಪಸ್ಥಿತರಿದ್ದರು.

ಹರಿಪ್ರಸಾದ್ ಎಲಿಮಲೆ ಸ್ವಾಗತಿಸಿದರು. ನವೀನ್ ಎಲಿಮಲೆ ವಂದಿಸಿದರು.

ಶೋಭಾಯಾತ್ರೆಯ ಆಮಂತ್ರಣ ಪತ್ರ ಬಿಡುಗಡೆ

ಸಿಕ್ಕಿದ ಚಿನ್ನದ ಸರ ಹಸ್ತಾಂತರ: ಪ್ರಾಮಾಣಿಕತೆಗೆ ಶ್ಲಾಘನೆ

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಆದಿತ್ಯವಾರ ಸಿಕ್ಕಿದ ಚಿನ್ನದ ಸರವನ್ನು ಕಳದುಕೊಂಡಿದ್ದ ಭಕ್ತರಾದ ಉಜಿರೆಯ ಸಚಿನ್ ಅವರಿಗೆ ಸುಬ್ರಹ್ಮಣ್ಯದ ದಕ್ಷ ಠಾಣಾಧಿಕಾರಿ ಕಾರ್ತಿಕ್ ಕಾತರಕಿ ಅವರ ಸಮ್ಮುಖದಲ್ಲಿ ಶ್ರೀ ದೇವಳದ ಭದ್ರತಾ ಸಿಬ್ಬಂದಿಗಳ ಮುಖ್ಯಸ್ಥ ದಾಮೋದರ ನಾಯರ್ ಅವರು ಹಸ್ತಾಂತರಿಸಿದರು.

ಶ್ರೀ ದೇವಳದಲ್ಲಿ ಜನದಟ್ಟಣೆಯಿದ್ದ ವಾರದ ರಜಾದಿನವಾದ ಆದಿತ್ಯವಾರ ಸರತಿಯ ಸಾಲಿನಲ್ಲಿ ಭಕ್ತರಾದ ಬೆಂಗಳೂರಿನ ಶ್ರೀನಿವಾಸಪ್ಪ ಅವರಿಗೆ ಚಿನ್ನದ ಸರ ದೊರಕಿತು.ಅದನ್ನು ಅವರು ಶ್ರೀ ದೇವಳದ ಭದ್ರತಾ ಸಿಬ್ಬಂದಿಗಳ ಮುಖ್ಯಸ್ಥ ದಾಮೋದರ ನಾಯರ್ ಅವರಿಗೆ ನೀಡಿದರು.

ನಂತರ ಸರ ದೊರಕಿದ ಬಗ್ಗೆ ದಾಮೋದರ ನಾಯರ್ ಅವರು ಧ್ವನಿವರ್ಧಕದ ಮೂಲಕ ಹಲವು ಭಾರಿ ಮಾಹಿತಿ ನೀಡಿದರು.ಅಲ್ಲದೆ ಸರ ಸಿಕ್ಕಿದ ಬಗ್ಗೆ ಭದ್ರತಾ ಸಿಬ್ಬಂದಿಗಳು ಕೂಡಾ ಭಕ್ತರಲ್ಲಿ ತಿಳಿಸಿದರು.ಈ ಸಂದರ್ಭ ಸರತಿ ಸಾಲಿನಲ್ಲಿ ಸಚಿನ್ ಅವರ ಮಗಳ ಚಿನ್ನದ ಸರ ಬಿದ್ದು ಹೋಗಿದ್ದು ಅವರ ಗಮನಕ್ಕೆ ಬಂತು ಬಳಿಕ ಅವರು ದಾಮೋದರ್ ಅವರನ್ನು ಸಂಪರ್ಕಿಸಿ ಸರದ ಗುರುತು ಹೇಳಿ ಠಾಣಾಧಿಕಾರಿಗಳ ಸಮ್ಮುಖದಲ್ಲಿ ಶ್ರೀ ದೇವಳದ ಆಡಳಿತ ಕಚೇರಿಯಲ್ಲಿ ಸರವನ್ನು ಪಡೆದರು.

ಶ್ಲಾಘನೆ

ಬಿದ್ದು ಸಿಕ್ಕಿದ ಚಿನ್ನದ ಸರವನ್ನು ಮರಳಿ ನೀಡಿ ಪ್ರಾಮಾಣಿಕತೆ ಮೆರೆದ ಬೆಂಗಳೂರಿನ ಶ್ರೀನಿವಾಸಪ್ಪ ಪ್ರಾಮಾಣಿಕತೆ ಹಾಗೂ ಅದನ್ನು ಕಳೆದುಕೊಂಡ ಭಕ್ತರಿಗೆ ನೀಡುವಲ್ಲಿ ಶ್ರಮಿಸಿದ ದಾಮೋದರ ನಾಯರ್ ಅವರ ಕಾರ್ಯತತ್ಪರತೆಯನ್ನು ಠಾಣಾಧಿಕಾರಿ ಕಾರ್ತಿಕ್ ಕಾತರಕಿ ಮತ್ತು ಭಕ್ತರು ಶ್ಲಾಘಿಸಿದರು.ಈ ಸಂದರ್ಭ ಶ್ರೀ ದೇವಳದ ಶಿಷ್ಠಾಚಾರ ವಿಭಾಗದ ಶಿವರಾಮ ಮಾನಾಡು, ಸಚಿನ್ ಅವರ ಮನೆಯವರು ಉಪಸ್ಥಿತರಿದ್ದರು.

ಪರವಾನಿಗಿಗಾಗಿ ಏಕಗವಾಕ್ಷಿ ವ್ಯವಸ್ಥೆ ಕಲ್ಪಿಸಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪುಕಲ್ಲು ಗಣಿಗಾರಿಕೆಗೆ ಕಾನೂನಿನ ಅನ್ವಯ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಬೆಂಗಳೂರಿನ ವಿಧಾನ ಸೌಧದಲ್ಲಿ ಇಂದು ಸ್ಪೀಕರ್ ಯು.ಟಿ ಖಾದರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ನೇತೃತ್ವದಲ್ಲಿ ಗಣಿ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಯಿತು. ಜಿಲ್ಲೆಯಲ್ಲಿ ಕೆಂಪುಕಲ್ಲು ಗಣಿಗಾರಿಕೆಗೆ ಇರುವ ಅಡೆತಡೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ನಿಯಮಗಳಲ್ಲಿ ಬದಲಾವಣೆಗಳನ್ನು ತರುವ ಕುರಿತಂತೆ ಗಣಿ ಇಲಾಖೆ ಅಧಿಕಾರಿಗಳೊಂದಿಗೆ ಸಚಿವ ದಿನೇಶ್ ಗುಂಡೂರಾವ್ ಚರ್ಚೆ ನಡೆಸಿದರು.

ವಾಣಿಜ್ಯ ಉದ್ದೇಶವಲ್ಲದ ಕೆಂಪುಕಲ್ಲು ಕ್ವಾರಿಗಳಿಗೆ ಅಧಿಕೃತವಾಗಿ ಪರವಾನಿಗೆ ಕೊಡುವ ವ್ಯವಸ್ಥೆ ಜಾರಿಯಾಗಬೇಕು. ಪರವಾನಿಗೆ ಪಡೆಯಲು ಏಕಗವಾಕ್ಷಿ ಯೋಜನೆ ರೀತಿಯಲ್ಲಿ ವ್ಯವಸ್ಥೆ ಕಲ್ಪಿಸಬೇಕು. ಸಮಯಮಿತಿಯಲ್ಲಿ ಪರವಾನಿಗೆಗಳನ್ನು ಕೊಡುವ ಕಾರ್ಯಗತಿ ಜಾರಿಗೆ ತರುವಂತೆ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಗಣಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಕೆಂಪುಕಲ್ಲು ಉತ್ಪಾದಕರೊಂದಿಗೆ ಚರ್ಚೆ ನಡೆಸಿ ವಾರದೊಳಗೆ ಹೊಸ ನೀತಿ ಜಾರಿಗೊಳಿಸುವತ್ತ ಖಚಿತ ಸಿದ್ಧಪಡಿಸುವಂತೆ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗಣಿ ಇಲಾಖೆ ಅಧಿಕಾರಿಗಳೊಂದಿಗೆ ಸಚಿವ ದಿನೇಶ್ ಗುಂಡೂರಾವ್ ಚರ್ಚೆ ನಡೆಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ವಿಧಾನ ಸಭಾಧ್ಯಕ್ಷರಾದ ಯು.ಟಿ ಖಾದರ್ ಅವರು, ಮಣ್ಣ ಸಮತಟ್ಟು ಸೇರಿದಂತೆ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ 3 ಮೀಟರ್ ಮಾತ್ರ ಆಳಕ್ಕೆ ಡ್ರಿಲ್ ಮಾಡಲು ಅವಕಾಶವಿದ್ದು, ಇದನ್ನ 6 ಮೀಟರ್ ಗೆ ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈಗಾಗಲೇ ಕೆಲವು ಚಟುವಟಿಕೆಗಳಿಗೆ ಯಾವುದೇ ನಿರ್ಬಂಧವಿಲ್ಲ. ಆದರೆ ಕೆಂಪುಕಲ್ಲು ಗಣಿಗಾರಿಕೆಗೆ ಕೆಲವು ನಿರ್ಭಂಧಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಲಭ ರೀತಿಯಲ್ಲಿ ಕೆಂಪುಕಲ್ಲು ಗ್ರಾಹಕರಿಗೆ ದೊರೆಯುವಂತಾಗಬೇಕು. ರಾಯಾಲ್ಟಿಯನ್ನ ಕಡಿಮೆಗೊಳಿಸಿಗೆ ನಿಯಮ ಬದ್ಧವಾಗಿ ಕಲ್ಲು ಗಣಿಗಾರಿಗೆಕೆ ಅವಕಾಶ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿದ್ಯಾರ್ಥಿಗಳು ಮೊಬೈಲ್‌ನಿಂದ ದೂರವಿರಲು ಸಲಹೆ

ಮಂಗಳೂರು: ಪುಸ್ತಕ ಓದುವ ಹವ್ಯಾಸದಿಂದ ವ್ಯಕ್ತಿತ್ವ ಬೆಳವಣಿಗೆಯಾಗುತ್ತದೆ. ಅಪಾರ ಜ್ಞಾನ ಸಂಪತ್ತು ಪ್ರಾಪ್ತಿಯಾಗುತ್ತದೆ. ವಿದ್ಯಾರ್ಥಿಗಳು ಜ್ಞಾನ, ಬುದ್ಧಿ, ಮೌಲ್ಯದ ಕ್ರಿಯಾಶೀಲ ವಿಕಸನಕ್ಕಾಗಿ ಪಠ್ಯಕ್ರಮಗಳ ಓದಿನ ಜತೆಗೆ ಪೂರಕ ಪುಸ್ತಕಗಳನ್ನು ಓದುವುದು ಅವಶ್ಯವಾಗಿದೆ ಎಂದು ಸಾಹಿತಿ, ನಿವೃತ್ತ ಪ್ರಾಧ್ಯಾಪಕಿ ಡಾ.ಮೀನಾಕ್ಷಿ ರಾಮಚಂದ್ರ ಹೇಳಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ದ.ಕ. ಜಿಲ್ಲಾ ಸಮಿತಿ ವತಿಯಿಂದ ನಗರದ ಶಾರದಾ ವಿದ್ಯಾಲಯದ ಗ್ರಂಥಾಲಯಕ್ಕೆ ನೂರು ಪುಸ್ತಕಗಳ ಹಸ್ತಾಂತರ ಸಮಾರಂಭದಲ್ಲಿ ಅವರು ಓದಿನ ಮಹತ್ವದ ಬಗ್ಗೆ ಉಪನ್ಯಾಸ ನೀಡಿದರು.

ಓದು ದೈನಂದಿನ ಬದುಕಿನ ಒಂದು ಅಂಗವಾಗಬೇಕು. ವಿದ್ಯಾರ್ಥಿಗಳು ಮೊಬೈಲ್ ನಿಂದ ದೂರವಿದ್ದು ಪುಸ್ತಕ ಓದಲು ಸಮಯ ಮೀಸಲಿರಿಸಬೇಕು ಎಂದು ಅವರು ಹೇಳಿದರು.

ಶಾರದಾ ವಿದ್ಯಾಲಯದ ಪ್ರಾಂಶುಪಾಲ ದಯಾನಂದ ಕಟೀಲ್ ಮಾತನಾಡಿ ಗ್ರಂಥಾಲಯಕ್ಕೆ ಕೊಡುಗೆಯಾಗಿ ನೀಡಿದ ಉಪಯುಕ್ತ ಪುಸ್ತಕಗಳನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡುವ ಮೂಲಕ ಸದ್ವಿನಿಯೋಗ ಪಡಿಸಿಕೊಳ್ಳಬೇಕು ಎಂದರು. ಅಭಾಸಾಪ ದ.ಕ. ಜಿಲ್ಲಾಧ್ಯಕ್ಷ ಪಿ.ಬಿ.ಹರೀಶ್ ರೈ ಕಾರ್ಯಕ್ರಮ ಉದ್ಘಾಟಿಸಿದರು. ಶಾರದಾ ವಿದ್ಯಾಸಂಸ್ಥೆಯ ಪ್ರಾಂಶುಪಾಲೆ ಚಂದ್ರಿಕಾ ಭಂಡಾರಿ, ಉಪ ಪ್ರಾಂಶುಪಾಲೆ ಲಕ್ಷ್ಮೀ ಉಡುಪ, ಸಹಾಯಕ ಪ್ರಾಂಶುಪಾಲೆ ಲಕ್ಷ್ಮೀ ಪೈ, ಯಕ್ಷಾರಾಧನಾ ಕಲಾ ಕೇಂದ್ರದ ನಿರ್ದೇಶಕ ರತ್ನಾಕರ್ ರಾವ್, ಅಭಾಸಾಪ ಜಿಲ್ಲಾ ಖಜಾಂಜಿ ಭಾಸ್ಕರ ರೈ ಕಟ್ಟ, ಸಾಹಿತ್ಯ ಕೂಟ ಪ್ರಮುಖ್ ಗೀತಾ ಲಕ್ಷ್ಮೀಶ್ ,ಸಮಿತಿ ಸದಸ್ಯ ಡಾ.ಸುರೇಶ್ ನೆಗಳಗುಳಿ ಉಪಸ್ಥಿತರಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಮಂಗಲಾ ರತ್ನಾಕರ್ ರಾವ್ ನಿರೂಪಿಸಿದರು.

ಸಾಹಿತ್ಯ ಪರಿಷದ್‌ನ ದ.ಕ. ಜಿಲ್ಲಾ ಸಮಿತಿ ವತಿಯಿಂದ ನಗರದ ಶಾರದಾ ವಿದ್ಯಾಲಯದ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಹಸ್ತಾಂತರಿಸಲಾಯಿತು.

ಧರ್ಮ ಚಾವಡಿ ಸಿನಿಮಾ ಹೌಸ್‌ಫುಲ್

ಸುಳ್ಯ: ತುಳು ಚಿತ್ರೋದ್ಯಮದಲ್ಲಿ ಸ್ಥಳೀಯ ಕಲಾವಿದರ ಕೂಡುವಿಕೆಯಲ್ಲಿ ಮೂಡಿಬಂದ ತುಳು ಸಿನಿಮಾ ಧರ್ಮ ಚಾವಡಿ ಬಗ್ಗೆ ಎಲ್ಲೆಡೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದ್ದು, ಬಿಡುಗಡೆಯಾದ ಎಲ್ಲಾ ಕಡೆ ಹೌಸ್ ಫುಲ್ ಪ್ರದರ್ಶನ ಕಾಣುತ್ತಿದೆ ಎಂದು ಚಿತ್ರ ತಂಡ ಹೇಳಿದೆ. ಅವರು ಸುಳ್ಯ ಪ್ರೆಸ್ ಕ್ಲಬ್ ನಲ್ಲಿ ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಚಿತ್ರದ ಸಹ ನಿರ್ದೇಶಕ ಕೀರ್ತನ್ ಶೆಟ್ಟಿ ಸುಳ್ಯ ಈ ಸಿನಿಮಾವು ಸ್ಥಳೀಯ ಪರಿಚಿತ ಕಲಾವಿದರು ಮತ್ತು ಹೊಸ ಮುಖಗಳ ಜೊತೆಗೆ ವಿಭಿನ್ನವಾದ ಒಂದು ಸಂಸ್ಕೃತಿ ಹಾಗೂ ಭಾವೈಕ್ಯತೆ ಮೂಡಿಸುವ ಸಿನಿಮವಾಗಿದೆ. ಜಗದೀಶ್ ಆಮೀನ್ ನಡುಬೈಲು ನಿರ್ಮಾಣದಲ್ಲಿ ನಿತಿನ್ ರೈ ಕುಕ್ಕುವಳ್ಳಿ ನಿರ್ದೇಶನದ ಧರ್ಮ ಚಾವಡಿ ಸಿನಿಮಾ ಜುಲೈ 11ರಂದು ತೆರೆ ಕಂಡು ಯಶಸ್ವಿಯಾಗಿ ಪ್ರದರ್ಶನಗೊಳ್ಳುತಿದೆ. ಎಲ್ಲಾ ವಯಸ್ಸಿನವರು ಕುಳಿತು ನೋಡುವ ಕೌಟುಂಬಿಕ ಹಿನ್ನಲೆಯ ಸಿನಿಮವಾಗಿದ್ದು ಇದೀಗ ಮಂಗಳೂರು , ಪುತ್ತೂರು , ಮುಳ್ಳೆರಿಯಾ , ಉಡುಪಿ ಸೇರಿದಂತೆ ನಾನಾ ಕಡೆಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸುಳ್ಯದ ಜನರು ಈ ಸಿನಿಮಾವನ್ನು ವೀಕ್ಷಿಸಿ ಬೆಂಬಲಿಸುವಂತೆ ಅವರು ವಿನಂತಿಸಿದರು. ಸುದ್ದಿಗೋಷ್ಠಿಯಲ್ಲಿ ಚಿತ್ರದಲ್ಲಿ ಕಲಾವಿದರಾಗಿ ಪಾತ್ರ ನಿರ್ವಹಿಸಿದ ದಯಾಕರ ಆಳ್ವ ಕುಂಬ್ರ ,ಬಾಲಕೃಷ್ಣ ರೈ , ಶುಭಾಶ್‌ಚಂದ್ರ ತೋಟ, ಸಿನಿಮಾದ ನೃತ್ಯ ನಿರ್ದೇಶಕರಾದ ಮಂಜು ಮಾಸ್ಟರ್ ಸುಳ್ಯ ಉಪಸ್ಥಿತರಿದ್ದರು

ಎಸ್‌ಸಿ-ಎಸ್‌ಟಿ, ಮಹಿಳೆಯರಿಗೆ 2,946 ಕೋಟಿ ಸಾಲ: ಸಂಸದ

ನವದೆಹಲಿ: ಕೇಂದ್ರದ ಪ್ರಧಾನಮಂತ್ರಿ ನರೇಂದ್ರ ಮೋದಿ ಸರ್ಕಾರವು , ಎಸ್‌ಸಿ-ಎಸ್‌ಟಿ ಹಾಗೂ ಮಹಿಳಾ ಉದ್ದಿಮೆದಾರರನ್ನು ಉತ್ತೇಜಿಸುವ ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯಡಿ ಇಡೀ ದೇಶದಲ್ಲೇ ಕರ್ನಾಟಕ ರಾಜ್ಯಕ್ಕೆ ಅತಿಹೆಚ್ಚಿನ ಸಾಲದ ನೆರವು ನೀಡಿದೆ. ಈ ಯೋಜನೆಯಡಿ 2018 ರಿಂದ ಈಚೆಗೆ ಒಟ್ಟು 2,946 ಕೋಟಿ ರೂ. ಬ್ಯಾಂಕ್ ಸಾಲವನ್ನು ಮಂಜೂರು ಮಾಡಲಾಗಿದ್ದು, ಆ ಮೂಲಕ ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆ ಫಲಾನುಭವಿಗಳ ಪಟ್ಟಿಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ.

ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಲೋಕಸಭೆಯಲ್ಲಿ ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ನೀಡಿರುವ ಲಿಖಿತ ಉತ್ತರದಲ್ಲಿ ಈ ಅಂಶ ಬೆಳಕಿಗೆ ಬಂದಿದೆ. ಹಣಕಾಸು ಸಚಿವಾಲಯ ನೀಡಿರುವ ಉತ್ತರದ ಪ್ರಕಾರ, ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯನ್ನು ಸದ್ಬಳಕೆ ಮಾಡಿಕೊಂಡಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಹಿಂದುಳಿದ ಸಮುದಾಯಗಳನ್ನು ಸ್ವಂತ ಉದ್ಯಮ ಸ್ಥಾಪಿಸಿ ಸ್ವಾವಲಂಬಿಯಾಗಿಸುವ ಮೂಲಕ ಯುವ ಉದ್ದಿಮೆದಾರರನ್ನು ತಯಾರಿಸುವಲ್ಲಿ ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯಡಿ ಬ್ಯಾಂಕ್‌ಗಳಿಂದ ಕರ್ನಾಟಕಕ್ಕೆ ಹೆಚ್ಚಿನ ಸಾಲದ ನೆರವನ್ನು ಕೇಂದ್ರ ಸರಕಾರ ನೀಡಿದೆ. 2018ರ ಏಪ್ರಿಲ್‌ನಿಂದ 2025ರ ಮಾರ್ಚ್ ಅವಧಿಯಲ್ಲಿ ಒಟ್ಟು 13,389 ಸಾಲದ ಖಾತೆಗಳನ್ನು ಹೊಂದಿವೆ. ಈ ಯೋಜನೆಯು 2016ರಲ್ಲಿ ಪ್ರಾರಂಭವಾಗಿದ್ದು, ಇಲ್ಲಿವರೆಗೆ 16,846 ಸಾಲದ ಖಾತೆಗಳನ್ನು ಹೊಂದುವ ಮೂಲಕ ಒಟ್ಟು 3,750.40 ಕೋಟಿ ರು. ಸಾಲವನ್ನು ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯಡಿ ಕರ್ನಾಟಕದ ಅರ್ಹ ಫಲಾನುಭವಿಗಳು ಪಡೆದುಕೊಂಡಿದ್ದಾರೆ.

ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯಡಿ ಮಹಿಳೆಯರು ಒಳಗೊಂಡಂತೆ ಪರಿಶಿಷ್ಟ ಜಾತಿಯ ಫಲಾನುಭವಿಗಳು 3,108 ಖಾತೆಗಳನ್ನು ಹೊಂದಿದ್ದು, 661.10 ಕೋಟಿ ಸಾಲ ನೀಡಲಾಗಿದೆ. ಹಾಗೆಯೇ ಪರಿಶಿಷ್ಟ ಪಂಗಡದವರು 868 ಖಾತೆಗಳನ್ನು ಹೊಂದಿದ್ದು, 166.96 ಕೋಟಿ ಬ್ಯಾಂಕ್ ಸಾಲ ಒದಗಿಸಲಾಗಿದೆ. ಇನ್ನು ಸಾಮಾನ್ಯ ಮಹಿಳಾ ವಿಭಾಗದಡಿ 12,870 ಸಾಲದ ಖಾತೆಯನ್ನು ಹೊಂದಿದ್ದು, 2,922.34 ಕೋಟಿ ರೂ. ಸಾಲ ನೀಡಲಾಗಿದೆ. ಆ ಮೂಲಕ ಮೋದಿ ಸರ್ಕಾರದ ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಗೆ ಕರ್ನಾಟಕದ ಫಲಾನುಭವಿಗಳಿಂದ ಅತಿ ಹೆಚ್ಚಿನ ಸ್ಪಂದನೆ ವ್ಯಕ್ತವಾಗಿದೆ.

ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಈ ಅಭೂತಪೂರ್ವ ಸ್ಪಂದನೆಯನ್ನು ಶ್ಲಾಘಿಸಿರುವ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು, ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯು ಕರ್ನಾಟಕದಲ್ಲಿ ಸಾವಿರಾರು ಮಂದಿಯನ್ನು ಉದ್ದಿಮೆದಾರರನ್ನಾಗಿ ರೂಪಿಸುವಲ್ಲಿ ಬಹುದೊಡ್ಡ ಮಟ್ಟದಲ್ಲಿ ನೆರವಾಗಿದೆ. ಅದರಲ್ಲಿಯೂ ಶೋಷಿತ ಸಮಾಜದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಸಮುದಾಯದ ಯುವ ಉದ್ದಿಮೆದಾರರನ್ನು ಕೂಡ ತಮ್ಮ ಸ್ವಂತ ಕಾಲ ಮೇಲೆ ನಿಂತು ಉದ್ಯಮವನ್ನು ಕಟ್ಟಿ ಬೆಳೆಸುವುದಕ್ಕೆ ಮೋದಿ ಸರ್ಕಾರದ ಸ್ಟ್ಯಾಂಡ್ ಅಪ್ ಇಂಡಿಯಾ ದೊಡ್ಡ ಪ್ರಮಾಣದಲ್ಲಿ ಬ್ಯಾಂಕ್ ಸಾಲವನ್ನು ನೀಡಿರುವುದು ನಿಜಕ್ಕೂ ಗಮನಾರ್ಹವಾದದ್ದು. ಕೇಂದ್ರ ಸರ್ಕಾರವು ಈ ಯೋಜನೆಯಡಿ ಕರ್ನಾಟಕದ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಉದ್ದಿಮೆದಾರ ಆಕಾಂಕ್ಷಿಗಳನ್ನು ಆರ್ಥಿಕ ಸೇರ್ಪಡೆಗೊಳಿಸುವಲ್ಲಿ ಭದ್ರ ಅಡಿಪಾಯವನ್ನು ಹಾಕುತ್ತಿದೆ ಎನ್ನುವುದಕ್ಕೆ ಕಳೆದ ಕಳೆದ ಐದಾರು ವರ್ಷಗಳಲ್ಲಿ ನೀಡಿರುವ ಬ್ಯಾಂಕ್ ಸಾಲದ ಪ್ರಮಾಣವೇ ಸಾಕ್ಷಿ ಎಂದು ಅಭಿಪ್ರಾಯಪಟ್ಟಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಸರಕಾರದ ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯು ಸ್ವಂತ ಉದ್ದಿಮೆ ಸ್ಥಾಪಿಸುವುದಕ್ಕೆ 10 ಲಕ್ಷ ರೂ.ವಿನಿಂದ ಒಂದು ಕೋಟಿ ರೂ.ವರೆಗೆ ವಾಣಿಜ್ಯ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯವನ್ನು ಒದಗಿಸುತ್ತದೆ. ವಿಶೇಷವಾಗಿ ಉತ್ಪಾದನೆ, ಸೇವಾ ಕ್ಷೇತ್ರ, ವ್ಯಾಪಾರ ಮತ್ತು ಸಂಬಂಧಿತ ಕೃಷಿ ವಲಯಗಳಲ್ಲಿನ ಗ್ರೀನ್‌ಫೀಲ್ಡ್ ಯೋಜನೆಗಳಿಗೆ ಆರ್ಥಿಕ ಸಹಾಯ ನೀಡುತ್ತದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ವಿರಾಮ
ಪ್ರತಿ ಭಾನುವಾರ

ಕೇಂದ್ರ ಸರಕಾರದಿಂದ ಕನ್ನಡಿಗರಿಗೆ ದ್ರೋಹ

ಮಹದಾಯಿ ಯೋಜನೆಗೆ ಅನುಮತಿ ನೀಡದಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ

ಬೆಂಗಳೂರು: ಮಹದಾಯಿ ಯೋಜನೆ ಅನುಮತಿಸಲ್ಲ ಎನ್ನುವ ಕೇಂದ್ರ ತೀರ್ಮಾನವನ್ನು ಗೋವಾ ಮುಖ್ಯಮಂತ್ರಿ ಸದನದಲ್ಲಿ ಹೇಳಿರುವ ಬೆನ್ನಲ್ಲೇ ಕೇಂದ್ರದ ವಿರುದ್ಧ ರಾಜ್ಯ ನಾಯಕರು ಕಿಡಿಕಾರಿದ್ದಾರೆ.

- **ಮಹದಾಯಿ ಯೋಜನೆಗೆ ಅನುಮತಿ ನೀಡಲು ಕೇಂದ್ರಕ್ಕೆ ರಾಜ್ಯ ಸರಕಾರ ಆಗ್ರಹ**
- **ಗೋವಾ ಮುಖ್ಯಮಂತ್ರಿ ಹೇಳಿಕೆಯಿಂದ ಕರ್ನಾಟಕಕ್ಕೆ ಆಘಾತ-ಎಚ್.ಕೆ.ಪಾಟೀಲ್**

ಈ ಸಂಬಂಧ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮಹದಾಯಿ ಯೋಜನೆಗೆ ಅನುಮತಿ ನೀಡುವುದಿಲ್ಲ ಎಂಬ ಕೇಂದ್ರ ಸರಕಾರದ ನಿರ್ಧಾರ ಕರ್ನಾಟಕದ ಜನತೆಗೆ ಬಗೆಯುವ ದ್ರೋಹವಾಗಿದ್ದು, ಇದನ್ನು ಕರ್ನಾಟಕ ಸರಕಾರ ಅತ್ಯುಗ್ರವಾಗಿ ಖಂಡಿಸುವುದು ಮಾತ್ರವಲ್ಲ ಈ ಅನ್ಯಾಯದ ವಿರುದ್ಧ ಸಮಸ್ತ ಕನ್ನಡಿಗರೊಂದಿಗೆ ಹೋರಾಟ ನಡೆಸಲಿದೆ. ಮಹದಾಯಿ ಯೋಜನೆಗೆ ಅನುಮತಿ ನೀಡುವುದಿಲ್ಲ ಎಂದು ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅವರೇ ನನಗೆ ತಿಳಿಸಿದ್ದಾರೆ ಎಂದು ಸಾವಂತ್ ಅವರು ಬುಧವಾರ ವಿಧಾನಸಭೆಯಲ್ಲಿ ಹೇಳಿದ್ದಾರೆ. ಕೇಂದ್ರ ಸರಕಾರದ ಈ ನಿರ್ಧಾರ ಕರ್ನಾಟಕದ ಹಿತಾಸಕ್ತಿ ಮೇಲಿನ ಇನ್ನೊಂದು ಪ್ರಹಾರವಾಗಿದೆ. 2018ರಲ್ಲಿ ಮಹದಾಯಿ ಜಲವಿವಾದ ನ್ಯಾಯಮಂಡಳಿ 13.42 ಟಿಎಂಸಿ ನೀರನ್ನು ನಮ್ಮ ರಾಜ್ಯಕ್ಕೆ ನಿಗದಿಪಡಿಸಿ ಐ ತೀರ್ಪು ನೀಡಿದ್ದರೂ ಕೇಂದ್ರ ಸರಕಾರದ ಮಲತಾಯಿ ಧೋರಣೆಯಿಂದಾಗಿ ಯೋಜನೆಯ ಅನುಷ್ಠಾನ ಸಾಧ್ಯವಾಗುತ್ತಿಲ್ಲ ಎಂದು ಕಿಡಿಕಾರಿದ್ದಾರೆ.

ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಗದಗ, ಬಾಗಲಕೋಟೆ ಪ್ರದೇಶದ ಜನತೆಯ ಕುಡಿಯುವ ನೀರಿಗಾಗಿ 40 ಟಿಎಂಸಿ ನೀರನ್ನು ಬಳಸಿಕೊಳ್ಳುವ ಕಳಸಾ-ಬಂಡೂರಿ ಯೋಜನೆ ಈಗಾಗಲೇ ಅನುಷ್ಠಾನಕ್ಕೆ ಸಿದ್ಧಗೊಂಡಿದ್ದು, ಗೋವಾದ ಬಿಜೆಪಿ ಸರಕಾರದ ಜತೆ ಶಾಮೀಲಾಗಿ ಕೇಂದ್ರ ಸರಕಾರ ನಿರಂತರವಾಗಿ ಅಡ್ಡಗಾಲು ಹಾಕುತ್ತಿದೆ. ರಾಜ್ಯದ ಬಿಜೆಪಿ ನಾಯಕರಾಗಲಿ, ಕನ್ನಡಿಗರಿಂದಲೇ ಆರಿಸಿ ಹೋಗಿರುವ ಬಿಜೆಪಿ ಮತ್ತು ಜೆಡಿಎಸ್ ಸಂಸದರಾಗಲಿ ಈ ಅನ್ಯಾಯದ ವಿರುದ್ಧ ದನಿ ಎತ್ತಲಾಗದಷ್ಟು ನಿರ್ವೀರ್ಯರಾಗಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ತಿರಸ್ಕರಿಸಿದ ಕರ್ನಾಟಕದ ಜನತೆಯ ವಿರುದ್ಧ ಸೇಡು ತೀರಿಸಿಕೊಳ್ಳುವ ದುರುದ್ದೇಶದಿಂದಲೇ ಮಹದಾಯಿ ಯೋಜನೆಗೆ ಪರಿಸರ ಖಾತೆಯ ಅನುಮತಿಯನ್ನು ನಿರಾಕರಿಸಿರುವುದು ಸ್ಪಷ್ಟವಾಗಿದೆ.

ಮಹದಾಯಿ ಕೇಂದ್ರದ ನಿಲುವು ಆಘಾತ ತಂದಿದೆ

ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ. ಪಾಟೀಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಹದಾಯಿ ಯೋಜನೆಗೆ ಅನುಮತಿ ನೀಡಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸಿರುವ ರಾಜ್ಯ ಸರಕಾರ, ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ್ ಈ ಯೋಜನೆ ಕುರಿತು ತಮ್ಮ ರಾಜ್ಯದ ವಿಧಾನಸಭೆಯಲ್ಲಿ ನೀಡಿರುವ ಅಧಿಕೃತ ಹೇಳಿಕೆ ಕರ್ನಾಟಕಕ್ಕೆ ಆಘಾತ ತಂದಿದೆ ಎಂದಿದ್ದಾರೆ.

ಮಹದಾಯಿ ಜಲ ವಿವಾದವು ಅಂತರರಾಜ್ಯ ಜಲವಿವಾದ ಕಾಯಿದೆ ಅನ್ವಯ ರಚನೆಯಾದ ನ್ಯಾಯಾಧೀಕರಣ ನೀಡಿದ ತೀರ್ಪುನ್ನು ಕೇಂದ್ರ ಸರಕಾರದ ಗೆಜೆಟ್‌ನಲ್ಲಿ ಪ್ರಕಟಿಸಿ ನ್ಯಾಯಾಧೀಕರಣದ ಐ ತೀರ್ಪು ಜಾರಿಗೆ ಬಂದಿದೆ. ಕರ್ನಾಟಕವು ಕಳಸಾ-ಬಂಡೂರಿ ಯೋಜನೆಗೆ 7.56 ಟಿಎಂಸಿ ಅಡಿ ನೀರನ್ನು ಮಲಪ್ರಭಾ ಕಣಿವೆಗೆ ತಿರುಗಿಸಿಕೊಳ್ಳಲು ಕೋರಿತ್ತು. ಇದಿರಲ್ಲಿ 3.90 ಟಿಎಂಸಿ ನೀರನ್ನು ಕರ್ನಾಟಕದ ಪಾಲಿಗೆ ಹಂಚಿಕೆ ಮಾಡಿದೆ. ಅಂತರ್ ಕಣಿವೆ ತಿರುಗಿಸುವಿಕೆಯನ್ನು ಕರ್ನಾಟಕದ ಕಡೆಯಿಂದ ಮಾಡಿಕೊಳ್ಳಲು ನ್ಯಾಯಾಧೀಕರಣ ಒಪ್ಪಿದೆ. ಯೋಜನೆಗೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು ಅರಣ್ಯ ಪ್ರದೇಶ ಬಳಕೆ ಮಾಡಿಕೊಳ್ಳಲು ಶಿಫಾರಸು ಮಾಡಿದೆ. ಕೇಂದ್ರ ಜಲ ಆಯೋಗವು ಯೋಜನೆಗಳ ಪರಿಷ್ಕೃತ ವಿವರವಾದ ಯೋಜನಾ ವರದಿಗಳಿಗೆ ಅನುಮೋದನೆ ನೀಡಿದೆ. ಸುಪ್ರೀಂಕೋರ್ಟ್ ಕರ್ನಾಟಕದ ಮಹದಾಯಿ ಯೋಜನೆಗೆ ತಡೆಹಿಡಿಯಬೇಕೆಂಬ ಯಾವುದೇ ಆದೇಶ ನೀಡಿಲ್ಲ. ಹೀಗಿದ್ದರೂ ಕೇಂದ್ರ ಸರಕಾರ ಯೋಜನೆಗೆ ಅನುಮತಿ ನೀಡದೆ ಕಾಲಹರಣ ಮಾಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ನ್ಯಾಯಾಂಗದಿಂದ ಯಾವುದೇ ಅಡೆತಡೆಯಿಲ್ಲದ ಯೋಜನೆಗಳನ್ನು ಮತ್ತು ಕಾನೂನು ಬದ್ಧವಾಗಿ ಅಂತರರಾಜ್ಯ ಜಲವಿವಾದ ಕಾಯ್ದೆಯಡಿಯಲ್ಲಿ ನ್ಯಾಯಾಧೀಕರಣದಿಂದ ಇತ್ಯರ್ಥಗೊಂಡಿರುವ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕಕ್ಕೆ ಕೇಂದ್ರ ಸರಕಾರ ತಾನು ನೀಡಬೇಕಾದ ಮಂಜೂರಾತಿಗಳನ್ನು ತಕ್ಷಣ ನೀಡದಿರುವುದು ಜನರ ಆಕ್ರೋಶಕ್ಕೆ ಕಾರಣವಾಗುತ್ತಿದೆ. ಉತ್ತರ ಕರ್ನಾಟಕ ಜನರ ಹಾಗೂ ರೈತರ ಹಿತ ಗಮನಿಸಿ, ಕೇಂದ್ರ ಸರಕಾರ ಕೂಡಲೇ ಅನುಮತಿ ನೀಡಬೇಕು.

-ಎಚ್.ಕೆ.ಪಾಟೀಲ್ ಸಚಿವ

ತೆರಿಗೆ ಹಂಚಿಕೆ, ಕೇಂದ್ರ ಪ್ರಾಯೋಜಿತ ಯೋಜನೆಗಳಲ್ಲಿ ಅನುದಾನ ಕಡಿತವೂ ಸೇರಿದಂತೆ ನೆಲ-ಜಲ-ಭಾಷೆಯ ವಿಚಾರದಲ್ಲಿ ಕೇಂದ್ರ ಸರಕಾರ ಕರ್ನಾಟಕದ ವಿಚಾರದಲ್ಲಿ ನಿರಂತರವಾಗಿ ಅನ್ಯಾಯ ಎಸಗುತ್ತಿದೆ. ಕೇಂದ್ರ ಸರಕಾರದ ಈ ಮಲತಾಯಿ ಧೋರಣೆ ವಿರುದ್ಧ ನಾಡಿನ ಸಮಸ್ತ ಕನ್ನಡಿಗರನ್ನು ಜತೆಯಲ್ಲಿ ಕಟ್ಟಿಕೊಂಡು ಹೋರಾಟ ನಡೆಸುತ್ತೇವೆ.

-ಸಿದ್ದರಾಮಯ್ಯ ಮುಖ್ಯಮಂತ್ರಿ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590 018, ಕರ್ನಾಟಕ. ಭಾರತ.
ಸಂ: ವಿ.ತಾ.ವಿ./ಬೆ./ಸ್ಥಾ.ಅ./2025–26/ಐ.ಎಫ್.ಟಿ. ನಂ.65/1794 ದಿ: 21–07–2025
ಟೆಂಡರ್ ಪ್ರಕಟಣೆ ದ್ವಿ-ಲಕೋಟೆ ಪದ್ಧತಿ (ಇ-ಪ್ರೊಕ್ಯೂರಮೆಂಟ್ ಮೂಲಕ)
ಕುಲಸಚಿವರು, ವಿ.ತಾ.ವಿ., ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ.ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಮಂತ್ರಿಸಲಾಗಿದೆ. ಕಾಮಗಾರಿಗಳ ಹೆಸರು : 1) ವಿ.ತಾ.ವಿ., ಬೆಳಗಾವಿಯ ಜ್ಞಾನ ಸಂಗಮ, ಆವರಣದಲ್ಲಿರುವ ಉತ್ತರ ಭಾಗದ ಪ್ರವೇಶ ದ್ವಾರದಿಂದ ದಕ್ಷಿಣ ಭಾಗದ ನಿರ್ಗಮನ ದ್ವಾರದವರೆಗೆ ಮುಖ್ಯ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಪಾದಚಾರಿ ಮಾರ್ಗವನ್ನು ಒದಗಿಸುವ ಕಾಮಗಾರಿ ಮೊತ್ತ ರೂ. 4,04,81,965/– (ತೆರಿಗೆ ರಹಿತ) ಮತ್ತು 2) ವಿ.ತಾ.ವಿ., ಬೆಳಗಾವಿಯ ಜ್ಞಾನ ಸಂಗಮ, ಆವರಣದಲ್ಲಿ ಫುಡ್ ಕೋರ್ಟ್ (Food Court) ನಿರ್ಮಾಣ ಕಾಮಗಾರಿ ಮೊತ್ತ ರೂ. 3,78,41,556/– (ತೆರಿಗೆ ರಹಿತ) ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ : 25–07–2025 ರಿಂದ ಪಡೆದುಕೊಳ್ಳಬಹುದು.
ಸಹಿ/– ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ಡಿಐಪಿಆರ್/ ಬೆಳಗಾವಿ/712/ಮಣಿಪಾಲ್/2025–26

ಮೂವರು ಆರೋಪಿಗಳಿಗೆ ಕಠಿಣ ಶಿಕ್ಷೆ
ಡಿಜೆ ಹಳ್ಳಿ-ಕೆಜೆ ಹಳ್ಳಿ ಗಲಭೆ ಪ್ರಕರಣ

ಡಿಜೆ ಹಳ್ಳಿಯಲ್ಲಿ ನಡೆದಿದ್ದ ಹಿಂಸಾಚಾರ.

ಬೆಂಗಳೂರು: ಡಿಜೆ ಹಳ್ಳಿ ಹಾಗೂ ಕೆ.ಜೆ.ಹಳ್ಳಿ ಗಲಭೆ ಪ್ರಕರಣದ ಮೂವರು ಆರೋಪಿಗಳಿಗೆ ಎನ್‌ಐಎ ಕೋರ್ಟ್ ಕಠಿಣ ಶಿಕ್ಷೆ ವಿಧಿಸಿದೆ.

ಡಿ.ಜೆ.ಹಳ್ಳಿ, ಕೆ.ಜೆ.ಹಳ್ಳಿ ಗಲಭೆ ತಪ್ಪೊಪ್ಪಿಕೊಂಡ ಮೂವರು ಆರೋಪಿಗ ಳಾದ ಎ 14 ಸೈಯದ್ ಇಕ್ರಮುದ್ದೀನ್ ಅಲಿಯಾಸ್ ನವೀದ್, ಎ 16 ಸೈಯದ್ ಆಸಿಫ್, ಎ18 ಮೊಹಮ್ಮದ್ ಅತೀಫ್‌ಗೆ 7 ವರ್ಷ ಕಠಿಣ ಶಿಕ್ಷೆ ಹಾಗೂ ತಲಾ 46 ಸಾವಿರರು. ದಂಡ ವಿಧಿಸಿ ರಾಷ್ಟ್ರೀ ಯ ತನಿಖಾ ಸಂಸ್ಥೆ ವಿಶೇಷ ನ್ಯಾಯಾ ಲಯ ಆದೇಶ ಹೊರಡಿಸಿದೆ. ಗಲಭೆ ನಡೆಸಿ ಬಳಿಕ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದ ಆರೋಪವಿತ್ತು. ಈ ಸಂಬಂಧ ಯುಎಪಿಎ ಕಾಯಿದೆಯಡಿ ಬಂಧಿತರಾ ಗಿದ್ದರು. ಎನ್‌ಐಎ ಪರ ಎಸ್ಪಿಪಿ ಪಿ.ಪ್ರಸನ್ನಕುಮಾರ್ ವಾದಿಸಿದ್ದರು.

ಏನಿದು ಪ್ರಕರಣ?: ಪ್ರವಾದಿ ಮಹ ಮ್ಮದ್ ಪೈಗಂಬರ್ ಅವರನ್ನು ನಿಂದನೆ ಮಾಡಲಾಗಿದೆ ಎಂದು ಡಿಜೆ ಹಳ್ಳಿ ಹಾಗೂ ಕೆಜಿ ಹಳ್ಳಿಯಲ್ಲಿ ಗಲಭೆ ನಡೆ ದಿತ್ತು. ಸಾಮಾಜಿಕ ಜಾಲತಾಣ ಫೇಸ್‌ಬುಕ್ ವಿವಾದಾತ್ಮಕ ಅಂಶ ಹಂಚಿಕೊಂಡ ಆರೋಪದಿಂದ ಎರಡು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಗಲಭೆಗೆ ಕಾರ ಣವಾಗಿತ್ತು. ಅಂದಿನ ಶಾಸಕ ಅಖಂಡ ಶ್ರೀನಿವಾಸ್ ಮೂರ್ತಿ ಅವರ ಸಂಬಂಧಿ ಪೋಸ್ಟ್ ಮಾಡಿದ್ದಾರೆ ಎಂದು ಆರೋ ಪಿಸಿ ಅವರ ಮನೆಗೆ ಬೆಂಕಿ ಹಚ್ಚಿದ್ದಲ್ಲದೇ ಮನೆಯಲ್ಲಿದ್ದ ಎಲ್ಲ ವಸ್ತುಗಳನ್ನು ನಾಶ ಪಡಿಸಿದ್ದರು. ಈ ಸಂದರ್ಭದಲ್ಲಿ ಗಲಭೆ ನಿಯಂತ್ರಣ ಮಾಡಲು ಪೊಲೀಸರು ಗೋಲಿಬಾರ್ ನಡೆಸಿದ್ದರು.

ಈ ಆರೋಪ ಸಬಂಧ ಅರ್ಜಿದಾರರ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ(ತಡೆ) ಕಾಯಿದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣವನ್ನು ಎನ್‌ಐಎ ಅಧಿಕಾರಿಗಳು ತನಿಖೆ ನಡೆಸುತ್ತಿದ್ದರು. ಪ್ರಕರಣದಿಂದ ತಮ್ಮನ್ನು ಮುಕ್ತಗೊಳಿಸಬೇಕು ಎಂದು ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೋರಿದ್ದರು. ಅರ್ಜಿದಾರರ ಪರ ವಕೀಲರು, ತಮ್ಮ ಕಕ್ಷಿದಾರರ ವಿರುದ್ಧ ದಾಖಲಿಸಿದ್ದ ಆರೋಪಗಳು ಸಾಬೀತಾಗಿಲ್ಲ. ಆದ್ದರಿಂದ ತಮ್ಮನ್ನು ಪ್ರಕರಣದಿಂದ ಮುಕ್ತಿಗೊಳಿಸಬೇಕು ಎಂದು ಕೋರಿದ್ದರು. ಇದಕ್ಕೆ ಆಕ್ಷೇಪಿಸಿದ್ದ ಎನ್‌ಐಎ ಪರ ವಕೀಲರು, ಪ್ರಕರಣದಿಂದ ಮುಕ್ತಿ ಕೋರಿ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಅರ್ಜಿ ವಜಾಗೊಂಡಿದೆ. ಆದರೆ, ಆ ಆದೇಶವನ್ನು ಪ್ರಶ್ನಿಸಿ ಕ್ರಿಮಿನಲ್ ಮೇಲ್ಮನವಿ ಅರ್ಜಿ ಸಲ್ಲಿಸಬೇಕು. ಅದಕ್ಕೆ ಬದಲಾಗಿ ಅರ್ಜಿದಾರರು ರಿಟ್ ಅರ್ಜಿ ಸಲ್ಲಿಸಿದ್ದಾರೆ. ಹೀಗಾಗಿ ಅರ್ಜಿ ವಿಚಾರಣೆಗೆ ಅರ್ಹವಿಲ್ಲ ಎಂದು ವಾದ ಮಂಡಿಸಿದ್ದರು.

ಹೃದಯಾಘಾತ: ಹಿರಿಯ ಕಲಾವಿದ ಸಾವು

ಬಂಟ್ವಾಳ: ತುಳು ರಂಗಭೂಮಿ ಹಿರಿಯ ಕಲಾವಿದ, ಚಲನಚಿತ್ರ ನಟ ಚಿ.ರಮೇಶ್ ಕಲ್ಲಡ್ಕ ಅವರು ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದಾರೆ. ನಟನಿಗೆ 68 ವರ್ಷ ವಯಸ್ಸಾಗಿತ್ತು. ಬುಧವಾರ ಬೆಳಗ್ಗೆ ಕಲ್ಲಡ್ಕದ ಕೊಳಕೀರು ಮನೆಯಲ್ಲಿ ನಿಧನ ಹೊಂದಿದ್ದಾರೆ. ಪುತ್ರ, ಪುತ್ರಿಯನ್ನು ಅಗಲಿದ್ದಾರೆ. ಹಿರಿಯ ಕಲಾವಿದನ ನಿಧನಕ್ಕೆ ಸಂತಾಪಗಳು ವ್ಯಕ್ತವಾಗುತ್ತಿವೆ. 30 ವರ್ಷಕ್ಕೂ ಹೆಚ್ಚು ಕಲಾಸೇವೆ: ರಂಗಭೂಮಿಯಲ್ಲಿ 30 ವರ್ಷಕ್ಕೂ ಹೆಚ್ಚು ಕಲಾಸೇವೆಯನ್ನು ಸಲ್ಲಿಸಿರುವ ರಮೇಶ್ ಕಲ್ಲಡ್ಕ ಕಳೆದ 20 ವರ್ಷಗಳಿಂದ ವಿಜಯಕುಮಾರ್ ಕೊಡಿಯಾಲ್ ಬೈಲ್ ಅವರ ಕಲಾಸಂಗಮದಲ್ಲಿ ಕಲಾವಿದರಾಗಿ ಕಲಾಸೇವೆ ಮಾಡುತ್ತಿದ್ದರು.

ವಿಜಯಕುಮಾರ್ ಕೊಡಿಯಾಲ್ ಬೈಲ್ ಅವರ ಗರಡಿಯಲ್ಲಿ ಪಳಗಿದ ರಮೇಶ್ ಕಲ್ಲಡ್ಕ ಅವರು ಕಲಾಸಂಗಮದ ಎಲ್ಲ ಸಾಮಾಜಿಕ, ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅದರಲ್ಲೂ ಶಿವದೂತಗುಳಿಗೆ ನಾಟಕದ ಭೀಮಾರಾವ್ ಪಾತ್ರ ಅವರಿಗೆ ಹೆಸರು, ಹೊಸ ಇಮೇಜನ್ನು ತಂದು ಕೊಟ್ಟಿದೆ. ಶಿವಾಜಿ ನಾಟಕದಲ್ಲೂ ಅವರು ನಿರ್ವಹಿಸಿದ ದಾದ ಕೊಂಡೆಯ ಪಾತ್ರ ಗಮನ ಸೆಳೆದಿತ್ತು.

ಕುಲಪತಿ ವಾಟ್ಸ್‌ಆ್ಯಪ್ ಹ್ಯಾಕ್: ಹಣಕ್ಕಾಗಿ ಸಂದೇಶ

ಮಂಗಳೂರು: ನಗರದ ಖಾಸಗಿ ಡೀಮ್ಡ್ ಟು ಬಿ ವಿಶ್ವವಿದ್ಯಾನಿಲಯದ ಕುಲಪತಿಗೆ ಸೇರಿದ ವಾಟ್ಸ್ ಆ್ಯಪ್ ಅಕೌಂಟ್ ಹ್ಯಾಕ್ ಮಾಡಿರುವ ಬಗ್ಗೆ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕುಲಪತಿಯ ಮೊಬೈಲ್‌ಗೆ ಕೊರಿಯರ್ ಕಂಪೆನಿಯಿಂದ ಎಂದು ಅಪರಿಚಿತ ವ್ಯಕ್ತಿಯೊಬ್ಬನ ಕರೆ ಬಂದಿದ್ದು ಬಳಿಕ ಆತ ಲಿಂಕ್ ಕಳುಹಿಸಿದ್ದ. ಅವರು ಲಿಂಕ್ ಕ್ಲಿಕ್ ಮಾಡಿದ ಕೂಡಲೇ ಅವರ ಸಂಪರ್ಕದಲ್ಲಿದ್ದ ಇತರರ ಮೊಬೈಲ್ ನಂಬರ್‌ಗಳಿಗೆ ಹಣಕ್ಕಾಗಿ ಸಂದೇಶ ರವಾನೆಯಾಗಿದೆ. ತಕ್ಷಣ ಎಚ್ಚೆತ್ತ ಅವರು ಈ ಬಗ್ಗೆ ಎಲ್ಲರಿಗೂ ಮಾಹಿತಿ ರವಾನಿಸಿದ ಕಾರಣ ಯಾರೂ ಹಣ ಕಳುಹಿಸಿಲ್ಲ. ಬಳಿಕ ಈ ಬಗ್ಗೆ ಸೆನ್ ಠಾಣೆಗೆ ದೂರು ನೀಡಿದರು. ಇದಕ್ಕೂ ಮೊದಲು ಪ್ರಾಂಶುಪಾಲರೊಬ್ಬರಿಗೂ ಇದೇ ರೀತಿಯ ವಂಚನೆಯ ಕರೆ ಬಂದಿದೆ. ವಾಟ್ಸ್ ಆ್ಯಪ್‌ನಲ್ಲಿ ಬಂದ ಸಂದೇಶ ನೋಡಿ ಅವರ ಇಬ್ಬರು ಸ್ನೇಹಿತರು ತಲಾ 45 ರು. ವರ್ಗಾವಣೆ ಮಾಡಿ ಹಣ ಕಳೆದುಕೊಂಡಿದ್ದರು. ಈ ಬಗ್ಗೆಯೂ ಪ್ರಕರಣ ದಾಖಲಾಗಿದೆ.

ಕೆಲ ದಿನಗಳ ಹಿಂದೆ ನಿಧನರಾದ ಕನ್ನಡ ಚಿತ್ರೋದ್ಯಮದ ಹಿರಿಯ ನಟಿ, ಅಭಿನಯ ಸರಸ್ವತಿ ಬಿ.ಸರೋಜಾ ದೇವಿ ಅವರ ಹೆಸರಲ್ಲಿ ಚಲನಚಿತ್ರ ಪ್ರಶಸ್ತಿ ಘೋಷಣೆ ಮಾಡಬೇಕು ಎನ್ನುವ ಮನವಿ ಇದೀಗ ಸರಕಾರದ ಮುಂದೆ ಬಂದಿದ್ದು, ಇದಕ್ಕೆ ಸಿಎಂ ಸಿದ್ದರಾಮಯ್ಯ ಅವರು ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ. ಬುಧವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಹಿರಿಯ ನಟಿ ತಾರಾ ಅನುರಾಧ ಅವರು ಈ ಸಂಬಂಧ ಮನವಿ ಸಲ್ಲಿಸಿದ್ದಾರೆ. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಸಿದ್ದರಾಮಯ್ಯ ಅವರು ಪರಿಶೀಲಿಸುವ ಭರವಸೆ ನೀಡಿದ್ದಾರೆ.

ಕರ್ನಾಟಕ ಸರ್ಕಾರ
ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ನಿರ್ದೇಶನಾಲಯ,
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560001. ದೂ : 080–22864681/4604, ಫ್ಯಾಕ್ಸ್:080–22864619, ಇ–ಮೇಲ್:dof-blr-ka@nic.in
ಟೆಂಡರ್ ಪ್ರಕಟಣೆ ಸಂಖ್ಯೆ:DOF-TECHO INL/46/2025 ದಿನಾಂಕ: 23.07.2025
ಇ–ಟೆಂಡರ್ ಪ್ರಕಟಣೆ
2025–26ನೇ ಸಾಲಿನ ರಾಜ್ಯವಲಯದ ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಸರಬರಾಜು ಯೋಜನೆಯಡಿ ಅಗತ್ಯವಿರುವ ಮೀನುಗಾರಿಕೆ ಪರಿಕರಗಳಾದ ಬಲೆ, ದೋಣಿ, ಜೀವ ರಕ್ಷಕ ಸಾಧನಗಳು (Life jacket) ಇತ್ಯಾದಿಗಳ ಸರಬರಾಜಿಗಾಗಿ ಅಧಿಕೃತ ಸಂಸ್ಥೆ/ಏಜೆನ್ಸಿಗಳಿಂದ ಕರ್ನಾಟಕದ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ದ್ವಿಲಕೋಟ್ (TWO COVERS SYSTEM) ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ:31.07.2025 ಸಂಜೆ 5.00 ಗಂಟೆಯವರೆಗೆ.
ಸಹಿ/–
ಮೀನುಗಾರಿಕೆ ನಿರ್ದೇಶಕರು
ವಾಸಾಸಂಇ/ವಾ.ಪ್ರ/1972/ಶಿರಡಿ ಸಾಯಿ/2025–26

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ–12/ಎಇ–3/2025–26 ದಿನಾಂಕ:– 23.07.2025
ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ
ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ–12/ಎಇ–3/2025–26 ದಿನಾಂಕ:. 23.07.2025.
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಹೊನ್ನಾಳಿ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ :5054–03–101–0–2–132 (ಯೋಜನೆ) ಜಿಲ್ಲಾ ಮುಖ್ಯ ರಸ್ತೆ ಸೇತುವೆಗಳು ಅಡಿ ಹೊನ್ನಾಳಿ ತಾಲ್ಲೂಕು ಹೊಸಪೇಟೆ–ಶಿವಮೊಗ್ಗ ರಾಹೆ–25 ರಿಂದ ಗೊಲ್ಲರಹಳ್ಳಿ–ಕೋಣನತಲೆ ಜಿಲ್ಲಾ ಮುಖ್ಯ ರಸ್ತೆಗೆ ಸೇರುವ ರಸ್ತೆ (ವಯಾ ಹೊನ್ನೂರು, ಒಡ್ಡವಟ್ಟಿ ತಾಂಡ) ರಸ್ತೆಯ 5.80 ಕಿ.ಮೀ ನಲ್ಲಿ ಎಲ್.ಎಲ್.ಸಿ ನಿರ್ಮಾಣ ಕಾಮಗಾರಿ. (18993) ಕಾಮಗಾರಿಗೆ ಮೊತ್ತ ರೂ. 100.00 ಲಕ್ಷ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.
ಕಾಮಗಾರಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 01.08.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 02.08.2025 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.
ವಾಸಾಇ/ಡಿವಿಜಿ/210/ ಕೆಎಸ್‌ಎಂಸಿಎ/2025–26
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ
ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ–5/ಟೆಂಡರ/2025–26/1899 ದಿನಾಂಕ: 22/07/2025
:: ಇ–ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ದ್ವಿ–ಲಕೋಟೆ ಪದ್ದತಿಯಲ್ಲಿ ::
1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ : ಚಿತ್ತಾಪೂರ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 39 ವಿವಿಧ ಗ್ರಾಮಗಳಿಗೆ ಸಮಗ್ರ ಸಿ.ಸಿ. ರಸ್ತೆ ಹಾಗೂ ಸಿ.ಸಿ. ಚರಂಡಿ ನಿರ್ಮಾಣ ಕಾಮಗಾರಿಗಳ ಇಂಡೆಂಟ್ ಸಂಖ್ಯೆ (1) 17224 (2) 17222 (3) 17312 (4) 17268 (5) 17266 (6) 17206 (7) 17240 (8) 17333 (9) 17221 (10) 17202 (11) 17313 (12) 17213 (13) 17251 (14) 17259 (15) 17317 (16) 17243 (17) 17184 (18) 17250 (19) 17269 (20) 17256 (21) 17332 (22) 17178 (23) 17271 (24) 17273 (25) 17200 (26) 17210 (27) 17239 (28) 17246 (29) 17280 (30) 17334 (31) 17290 (32) 17339 (33) 17337 (34) 17284 (35) 17291 (36) 17292 (37) 17252 (38) 17253 (39) 17288 ಒಟ್ಟು 39 ಕಾಮಗಾರಿಗಳು, 2) ಲೆಕ್ಕ ಶೀರ್ಷಿಕೆ : 2025–26ನೇ ಸಾಲಿನ 5054 ಎಸ್.ಸಿ.ಪಿ/ಟಿ.ಎಸ್.ಪಿ/ಸಾಮಾನ್ಯ, 3) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ ರೂ. 54,23,341.78, ಗರಿಷ್ಠ ರೂ. 1,57,79,555.32, 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: 23.07.2025 ರಿಂದ 07.08.2025 ಸಾಯಂಕಾಲ 4:00 ಗಂಟೆವರೆಗೆ, 6) ಟೆಂಡರ ಅರ್ಜಿ ಬೆಲೆ : ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ, 7) ಇ.ಎಂ.ಡಿ. : ಕನಿಷ್ಠ ರೂ. 54,500.00, ಗರಿಷ್ಠ ರೂ. 2,37,000.00 8) ಟೆಂಡರ ಸಲ್ಲಿಸುವ ದಿನಾಂಕ: 23.07.2025 ರಿಂದ 07.08.2025 ಸಾಯಂಕಾಲ 4:00 ಗಂಟೆವರೆಗೆ, 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 08.08.2025 ಸಾಯಂಕಾಲ 4:00 ಗಂಟೆ ನಂತರ, 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: 11.08.2025 ಬೆಳಿಗ್ಗೆ 11:00 ಗಂಟೆ ನಂತರ, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತ ರಾಜ್‌ಇಂಜಿನೀಯರಿಂಗ್ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/317/ಕೆ.ಎಸ್.ಎಂ.ಸಿ.&ಎ/2025–26

ಹೈಸ್ಕೂಲ್ ಮಕ್ಕಳಿಗೆ ಅ, ಆ, ಇ, ಈ ಪಾಠ

← ಮೊದಲಪುಟದಿಂದ

ತಮ್ಮ ಪ್ರಾಥಮಿಕ ಶಾಲಾ ಹಂತದಲ್ಲಿ ಕಲಿಯಬೇಕಾಗಿರುವ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ ಅರಿವು ಹೈಸ್ಕೂಲ್ ವಿದ್ಯಾಭ್ಯಾಸದವರೆಗೂ ಮಕ್ಕಳಿಗೆ ಬಂದಿಲ್ಲವಾದರೆ ಇದರ ಹೊಣೆ ಹೊರಬೇಕಾಗಿರುವವರು ಯಾರು? ಶಿಕ್ಷಣ ಹಕ್ಕು ಕಾಯ್ದೆಯಡಿ 8ನೇ ತರಗತಿವರೆಗೆ ಏನನ್ನೂ ಕಲಿಯದೇ ವಿದ್ಯಾರ್ಥಿಗಳು ಉತ್ತೀರ್ಣಗೊಂಡಿದ್ದಾರೆ. ಆದರೆ, ಇಲ್ಲಿ ಮಕ್ಕಳ ಕಲಿಕಾಸಕ್ತಿ ಕಳೆದುಕೊಳ್ಳಲು ಶಿಕ್ಷಕರ ಪಾತ್ರ ಎಷ್ಟರ ಮಟ್ಟಿಗೆ ಇತ್ತು ಎನ್ನುವ ಕುರಿತು ಅವಲೋಕಿಸುವ ಸನ್ನಿವೇಶ ನಿರ್ಮಾಣವಾಗಿದೆ.

ಫಲಿತಾಂಶ ಕಡಿಮೆ: ಮುಖ್ಯ ಶಿಕ್ಷಕರಿಗೆ ನೋಟಿಸ್

ಯಾದಗಿರಿ ಜಿಲ್ಲೆ ಸತತ ಐದು ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಕೊನೆಯ ಸ್ಥಾನದಲ್ಲಿದೆ. ಇದಕ್ಕೆ ಮೂಲ ಕಾರಣವೇನು ಎಂದು ಯಾದಗಿರಿ ಜಿಲ್ಲಾ ಪಂಚಾಯಿತಿ ಸಿಇಒ ಅವರು ಜಿಲ್ಲೆಯ ಸರಕಾರಿ ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರಿಗೆ ನೋಟಿಸ್ ಜಾರಿ ಮಾಡಿದ್ದಾರೆ. ಶೇ.40ಕ್ಕಿಂತ ಕಡಿಮೆ ಫಲಿತಾಂಶ ಬಂದ ಶಾಲೆ ಮತ್ತು ಶೇ.60ಕ್ಕಿಂತ ಕಡಿಮೆ ಫಲಿತಾಂಶ ಬಂದ ಶಾಲೆಗಳಾಗಿ ಎರಡು ಹಂತಗಳಲ್ಲಿ ನೋಟಿಸ್ ನೀಡಲಾಗಿದೆ.

ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ನೀಡಿದ ಸೌಲಭ್ಯಗಳು ಸದುಪಯೋಗವಾಗುತ್ತವೆಯೋ ಅಥವಾ ಇಲ್ಲವೋ, ಪ್ರಾತಿನಿಧ್ಯಕ್ಕೆ ಅನುಗುಣವಾಗಿ ಒದಗಿಸಲಾಗುತ್ತಿದೆಯೋ ಅಥವಾ ಇಲ್ಲವೊ ಎಂಬ ಅವಲೋಕನವನ್ನು ಇಲಾಖೆ ಮೇಲಧಿಕಾರಿಗಳು ಸೇರಿದಂತೆ ಜನಪ್ರತಿನಿಧಿಗಳು ಮಾಡಬೇಕಾಗಿದೆ. ಸರಕಾರಿ ದುಡ್ಡು ಯಾವುದೋ ಯೋಜನೆಯ ನೆಪದಲ್ಲಿ ಖರ್ಚು ಮಾಡುವುದಷ್ಟೆ ಆಗಬಾರದು. ಉಪಯುಕ್ತತೆ ನಿರುಪಯುಕ್ತತೆ ಎರಡನೇ ಮಾತು ಎನ್ನುವಷ್ಟು ಬೇಜವಾಬ್ದಾರಿ ನಡೆಗೆ ಹಲವು ಶಾಲೆಗಳ ವಾಸ್ತವಾಂಶದಲ್ಲಿ ಕಾಣಬಹುದು.

– ವೀರಣ್ಣ ಕಲಕೇರಿ ಸಾಹಿತಿ, ಶಿಕ್ಷಣಪ್ರೇಮಿ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ
ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ, ಮೈಸೂರು ಜಿಲ್ಲೆ, ಮೈಸೂರು
No. DTWO/2025-26/IND008/CALL-2 Date:22.07.2025
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್
2025–26 ನೇ ಸಾಲಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿನಿಲಯಗಳು ಹಾಗೂ ವಾಲ್ಮೀಕಿ ಆಶ್ರಮಶಾಲೆಗಳ ವಿದ್ಯಾರ್ಥಿಗಳಿಗೆ ಗ್ರೂಪ್ ಎ.ಬಿ.ಸಿ.ಡಿ ಮತ್ತು ಇತರೆ ಸಾಮಾಗ್ರಿಗಳ ಪೂರೈಕೆಗಾಗಿ ಕೆ.ಪಿ.ಟಿ.ಟಿ ಅಧಿನಿಯಮ 1999, ನಿಯಮಗಳು 2000ರ ಪ್ರಕಾರ ದ್ವಿ ಲಕೋಟಿ ಪದ್ದತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿರುತ್ತದೆ.
1. ಟೆಂಡರ್ ಸಂಖ್ಯೆ: DTWO/2025-26/IND0082/CALL-2 ದಿನಾಂಕ: 22.07.2025
2. ಪ್ರಿ ಬಿಡ್ ದಿನಾಂಕ: 28.07.2025@11.00 AM
3. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 05.08.2025@05.00 PM
4. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : 07.08.2025@11.00 AM
5. ಟೆಂಡರ್ ಒಟ್ಟಾರೆ ಮೊತ್ತ : ರೂ.13.00 ಕೋಟಿ
6. ಇ.ಎಂ.ಡಿ : ರೂ.19.50 ಲಕ್ಷಗಳು
ಎಲ್ಲಾ ದಾಖಲಾತಿಗಳನ್ನು ಆನ್ ಲೈನ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ ನಲ್ಲಿ ದಾಖಲಿಸುವುದು. ಯಾವುದೇ ಕಾರಣ ನೀಡದೇ ಟೆಂಡರ್ ಪ್ರಕ್ರಿಯೆಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಜಿಲ್ಲಾಧಿಕಾರಿಗಳು, ಮೈಸೂರು ರವರ ದತ್ತವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ: 0821–2427140/9449894981 ಸಂಪರ್ಕಿಸಬಹುದಾಗಿರುತ್ತದೆ.
ಸಹಿ/–
ಯೋಜನಾ ಸಮನ್ವಯಾಧಿಕಾರಿ,
ಐ.ಟಿ.ಡಿ.ಪಿ, ಮೈಸೂರು
ವಾಸಾಸಂಇ/ಮೈಸೂರು/ಶಿರಡಿ ಸಾಯಿ/689/2025–26

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
Email:itstaff_ulb_channarayapatna@yahoo.co.in, Phone:08176-255411
ನಂ:ಪು.ಸ.ಚ./ಕಿ.ಅ/ಟೆಂಡರ್/03/2025–26 ದಿನಾಂಕ: 22–07–2025
"ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ"
ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯ ಪುರಸಭಾ ಅನುದಾನದ ಕೆಳಕಂಡ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ 1999 ಮತ್ತು 2000 ನಿಯಮದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ, ಮತ್ತು ಇ–ಪ್ರೊಕೊರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ–ಪ್ರೊಕೊರ್‌ಮೆಂಟ್ (Visit:https://kppp.karnataka.gov.in/) ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಪುರಸಭೆ ಚನ್ನರಾಯಪಟ್ಟಣ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್ ಸೈಟ್ www.channarayapatnatown.mrc.gov.in ನಲ್ಲಿ ವೀಕ್ಷಿಸಬಹುದು. ಪುರಸಭೆಯ ಆರ್ಥಿಕ ಪರಿಸ್ಥಿತಿ ಅನುಗುಣವಾಗಿ ಬಿಲ್ ಪಾವತಿಸಲಾಗುವುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಅಫ್‌ಲೋಡ್ ಮಾಡಲು ಕೊನೆಯ ದಿನಾಂಕ: 22–07–2025 to 05–08–2025 up to 17.30 hrs 1)ಟೆಂಡರ್‌ಗಳನ್ನು ತೆರೆಯುವ ದಿನಾಂಕ: 07–08–2025 at 11.00 hrs 2)ಟೆಂಡರ್ ಫಾರಂ ಬೆಲೆ: ಇ–ಪೋರ್ಟಲ್‌ನಲ್ಲಿರುವಂತೆ. ಕ್ರ.ಸಂ.1)ಇ–ಪೋರ್ಟಲ್‌ನಲ್ಲಿನ ಟೆಂಡರ್ ಇಂಡೆಂಟ್ 1)DMA/2025-26/RD/WORK_INDENT45393 ಟೆಂಡರ್ ಮೊತ್ತ (ರೂ ಲಕ್ಷಗಳಲ್ಲಿ)23.10 ಇಎಂಡಿ ಮೊತ್ತ (ರೂ ಗಳಲ್ಲಿ)50000/– ಕಾಲಾವಧಿ 3 ತಿಂಗಳು 2)DMA/2025-26/RD/WORK_INDENT45391 ಟೆಂಡರ್ ಮೊತ್ತ (ರೂ ಲಕ್ಷಗಳಲ್ಲಿ)14.05 ಇಎಂಡಿ ಮೊತ್ತ (ರೂ ಗಳಲ್ಲಿ)35200/– ಕಾಲಾವಧಿ 3 ತಿಂಗಳು 3)DMA/2025-26/RD/WORK_INDENT44432 ಟೆಂಡರ್ ಮೊತ್ತ (ರೂ ಲಕ್ಷಗಳಲ್ಲಿ)20.81 ಇಎಂಡಿ ಮೊತ್ತ (ರೂ ಗಳಲ್ಲಿ)50000/– ಕಾಲಾವಧಿ 3 ತಿಂಗಳು 4)DMA/2025-26/OW/WORK_INDENT44431 ಟೆಂಡರ್ ಮೊತ್ತ (ರೂ ಲಕ್ಷಗಳಲ್ಲಿ)6.77 ಇಎಂಡಿ ಮೊತ್ತ (ರೂ ಗಳಲ್ಲಿ)17000/– ಕಾಲಾವಧಿ 3 ತಿಂಗಳು ಗುತ್ತಿಗೆದಾರರ ದರ್ಜೆ 3ನೇ ದರ್ಜೆ ಮತ್ತು ಮೇಲ್ಪಟ್ಟು
ಸಹಿ/–ಅಧ್ಯಕ್ಷರು, ಪುರಸಭೆ ಚನ್ನರಾಯಪಟ್ಟಣ
ಸಹಿ/–ಮುಖ್ಯಾಧಿಕಾರಿ. ಪುರಸಭೆ ಚನ್ನರಾಯಪಟ್ಟಣ
ವಾಸಾಸಂಇ/ಹಿಸನಿ/ಹಾಸನ/369/ಕೆಎಸ್‌ಎಂಸಿಎ/2025–26

ರಾಜ್ಯದ 8 ಕಡೆ ಲೋಕಾ ಶೋಧ

← ಮೊದಲಪುಟದಿಂದ

ಮೈಸೂರಿನ ಎಂಸಿಸಿ ವಲಯ-5ರ ಕಚೇರಿ ಸಹಾಯಕ(ಆಡಳಿತ) ವೆಂಕಟರಾಮ ಅವರಿಗೆ ಸೇರಿದ 5 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದೆ. 2.56 ಕೋಟಿ ರು. ಸ್ಥಿರಾಸ್ತಿ, 1.15 ಕೋಟಿ ರು. ಚರಾಸ್ತಿ ಪತ್ತೆಯಾಗಿದೆ. ಒಟ್ಟು 3.71 ಕೋಟಿ ರು. ಆಸ್ತಿ ಹೊಂದಿರುವುದು ಲೋಕಾಯುಕ್ತ ದಾಳಿ ವೇಳೆ ತಿಳಿದುಬಂದಿದ್ದು, ಅಧಿಕಾರಿಗಳು ಆಸ್ತಿ ಮೊತ್ತವನ್ನು ವಶಕ್ಕೆ ಪಡೆದಿದ್ದಾರೆ. ತುಮಕೂರಿನ ಕೆಐಎಡಿಬಿ ಸಹಾಯಕ ಕಾರ್ಯಪಾಲಕ ಅಭಿಯಂತರ ಎಂ.ರಾಜೇಶ್ ಎಂಬ ಆರೋಪಿತ ಸರಕಾರಿ ನೌಕರರಿಗೆ ಸೇರಿದ ಒಟ್ಟು 6 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದೆ. 2.10 ಕೋಟಿ ರು. ಸ್ಥಿರಾಸ್ತಿ, 1.57 ಕೋಟಿ ರು. ಚರಾಸ್ತಿ ಸೇರಿದಂತೆ 3.67 ಕೋಟಿ ರು. ಮೌಲ್ಯದ ಆಸ್ತಿ ಇರುವುದು ಲೋಕಾಯುಕ್ತ ದಾಳಿ ವೇಳೆ ಪತ್ತೆಯಾಗಿದೆ.

ಕಲಬುರಗಿಯ ಆರೋಗ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರ ಸುನೀಲ್ ಕುಮಾರ್‌ಗೆ ಸೇರಿದ 4 ಸ್ಥಳಗಳಲ್ಲಿ ಲೋಕಾಯಕ್ತ ದಾಳಿ ನಡೆಸಿ, 1.90 ಕೋಟಿ ರು. ಸ್ಥಿರಾಸ್ತಿ, 2.44 ಕೋಟಿ ರು. ಚರಾಸ್ತಿ ಸೇರಿದಂತೆ ಒಟ್ಟು 4.34 ಕೋಟಿ ರು. ಆಸ್ತಿ ಹೊಂದಿರುವುದು ಬೆಳಕಿಗೆ ಬಂದಿದೆ. ಕೊಪ್ಪಳ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರದ ಉಪ ನಿರ್ದೇಶಕ ಶೇಖು ಚೌವ್ಹಾಣ್ ಅವರ ಮೇಲೆ ಲೋಕಾಯುಕ್ತ ದಾಳಿ ನಡೆಸಿದ್ದು, 52.49 ಲಕ್ಷ ರು, ಸ್ಥಿರಾಸ್ತಿ, 1.47 ಕೋಟಿ ರು. ಚರಾಸ್ತಿ ಸೇರಿದಂತೆ 3.11 ಕೋಟಿ ರು. ಆಸ್ತಿ ಹೊಂದಿರುವುದು ತಿಳಿದುಬಂದಿದೆ. ಆರೋಪಿತ ಅಧಿಕಾರಿ ವಿರುದ್ಧ ಕೊಡಗು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಜಂಟಿ ನಿರ್ದೇಶಕ ಮಂಜುನಾಥಸ್ವಾಮಿಗೆ ಸೇರಿದ 4 ಸ್ಥಳಗಳಲ್ಲಿ ಲೋಕಾಯುಕ್ತ ಶೋಧನಾ ಕಾರ್ಯ ನಡೆಸಿದ್ದು, 4.45 ಕೋಟಿ ರು. ಸ್ಥಿರಾಸ್ತಿ, 75.31 ಲಕ್ಷ ರು. ಚರಾಸ್ತಿ ಸೇರಿದಂತೆ 5.20 ಕೋಟಿ ರು. ಆಸ್ತಿ ಹೊಂದಿರುವುದು ತಿಳಿದುಬಂದಿದೆ.

ಸಿದ್ದು ಸಂಧಾನ ಸಫಲ

← ಮೊದಲಪುಟದಿಂದ

ಇದರೊಂದಿಗೆ ಸಣ್ಣ ವ್ಯಾಪಾರಿಗಳಿಗೆ ನೆರವಾಗುವಂತೆ ಸಹಾಯವಾಣಿ ಆರಂಭಿಸಬೇಕು. ಜಿಎಸ್‌ಟಿ ಕುರಿತು ಸರಿಯಾಗಿ ಮಾಹಿತಿಯಿಲ್ಲದ ಕಾರಣ ಗೊಂದಲ ಉಂಟಾಗಿದೆ. ಜಾಗೃತಿ ಕಾರ್ಯಕ್ರಮ ಕೈಗೊಳ್ಳಬೇಕು. ಒಂದು ಬಾರಿಗೆ ಹಳೆಯ ಬಾಕಿಯನ್ನು ಮನ್ನಾ ಮಾಡಬೇಕು ಎಂದು ಮನವಿ ಸಲ್ಲಿಸಿದರು.

ಸಣ್ಣ ವ್ಯಾಪಾರಿಗಳಿಗೆ ಯಾವುದೇ ಸಮಸ್ಯೆಯಾ ಗದಂತೆ ಕ್ರಮವಹಿಸುವ ಭರವಸೆಯನ್ನು ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡುವುದರೊಂದಿಗೆ, ಕೆಲ ತಿದ್ದುಪಡಿಗಳು ಕೇಂದ್ರ ಜಿಎಸ್‌ಟಿ ಸಮಿತಿಯಲ್ಲಿ ಆಗಬೇಕಿದೆ. ಈ ಬಗ್ಗೆಯೂ ಅಗತ್ಯ ಕ್ರಮವಹಿಸುವುದಾಗಿ ಹೇಳಿದರು.

ಸಮಾಚಾರ ಸಣ್ಣದಲ್ಲ

ವಿದ್ಯುತ್ ತಂತಿ ತಗುಲಿ ಮೂವರ ಸಾವು



ಚಿತ್ರದುರ್ಗ: ಚಿತ್ರದುರ್ಗದ ಹೊಳಲ್ಕೆರೆ ತಾಲೂಕಿನ ಕಾಳಘಟ್ಟ ಗ್ರಾಮದ ಬಳಿ ವಿದ್ಯುತ್ ತಂತಿ ತಗುಲಿ ಮೂವರು ಸಾವನ್ನಪ್ಪಿರುವಂತಹ ಘಟನೆ ನಡೆದಿದೆ. ಮೃತರನ್ನು ದಾವಣಗೆರೆ ಮೂಲದ ಕಾರ್ಮಿಕರಾದ 30 ವರ್ಷದ ನರ್ಜೀ, 30 ವರ್ಷದ ಫಾರೂಕ್ ಮತ್ತು ಹೊಳಲ್ಕೆರೆ ತಾಲೂಕಿನ ಗ್ಯಾರೆಹಳ್ಳಿ ನಿವಾಸಿ 35 ವರ್ಷದ ಶ್ರೀನಿವಾಸ್ ಎಂದು ಗುರುತಿಸಲಾಗಿದೆ. ಶ್ರೀನಿವಾಸ್ ಗೆ ಸೇರಿದ ತೋಟದಲ್ಲಿ ಕಬ್ಬಿಣದ ಕಂಬ ನೆಡುವ ವೇಳೆ ವಿದ್ಯುತ್ ತಂತಿ ತಗುಲಿ ದುರಂತ ಸಂಭವಿಸಿದೆ. ಘಟನೆಯಲ್ಲಿ ಮೂವರು ಗಂಭೀರ ಗಾಯಗೊಂಡಿದ್ದು ಅವರನ್ನು ಕೂಡಲೇ ದಾವಣಗೆರೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಚಿಕ್ಕಜಾಜೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಮರ ಬಿದ್ದು ದಂಪತಿ ಸಾವು

ರಾಯಚೂರು: ಜಿಲ್ಲೆಯ ಲಿಂಗಸುಗೂರು ತಾಲೂಕಿನ ಮುದಗಲ್‌ನಲ್ಲಿ ಬುಧವಾರ ಸಂಜೆ ಮರ ಬಿದ್ದು ದಂಪತಿ ಅವರು ನಿಧನರಾಗಿದ್ದಾರೆ. ಮುದಗಲ್ಲಿಂದ ನಾಗಲಾಪುರಕ್ಕೆ ಬೈಕ್ ಮೇಲೆ ಹೊರಟಿದ್ದಾಗ ಹಳೆಯ ಆಲದ ಮರ ಬಿದ್ದು ನಾಗಲಾಪುರದ ರಮೇಶ ಗುಡದಪ್ಪ (25), ಪತ್ನಿ ಅನುಸೂಯಾ (22) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇವರ ಮೂರು ವರ್ಷದ ಸೌಜನ್ಯಳಿಗೆ ಗಾಯಗಳಾಗಿವೆ.

ಕೊಲೆ ಕೇಸ್: ಶಾಸಕರ ಕಾರು ಚಾಲಕ ಸೆರೆ

ಚಿತ್ರದುರ್ಗ: ಕೊಲೆ ಪ್ರಕರಣವೊಂದರಲ್ಲಿ ಹೊಸದುರ್ಗ ಕಾಂಗ್ರೆಸ್ ಶಾಸಕ ಬಿ.ಜಿ.ಗೋವಿಂದಪ್ಪ ಅವರ ಕಾರು ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕಾರು ಚಾಲಕ ಯಶವಂತ್ ಸೇರಿ ನಾಲ್ವರನ್ನು ಹೊಸದುರ್ಗ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮಾರ್ಚ್ 17 ರಂದು ಜಾನಕಲ್ ಗ್ರಾಮದ ಪ್ರಸನ್ನ (45) ನಾಪತ್ತೆಯಾಗಿದ್ದರು. ಮಾರ್ಚ್ 21 ರಂದು ಈ ಸಂಬಂಧ ಹೊಸದುರ್ಗ ಠಾಣೆಯಲ್ಲಿ ಕೇಸ್ ದಾಖಲಾಗಿತ್ತು. ಚಿಕ್ಕಮಗಳೂರು ಜಿಲ್ಲೆ ಲಿಂಗದಳ್ಳಿ ಬಳಿ ಪ್ರಸನ್ನ ಶವವಾಗಿ ಪತ್ತೆಯಾಗಿದ್ದರು. ಜುಲೈ 20 ರಂದು ಪ್ರಸನ್ನ ಕೊಲೆ ಪ್ರಕರಣ ಬಯಲಾಗಿದೆ. ಪ್ರಕರಣ ಸಂಬಂಧ ಪ್ರಸನ್ನ ಪತ್ನಿ, ಶಾಸಕ ಬಿ.ಜಿ.ಗೋವಿಂದಪ್ಪ ಕಾರು ಚಾಲಕ ಯಶವಂತ್, ಲೋಹಿತ್, ವೀರೇಶ್ ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಕೊಲೆ ಮಾಡಿ ಲಿಂಗದಳ್ಳಿ ಬಳಿ ಅರಣ್ಯದಲ್ಲಿ ಶವ ಎಸೆಯಲಾಗಿತ್ತು. ಲಿಂಗದಳ್ಳಿ ಮತ್ತು ಹೊಸದುರ್ಗ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿತ್ತು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
24.07.2025
ಗುರುವಾರದ ಅತಿಥಿಗಳು

ವಿಶ್ವವಾಣಿ ಪುಸ್ತಕ ಬಿಡುಗಡೆ ಕಾರ್ಯಕ್ರಮ
ಲೇಖಕರ ಮಾತುಗಳು
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಹಾಸನ**

ಸಮಸ್ಯೆ ಯೇನು..?: ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ತೇಜೂರು ಗ್ರಾಮದಲ್ಲಿ ಚರಂಡಿ ನಿರ್ಮಾಣ, ಸ್ವಚ್ಛತೆಯ ಬಗ್ಗೆ.

- **ಪರಿಹಾರ:** ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ತೇಜೂರು ಗ್ರಾಮದಲ್ಲಿ ಚರಂಡಿ ನಿರ್ಮಾಣಕ್ಕೆ 2025-26 ನೇ ಸಾಲಿನ 15ನೇ ಹಣಕಾಸು ಅನುದಾನದ ಕ್ರಿಯಾ ಯೋಜನೆಯಲ್ಲಿ ಕಾಮಗಾರಿಗಳಿಗೆ ಅನುಮೋದನೆ ಪಡೆಯಲಾಗಿದೆ. ಸದರಿ ವರ್ಷದ ಅನುದಾನ ಖಾತೆಗೆ ಜಮೆಯಾದ ತಕ್ಷಣ ದಲ್ಲಿ ಚರಂಡಿಯನ್ನು ಕಾಮಗಾರಿ ಕೈಗೊಳ್ಳಲಾಗುವುದು. ಶೀಘ್ರದಲ್ಲಿ ಚರಂಡಿಗಳನ್ನು ಸ್ವಚ್ಛತೆ ಮಾಡಲಾಗುವುದು.

ರಾಜ್ಯ ವಿದ್ಯುತ್ ನಿಗಮದ 56ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ವಿದ್ಯುತ್ ಕೊರತೆ ಕಾಯಂ ನಿವಾರಣೆಗೆ ಕ್ರಮ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆ ಜತೆಗೆ ಯಾವ ಕಾಲಕ್ಕೂ ವಿದ್ಯುತ್ ಕೊರತೆಯಾಗದಂತೆ ನೋಡಿಕೊಳ್ಳಲು ನಮ್ಮ ಸರಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬುಧವಾರ ಕೆಪಿಸಿಎಲ್‌ನ 56ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯುತ್ ಉತ್ಪಾದನೆಯಲ್ಲಿ ರಾಜ್ಯವು ಸ್ವಾವಲಂಬನೆ ಸಾಧಿಸಿದೆ. ಮುಂದಿನ ದಿನಗಳಲ್ಲಿ ಯಾವ ಸಂದರ್ಭದಲ್ಲೂ ವಿದ್ಯುತ್ ಕೊರತೆ ಆಗಬಾರದು. ಆ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು. ಜಲ, ಉಷ್ಣ, ಸೌರ, ಪವನ, ಅನಿಲ ಮಾತ್ರವಲ್ಲ ತ್ಯಾಜ್ಯದಿಂದಲೂ ವಿದ್ಯುತ್ ಉತ್ಪಾದಿಸುವ ಮೂಲಕ ಕೆಪಿಸಿಎಲ್ ಅತ್ಯುತ್ತಮ ಸಾಧನೆ ಮಾಡಿದೆ. ಆ ಮೂಲಕ ಅತಿ ಹೆಚ್ಚು ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ರಾಜ್ಯವಾಗಿ ಕರ್ನಾಟಕವನ್ನು ದೇಶದಲ್ಲೇ ಮುಂಚೂಣಿಯಲ್ಲಿ ನಿಲ್ಲಿಸಿದೆ ಎಂದರು.

ನಾನು ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವಾಗ ನಮ್ಮ ಊರಿನಲ್ಲಿ ವಿದ್ಯುತ್ ಇರಲಿಲ್ಲ. 7-8ನೇ ತರಗತಿಯಲ್ಲಿರುವಾಗ ನಮ್ಮ ಊರಿಗೆ ವಿದ್ಯುತ್ ಬಂತು. ಆದರೆ, ಇಂದು ವಿದ್ಯುತ್ ಸಂಪರ್ಕ ಇಲ್ಲದ ಗ್ರಾಮವೇ ಇಲ್ಲ. ಈ ರೀತಿ ರಾಜ್ಯದ ಮೂಲೆ ಮೂಲೆಗಳಿಗಳಿಗೆ, ಕೈಗಾರಿಕೆಗಳಿಗೆ ಸೇರಿದಂತೆ ಎಲ್ಲಾ ಕಡೆ ವಿದ್ಯುತ್ ಸರಬರಾಜಾಗುವಲ್ಲಿ ಕೆಪಿಸಿಎಲ್

ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬುಧವಾರ ಕೆಪಿಸಿಎಲ್‌ನ 56ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ,ಇಂಧನ ಸಚಿವ ಕೆ.ಜೆ.ಜಾರ್ಜ್ ಉದ್ಘಾಟಿಸಿದರು.

ಅತ್ಯಂತ ಪ್ರಮುಖ ಪಾತ್ರ ವಹಿಸಿದೆ.ಹೀಗಾಗಿ ರಾಜ್ಯದ ಪ್ರಗತಿಯಲ್ಲೂ ಕೆಪಿಸಿಎಲ್ ನ ಕೊಡುಗೆ ಮಹತ್ವದ್ದು ಎಂದು ಶ್ಲಾಘಿಸಿದರು. ಸಂಸ್ಥಾಪನಾ ದಿನದ ಅಂಗವಾಗಿ ಕೆಪಿಸಿಎಲ್ ನಲ್ಲಿ 25 ವರ್ಷ ಸುದೀರ್ಘಸೇವೆ ಸಲ್ಲಿಸಿದವರನ್ನು ಅಭಿನಂದಿಸಲಾಯಿತು. ನಿಗಮದ ನಿವೃತ್ತ ಸಿಬ್ಬಂದಿಯನ್ನು ಗೌರವಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಗಳಿಸಿದ ನಿಗಮದ ಸಿಬ್ಬಂದಿ ಮಕ್ಕಳಿಗೆ ಚಿನ್ನದ ನಾಣ್ಯ ನೀಡಿ ಪುರಸ್ಕರಿಸಲಾಯಿತು.

ಈ ವೇಳೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ, ವಿಧಾನ ಪರಿಷತ್ ಸದಸ್ಯ ನಸೀರ್ ಅಹ್ಮದ್, ಶಾಸಕರಾದ ಬಸವನಗೌಡ ದದ್ದಲ್, ಪ್ರಸಾದ್ ಅಬ್ಬಯ್ಯ, ಇಂಧನ ಇಲಾಖೆ ಅಪರ ಮುಖ್ಯಕಾರ್ಯದರ್ಶಿ ಹಾಗೂ ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಗೌರವ್ ಗುಪ್ತ, ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಅಧ್ಯಕ್ಷ ಮನೋಹರ್, ಕೆಪಿಸಿಎಲ್ ಹಣಕಾಸು ನಿರ್ದೇಶಕ ಆರ್.ನಾಗರಾಜ, ತಾಂತ್ರಿಕ ನಿರ್ದೇಶಕ ಎಸ್.ಕೃಷ್ಣಮೂರ್ತಿ, ಮುಖ್ಯ ಜಾಗೃತ ಅಧಿಕಾರಿ ಟಿ.ಪಿ.ಶಿವಕುಮಾರ್ ಇದ್ದರು.

ಕೆಪಿಸಿಎಲ್‌ನಲ್ಲಿ ಹುದ್ದೆಗಳ ಭರ್ತಿ

ಕೆಪಿಸಿಎಲ್ ನಲ್ಲಿ ಸಾಕಷ್ಟು ಹುದ್ದೆಗಳು ಖಾಲಿಯಿದ್ದು, ಇದರಿಂದ ಕೆಲಸಕ್ಕೆ ಸಮಸ್ಯೆಯಾಗುತ್ತಿದೆ ಎಂಬ ಮನವಿಗಳು ಬಂದಿವೆ. ಖಾಲಿ ಹುದ್ದೆಗಳ ಕುರಿತು ಇಂಧನ ಇಲಾಖೆ ಸಚಿವರು ಮತ್ತು ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚನೆ ನಡೆಸಿ ಶೀಘ್ರದಲ್ಲೇ ಅವುಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದರು.

ವಿದ್ಯುತ್ ಉತ್ಪಾದನೆಯಲ್ಲಿ ಕೆಪಿಸಿಎಲ್ 2024-25ನೇ ಸಾಲಿನಲ್ಲಿ 37,009 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಿ ಸಾರ್ವಕಾಲಿಕ ದಾಖಲೆ ನಿರ್ಮಿಸಿದೆ. ಪ್ರಸ್ತುತ ರಾಜ್ಯದ ಬೇಡಿಕೆಯ ಶೇ. 40ರಷ್ಟು ವಿದ್ಯುತ್ ಉತ್ಪಾದಿಸುವ ನಿಗಮದ ಉತ್ಪಾದನೆಯನ್ನು ಶೇ. 50ಕ್ಕೆ ಹೆಚ್ಚಿಸಲು ಕ್ರಮ ವಹಿಸಲಾಗುತ್ತಿದೆ.

- ಗೌರವ್ ಗುಪ್ತ, ಅಪರ ಮುಖ್ಯ ಕಾರ್ಯದರ್ಶಿ,ಇಂಧನ ಇಲಾಖೆ ಮತ್ತು ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕರು

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಆದ್ಯತೆ

ಇಂಧನ ಸಚಿವ ಕೆ.ಜೆ.ಜಾರ್ಜ್ ಮಾತನಾಡಿ, ರಾಜ್ಯದಲ್ಲಿ ಸಾಕಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದ್ದರೂ ಸಂಗ್ರಹಣಾ ವ್ಯವಸ್ಥೆ ಇಲ್ಲ. ಹೀಗಾಗಿ ಶರಾವತಿಯಲ್ಲಿ 2000 ಮೆಗಾವ್ಯಾಟ್ ಹಾಗೂ ವಾರಾಹಿಯಲ್ಲಿ 1500 ಮೆಗಾವ್ಯಾಟ್ ಸಾಮರ್ಥ್ಯದ ಪಂಪ್ಡ್ ಸ್ಟೋರೇಜ್ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ. ಆ ಮೂಲಕ ವಿದ್ಯುತ್ ಸಂಗ್ರಹಿಸಿ ಹೆಚ್ಚು ಬೇಡಿಕೆ ಸಂದರ್ಭದಲ್ಲಿ ಪೂರೈಸಲಾಗುವುದು. ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ರಾಜ್ಯ ಮತ್ತು ಕೇಂದ್ರ ವನ್ಯಜೀವಿ ಮಂಡಳಿಗಳಿಂದ ಈಗಾಗಲೇ ಅನುಮತಿ ಸಿಕ್ಕಿದೆ ಎಂದರು.

ಇಂದು ದೆಹಲಿಗೆ ಸಿದ್ದರಾಮಯ್ಯ, ಡಿಸಿಎಂ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿರುವ ನಿಗಮ ಮಂಡಳಿ ನಿರ್ದೇಶಕರ ನೇಮಕ ಹಾಗೂ ವಿಧಾನ ಪರಿಷತ್ ನಾಮನಿರ್ದೇಶನ ಸದಸ್ಯರ ನೇಮಕಕ್ಕೆ ಸಂಬಂಧಿಸಿದಂತೆ

ಅಂತಿಮ ಹಂತದ ಚರ್ಚೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಗೆ ಗುರುವಾರ ತೆರಳಲಿದ್ದು, ಶುಕ್ರವಾರ ಸಂಜೆ ವೇಳೆ ಸ್ಪಷ್ಟ ಚಿತ್ರಣ ಸಿಗಲಿದೆ.

ಎಐಸಿಸಿ ಹಿಂದುಳಿದ ವರ್ಗಗಳ ಘಟಕದಿಂದ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಮುಖ್ಯಮಂತ್ರಿಗಳು ಗುರುವಾರ ಸಂಜೆ ದೆಹಲಿಗೆ ತೆರಳಲಿದ್ದಾರೆ. ಶುಕ್ರವಾರ ಬೆಳಗ್ಗೆ ಕಾರ್ಯಕ್ರಮದ ಬಳಿಕ ಸಂಜೆ ವೇಳೆ ಹೈಕಮಾಂಡ್ ಜತೆ ಚರ್ಚಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ರಾಜ್ಯದಲ್ಲಿದ್ದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಕಳೆದ ವಾರ ನಡೆಸಿದ ಸಭೆಯಲ್ಲಿ ಕರಡು ಪಟ್ಟಿಯನ್ನು ಸಿದ್ಧಪಡಿಸಿದ್ದರೂ, ಕೆಲವೊಂದಷ್ಟು ಗೊಂದಲಗಳಿದ್ದವು. ಆದ್ದರಿಂದ ದೆಹಲಿಯಲ್ಲಿಯೇ ಮತ್ತೊಂದು ಸುತ್ತಿನ ಸಭೆ ನಡೆಸಿ, ಪಟ್ಟಿ ಅಂತಿಮಗೊಳಿಸಲು ತೀರ್ಮಾನಿಸಲಾಗಿತ್ತು.

ಬಿಜೆಪಿ ವಿರುದ್ಧ ಸಂತೋಷ್ ಲಾಡ್ ಕಿಡಿ

ಒತ್ತಡ ಹೇರಿ ಉಪರಾಷ್ಟ್ರಪತಿ ಧನ್‌ಕರ್ ರಾಜೀನಾಮೆ

ಬಾಗಲಕೋಟೆ: ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರು ರಾಜ್ಯಸಭೆಯಲ್ಲಿ ವಿರೋಧ ಪಕ್ಷದವರು ಮೂವ್ ಮಾಡಿದ ಬಿಲ್ ಒಪ್ಪಿಕೊಂಡಿದ್ದರು. ಇದಕ್ಕಾಗಿ ಎಲ್ಲರೂ ಒತ್ತಡ ಹಾಕಿ ರಾಜೀನಾಮೆ ಕೊಡಿಸಿದ್ದಾರೆ ಎಂದು ಕಾರ್ಮಿಕ ಇಲಾಖೆ ಸಚಿವ ಸಂತೋಷ ಲಾಡ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಪರಾಷ್ಟ್ರಪತಿಗಳು ಏಕೆ ರಾಜೀನಾಮೆ ನೀಡಿದ್ದಾರೆ ಎಂದು ಬಿಜೆಪಿ ಅವರಿಗೆ ಕೇಳಬೇಕು ಎಂದು ಹೇಳಿದರು. ಧರ್ಮಸ್ಥಳದಲ್ಲಿನ ಶವ ಹೂತ ಪ್ರಕರಣಕ್ಕೆ ಸಮಬಂಧಿಸಿದಂತೆ ಎಸ್.ಐ.ಟಿ ತನಿಖೆ ಇಂದಿನಿಂದ ಪ್ರಾರಂಭವಾಗಿದೆ. ಇದರ ಬಗ್ಗೆ ಮಾತನಾಡುವುದು ಸರಿಯಲ್ಲ ಎಂದರು. ಕರ್ನಾಟಕದಲ್ಲೇ ಈಗ ಮಹಿಳೆಯರಿಗೆ ಬಸ್ ಉಚಿತವಾಗಿದೆ. ಕಾರ್ಮಿಕರಿಗೆ ಉಚಿತವಾಗಿ ಮಾಡುವುದು ಬಹಳ ಕಷ್ಟ. ಕಾರ್ಮಿಕರನ್ನು ಮೊದಲು ಬೈಫರ್ಕೇಶನ್ ಮಾಡಬೇಕು. ನಮ್ಮ ಇಲಾಖೆಯಲ್ಲಿ ಅಸಂಘಟಿತ ಕಾರ್ಮಿಕರಿಗೆ ಉಚಿತ ಬಸ್ ಪಾಸ್ ಕೊಡಲು ದುಡ್ಡಿಲ್ಲ ಎಂದರು.

ಜಿಲ್ಲೆಯ ಕಾರ್ಮಿಕ ಇಲಾಖೆಯಲ್ಲಿ 8 ಕೋಟಿ ರು. ಗೋಲ್‌ಮಾಲ್ ಪ್ರಕರಣ ತನಿಖೆಯಾಗಿ, ಕೊನೆಯ ಹಂತದಲ್ಲಿದೆ. ತಪ್ಪಿತಸ್ಥರಿಗೆ ಖಂಡಿತವಾಗಿ ಶಿಕ್ಷೆಯಾಗಲಿದೆ. ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕು ತೆಗೆದುಕೊಳ್ಳುತ್ತೇವೆ. ಸ್ವಲ್ಪ ವಿಳಂಬ ಆಗಿದೆ ನಿಜ. ಆದರೆ, ತಪ್ಪಿತಸ್ಥರು ಯಾರೇ ಇದ್ದರೂ ಕ್ರಮ ಕೈಗೊಳ್ಳುತ್ತೇವೆ.

-ಸಂತೋಷ್ ಲಾಡ್ , ಸಚಿವ

ಶಾಸಕ ಶಿವಗಂಗಾ ಬಸವರಾಜ್ ವಿಶ್ವಾಸ

ಡಿಸೆಂಬರ್‌ನಲ್ಲಿ ಡಿಸಿಎಂ ಡಿಕೆಶಿ ಸಿಎಂ ಆಗುವುದು ಖಚಿತ

ದಾವಣಗೆರೆ: ಐದು ವರ್ಷವೂ ಡಿಸೆಂಬರ್ ಇರುತ್ತೆ. ಯಾವಾಗ ಬೇಕಾದ್ರೂ ಸಿಎಂ ಬದಲಾವಣೆ ಆಗಬಹುದು. ಇದೇ ಡಿಸೆಂಬರ್ ಅಂತ ನಾನು ಹೇಳಿಲ್ಲ ಎಂದು ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಡಿಸೆಂಬರ್‌ನಲ್ಲಿ ಡಿಕೆಶಿ ಸಿಎಂ ಆಗುತ್ತಾರೆ. ಇದನ್ನು ನಾನು ರಕ್ತದಲ್ಲಿ ಬರೆದು ಕೊಡುತ್ತೇನೆ ಎಂದಿದ್ದ ವಿಚಾರವಾಗಿ ಇಂದು ಸ್ಪಷ್ಟನೆ ನೀಡಿದ ಅವರು, ನಾನು ಡಿಸೆಂಬರ್‌ನಲ್ಲಿ ಸಿಎಂ ಬದಲಾಗುತ್ತಾರೆ ಎಂದು ಹೇಳಿದ್ದೆ. ಅಲ್ಲಿವರೆಗೆ ಈ ವಿಷಯವನ್ನು ಮಾತನಾಡಲ್ಲ. ಡಿಸೆಂಬರ್ ವರೆಗೂ ಕಾದು ನೋಡಿ ಎಂದರು. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಅವರನ್ನು ನಾನು ಭೇಟಿಯಾಗಿಲ್ಲ. ಪ್ರವಾಸ ಪೂರ್ವ ಭೇಟಿ ನಿಯೋಜನೆಯಾಗಿದ್ದರಿಂದ ಭೇಟಿಯಾಗಲಿಲ್ಲ. ಕಾಂಗ್ರೆಸ್ ಶಾಸಕರಿಗೆ ಈಗ 50 ಕೋಟಿ ರು.ಅನುದಾನ ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಬೇರೆ ಪಕ್ಷದ ಶಾಸಕರಿಗೂ ನೀಡುತ್ತಾರೆ. ಸಾಮಾನ್ಯವಾಗಿ ರೂಲಿಂಗ್ ಪಾರ್ಟಿಯ ಶಾಸಕರಿಗೆ ಅನುದಾನ ಕೊಡುತ್ತಾರೆ ಅಷ್ಟೇ ಎಂದು ಹೇಳಿದರು.

ರೇಣುಕಾ ಚಾರ್ಯ ಹಾಗೂ ನನ್ನ ನಡುವೆ ವಾಕ್ಸಮರ ಅಂತ್ಯವಾಗಿದೆ. ನಾನು ಹೇಳಿರುವುದರಲ್ಲಿ ಸತ್ಯ ಇರಬಹುದು, ಸುಳ್ಳೂ ಇರಬಹುದು. ಅದನ್ನು ಪರಿಶೀಲನೆ ಮಾಡಿ ಸತ್ಯಾಸತ್ಯತೆ ಹೊರ ತರಬೇಕಿದೆ. ಈಗ ಅದೆಲ್ಲವೂ ಮುಗಿದುಹೋದ ವಿಚಾರ. ನಾನು ಏನೂ ಮಾತನಾಡುತ್ತಿಲ್ಲ. ಅವರೂ ಏನೂ ಮಾತನಾಡುತ್ತಿಲ್ಲ.

-ಶಿವಗಂಗಾ ಬಸವರಾಜ್ , ಶಾಸಕ

ರಂಭಾಪುರಿ ಶ್ರೀಗಳಿಗೆ ಶಾಸಕ ಯತ್ನಾಳ್ ಟಾಂಗ್

ಡಿಕೆಶಿ ಸಿಎಂ ಆಗಬೇಕೆಂದ ಸ್ವಾಮೀಜಿ ಭ್ರಷ್ಟ

ಕೊಪ್ಪಳ: ಡಿಸಿಎಂ ಡಿ.ಕೆ.ಶಿವಕುಮಾರ ಕೆಲ ಸ್ವಾಮೀಜಿಗಳನ್ನು ಪಾದಪೂಜೆಗೆ ಕರೆಯಿಸಿ, ದೊಡ್ಡ ಮಟ್ಟದ ಹಣ ನೀಡರ ಬೇಕು. ಅಂಥ ಸ್ವಾಮೀಜಿಗಳು ಮಾತ್ರ ಡಿ.ಕೆ. ಶಿವಕುಮಾರ ಮುಖ್ಯಮಂತ್ರಿ ಆಗಬೇಕು ಎನ್ನುತ್ತಿದ್ದಾರೆ. ಡಿಕೆಶಿ ಪರ ಮಾತನಾಡುವ ಸ್ವಾಮೀಜಿಗಳೇ ಭ್ರಷ್ಟರಿದ್ದಾರೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಲೇವಡಿ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ದೊಡ್ಡ ಮೊತ್ತದ ಕಾಣಿಕೆ ನೀಡಿದವರ ಪರ ಸ್ವಾಮೀಜಿಗಳು ಮಾತನಾಡುತ್ತಿದ್ದಾರೆ. ಇದರಿಂದ ಹಿಂದಿನಂತೆ ತಪಸ್ಸಿನ ಶಕ್ತಿ ಸ್ವಾಮೀಜಿಗಳಲ್ಲಿ ಉಳಿದಿಲ್ಲ. ಲಕ್ಷಾಂತರ ರು. ಹಣ ಕಾಣಿಕೆ ರೂಪದಲ್ಲಿ ನೀಡಿರುತ್ತಾರೆ. ಇದರಿಂದ ಕೆಲ ಸ್ವಾಮಿಗಳು ರಾಜಕಾರಣಿಗಳ ಪರ ವಕಾಲತ್ತು ವಹಿಸಿ, ಶಾಪ ಹಾಕುತ್ತಾರೆ. ಇಂಥ ಸ್ವಾಮೀಜಿಗಳು ಹಾಕಿದ ಶಾಪದಿಂದ ಏನೂ ಆಗುವುದಿಲ್ಲ ಎಂದು ಯತ್ನಾಳ ಪರೋಕ್ಷವಾಗಿ ರಂಭಾಪುರಿ ಸ್ವಾಮೀಜಿಗಳನ್ನು ಲೇವಡಿ ಮಾಡಿದರು.

ವೀರಶೈವ ಲಿಂಗಾಯತರೆಲ್ಲ ಒಗ್ಗೂಡಬೇಕು ಎಂದು ದಾವಣಗೆರೆ ಸಮಾವೇಶದಲ್ಲಿ ಹೇಳಲಾಗಿದೆ. ಆದರೆ, ದಾವಣಗೆರೆಯಲ್ಲಿನ ಸಂಘದ ಬೋರ್ಡ್ ಮೇಲೆಯೇ ವೀರಶೈವ ಲಿಂಗಾಯತ ಎಂದು ಬರೆದಿರಲಿಲ್ಲ. ಧರ್ಮಸ್ಥಳದ ರೀತಿಯಲ್ಲೇ ಕೆಲವರು ಕೂಡಲಸಂಗಮದಲ್ಲಿ ಮಾಡುತ್ತಿದ್ದಾರೆ. ವೈಯಕ್ತಿಕ ಜಗಳಕ್ಕೆ ದೇವಸ್ಥಾನಕ್ಕೆ ಬೀಗ ಹಾಕಿದ್ದಾರೆ. ಜನ ಭಕ್ತಿಯಿಂದ ಮಠಕ್ಕೆ ಕೊಟ್ಟ ಹಣ ದುರ್ಬಳಕೆ ಮಾಡಿಕೊಂಡರೆ ಯಾರೂ ಉದ್ಧಾರವಾಗಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಜಯದಶಮಿ ಸಮೀಪಿಸುತ್ತಿದೆ. ಬಿಜೆಪಿ ರಾಜ್ಯಾಧ್ಯಕ್ಷರ ಘೋಷಣೆ ಮಾಡುತ್ತದೆ. ಒಂದೊಮ್ಮೆ ವಿಜಯೇಂದ್ರನನ್ನು ಮುಂದುವರಿಸಿದರೆ, ಮರುಕ್ಷಣವೇ ಹೊಸ ಪಕ್ಷ ಘೋಷಣೆ ಮಾಡುತ್ತೇನೆ. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಭ್ರಷ್ಟನಿದ್ದಾನೆ ಎಂದು ಹೇಳಿದ್ದೇನೆ. ಇಷ್ಟಾದರೂ ಹೈಕಮಾಂಡ್ ಅವನೇ ಬೇಕು ಎಂದರೆ ನಾನೇನು ಮಾಡಬೇಕು. ಜನರಿಗೆ ಸದ್ಯದ ಎಲ್ಲ ಪಕ್ಷಗಳ ಮೇಲೆ ವಿಶ್ವಾಸವಿಲ್ಲ. ರಾಜಕೀಯ ಶಕ್ತಿ ಅಗತ್ಯವಿದೆ.

- ಬಸನಗೌಡ ಪಾಟೀಲ್ ಯತ್ನಾಳ , ಶಾಸಕ

2 ಲಕ್ಷ ದಾಟಿದ ತಲಾದಾಯ, ಬಿಜೆಪಿಗೆ ಕೇಂದ್ರದ ವರದಿಯಲ್ಲೇ ಉತ್ತರ

ಗ್ಯಾರಂಟಿಯಿಂದ ಕನ್ನಡಿಗರ ಬಾಳಲ್ಲಿ ಬೆಳಕು

ಬೆಂಗಳೂರು: ಕರ್ನಾಟಕ ರಾಜ್ಯವು ಆರ್ಥಿಕ ಪ್ರಗತಿಯಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ. ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳಿಂದ ಸಮಸ್ತ ಕನ್ನಡಿಗರ ಬಾಳಲ್ಲಿ ಬೆಳಕು ಚೆಲ್ಲಿದೆ ಎಂದು ಕರ್ನಾಟಕ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತ ಪ್ರಕಟಣೆ ಹೊರಡಿಸಿರುವ ಅವರು, ಹಣಕಾಸು ಸಚಿವಾಲಯದ ಇತ್ತೀಚಿನ ಅಂಕಿಅಂಶಗಳ ಪ್ರಕಾರ, ಕಳೆದ 10 ವರ್ಷಗಳಲ್ಲಿ ಕರ್ನಾಟಕದ ತಲಾದಾಯವು 1,05,697 ರು.ಗಳಿಂದ 2,04,605 ರು.ಗಳಿಗೆ ಏರಿಕೆ ಕಂಡಿದೆ. ಇದು ಶೇ 93.6 ರಷ್ಟು ಹೆಚ್ಚಳವಾಗಿದ್ದು, ದೇಶದಲ್ಲೇ ಅತಿ ಹೆಚ್ಚು ತಲಾದಾಯ ಹೊಂದಿರುವ ರಾಜ್ಯವಾಗಿ ಹೊರಹೊಮ್ಮಿದೆ. ಕರ್ನಾಟಕ ಸರಕಾರದ ಜನಪ್ರಿಯ ಗ್ಯಾರಂಟಿ ಯೋಜನೆಗಳು ರಾಜ್ಯದ ಆರ್ಥಿಕ ಬೆಳವಣಿಗೆಗೆ ಮತ್ತು ಜನರ ಜೀವನಮಟ್ಟ ಸುಧಾರಣೆಗೆ ಗಣನೀಯ ಕೊಡುಗೆ ನೀಡಿವೆ. ಈ ಯೋಜನೆಗಳ ಮೂಲಕ ನೇರವಾಗಿ ಫಲಾನುಭವಿಗಳ ಖಾತೆಗಳಿಗೆ ಹಣ ವರ್ಗಾವಣೆಯಾಗಿದ್ದು, ಜನರ ಖರೀದಿ ಸಾಮರ್ಥ್ಯ ಹೆಚ್ಚಳಕ್ಕೆ ಕಾರಣವಾಗಿದೆ. ಗೃಹ ಲಕ್ಷ್ಮಿ ಸೇರಿದಂತೆ ಐದು ಗ್ಯಾರಂಟಿ ಯೋಜನೆಗಳಾದ ಶಕ್ತಿ, ಅನ್ನಭಾಗ್ಯ, ಯುವ ನಿಧಿ, ಮತ್ತು ಗೃಹಜ್ಯೋತಿ ಮೂಲಕ ಈವರೆಗೆ ಒಟ್ಟಾರೆಯಾಗಿ 93 ಸಾವಿರ ಕೋಟಿ ರು.ಗಳನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ವರ್ಗಾಯಿಸಲಾಗಿದೆ. ಈ ಯೋಜನೆಗಳು ಸಮಾಜದ ವಿವಿಧ ಸ್ತರಗಳ ಜನರಿಗೆ, ವಿಶೇಷವಾಗಿ ಬಡವರು ಮತ್ತು ಮಧ್ಯಮ ವರ್ಗದವರಿಗೆ ಆರ್ಥಿಕ ಬೆಂಬಲ ನೀಡಿವೆ ಎಂದು ವಿವರಿಸಿದ್ದಾರೆ.

ಹಲವು ಫಲಾನುಭವಿಗಳು ಈ ಉಳಿತಾಯದ ಹಣವನ್ನು ಸ್ವ ಉದ್ಯೋಗಕ್ಕಾಗಿ ಹೂಡಿಕೆ ಮಾಡುತ್ತಿದ್ದಾರೆ. ಸಣ್ಣ ವ್ಯಾಪಾರ, ಕರಕುಶಲ ವಸ್ತುಗಳ ತಯಾರಿಕೆ, ಕೃಷಿ ಪೂರಕ ಚಟುವಟಿಕೆಗಳು ಅಥವಾ ಇತರೆ ಗುಡಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಈ ಹಣವನ್ನು ಬಳಸಿಕೊಳ್ಳುವ ಮೂಲಕ, ಅವರು ಸ್ವಾವಲಂಬಿಗಳಾಗುತ್ತಿದ್ದಾರೆ. ಸರಕಾರದ ಈ ದೂರದೃಷ್ಟಿಯ ಯೋಜನೆಗಳು ಬಡತನ ನಿರ್ಮೂಲನೆ ಮತ್ತು ಆರ್ಥಿಕ ಸಬಲೀಕರಣಕ್ಕೆ ಹೇಗೆ ಪರಿಣಾರಿಯಾಗಿವೆ ಎಂಬುದಕ್ಕೆ ಇದು ಉತ್ತಮ ನಿದರ್ಶನವಾಗಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕದ ಗಣನೀಯ ತಲಾದಾಯ ಹೆಚ್ಚಳವು ರಾಜ್ಯದ ಸಮಗ್ರ ಅಭಿವೃದ್ಧಿ, ವಿಶೇಷವಾಗಿ 2023 ರಲ್ಲಿ ಜಾರಿಗೆ ತಂದ ಜನಕಲ್ಯಾಣ ಗ್ಯಾರಂಟಿ ಯೋಜನೆಗಳ ಯಶಸ್ಸಿನ ಪರಿಣಾಮವಾಗಿದೆ. ರಾಷ್ಟ್ರೀಯ ಸರಾಸರಿ ತಲಾದಾಯ ಹೆಚ್ಚಳಕ್ಕಿಂತ ಕರ್ನಾಟಕದ ಸಾಧನೆ ಗಮನಾರ್ಹವಾಗಿದೆ. ಈ ಮೂಲಕ ಕರ್ನಾಟಕವು ದೇಶದ ಆರ್ಥಿಕ ಪ್ರಗತಿಯಲ್ಲಿ ಮುಂಚೂಣಿಯಲ್ಲಿದೆ ಎಂಬುದನ್ನು ಪುನರುಚ್ಚರಿಸಿದೆ. ನಮ್ಮ ಗ್ಯಾರಂಟಿ ಯೋಜನೆಗಳನ್ನು ಟೀಕಿಸುತ್ತಿರುವ ವಿಪಕ್ಷಗಳಿಗೆ ಇದು ಸರಿಯಾದ ಉತ್ತರ.

- ರಣದೀಪ್ ಸಿಂಗ್ ಸುರ್ಜೇವಾಲ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಶಾಲೆ, ಅಂಗನವಾಡಿಗಳಿಗೆ ರಜೆ ಘೋಷಣೆ

ಉ.ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಭಾರೀ ಮಳೆ

ಕಾರವಾರ/ ಮಂಗಳೂರು: ಭಾರತೀಯ ಹವಾಮಾನ ಇಲಾಖೆಯ ಆರೆಂಜ್ ಅಲರ್ಟ್ ಘೋಷಣೆ ಮತ್ತು ನಿರಂತರ ಮಳೆಯ ಹಿನ್ನೆಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ

ಮತ್ತು ಭಟ್ಕಳ ತಾಲೂಕುಗಳಲ್ಲಿರುವ ಪ್ರಾಥಮಿಕ, ಪ್ರೌಢ ಶಾಲೆಗಳು ಮತ್ತು ಅಂಗನವಾಡಿಗಳಿಗೆ ಗುರುವಾರ ರಜೆ ಘೋಷಿಸಲಾಗಿದೆ. ಮಕ್ಕಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಮುಂಜಾಗ್ರತಾ ಕ್ರಮವಾಗಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಸಮುದ್ರ ತೀರಕ್ಕೆ ತೆರಳದಂತೆ ಎಚ್ಚರಿಕೆ

ಭಾರೀ ಗಾಳಿ-ಮಳೆಯ ಮುನ್ಸೂಚನೆ ಹಿನ್ನೆಲೆಯಲ್ಲಿ ಮಂಗಳೂರು ತಾಲೂಕಿನ ಎಲ್ಲಾ ಅಂಗನವಾಡಿ, ಸರಕಾರಿ, ಅನುದಾನಿತ ಮತ್ತು ಖಾಸಗಿ ಪ್ರಾಥಮಿಕ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜಿಗೆ ಜು.24 ರಂದು ರಜೆ ಘೋಷಿಸಲಾಗಿದೆ. ಸಂಭಾವ್ಯ ಪ್ರವಾಹ, ಭೂಕುಸಿತ ಪ್ರದೇಶಗಳನ್ನು ಗುರುತಿಸಿ, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು, ನೀರು ಇರುವ ತಗ್ಗು ಪ್ರದೇಶ. ಕೆರೆ, ನದಿ ತೀರ ಸಮುದ್ರ ತೀರಕ್ಕೆ ಸಾರ್ವಜನಿಕರು, ಪ್ರವಾಸಿಗರು ತೆರಳದಂತೆ ಜಾಗ್ರತೆ ವಹಿಸಬೇಕು. ಮೀನುಗಾರರು ಸಮುದ್ರಕ್ಕೆ ಮೀನುಗಾರಿಕೆಗೆ ತೆರಳಬಾರದೆಂದು ಸೂಚಿಸಲಾಗಿದೆ.

ಕಾಫಿಪೋಸಾ ಅಡಿ ರನ್ಯಾ ರಾವ್ ಬಂಧನ: ಹೈ ಸಲಹಾ ಮಂಡಳಿ

ಬೆಂಗಳೂರು: ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ಆರೋಪಿಯಾಗಿರುವ ರನ್ಯಾ ರಾವ್ ಅವರನ್ನು ವಿದೇಶಿ ವಿನಿಮ

ಯ ನಿಯಂತ್ರಣ ಮತ್ತು ಕಳ್ಳ ಸಾಗಣೆ ಚಟುವಟಿಕೆಗಳ ತಡೆ ಕಾಯಿದೆ ಅಡಿ ಕಂದಾಯ ಗುಪ್ತಚರ ನಿರ್ದೇಶನಾಲಯ ವಶಕ್ಕೆ ಪಡೆದಿರುವ ಆದೇಶವನ್ನು ಹೈಕೋರ್ಟ್‌ನ ಸಲಹಾ ಮಂಡಳಿಯು ಖಾತರಿಪಡಿಸಿದೆ.

ಕಾಫಿಪೋಸಾ ಕಾಯಿದೆ ಅಡಿ ರನ್ಯಾ ಬಂಧನ ಪ್ರಶ್ನಿಸಿ ಆಕೆಯ ಮಲತಾಯಿ ಎಚ್.ಪಿ.ರೋಹಿಣಿ ಸಲ್ಲಿಸಿರುವ ಹೇಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಅನು ಶಿವರಾಮನ್ ಮತ್ತು ಪಿ.ಮನ್ಮಥ ರಾವ್ ಅವರ ನೇತೃತ್ವದ ವಿಭಾಗೀಯ ಪೀಠ ನಡೆಸಿತು. ರೋಹಿಣಿ ಪ್ರತಿನಿಧಿಸಿದ್ದ ಹಿರಿಯ ವಕೀಲ ಕಿರಣ್ ಜವಳಿ ಅವರು ಹೈ ಕೋರ್ಟ್ ನ ಸಲಹಾ ಮಂಡಳಿಯು ಕಾಫಿ ಪೋಸಾ ಅಡಿ ರನ್ಯಾ ವಶಕ್ಕೆ ಪಡೆದಿರುವುದನ್ನು ಖಾತರಿಪಡಿಸಿದೆ. ಹೀಗಾಗಿ, ಮೆರಿಟ್ ಮೇಲೆ ಅರ್ಜಿ ವಿಚಾರಣೆ ನಡೆಸಬೇಕು ಎಂದರು. ಆಗ ಡಿಆರ್‌ಐ ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ್ ಕಾಮತ್ ಅವರು ಅರ್ಜಿದಾರರು ಈಗಷ್ಟೇ ಮೆಮೊ ನೀಡಿದ್ದಾರೆ. ಇದಕ್ಕೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು ಎಂದರು.

ಭೀಕರ ಅಪಘಾತ: ಇಬ್ಬರು ಸಾವು

ಚಿಕ್ಕಬಳ್ಳಾಪುರ: ಸ್ಕೂಟಿ ಮತ್ತು ಲಾರಿ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಐದು ತಿಂಗಳ ಗರ್ಭಿಣಿ ಮಹಿಳೆ ಮತ್ತು ಆಕೆಯ ಪತಿ ಮೃತಪಟ್ಟ ಘಟನೆ ಗೌರಿಬಿದನೂರಿನಲ್ಲಿ ನಡೆದಿದೆ. ಪತಿ ಯಾಸಿನ್ ಖಾನ್ (45) ಹಾಗೂ ಪತಿ ನೂರಿ (35) ಮೃತ ದಂಪತಿ. ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕಿನ, ಕುಡುಮಲಕುಂಟೆಯಲ್ಲಿ ಮಂಗಳವಾರ ರಾತ್ರಿ ಘಟನೆ ನಡೆದಿದೆ. ಸುದ್ದಿ ತಿಳಿದು ಘಟನಾ ಸ್ಥಳಕ್ಕೆ ಬಂದ ಗೌರಿಬಿದನೂರು ಗ್ರಾಮಾಂತರ ಠಾಣಾ ಪೊಲೀಸರು ಪರಿಶೀಲನೆ ನಡೆಸಿದರು. ಸಂಬಂಧಿಕರ ಕಾರ್ಯಕ್ರಮ ಮುಗಿಸಿ ಮನೆಗೆ ಬರುವಾಗ ದುರ್ಘಟನೆ ಸಂಭವಿಸಿದೆ.

ಕೌನ್ಸೆಲಿಂಗ್ ಮೂಲಕ ಗ್ರಾಪಂ ವರ್ಗಾವಣೆ ಪ್ರಕ್ರಿಯೆ ಆರಂಭ

ಬೆಂಗಳೂರು: ರಾಜ್ಯದಲ್ಲಿ ಮೊದಲ ಬಾರಿಗೆ ರಾಜ್ಯದ 31 ಜಿಲ್ಲೆಗಳ ಗ್ರಾಮ ಪಂಚಾಯತಿಗಳ ಕಾರ್ಯದರ್ಶಿ ಗ್ರೇಡ್- 1 ಮತ್ತು ಗ್ರೇಡ್-2 ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ

ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ಕೈಗೊಳ್ಳುವ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಕುರಿತ ಪ್ರಕಟಣೆ ಹೊರಡಿಸಿರುವ ಅವರು, ಪ್ರಸ್ತಕ ಸಾಲಿನ ಆಯವ್ಯಯ ಘೋಷಣೆಯಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಜು.22 ರಿಂದ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಪ್ರಕ್ರಿಯೆ ಆರಂಭಿಸಿದೆ. ಕೌನ್ಸೆಲಿಂಗ್ ವರ್ಗಾವಣೆಗೆ ಅರ್ಜಿ ಸಲ್ಲಿಸಿದ ನೌಕರರುಗಳಿಗೆ ಆನ್ ಲೈನ್ ಮೂಲಕ ತಮ್ಮ ಆದ್ಯತೆಯ ಸ್ಥಳ ಆಯ್ಕೆ ಮಾಡುವ ಅವಕಾಶ ಇರಲಿದೆ. ಕನಿಷ್ಠ ಮೂರು ವರ್ಷ ಸೇವೆ ಸಲ್ಲಿಸಿದ ನೌಕರರು ವರ್ಗಾವಣೆಗೆ ಅರ್ಹರಾಗಿದ್ದು, ವಿಶೇಷ ಚೇತನರು ಹಾಗೂ ಗಂಭೀರ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ನಿಯಮಗಳಲ್ಲಿ ವಿನಾಯತಿ ನೀಡಲಾಗಿದೆ. 31 ಜಿಲ್ಲೆಗಳಿಂದ ಒಟ್ಟು 2697 ನೌಕರರು ವರ್ಗಾವಣೆಗಾಗಿ ಅರ್ಜಿಗಳು ಸಲ್ಲಿಸಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಕರ್ನಾಟಕ ಪಂಚಾಯತ್ ರಾಜ್ ಇಲಾಖೆಯ ಆಯುಕ್ತೆ ಡಾ.ಅರುಂಧತಿ ಚಂದ್ರಶೇಖರ್ ಅಂತರ ಜಿಲ್ಲೆ ವರ್ಗಾವಣೆಗೆ ಅರ್ಹರಿರುವ ನೌಕರರ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಸಿ ಅವರ ಆಯ್ಕೆಯ ಜಿಲ್ಲೆಗಳಿಗೆ ವರ್ಗಾವಣೆ ಆದೇಶ ನೀಡುವ ಮೂಲಕ ಚಾಲನೆ ನೀಡಿದರು.

ಜಿಪಂ ಹಂತದಲ್ಲಿ ವರ್ಗಾವಣೆ

ನೌಕರರು ಸಲ್ಲಿಸಿದ ಅರ್ಜಿ, ಸ್ಥಳದ ಆಯ್ಕೆಗಳನ್ನು ಪರಿಗಣಿಸಿ ಆನ್ ಲೈನ್ ಮೂಲಕ ಕೌನ್ಸೆಲಿಂಗ್ ನಡೆಸಿ ಜಿಲ್ಲಾ ಪಂಚಾಯಿತಿ ಹಂತದಲ್ಲಿ ವರ್ಗಾವಣೆ ಮಾಡಲಾಗುತ್ತದೆ. ಮೊದಲ ಹಂತದಲ್ಲಿ ವಿಶೇಷ ಪ್ರಕರಣಗಳ ಕೌನ್ಸೆಲಿಂಗ್ ಜು.24ರಂದು ನಡೆಸಲಾಗುವುದು. ಜು.25 ರಂದು ಎರಡನೆಯ ಹಂತದಲ್ಲಿ ಸ್ಥಳ ನಿರೀಕ್ಷಣೆಯಲ್ಲಿರುವ ಮತ್ತು ಕಡ್ಡಾಯ ವರ್ಗಾವಣೆ ಪ್ರಕರಣಗಳ ಕೌನ್ಸೆಲಿಂಗ್, ಹಾಗೂ ಜು.28 ರಂದು ಸಾಮಾನ್ಯ ಕೋರಿಕೆ ವರ್ಗಾವಣೆ ಕೌನ್ಸೆಲಿಂಗ್ ನಡೆಯುವುದು. ಕನಿಷ್ಠ ಸೇವಾವಧಿ ಪೂರೈಸಿರುವ ನೌಕರರಿಗೆ ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ವರ್ಗಾ ವಣೆ ನಡೆಸಿ ಆಡಳಿತದಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳುವ ಜತೆಗೆ ದಕ್ಷತೆ ಹೆಚ್ಚಿಸುವಲ್ಲಿ ಇದು ಸಹ ಕಾರಿಯಾಗುತ್ತದೆ ಎಂದು ಸಚಿವರು ತಿಳಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಸೈಬರ್ ವಂಚಕರನ್ನು ಶಿಕ್ಷಿಸಿ

ಮನಿ ಲಾಂಡರಿಂಗ್ ಆರೋಪದ ಹೆಸರಲ್ಲಿ ಕರೆ ಮಾಡಿದ ಸೈಬರ್ ವಂಚಕರು ಡಿಜಿಟಲ್ ಬಂಧನಕ್ಕೊಳಪಡಿಸಿ ದೈಹಿಕ ತಪಾಸಣೆ ನೆಪದಲ್ಲಿ ಮಹಿಳೆಯರಿಬ್ಬರನ್ನು ವಿವಸ್ತ್ರಗೊಳಿಸಿ ಕಿರುಕುಳ ನೀಡಿರುವ ಹೇಯ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ನಮ್ಮ ನೆಲದ ಕಾನೂನಿನಲ್ಲಿ ಡಿಜಿಟಲ್ ಅರೆಸ್ಟ್ ಎನ್ನುವ ಪದವೇ ಇಲ್ಲ ಎಂದು ಪೊಲೀಸರು ಹಲವು ಬಾರಿ ಸ್ಪಷ್ಟನೆ ನೀಡಿದರೂ ವಿದ್ಯಾವಂತ ವರ್ಗದವರೇ ಈ ಸಂಚಿಗೆ ಪದೇಪದೆ ಬಲಿಯಾಗುತ್ತಿದ್ದಾರೆ. ವಿಶೇಷ ಎಂದರೆ ಥಾಯ್ಲೆಂಡ್‌ನಿಂದ ಸ್ನೇಹಿತೆಯ ಮನೆಗೆ ಬಂದ ಮಹಿಳೆಗೆ ಈ ಕರೆ ಬಂದಿದೆ. ಆರಂಭದಲ್ಲೇ ವಂಚಕರು 58 ಸಾವಿರ ರು.ಗಳನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡಿದ್ದಾರೆ. ಈ ಹಿಂದೆಯೂ ವಿದೇಶದಿಂದ ಬಂದ ಹಲವರಿಗೆ ಈ ರೀತಿಯ ಕರೆ ಬಂದಿದೆ. ಅಂದರೆ ಗ್ರಾಹಕರ ವಿಮಾನ ಯಾನದ ಮಾಹಿತಿ ವಂಚಕರಿಗೆ ಸೋರಿಕೆಯಾಗುತ್ತಿರುವುದು ಸ್ಪಷ್ಟ. ಈ ಬಗ್ಗೆ ನಮ್ಮ ತನಿಖಾ ಸಂಸ್ಥೆಗಳು ಕಣ್ಣಿಡಬೇಕಾಗಿದೆ. ಲೋಕಸಭೆಯಲ್ಲಿ ಸರಕಾರವು ಬಿಡುಗಡೆ ಮಾಡಿದ ಸೈಬರ್ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದ ಅಂಕಿ ಅಂಶಗಳು ಆತಂಕ ಸೃಷ್ಟಿಸುತ್ತಿವೆ. ಜುಲೈ 22ರಂದು ಗೃಹ ವ್ಯವಹಾರಗಳ ರಾಜ್ಯ ಸಚಿವ ಬಂಡಿ ಸಂಜಯ್ ಕುಮಾರ್ ಬಿಡುಗಡೆ ಮಾಡಿರುವ ಮಾಹಿತಿ ಪ್ರಕಾರ, 2024-25ರ ಆರ್ಥಿಕ ವರ್ಷದಲ್ಲಿ ದೇಶಾದ್ಯಂತ ಒಟ್ಟು 22,845.73 ಕೋಟಿ ರೂ. ಸೈಬರ್ ವಂಚನೆ ಮಾಡಿರುವುದು ಬಯಲಾಗಿದೆ. ಇದು ಕಳೆದ ಸಾಲಿಗಿಂತ ಸುಮಾರು 206 ಪ್ರತಿಶತ ಹೆಚ್ಚು. ಅಂದರೆ 2023- 2023ರಲ್ಲಿ, ಈ ನಷ್ಟವು 7,465.18 ಕೋಟಿ ರೂ.ಗಳಷ್ಟಿತ್ತು. ಸೈಬರ್ ವಂಚನೆ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗುವವರು ತೀರಾ ಕಡಿಮೆ. ಹೀಗಾಗಿ ದೇಶದ ನಾಗರಿಕರು ಕಷ್ಟಪಟ್ಟು ದುಡಿದ ಹಣವನ್ನು ಯಾವುದೋ ದೇಶದ ಮೂಲೆಯಲ್ಲಿ ಕುಳಿತವರು ಲಪಟಾಯಿಸುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರಕಾರ ಆನ್‌ಲೈನ್ ವಂಚನೆಯನ್ನು ರಾಷ್ಟ್ರದ್ರೋಹ ಎಂದು ಪರಿಗಣಿಸಿ ಗಂಭೀರ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಈ ಪಿಡುಗನ್ನು ದೂರ ಮಾಡಲು ಸಾಧ್ಯವಿಲ್ಲ.

ಸೊಂಪಾದಕೀಯ

ನಿಮಿಷಗಣನೆ ಆರಂಭ

ಈ ಪ್ರಪಂಚದಲ್ಲಿ ಏನೇ ದೇಶ, ಸರಕಾರ, ಕಾನೂನು ಅಂತ ಇದ್ದರೂ ಕೊನೆಗೆ ಧರ್ಮ ಮತ್ತು ದೇವರಿಗೆ ಬೆಲೆ ಜಾಸ್ತಿ ಅನ್ನೋದು ಮತ್ತೊಮ್ಮೆ ಪ್ರೂವ್ ಆಗಿದೆ. ಇಡೀ ಪ್ರಪಂಚದಾದ್ಯಂತ ಸುದ್ದಿಯಾಗಿದ್ದ ನರ್ಸ್ ನಿಮಿಷ ಪ್ರಿಯಾ ಕೇಸ್ ಕೊನೆಗೂ ಸುಖಾಂತ್ಯ ಕಾಣುವ ಹಂತಕ್ಕೆ ಬಂದಿದೆ. ಕೊಲೆ ಆರೋಪದ ಹಿನ್ನೆಲೆಯಲ್ಲಿ ಕೇರಳದ ನರ್ಸ್ ನಿಮಿಷ ಪ್ರಿಯಾ ಅವರಿಗೆ ಪ್ರಿಯವಾದ ಸುದ್ದಿ ಬಂದಿದೆ. ಆಕೆಗೆ ಯೆಮೆನ್‌ನಲ್ಲಿ ನೀಡಲಾದ ಗಲ್ಲುಶಿಕ್ಷೆಯನ್ನು ರದ್ದು ಪಡಿಸಲಾಗಿದೆ ಎಂದು ಕ್ರಿಶ್ಚಿಯನ್ ಧಾರ್ಮಿಕ ಮುಖಂಡ ಹಾಗೂ ಸಂಧಾನಕಾರ ಡಾ. ಕೆ. ಎ. ಪಾಲ್ ಹೇಳಿದ್ದಾರೆ. ಅದಹಾಗೆ ಇದರಲ್ಲಿ ಕ್ರಿಶ್ಚಿಯನ್ ಅಲ್ಲದೆ ಮುಸ್ಲಿಂ ಧರ್ಮ ಗುರುಗಳ ಪಾಲೂ ಇದೆ. ಇತ್ತೀಚೆಗೆ ಇನ್ನೇನು ನಾಳೆ ಆಕೆಯನ್ನು ಗಲ್ಲಿಗೇರಿಸುತ್ತಾರೆ ಎನ್ನುವಾಗ ಮುಸ್ಲಿಂ ಧಾರ್ಮಿಕ ಮುಖಂಡರೊಬ್ಬರು ನಡೆಸಿದ ಸಂಧಾನದ ಫಲವಾಗಿ ನಿಮಿಷಪ್ರಿಯಾ ಅವರ ಗಲ್ಲು ಶಿಕ್ಷೆ ಮುಂದೂಡಲಾಗಿತ್ತು. ಹಾಗಾಗಿ ನೇಣಿಗೇರಲು ನಿಮಿಷಗಣನೆ ಮಾಡುತ್ತಿದ್ದ ನಿಮಿಷಪ್ರಿಯಾ ಅವರಿಗೆ ರಿಲೀಫ್ ಸಿಕ್ಕಿತ್ತು. ಈಗ ಗಲ್ಲುಶಿಕ್ಷೆ ರದ್ದಾಗಿರುವ ಸುದ್ದಿ ಬಂದಿದೆ. ಈಗ ಸುದೀರ್ಘ ಚರ್ಚೆಯ ನಂತರ ಆಕೆಯ ಗಲ್ಲುಶಿಕ್ಷೆ ರದ್ದಾಗಿದೆ. ಅತಿ ಶೀಘ್ರದಲ್ಲೇ ನಿಮಿಷಪ್ರಿಯಾ ಭಾರತಕ್ಕೆ ಮರಳಲಿದ್ದಾರೆ. ಆಕೆಯ ಸುರಕ್ಷಿತ ವರ್ಗಾವಣೆಗೆ ಸಕಲ ಸಿದ್ಧತೆಗಳು ನಡೆಯುತ್ತಿವೆ ಅನ್ನೋ ಸುದ್ದಿ ಬಂದಿದೆ. ಒಂದು ಕಡೆ ಆಕೆ ಪದೇ ಪದೇ ಮಾಫಿಗೆ ಮನವಿ ಮಾಡುತ್ತಿದ್ದರೂ ಕೊಲೆಯಾದವರ ಕುಟುಂಬ ಯಾವುದೇ ಆಮಿಷಕ್ಕೆ ಬಗ್ಗದೆ, ನಮಗೆ ಹಣ ಬೇಡ ಆಕೆಗೆ ಗಲ್ಲು ಶಿಕ್ಷೆ ಆಗಲೇ ಬೇಕು ಅಂತ ಪಟ್ಟು ಹಿಡಿದಿತ್ತು. ಭಾರತದಂಥ ಭಾರತ ದೇಶದ ಸರಕಾರವೇ ನಾವು ಮಾಡೋದನ್ನೆಲ್ಲಾ ಮಾಡಿದ್ದೇವೆ, ನಮ್ಮ ಕೈಲಿ ಇನ್ನೇನೂ ಮಾಡೋಕಾಗಲ್ಲ ಅಂತ ಕೈ ಚೆಲ್ಲಿ ಕುಳಿತಿತ್ತು. ಆದರೆ ಈಗ ಧಾರ್ಮಿಕ ಮುಖಂಡರ ಮಾತುಕತೆಯ ಪ್ರಭಾವದಿಂದ ಪ್ರಕರಣ ಕೊನೆಗೂ ಇತ್ಯರ್ಥಗೊಂಡು ಹಂತಕಿ ಎಂಬ ಪಟ್ಟ ಕಳೆದುಕೊಳ್ಳುವ ಹಂತಕ್ಕೆ ನಿಮಿಷಪ್ರಿಯಾ ಬಂದಿದ್ದಾರೆ. ಒಟ್ಟಾರೆ ತನ್ನ ಜೀವನ ಇನ್ನೇನು ಮುಗೀತು ಎಂದುಕೊಂಡಿದ್ದ ಅವರಿಗೆ ಇನ್ನೂ ಬದುಕು ಮಿಕ್ಕಿದೆ ಅಂತ ಅರಿವಾಗಿದೆ. ನಿಮಿಷ ಪ್ರಿಯಾ ಗೆ ಇದು ಮರುಜನ್ಮ ಅಂತಲೇ ಹೇಳಬಹುದು.

ಸಂಪಾದಕರ ಸದ್ಯಶೋಧನೆ

ಇದೊಂದು ಪುಟ್ಟ ಪ್ರಪಂಚ

ವಿಮಾನ ನಿಲ್ದಾಣವೇ ಒಂದು ಪುಟ್ಟ ಜಗತ್ತು' (An Airport is a small World in Itself) ಎಂದು ಹೇಳಿರುವುದನ್ನು ಕೇಳಿರಬಹುದು. ಇದು ಒಂದು ಅರ್ಥದಲ್ಲಿ ನಿಜ. ಇದು ಕೇವಲ ಪ್ರಯಾಣಿಕರು ಬಂದು ಹೋಗುವ ಸ್ಥಳವಲ್ಲ, ಬದಲಾಗಿ ತನ್ನದೇ ಆದ ಆರ್ಥಿಕತೆ, ಸಂಸ್ಕೃತಿ, ನಿಯಮ ಮತ್ತು ನಿರಂತರ ಚಲನೆಯನ್ನು ಹೊಂದಿರುವ ಒಂದು ಸ್ವತಂತ್ರ ವ್ಯವಸ್ಥೆಯಂತೆ, ಪರ್ಯಾಯ ಸರಕಾರದಂತೆ ಕಾರ್ಯನಿರ್ವಹಿಸುತ್ತದೆ. ಇಲ್ಲಿ ನಡೆಯುವ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಇದು ನಿಜಕ್ಕೂ ಒಂದು ಪುಟ್ಟ ಜಗತ್ತೇ ಅನ್ನಿಸುತ್ತದೆ. ವಿಮಾನ ನಿಲ್ದಾಣಗಳು ಜಾಗತಿಕ ಸಂಪರ್ಕದ ಕೇಂದ್ರಬಿಂದುಗಳಾಗಿವೆ. ಇಲ್ಲಿ ಜಗತ್ತಿನ ನಾನಾ ಮೂಲೆಗಳಿಂದ ಬರುವ ಜನರು ಭೇಟಿಯಾಗುತ್ತಾರೆ. ವಿವಿಧ ದೇಶಗಳ ಪ್ರಯಾಣಿಕರು, ವಿವಿಧ ಭಾಷೆಗಳನ್ನು ಮಾತನಾಡುವವರು, ವಿಭಿನ್ನ ಉಡುಪುಗಳನ್ನು ಧರಿಸಿದವರು, ಬೇರೆ ಬೇರೆ ಸಂಸ್ಕೃತಿಗಳ ಹಿನ್ನೆಲೆಯುಳ್ಳವರು ಇಲ್ಲಿ ಒಂದೆಡೆ ಸೇರುತ್ತಾರೆ. ವ್ಯಾಪಾರಕ್ಕಾಗಿ ಬಂದವರು, ಪ್ರವಾಸಕ್ಕೆ ಹೊರಟವರು, ವೈಯಕ್ತಿಕ ಕೆಲಸ ನಿಮಿತ್ತ ತೆರಳುವವರು, ವೈದ್ಯಕೀಯ ಚಿಕಿತ್ಸೆಗಾಗಿ ಬಂದವರು, ಕಚೇರಿ ಕೆಲಸದ ನಿಮಿತ್ತ ಸಂಚರಿಸುವವರು - ಹೀಗೆ ಪ್ರತಿಯೊಬ್ಬರಿಗೂ ತಮ್ಮದೇ ಆದ ಕಥೆಗಳಿರುತ್ತವೆ. ಈ ವೈವಿಧ್ಯವು ವಿಮಾನ ನಿಲ್ದಾಣಕ್ಕೆ ಒಂದು ಅನನ್ಯವಾದ, ಜಾಗತಿಕ ಸ್ಪರ್ಶವನ್ನು ನೀಡಿದೆ. ವಿಮಾನ ನಿಲ್ದಾಣವು ಬೃಹತ್ ಪ್ರಮಾಣದ ಆರ್ಥಿಕ ಚಟುವಟಿಕೆಗಳ ಕೇಂದ್ರವೂ ಹೌದು. ವಿಮಾನ ನಿಲ್ದಾಣಗಳು ಸಾವಿರಾರು ಜನರಿಗೆ ನೇರವಾಗಿ ಮತ್ತು ಪರೋಕ್ಷವಾಗಿ ಉದ್ಯೋಗಗಳನ್ನು ಒದಗಿಸುತ್ತವೆ - ಪೈಲಟ್‌ಗಳು, ಕ್ಯಾಬಿನ್ ಸಿಬ್ಬಂದಿ, ಏರ್ ಟ್ರಾಫಿಕ್ ಕಂಟ್ರೋಲರ್‌ಗಳು, ಭದ್ರತಾ ಸಿಬ್ಬಂದಿ, ಕಸ್ಟಮ್ಸ್ ಅಧಿಕಾರಿಗಳು, ಲಗೇಜ್ ನಿರ್ವಾಹಕರು, ಸ್ವಚ್ಛತಾ ಸಿಬ್ಬಂದಿ, ಎಂಜಿನಿಯರ್‌ಗಳು, ನಿರ್ವಹಣಾ ಸಿಬ್ಬಂದಿ, ವಿಮಾನಯಾನ ಕಂಪನಿಗಳ ಉದ್ಯೋಗಿಗಳು, ಚಿಲ್ಲರೆ ವ್ಯಾಪಾರಿಗಳು, ಆಹಾರ ಸೇವಾ ಸಿಬ್ಬಂದಿ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಟರ್ಮಿನಲ್‌ಗಳ ಒಳಗೆ ಡ್ಯೂಟಿ ಫ್ರೀ ಅಂಗಡಿಗಳು, ರೆಸ್ಟೋರೆಂಟ್‌ಗಳು, ಕೆಫೆಗಳು, ಪುಸ್ತಕದ ಅಂಗಡಿಗಳು, ಫ್ಯಾಷನ್ ಬ್ರ್ಯಾಂಡ್‌ಗಳು, ಹಣ ವಿನಿಮಯ ಕೇಂದ್ರಗಳು, ಬ್ಯಾಂಕುಗಳು, ಹೋಟೆಲ್‌ಗಳು ಮತ್ತು ವೈದ್ಯಕೀಯ ಸೇವೆಗಳು ಸೇರಿದಂತೆ ಎಲ್ಲ ರೀತಿಯ ವ್ಯವಹಾರಗಳು ಕಾರ್ಯನಿರ್ವಹಿಸುತ್ತವೆ. ಇದು ಒಂದು ದೊಡ್ಡ ಶಾಪಿಂಗ್ ಮಾಲ್ ಅಥವಾ ನಗರದ ವಾಣಿಜ್ಯ ಪ್ರದೇಶದಂತೆಯೇ ಇರುತ್ತದೆ. ವಿಮಾನ ನಿಲ್ದಾಣಗಳು ಕೇವಲ ಪ್ರಯಾಣಿಕರನ್ನು ಮಾತ್ರವಲ್ಲದೇ, ಜಾಗತಿಕ ವ್ಯಾಪಾರದ ಮಹತ್ವದ ಭಾಗವಾಗಿರುವ ಸರಕುಗಳನ್ನು (cargo) ನಿರಂತರವಾಗಿ ನಿರ್ವಹಿಸುತ್ತವೆ. ಔಷಧಗಳು, ಎಲೆಕ್ಟ್ರಾನಿಕ್ಸ್, ಹೂವುಗಳು, ದುಬಾರಿ ವಸ್ತುಗಳು - ಹೀಗೆ ಎಲ್ಲವೂ ಇಲ್ಲಿಂದಲೇ ವಿಶ್ವದಾದ್ಯಂತ ಸಾಗುತ್ತವೆ. ವಿಮಾನ ನಿಲ್ದಾಣದ ಕಾರ್ಯಾಚರಣೆಯು ಅತ್ಯಂತ ಸಂಕೀರ್ಣವಾಗಿ ಮತ್ತು ತಾಂತ್ರಿಕವಾಗಿ ನಡೆಯುವುದು ವಿಶೇಷ. ಇದು ವಿಮಾನಗಳ ಸುರಕ್ಷಿತ ಹಾರಾಟ ಮತ್ತು ಇಳಿಯುವಿಕೆಯನ್ನು ಖಚಿತಪಡಿಸುವ ಅತ್ಯಂತ ನಿರ್ಣಾಯಕ ವಿಭಾಗ. ಕ್ಷಣಕ್ಷಣದ ನಿರ್ಧಾರಗಳು ಮತ್ತು ನಿರಂತರ ಸಂವಹನದಿಂದ ವಿಮಾನಗಳ ಸುಗಮ ಚಲನೆಯನ್ನು ಇದು ಖಚಿತಪಡಿಸುತ್ತದೆ. ಅತ್ಯಾಧುನಿಕ ಸ್ಕ್ಯಾನರ್‌ಗಳು, ಸಿಸಿಟಿವಿ ಕ್ಯಾಮೆರಾಗಳು, ಬಯೋಮೆಟ್ರಿಕ್ ವ್ಯವಸ್ಥೆಗಳು ಮತ್ತು ತರಬೇತಿ ಪಡೆದ ಸಿಬ್ಬಂದಿಯೊಂದಿಗೆ ವಿಮಾನ ನಿಲ್ದಾಣಗಳು ಅತಿ ಹೆಚ್ಚು ಭದ್ರತೆಯನ್ನು ಹೊಂದಿರುತ್ತವೆ. ಸಾವಿರಾರು ಬ್ಯಾಗ್‌ಗಳನ್ನು ವಿಮಾನಗಳಿಗೆ ಸರಿಯಾಗಿ ತಲುಪಿಸುವುದು ಮತ್ತು ಆಗಮಿಸಿದ ಬ್ಯಾಗ್‌ಗಳನ್ನು ಪ್ರಯಾಣಿಕರಿಗೆ ಒದಗಿಸುವುದು ಅತ್ಯಂತ ಜಟಿಲವಾದ ಯಾಂತ್ರಿಕ ವ್ಯವಸ್ಥೆಯಿಂದ ಕೂಡಿರುತ್ತದೆ. ವಿಮಾನಗಳ ಆಗಮನ/ನಿರ್ಗಮನದ ಸಮಯ, ಗೇಟ್ ಬದಲಾವಣೆಗಳು, ವಿಳಂಬಗಳ ಬಗ್ಗೆ ನಿರಂತರ ಮಾಹಿತಿ ನೀಡಲು ದೊಡ್ಡ ಪರದೆಗಳು ಮತ್ತು ಧ್ವನಿ ಘೋಷಣೆಗಳ ವ್ಯವಸ್ಥೆಯು ಇರುತ್ತದೆ. ವಿಮಾನ ನಿಲ್ದಾಣಗಳು ಮನುಷ್ಯನ ಅಸಂಖ್ಯ ಭಾವನೆಗಳ ಒಂದು ವಿಶಿಷ್ಟ ಸಂಗಮ ಸ್ಥಳ. ವರ್ಷಗಳ ನಂತರ ಭೇಟಿಯಾಗುವ ಕುಟುಂಬ ಸದಸ್ಯರು, ಸ್ನೇಹಿತರು, ಪ್ರೀತಿಪಾತ್ರರ ಸಂತೋಷದ ಮರುಮಿಲನಗಳಿಗೆ ವಿಮಾನ ನಿಲ್ದಾಣಗಳು ಸಾಕ್ಷಿಯಾಗುತ್ತವೆ. ಪ್ರೀತಿಪಾತ್ರರನ್ನು ಕಳುಹಿಸಿಕೊಡುವಾಗ, ವಿದೇಶಕ್ಕೆ ಅಥವಾ ದೂರದ ಪ್ರದೇಶಕ್ಕೆ ಹೋಗುವಾಗ ಉಂಟಾಗುವ ದುಃಖ ಮತ್ತು ವಿರಹದ ಕ್ಷಣಗಳಿಗೂ ಇದು ಸಾಕ್ಷಿಯಾಗುತ್ತದೆ. ಹೊಸ ಸಾಹಸಕ್ಕೆ ಹೊರಟವರ, ರಜಾದಿನಗಳನ್ನು ಕಳೆಯಲು ಹೊರಟವರ, ಅಥವಾ ಹೊಸ ಅವಕಾಶಗಳನ್ನು ಅರಸಿ ಹೊರಟವರ ಉತ್ಸಾಹ ಮತ್ತು ನಿರೀಕ್ಷೆಗಳು ಇಲ್ಲಿ ಗೋಚರವಾಗುತ್ತವೆ. ವಿಮಾನ ವಿಳಂಬವಾದಾಗ, ಸಂಪರ್ಕ ವಿಮಾನ ತಪ್ಪಿಹೋದಾಗ ಅಥವಾ ಭದ್ರತಾ ತಪಾಸಣೆಯ ಒತ್ತಡದಿಂದ ಉಂಟಾಗುವ ಆತಂಕಗಳನ್ನೂ ಇಲ್ಲಿ ಕಾಣಬಹುದು.

ಕಣ್ಣಿಗೆ ಕಾಣದ ಮೌಲ್ಯಗಳೇ ಸಂಸ್ಥೆಗಳ ನಡೆಸುವ ತೋರುದೀಪ !

ಮೌಲ್ಯಗಳ ವೈಶಿಷ್ಟ್ಯವೆಂದರೆ ಅವು ಕಣ್ಣಿಗೆ ಕಾಣುವುದಿಲ್ಲ. ಆದರೆ ಎಲ್ಲೆಡೆಯೂ ನೆಲೆಸಿರುತ್ತದೆ. ಕಣ್ಣಿಗೆ ಗೋಚರಿಸುವುದಿಲ್ಲ ಎಂದ ಮಾತ್ರಕ್ಕೆ ಅದು ಇಲ್ಲವೆಂದಲ್ಲ. ಮೌಲ್ಯಗಳು ಕಣ್ಣಿಗೆ ಕಾಣದಿದ್ದರೂ, ಯಾವ ಸಂಘ-ಸಂಸ್ಥೆ ಅಥವಾ ಸಮಾಜದಲ್ಲಿ ಅವು ಇಲ್ಲದಿದ್ದರೆ ತಕ್ಷಣ ಗೊತ್ತಾಗುತ್ತದೆ. ಬಹುತೇಕ ಸಂಸ್ಥೆಗಳನ್ನು ಮುನ್ನಡೆಸುವುದು ಮೌಲ್ಯಗಳು. ಇವುಗಳನ್ನು ಪ್ರಬಲವಾಗಿ ಪ್ರತಿಪಾದಿಸುವವನೇ ನಾಯಕ. ಮೌಲ್ಯಗಳೇ ಧರ್ಮ ಎಂದು ಭಾವಿಸುವವನೇ ನಿಜವಾದ ನಾಯಕ.

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ಹಿಂದುಸ್ತಾನ್ ಲಿವರ್ ಕಂಪನಿಯ ಮಾಜಿ ಅಧ್ಯಕ್ಷ ಎಸ್.ಎಂ. ದತ್ತಾ ಯಾವತ್ತೂ ಒಂದು ಮಾತನ್ನು ಹೇಳುತ್ತಿದ್ದರು- 'ಮಾನವೀಯ ಮೌಲ್ಯಗಳೇ ನಮ್ಮ ಸಂಸ್ಥೆಯ ಧರ್ಮ. ಇಂಥ ಮೌಲ್ಯಗಳು ಮಾತ್ರ ಯಾವುದೇ ಸಂಸ್ಥೆಯ ಅಭಿವೃದ್ಧಿಗೆ ಪ್ರೇರಕ.' ದೈನಂದಿನ ಗೃಹ ಬಳಕೆಯ ವಸ್ತುಗಳನ್ನು ಉತ್ಪಾದಿಸುವುದರಲ್ಲಿ ದೇಶದಲ್ಲಿಯೇ ಅಗ್ರಪಂಕ್ತಿಯಲ್ಲಿರುವ ಈ ಸಂಸ್ಥೆಯ ತಳಹದಿ ಮಾನವೀಯ ಮೌಲ್ಯಗಳಿಗೆ ಅದು ನೀಡುವ ಪ್ರಾಮುಖ್ಯವನ್ನು ಆಧರಿಸಿದೆ.

ಯಾವುದೇ ಮಾನವ ಸಮುದಾಯದ ಅದೃಶ ಸಂಪತ್ತೆಂದರೆ ಮೌಲ್ಯಗಳು. ಅದು ಸಂಸ್ಥೆಯಾಗಿರಬಹುದು, ಸಾಮಾಜಿಕ ಸಂಘಟನೆಯಿರಬಹುದು ಅಥವಾ ದೇಶವಿರಬಹುದು ಅವುಗಳಿಗೆ ಮೌಲ್ಯಗಳೇ ಮುಖ್ಯ. ಮೌಲ್ಯಗಳಲ್ಲಿ ಸ್ವಲ್ಪ ಬದಲಾವಣೆಯಾದರೆ ಅಥವಾ ಮೌಲ್ಯಗಳಲ್ಲಿ ತುಸು ಏರುಪೇರಾದರೆ ಸರ್ವತ್ರ ಅದರ ಪರಿಣಾಮ ಕಂಡುಬರುತ್ತದೆ. ಫ್ರೆಂಚ್ ಕ್ರಾಂತಿ ಇರಬಹುದು, ಅಮೆರಿಕದ ನಾಗರಿಕ ಹಕ್ಕುಗಳ ಚಳವಳಿ ಇರಬಹುದು, ಬ್ರಿಟನ್‌ನ ಕೈಗಾರಿಕಾ ಕ್ರಾಂತಿ ಇರಬಹುದು, ಚೀನಾದ ಕಮ್ಯುನಿಷ್ಟ್ ಕ್ರಾಂತಿ ಇರಬಹುದು, ಅವುಗಳೆಲ್ಲ ಭಾರಿ ಪ್ರಮಾಣದ ಬದಲಾವಣೆಗೆ ಕಾರಣವಾದವು. ಇದರಿಂದ ಮಾನವ ನಾಗರಿಕತೆ ಮೇಲೆ ಸಹ ತೀವ್ರ ಪರಿಣಾಮ ಉಂಟಾಯಿತು. ಯಾವುದೇ ದೇಶದ ಚರಿತ್ರೆಯನ್ನು ನೋಡಿದರೆ ಅಲ್ಲಿ ಉಂಟಾದ ಬದಲಾವಣೆಗಳ ಹಿಂದೆ ಮೌಲ್ಯಗಳಾದ ಪರಿವರ್ತನೆಯ ಒಳಸುಳಿಯನ್ನು ಗುರುತಿಸಬಹುದಾಗಿದೆ. ಸೋವಿಯತ್ ರಷ್ಯಾದ ಮಾಜಿ ಅಧ್ಯಕ್ಷ ಮಿಖಾಯಿಲ್ ಗೋರ್ಬಚೆವ್ ಅವರ ಮಾತು ಈ ಸಂದರ್ಭದಲ್ಲಿ ಪ್ರಸ್ತುತ ಮಾನವ ಜನಾಂಗದ ಇತಿಹಾಸವೆಂದರೆ ಅದು ಮಾನವೀಯ ಮೌಲ್ಯಗಳ ಇತಿಹಾಸವೇ ಹಾಗಿದೆ. ಮೌಲ್ಯಗಳೇ ಈ ಜಗತ್ತನ್ನು ಈಗಿರುವಂತೆ ರೂಪಿಸಿರುವುದು. ಇತಿಹಾಸದ ಪ್ರತಿಯೊಂದು ಪ್ರಮುಖ ಘಟ್ಟದಲ್ಲಿಯೂ ಮೌಲ್ಯಗಳಲ್ಲಿ ಬದಲಾವಣೆಯಾಗಿರುವುದನ್ನು ಗುರುತಿಸಬಹುದು. ಇಂಥ ಸಂದರ್ಭಗಳಲ್ಲಿ ಮೌಲ್ಯಗಳು ಪತನಗೊಂಡಿರಬಹುದು ಅಥವಾ ಶ್ರೀಮಂತಗೊಂಡಿರಬಹುದು. ಆದರೆ ಒಂದು ಸಂಗತಿಯಂತೂ ಸ್ಪಷ್ಟ. ಉದಾತ್ತ ಮೌಲ್ಯಗಳು ಮನುಷ್ಯನನ್ನು ಯಾವತ್ತೂ ಮನುಷ್ಯನಂತೆ ವರ್ತಿಸಲು ಪ್ರೇರೇಪಿಸಿವೆ.

ಮಾನವ ಸಮುದಾಯವನ್ನು ಜಗತ್ತಿನಾದ್ಯಂತ ಹಿಡಿದಿಟ್ಟಿರುವುದು ಮೌಲ್ಯಗಳು ಎಂಬುದು ಸರ್ವವಿದಿತ. ಇವನ್ನು 'ಸಾಂಸ್ಕೃತಿಕ ಜೀವವೈವಿಧ್ಯ ಸರಪಳಿ' ಎಂದು ಬಣ್ಣಿಸಬಹುದು. ಯಾವ ಸಂಸ್ಥೆ ಅಥವಾ ಸಂಘಟನೆ ಅಥವಾ ದೇಶ ಮೌಲ್ಯಗಳ ಬೆಂಬಲದಿಂದ ಮುನ್ನಡೆಯುವುದೋ ಅದು ವಾಮಮಾರ್ಗವನ್ನು ಕ್ರಮಿಸುವುದಿಲ್ಲ. ಹೋಗಬಾರದ ತಾಣಕ್ಕೆ ಹೋಗಿ ನಿಲ್ಲುವುದಿಲ್ಲ. ನೀವು ಅಂದುಕೊಂಡಿರುವುದಕ್ಕಿಂತಲೂ ಉತ್ತಮ ತಾಣ ಸೇರಿರುತ್ತೀರಿ. ನೂರಾರು ಸಂಘ-ಸಂಸ್ಥೆಗಳನ್ನು ಅಧ್ಯಯನ ಮಾಡಿರುವ ಟಾಮ್ ಪೀಟರ್ಸ್ ರಾಬರ್ಟ್ ವಾಟರ್‌ಮನ್ ಅವರು ಹೇಳುತ್ತಾರೆ- 'ನಾವು ನೋಡಿದ ಉತ್ತಮ ಕಂಪನಿಗಳಲ್ಲಿ ಅಲ್ಲಿನ ಸಿಬ್ಬಂದಿಯಲ್ಲಿ ಎದ್ದು ಕಾಣುತ್ತಿದ್ದ ಅಂಶವೆಂದರೆ ಅವರು ಮಾನವೀಯ ಮೌಲ್ಯಗಳಿಗೆ ನೀಡುತ್ತಿದ್ದ ಮಹತ್ವ. ಮೌಲ್ಯಗಳಿಲ್ಲದೇ ಬೃಹತ್ ಸಂಘಟನೆ ಅಥವಾ ಸಂಸ್ಥೆಯನ್ನು ಕಟ್ಟುವುದು ಸಾಧ್ಯವೇ ಎಂದು ನಾವು ಅನೇಕ ಸಲ ಯೋಚಿಸಿದ್ದೇವೆ.'

ಪ್ರತಿಷ್ಠಿತ ಸೋನಿ ಕಾರ್ಪೊರೇಷನ್ ತನ್ನ ಆರಂಭಿಕ ವರ್ಷದಲ್ಲಿ 'ಇಡೀ ಜಗತ್ತಿನಲ್ಲಿ ಸೇವೆ ಮೂಲಕ ಪರಿಚಯಿಸಿಕೊಳ್ಳಲು ನಾವು ಬಯಸುತ್ತೇವೆ. ಆ ಮೂಲಕ ಅಪರಿಚಿತರನ್ನೂ ಪರಿಚಯ ಮಾಡಿಕೊಂಡು ಅವರ ವಿಶ್ವಾಸ, ನಂಬಿಕೆಗೆ ಪಾತ್ರರಾಗುತ್ತೇವೆ' ಎಂದು ಹೇಳಿರುವುದನ್ನು ಗಮನಿಸಿ. ಸೋನಿ ಕಂಪನಿಯು ಯಾವ ಮೌಲ್ಯಗಳಿಗೆ ಆದ್ಯತೆ ನೀಡಿದೆ ಎಂಬುದು ಸ್ಪಷ್ಟ - ಸೇವೆ ಹಾಗೂ ಆವಿಷ್ಕಾರ. ಸೋನಿ ಎಂದಿಗೂ ಈ ಮೌಲ್ಯಗಳಿಂದ ದೂರ ಸರಿಯಲಿಲ್ಲ. ಕಂಪನಿ ಆರಂಭವಾದಂದಿನಿಂದ ಇಲ್ಲಿಯತನಕ ಲಕ್ಷಾಂತರ ವಸ್ತುಗಳನ್ನು ಉತ್ಪಾದಿಸಿದೆ. 1996 ರಲ್ಲಿ ಕೇವಲ ಒಂದು ವರ್ಷದಲ್ಲಿ 5000 ಹೊಸ ವಸ್ತುಗಳನ್ನು ಉತ್ಪಾದಿಸಿದೆ. ಸೋನಿ ಕಂಪನಿಗೆ ಮೌಲ್ಯವೇ ಆಧಾರ. ಅದು ಯಾವ ದೇಶದಲ್ಲೇ ಕಚೇರಿ ಅಥವಾ ಶಾಖೆ ಆರಂಭಿಸಲಿ, ಅದು ಅಲ್ಲಿನ ಸಿಬ್ಬಂದಿಗಳಿಗೆ ಹೇಳಿಕೊಡುವ ಮುಖ್ಯ ಪಾಠವೆಂದರೆ 'ಮೌಲ್ಯಗಳನ್ನು ರೂಪಿಸಿಕೊಳ್ಳಿ ಹಾಗೂ ಅವುಗಳಿಗೆ ಬದ್ಧರಾಗಿ.' ಇಂತಹ ಒಂದು ಶಿಸ್ತಿಗೆ ಒಳಗಾಗದಿದ್ದರೆ ಜಾಗತಿಕ ಮನ್ನಣೆ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಸರ್ವತ್ರ ವಿಶ್ವಾಸ ಗಳಿಸಲು ಆಗುತ್ತಿರಲಿಲ್ಲ, ಜಗತ್ತಿನ ಎಲ್ಲ ದೇಶಗಳಲ್ಲಿ ತಳವೂರಲು ಆಗುತ್ತಿರಲಿಲ್ಲ.

ಮೌಲ್ಯಗಳ ವೈಶಿಷ್ಟ್ಯವೆಂದರೆ ಅವು ಕಣ್ಣಿಗೆ ಕಾಣುವುದಿಲ್ಲ. ಆದರೆ ಎಲ್ಲೆಡೆಯೂ ನೆಲೆಸಿರುತ್ತದೆ. ಕಣ್ಣಿಗೆ ಗೋಚರಿಸುವುದಿಲ್ಲ ಎಂದ ಮಾತ್ರಕ್ಕೆ ಅದು ಇಲ್ಲವೆಂದಲ್ಲ.

ಮೌಲ್ಯಗಳು ಕಣ್ಣಿಗೆ ಕಾಣದಿದ್ದರೂ, ಯಾವ ಸಂಘ-ಸಂಸ್ಥೆ ಅಥವಾ ಸಮಾಜದಲ್ಲಿ ಅವು ಇಲ್ಲದಿದ್ದರೆ ತಕ್ಷಣ ಗೊತ್ತಾಗುತ್ತದೆ. ಬಹುತೇಕ ಸಂಸ್ಥೆಗಳನ್ನು ಮುನ್ನಡೆಸುವುದು ಮೌಲ್ಯಗಳು. ಇವುಗಳನ್ನು ಪ್ರಬಲವಾಗಿ ಪ್ರತಿಪಾದಿಸುವವನೇ ನಾಯಕ. ಮೌಲ್ಯಗಳೇ ಧರ್ಮ ಎಂದು ಭಾವಿಸುವವನೇ ನಿಜವಾದ ನಾಯಕ. ಒಮ್ಮೆ ಪರ್ವತಾರೋಹಿ ಪರ್ವತವನ್ನು ಏರತೊಡಗಿದ. ಅವನ ಜೊತೆಗೆ ಧರ್ಮ ಎಂಬ ಮತ್ತೊಬ್ಬ ಪರ್ವತಾರೋಹಿಯೂ ಸೇರಿಕೊಂಡ. ಇಬ್ಬರೂ ಸೇರಿ ಪರ್ವತವನ್ನೇರತೊಡಗಿದರು. ಪರ್ವತಾರೋಹಿ ಬಹಳ ಕಷ್ಟಪಟ್ಟು ಏರುತ್ತಿದ್ದ. ಕೆಲವು ಕಡೆ ಸುಸ್ತಾಗಿ ಮೇಲೇರಲು ಆಗದೇ ಕುಳಿತುಬಿಡುತ್ತಿದ್ದ. ಅಂತೂ ಇಂತೂ ಕಷ್ಟಪಟ್ಟು ಪರ್ವತಾರೋಹಿ ಗುರಿ ತಲುಪಿದ. ಧರ್ಮ ಕೂಡ ಜತೆಯಲ್ಲೇ ಇದ್ದ. ಅಲ್ಲಿಂದ ಇಳಿದು ಬರುವಾಗ ಪರ್ವತಾರೋಹಿ ಕೆಲವು ಕಡೆಗಳಲ್ಲಿ ಕೇವಲ ಒಬ್ಬನ ಹೆಜ್ಜೆ ಗುರುತುಗಳನ್ನು ಕಂಡ. ಅಲ್ಲಲ್ಲಿ ಒಂದೇ ಜತೆ ಹೆಜ್ಜೆಗಳಿದ್ದವು. ಇದನ್ನು ಕಂಡು ಪರ್ವತಾರೋಹಿಗೆ ಆಶ್ಚರ್ಯವಾಯಿತು. ಧರ್ಮ ನೆಡೆಗೆ ನೋಡಿ ಪರ್ವತಾರೋಹಿ ಹೇಳಿದ-'ನೋಡು ಇಲ್ಲಿ ಒಂದೇ ಜೋಡಿ ಹೆಜ್ಜೆಗಳಿವೆ. ಅಂದರೆ ಕೆಲವು ಕಡೆಗಳಲ್ಲಿ 'ನೀನು ನನ್ನನ್ನು ಬಿಟ್ಟು ಬೇರೆ ಕಡೆ ಹೊರಟು ಹೋಗಿದ್ದೀಯಾ.

ನನ್ನೊಬ್ಬನನ್ನೇ ಬಿಟ್ಟು ನೀನು ಎಲ್ಲಿಗೆ ಹೋಗಿದ್ದೆ?' ಅದಕ್ಕೆ ಧರ್ಮ ಹೇಳಿದ 'ನೀನು ಒಂದೆರಡು ಕಡೆಗಳಲ್ಲಿ ಕಣ್ಣು ಕತ್ತಲೆ ಬಂದು ಮಲಗಿಬಿಟ್ಟಿದ್ದೆ. ನಿನಗೆ ನಡೆಯಲು ಸಹ ತ್ರಾಣವಿರಲಿಲ್ಲ. ಅಂಥ ಸಂದರ್ಭದಲ್ಲಿ ನಿನ್ನನ್ನು ಅನಾಮತ್ತು ಎತ್ತಿಕೊಂಡು ನಾನು ಪರ್ವತವೇರ ತೊಡಗಿದೆ. ಇಲ್ಲಿರುವ ಹೆಜ್ಜೆ ಗುರುತುಗಳಿವೆಯಲ್ಲ ಅವು ನಿನ್ನದಲ್ಲ, ನನ್ನವು!'

ನಾವು ಎಲ್ಲದಕ್ಕೂ ನಾವೇ ಕಾರಣರು ಅಂತ ಭಾವಿಸಿರುತ್ತೇವೆ. ಆದರೆ ಮೌಲ್ಯಗಳನ್ನು ಸೃಷ್ಟಿಸಿದ್ದೇ ಆದರೆ ಅವೇ ನಮ್ಮನ್ನು ಕೈಹಿಡಿದು ನಡೆಸಿಕೊಂಡು ಹೋಗುತ್ತದೆ. ಕಾರಣ ಈ ಸಮಾಜವನ್ನು ಏಕಕಾಲಕ್ಕೆ ಕೈಹಿಡಿದುಕೊಂಡು ಕರೆದುಕೊಂಡು ಹೋಗುವವರು ನಾಯಕರಲ್ಲ. ಮೌಲ್ಯಗಳು ಅಥವಾ ಮೌಲ್ಯಗಳೆಂಬ ಧರ್ಮ!

ಮೌಲ್ಯಗಳನ್ನು ಹೀಗೇ ಎಂದು ಹೇಳಲು ಸಾಧ್ಯವಿಲ್ಲ. ಮೌಲ್ಯಗಳ ಬಗ್ಗೆ ಒಂದು ಮಾತನ್ನು ಹೇಳುತ್ತಾರೆ- Values are caught rathar than taught. ಯಾರೇ ಆಗಲಿ ಅವರನ್ನು ಜನರು ಗುರುತಿಸುವುದು ಅವರು ಪ್ರತಿನಿಧಿಸುವ ಮೌಲ್ಯಗಳಿಂದ. ಅವೇ ಅವರ ಜಿಭಟ್ಳಿಗಿಜಿರಿಢಯ ಸಂಕೇತವಾಗುತ್ತದೆ, ಲಾಂಛನವಾಗುತ್ತದೆ. ಇಂಥ ಒಂದು ಮೌಲ್ಯಗಳ ಪ್ರತಿಪಾದನೆಯಿಂದ ಗುರುತಿಸಿಕೊಳ್ಳುವ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳೋಣ. ನಾಯಕತ್ವದ ಮುಂದಿನ ಹೆಜ್ಜೆ ಜ್ಞಾನ ಸಾಕಾರ. ನಾಯಕನಾದವನಿಗೆ ಇದು ಎಷ್ಟು ಅಗತ್ಯ ಎಂಬ ಸಂಗತಿಯನ್ನು ಯಾರೂ ಅಲ್ಲಗಳೆಯಲಾರರು.

ಇಲ್ಲಿ ನಿಮಗೊಂದು ದೃಷ್ಟಾಂತವನ್ನು ಹೇಳಬೇಕು. ಒಂದೂರಿನಲ್ಲಿ ಒಬ್ಬ ರಾಜನಿದ್ದ. ರಾಜ ಅರಮನೆಯಿಂದ ಮಾರುವೇಷದಲ್ಲಿ ಹೊರಗೆ ಹೋಗಲು ನಿರ್ಧರಿಸಿದ. ಮಧ್ಯರಾತ್ರಿ ಹೊರಹೋಗುವಾಗ, ಕಾವಲುಗಾರ ತಡೆದ. ನೀನ್ಯಾರು ಎಂದು ಕೇಳಿದ.

ಆ ವಿಚಿತ್ರ ವೇಷದಲ್ಲಿರುವ ವ್ಯಕ್ತಿಯ ಪರಿಚಯ ಕಾವಲುಗಾರನಿಗೆ ಸಿಗಲಿಲ್ಲ. ಮತ್ತೊಮ್ಮೆ ಕೇಳಿದ-'ನೀನ್ಯಾರು? ನೀನೆಲ್ಲಿಗೆ ಹೋಗುತ್ತಿರುವೆ?' ಕಾವಲುಗಾರನಿಗೆ ರಾಜ ನೇರ ಉತ್ತರ ನೀಡಲಿಲ್ಲ. ಅದರ ಬದಲಿಗೆ ಹೇಳಿದ -'ಈ ರೀತಿಯ ಪ್ರಶ್ನೆಗಳನ್ನು ಕೇಳುವುದಕ್ಕೆ ನಿನಗೆ ಎಷ್ಟು ಸಂಬಳ ಕೊಡುತ್ತಾರೆ?' ಅದಕ್ಕೆ ಕಾವಲುಗಾರ ನುಡಿದ-'ಇದಕ್ಕಾಗಿ ನನಗೆ ಸಾವಿರ ರು. ನೀಡುತ್ತಾರೆ'. ರಾಜ ಅವನಿಗೆ ಹೇಳಿದ- 'ಹಾಗಾದರೆ ಒಂದು ಕೆಲಸ ಮಾಡು. ನಿನ್ನ ಸಂಬಳಕ್ಕಿಂತ 10 ಪಟ್ಟು ಹೆಚ್ಚು ಹಣವನ್ನು ಕೊಡುತ್ತೇನೆ. ನೀನು ಪ್ರತಿದಿನ ನನಗೆ ಇದೇ ಪ್ರಶ್ನೆಯನ್ನು ಕೇಳಬೇಕು, ಆಗಬಹುದಲ್ಲ?'

ಕಾವಲುಗಾರನಿಗೆ ಅಚ್ಚರಿಯಾಯಿತು. ರಾಜ ಅವನಿಗೆ ಒಂದಷ್ಟು ಹಣ ಕೊಟ್ಟ. ಹಾಗೇ ಕತ್ತಲೆಯಲ್ಲಿ ಕಣ್ಮರೆಯಾದ. ಎಲ್ಲ ನಾಯಕರಿಗೆ, ಅವರು ಯಾವುದೇ ದೇಶದವರಿರಬಹುದು, ಯಾವುದೇ ಕಾಲಖಂಡದಲ್ಲಿರಬಹುದು, ಅನಿಸುವುದೇನೆಂದರೆ -'ನಾನು ಯಾರು? ನಾನು ಎಲ್ಲಿಗೆ ಹೋಗುತ್ತಿದ್ದೇನೆ?' ಮೊದಲ ಪ್ರಶ್ನೆ ಸ್ವಯಂ ಜ್ಞಾನಕ್ಕೆ ಸಂಬಂಧಿಸಿದ್ದು. ಎರಡನೆ ಪ್ರಶ್ನೆ ಗುರಿ ಸಾಧನೆಗೆ ಸಂಬಂಧಿಸಿದ್ದು.

ನಾಯಕತ್ವ ಆರಂಭವಾಗುವುದು ಹಾಗೂ ಸಾರ್ಥಕ್ಯವನ್ನು ತಲುಪುವುದು ಈ ಎರಡು ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದರಲ್ಲಿ. 'ನಾನ್ಯಾರು' ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಸಣ್ಣ ಕೆಲಸವಲ್ಲ. ಈ ಪ್ರಶ್ನೆ ನಾಯಕನಿಗೆ ಜೀವನಪರ್ಯಂತ ಕಾಡುತ್ತದೆ. ಈ ಪ್ರಶ್ನೆಗೆ ಉತ್ತರ ಕಾಣಲು ಶ್ರಮಿಸಿದಂತೆ ವಿಚಿತ್ರ ಸತ್ಯಗಳು ಗೋಚರವಾಗುತ್ತಾ ಹೋಗುತ್ತವೆ. ಪ್ರಶ್ನೆಗಳು ಉತ್ತರವನ್ನು ಅರಸುತ್ತಿದ್ದಂತೆ, ಹೊಸ ಉತ್ತರಗಳೆಲ್ಲ ಪ್ರಶ್ನೆಗಳನ್ನು ಹುಟ್ಟುಹಾಕುತ್ತಲೇ ಹೋಗುತ್ತದೆ. ನಾಯಕ ಆದವನಿಗೆ ಈ ಪ್ರಶ್ನೆಗಳಿಗೆ ಉತ್ತರ ದೊರಕಿಸಿ ಕೊಳ್ಳುವುದು ಸಹ ಒಂದು ಸವಾಲು.

ಅವರೇನು ಕಾರ್ಯಕರ್ತರೋ ಅಥವಾ ಗೂಂಡಾಗಳೋ?

ಮಹಾರಾಷ್ಟ್ರದ ವಿಧಾನ ಭವನದ ಆವರಣದಲ್ಲಿ ನಡೆದ ಹೊಡೆದಾಟ ಹಾಗೂ ಅವಾಚ್ಯ ಪದಗಳ ಬೈಗುಳ ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಈ ಘಟನೆ ನಾವೆಲ್ಲ ತಲೆತಗ್ಗಿಸುವಂತೆ ಮಾಡಿದೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿರುವುದು ಸರಿಯಾಗಿಯೇ ಇದೆ.

ಸಂಗತ
ಡಾ.ವಿಜಯ್ ದರಡಾ
vveditoped@gmail.com

ಮಹಾರಾಷ್ಟ್ರದ ವಿಧಾನ ಭವನದ ಆವರಣದಲ್ಲಿ ಕಳೆದ ವಾರ ಇಬ್ಬರು ಶಾಸಕರ ಬೆಂಬಲಿಗರ ನಡುವೆ ಹಿಂಸಾಚಾರ ನಡೆಯಿತು. ಎರಡೂ ಕಡೆಯವರು ಅಕ್ಷರಶಃ ಹೊಡೆದಾಡಿಕೊಂಡರು. ಒಬ್ಬರನ್ನೊಬ್ಬರು ಅನಾಮತ್ತು ಎತ್ತಿ ಎಸೆದರು. ಪರಸ್ಪರರ ಅಮ್ಮ, ಅಕ್ಕಂದಿರನ್ನು ಉಲ್ಲೇಖಿಸಿ ಅವಾಚ್ಯವಾಗಿ ಬೈದಾಡಿಕೊಂಡರು. ಒಂದಷ್ಟು ಜನರು ಅಂಗಿ, ಪ್ಯಾಂಟ್ ಹರಿದುಕೊಂಡರು. ಆ ಘಟನೆ ಇಡೀ ಮಹಾರಾಷ್ಟ್ರಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಕೆಟ್ಟ ಹೆಸರು ತಂದಿತು. ಹೊಡೆದಾಟ ನೋಡಿದವರೆಲ್ಲರೂ ರಾಜಕೀಯ ಪಕ್ಷಗಳ ಕಾರ್ಯಕರ್ತರು ಅಥವಾ ಬೆಂಬಲಿಗರು ಈ ರೀತಿಯಲ್ಲಿ ನಡೆದುಕೊಳ್ಳಲು ಸಾಧ್ಯವೇ ಎಂದು ಕೇಳಿದರು. ಇವರೆಲ್ಲ ನಿಜಕ್ಕೂ ರಾಜಕೀಯ ಪಕ್ಷದ ಕಾರ್ಯಕರ್ತರೋ ಅಥವಾ ಗೂಂಡಾಗಳೋ ಎಂದು ಪ್ರಶ್ನಿಸಿದರು. ನನ್ನ ಪ್ರಶ್ನೆಯೂ ಅದೇ.

ಹಾಗೆ ನೋಡಿದರೆ ಈ ಘಟನೆಗೆ ಮೂಲ ಕಾರಣರಾದ ಇಬ್ಬರೂ ಮುಖಂಡರಿಗೆ ಕರಾಳ ಇತಿಹಾಸವೇ ಇದೆ. ಎನ್‌ಸಿಪಿ (ಶರದ್ ಪವಾರ್ ಬಣ) ಶಾಸಕ ಜಿತೇಂದ್ರ ಅವ್ಹಾದ್ ಅವರ ಬೆಂಬಲಿಗ ನಿತಿನ್ ದೇಶಮುಖ್ ಹಾಗೂ ಬಿಜೆಪಿ ಶಾಸಕ ಗೋಪಿಚಂದ್ ಪಡಾಲ್ಕರ್ ಅವರ ಬೆಂಬಲಿಗ ಸರ್ಜೆರಾವ್ ಬಬನ್ ಟಾಕ್ಲೆ ಇವರಿಬ್ಬರ ಮೇಲೂ ಈಗಾಗಲೇ ಪೊಲೀಸ್ ಠಾಣೆಗಳಲ್ಲಿ ಹಲವಾರು ಕೇಸುಗಳಿವೆ. ಟಾಕ್ಲೆ ವಿರುದ್ಧ ಎಂಪಿಡಿಎ ಕಾಯ್ದೆಯಡಿ ಕ್ರಮ ಕೂಡ ಜಾರಿಗೊಳಿಸಲಾಗಿತ್ತು. ಅದು ಹಾಗಿರಲಿ, ಇಲ್ಲಿರುವ ಮುಖ್ಯ ಪ್ರಶ್ನೆಯೇನೆಂದರೆ, ಅಷ್ಟೊಂದು ಭದ್ರತೆಯಿರುವ ವಿಧಾನ ಭವನದ ಆವರಣಕ್ಕೆ ಈ ಅನಾಹುತಕಾರಿ ಶಕ್ತಿಗಳು ಪ್ರವೇಶ ಪಡೆದಿದ್ದಾದರೂ ಹೇಗೆ? ಟಾಕ್ಲೆ ಬಳಿ ಸರಿಯಾದ ಎಂಟ್ರಿ ಪಾಸ್ ಕೂಡ ಇರಲಿಲ್ಲ. ಇದು ಗಂಭೀರವಾದ ಭದ್ರತಾ ಲೋಪವಲ್ಲವೇ? ಸಂಸತ್ ಭವನದ ಮೇಲೆ ಭಯೋತ್ಪಾದಕ ದಾಳಿ ನಡೆದ ಬಳಿಕ ಬೇರೆ ಬೇರೆ ರಾಜ್ಯಗಳ ವಿಧಾನ ಭವನಗಳಿಗೂ ಸಾಕಷ್ಟು ಭದ್ರತೆ ನೀಡಲಾಗುತ್ತದೆ ಎಂದು ಜನರು ಭಾವಿಸಿದ್ದರು. ಪಾಸ್ ಇಲ್ಲದ ಯಾರನ್ನೂ ಒಳಗೆ ಬಿಡದಂತೆ ಬಿಗಿ ಭದ್ರತೆ ಕೈಗೊಳ್ಳುತ್ತೇವೆಂದು ಸರ್ಕಾರಗಳೂ ಹೇಳಿದ್ದವು. ಆದರೆ ಮಹಾರಾಷ್ಟ್ರದಲ್ಲಿ ನಡೆದ ಘಟನೆ ಎಲ್ಲರೂ ಕಳವಳಗೊಳ್ಳುವಂತೆ ಮಾಡಿದೆ. ವಿಧಾನ ಭವನಕ್ಕೆ ಅಕ್ರಮವಾಗಿ ಪ್ರವೇಶಿಸಲು 5000 ರೂ.ಗಳಿಂದ 10,000 ರೂ.ಗಳಿಗೆ ಎಂಟ್ರಿ ಪಾಸ್‌ಗಳನ್ನು ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪಗಳೂ ಕೇಳಿಬರುತ್ತಿವೆ. ಅದು ನಿಜವೇ?

ಹಿಂಸಾಚಾರದಲ್ಲಿ ತೊಡಗಿದ್ದವರ ಪೈಕಿ ಒಂದು ಕಡೆಯವರು ಇದು ದಿಢೀರನೆ ಭುಗಿಲೆದ್ದ ಘಟನೆ ಎಂದು ಹೇಳಿದರೆ, ಇನ್ನೊಂದು ಕಡೆಯವರು ಇದು ಪೂರ್ವಸಿದ್ಧತೆಯಿಂದ ಹೆಣೆದ ಸಂಚು ಎಂದು ಆರೋಪಿಸುತ್ತಿದ್ದಾರೆ. ನನಗೆ ಅಥವಾ ಇನ್ನಾರಿಗೇ ಆದರೂ ಅಲ್ಲಿ ಜಗಳವನ್ನು ಮೊದಲು ಶುರು ಮಾಡಿದವರು ಯಾರು ಅಥವಾ ಯಾರು ಹೆಚ್ಚು ಹೊಡೆದರು ಅಥವಾ ಯಾರು ಹೆಚ್ಚು ಅವಾಚ್ಯ ಶಬ್ದಗಳನ್ನು ಬಳಸಿದರು ಅಥವಾ ಯಾರು ಯಾರ ಬಟ್ಟೆಯನ್ನು ಹೆಚ್ಚು ಹರಿದರು ಎಂಬುದು ಮುಖ್ಯವಲ್ಲ. ನನಗಂತೂ ಅತಿ ಹೆಚ್ಚು ಕಾಡುತ್ತಿರುವ ಪ್ರಶ್ನೆಯೆಂದರೆ, ಮಹಾರಾಷ್ಟ್ರದ ರಾಜಕಾರಣ ಎತ್ತ ಸಾಗುತ್ತಿದೆ? ವಿಧಾನಸಭೆಯಲ್ಲಿ ಈ ಹಿಂದೆಯೂ ಸಾಕಷ್ಟು ಕಾವೇರಿದ ಚರ್ಚೆಗಳು ನಡೆದಿವೆ. ಸದನದಲ್ಲಿ ಕೋಲಾಹಲ, ಕಿರುಚಾಟ, ಪೇಪರ್ ವೇಟ್‌ಗಳನ್ನು ತೆಗೆದು ಎಸೆಯುವುದು ಮುಂತಾದ ಚಟುವಟಿಕೆಗಳು ವರದಿಯಾಗಿವೆ. ಆದರೆ ಅವೆಲ್ಲವೂ ಸಣ್ಣಪುಟ್ಟ ಘಟನೆಗಳು. ಕಳೆದ ವಾರ ವಿಧಾನ ಭವನದ ಆವರಣದಲ್ಲಿ ನಡೆದ ಘಟನೆ ಮಾತ್ರ ಹಿಂದೆಂದೂ ಕೇಳರಿಯದ್ದು ಮತ್ತು ಅತ್ಯಂತ ಕಳವಳಕಾರಿಯಾದುದು. ಈ ವಿಷಯದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದು ಸರಿಯಾಗಿದೆ. ವಿಧಾನ ಭವನದಲ್ಲಿ ನಡೆದ ಘಟನೆ ನಾವೆಲ್ಲ ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡಿದೆ ಎಂದು ಅವರು ಹೇಳಿದ್ದಾರೆ. ತಮಿಳುನಾಡು, ಉತ್ತರ ಪ್ರದೇಶ ಅಥವಾ ಬಿಹಾರದಂತಹ ರಾಜ್ಯದಲ್ಲಿ ಈ ರೀತಿಯ ಘಟನೆಗಳು ಹಿಂದೆ ನಡೆದಿರಬಹುದು. ಆದರೆ ನಮ್ಮ ಮಹಾರಾಷ್ಟ್ರದಲ್ಲಿ ಯಾವತ್ತೂ ಈ ರೀತಿಯ ಘಟನೆ ನಡೆದಿರಲಿಲ್ಲ. ಹಾಗಿದ್ದರೆ ಮಹಾರಾಷ್ಟ್ರಕ್ಕೆ ಗೂಂಡಾಗಿರಿಯ ಈ ಸಾಂಕ್ರಾಮಿಕ ರೋಗ ಹರಡಿದ್ದು ಎಲ್ಲಿಂದ?

ವಿಧಾನಸಭೆಯ ಸ್ಪೀಕರ್ ರಾಹುಲ್ ನಾರ್ವೇಕರ್ ಈ ಘಟನೆಯನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದೇನೆಂದು ಹೇಳಿದ್ದಾರೆ. ಸಂಬಂಧಪಟ್ಟ ಶಾಸಕರಿಗೆ ಛೀಮಾರಿ ಹಾಕಿರುವ ಅವರು, ಇನ್ನುಮುಂದೆ ವಿಧಾನ ಭವನಕ್ಕೆ ಸಂದರ್ಶಕರಿಗೆ ಪ್ರವೇಶ ನೀಡುವಂತಿಲ್ಲ ಎಂಬ ಕಠಿಣ ನಿರ್ಧಾರ ಕೈಗೊಂಡಿದ್ದಾರೆ. ಅಲ್ಲದೆ, ಸಚಿವರು ಕೂಡ ವಿಧಾನ ಭವನದಲ್ಲಿ ಇನ್ನುಮುಂದೆ ಸಭೆಗಳನ್ನು ನಡೆಸಬೇಡಿ, ಅದರ ಬದಲಿಗೆ ಸಭೆಗಳನ್ನು ಮಂತ್ರಾಲಯದಲ್ಲಿ (ಸಚಿವಾಲಯ) ನಡೆಸಿ ಎಂದು ಸೂಚನೆ ನೀಡಿದ್ದಾರೆ. ಆದರೆ ಈ ರೀತಿಯ ಘಟನೆಗಳು ವಿಧಾನ ಭವನಕ್ಕಷ್ಟೇ ಸೀಮಿತವಲ್ಲ ಎಂಬುದು ಕೂಡ ಗಮನಾರ್ಹ ಸಂಗತಿ. ನಾವೆಲ್ಲರೂ ಯೋಚಿಸಬೇಕಾಗಿರುವುದು ಬದಲಾಗುತ್ತಿರುವ ಮಹಾರಾಷ್ಟ್ರದ ರಾಜಕೀಯ ಲಕ್ಷಣದ ಬಗ್ಗೆ.

ಮಹಾರಾಷ್ಟ್ರದ ರಾಜಕೀಯ ಸಂಸ್ಕೃತಿಗೆ ದೇಶದಲ್ಲೇ ವಿಶಿಷ್ಟ ಸ್ಥಾನವಿದೆ. ಇಲ್ಲಿನ ರಾಜಕಾರಣಕ್ಕಿರುವ ಪಾವಿತ್ರ್ಯವೇ ನಮ್ಮ ಹೆಮ್ಮೆ. ನಾನು ದೇಶದುದ್ದಗಲಕ್ಕೂ, ಸಾಕಷ್ಟು ವಿದೇಶಗಳಿಗೂ ಪ್ರವಾಸ ಮಾಡಿದ್ದೇನೆ. ಅವುಗಳ ಹಿನ್ನೆಲೆಯಲ್ಲಿ ಮಹಾರಾಷ್ಟ್ರದ ರಾಜಕಾರಣದ ಶ್ರೇಷ್ಠತೆಯನ್ನು ಹೆಮ್ಮೆಯಿಂದ ಹೇಳಬಲ್ಲೆ. ಆದರೆ ಇತ್ತೀಚಿನ ಘಟನೆಯನ್ನು ನೋಡಿದ ಮೇಲೆ ನಾನಾದರೂ ಹೇಗೆ ಎದೆ ಮುಟ್ಟಿಕೊಂಡು ಇನ್ನುಮುಂದೆ ಮಹಾರಾಷ್ಟ್ರದ ರಾಜಕೀಯ ಚಾರಿತ್ರ್ಯದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳಲಿ? ಯೋಚಿಸುತ್ತಾ ಹೋದರೆ ನನ್ನೊಳಗೆ ಹಲವು ಅನುಮಾನಗಳು ಹುಟ್ಟಿಕೊಳ್ಳುತ್ತವೆ. ನಮ್ಮ ರಾಜಕೀಯ ಪರಿಸರದಲ್ಲಿ ಕ್ರಿಮಿನಲ್ ಯೋಚನೆಗಳ ಕರಿನೆರಳು ಕವಿಯಲು ಆರಂಭವಾಗಿದೆಯೇ? ಎಲ್ಲರ ಮೇಲೂ ಹಿಡಿತ ಸಾಧಿಸುವ ಅಥವಾ ದಬ್ಬಾಳಿಕೆ ನಡೆಸುವ ಕೆಲ ರಾಜಕಾರಣಿಗಳಿಗೆ ನಾನು ಹೇಳುವುದು ಅರ್ಥವಾಗದೆ ಹೋಗಬಹುದು ಅಥವಾ ನನ್ನ ಮಾತನ್ನು ಅವರು ಒಪ್ಪದಿರಬಹುದು. ಆದರೆ ಸತ್ಯವನ್ನು ಯಾರು ತಾನೇ ಅಲ್ಲಗಳೆಯಲು ಸಾಧ್ಯ?

ಅನೇಕ ರಾಜ್ಯಗಳಲ್ಲಿ ಆಗಿರುವಂತೆ ಈಗ ಮಹಾರಾಷ್ಟ್ರದ ರಾಜಕಾರಣ ಕೂಡ ಹೆಚ್ಚೆಚ್ಚು ಕ್ರಿಮಿನಲೈಸೇಶನ್‌ಗೆ ಶರಣಾಗುತ್ತಿದೆಯೇ? ಚುನಾವಣಾ ಆಯೋಗದಿಂದ ಬಂದ ಅಂಕಿ ಅಂಶಗಳನ್ನು ವಿಶ್ಲೇಷಣೆ ಮಾಡುವಾಗ ನನಗೊಂದು ಆಘಾತಕಾರಿ ಸತ್ಯ ಕಾಣಿಸಿತು. ಮಹಾರಾಷ್ಟ್ರದ ವಿಧಾನಸಭೆಯಲ್ಲಿರುವ ಒಟ್ಟು 286 ಶಾಸಕರ ಪೈಕಿ 118 ಶಾಸಕರ ವಿರುದ್ಧ ಕ್ರಿಮಿನಲ್ ಕೇಸುಗಳು ದಾಖಲಾಗಿವೆ. ಆದರೆ ಸ್ಥೂಲ ಚಿತ್ರಣವನ್ನು ನೋಡಿದರೆ, ರಾಜಕೀಯದಲ್ಲಿ ಕ್ರಿಮಿನಲ್ ಚಟುವಟಿಕೆಗಳು ಜಾಸ್ತಿಯಾಗುತ್ತಿರುವುದಕ್ಕೆ ಯಾವುದೋ ಒಂದು ಪಕ್ಷ ಅಥವಾ ಒಬ್ಬ ನಾಯಕ ಹೊಣೆಯಲ್ಲ. ಹೀಗಾಗಿ ಯಾರಾದರೂ ಒಬ್ಬರನ್ನು ದೂಷಿಸಿ ಪ್ರಯೋಜನವಿಲ್ಲ. ಎಲ್ಲಾ ರಾಜಕೀಯ ಪಕ್ಷಗಳೂ ಇಂತಹ ಕೃತ್ಯಗಳಲ್ಲಿ ರಾಜಾರೋಷವಾಗಿ ತೊಡಗಿಕೊಳ್ಳುತ್ತಿವೆ. ಅವುಗಳ ಉದ್ದೇಶ ಒಂದೇ: ಹೆಚ್ಚು ಸೀಟು ಗೆಲ್ಲುವುದು. ಅದಕ್ಕಾಗಿ ಏನು ಬೇಕಾದರೂ ಮಾಡಲು ರಾಜಕಾರಣಿಗಳು ಸಿದ್ಧ. ಅತ್ಯಂತ ಹೆಚ್ಚು ಕ್ರಿಮಿನಲ್ ಕೇಸುಗಳನ್ನು ಹೊಂದಿರುವ ಒಬ್ಬ ರಾಜಕಾರಣಿ ಚುನಾವಣೆಯಲ್ಲಿ ಗೆಲ್ಲುವ ಸಾಧ್ಯತೆಯೇನಾದರೂ ಅತಿ ಹೆಚ್ಚು ಇದೆ ಎಂದಾದರೆ ರಾಜಕೀಯ ಪಕ್ಷಗಳು ಯಾವುದೇ ಮುಲಾಜಿಲ್ಲದೆ ಅವನಿಗೇ ಟಿಕೆಟ್ ಕೊಡುತ್ತವೆ!

ರಾಜಕೀಯವೆಂಬುದು ಇಂದು ಸಾಮ, ದಾಮ, ದಂಡ, ಭೇದ (ಹೊಂದಾಣಿಕೆ, ಹಣ, ಶಿಕ್ಷೆ ಮತ್ತು ವಿಭಜನೆ)ಗಳ ಆಟವಾಗಿದೆ. ಕ್ರಿಮಿನಲ್ ಶಕ್ತಿಗಳು ಎಸಗುವ ಕೃತ್ಯಗಳ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳೂ ಕುರುಡಾಗಿಬಿಡುತ್ತವೆ. ಅಂತಹವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಕೆಲ ರಾಜಕಾರಣಿಗಳಂತೂ ತಮ್ಮ ಕೃತ್ಯಗಳು ಯುವಕರ ಮೇಲೆ ಎಂತಹ ಪರಿಣಾಮ ಬೀರಬಹುದು ಎಂಬುದನ್ನು ಯೋಚಿಸುವುದಕ್ಕೂ ಸಿದ್ಧರಿಲ್ಲ. ಸಂಜಯ್ ಗಾಯಕ್ವಾಡ್ ಅವರ ಪ್ರಕರಣವನ್ನೇ ತೆಗೆದುಕೊಳ್ಳಿ. ಒಬ್ಬ ಬಡಪಾಯಿ ಕ್ಯಾಂಟೀನ್ ಕೆಲಸಗಾರನ ಮೇಲೆ ಈತ ಅತ್ಯಂತ ಅಮಾನುಷವಾಗಿ ಹಲ್ಲೆ ನಡೆಸಿದ. ಕ್ಯಾಂಟೀನ್‌ನಲ್ಲಿ ಕೊಟ್ಟ ಆಹಾರ ಚೆನ್ನಾಗಿರಲಿಲ್ಲ ಅಂತಾದರೆ ಅದು ಒಪ್ಪುವ ಮಾತು. ಆದರೆ ಅದರ ವಿರುದ್ಧ ದೂರು ನೀಡುವುದಕ್ಕೆ ಸದನ ಸಮಿತಿಯಿರುತ್ತದೆ. ಅದನ್ನು ಬಿಟ್ಟು ಕಾನೂನನ್ನು ಕೈಗೆತ್ತಿಕೊಳ್ಳುವ ಹಕ್ಕನ್ನು ಅವರಿಗೆ ಕೊಟ್ಟವರು ಯಾರು? ಊಟ ಚೆನ್ನಾಗಿಲ್ಲ ಅಂದರೆ ಅದನ್ನು ಊಟ ತಯಾರಿಸಿದವನಿಗೆ ಹೇಳಬೇಕೇ ಹೊರತು ಏಕಾಏಕಿ ಹೋಗಿ ಅವನಿಗೆ ಹೊಡೆದುಬಿಡುವುದೇ? ಇದು ಮನುಷ್ಯತ್ವ ಇರುವವರು ಮಾಡುವ ಕೆಲಸವೇ?

ಹಿಂದೆಲ್ಲಾ ರಾಜಕಾರಣವೆಂಬುದು ಸಮಾಜ ಸೇವೆಯಾಗಿತ್ತು. ದೇಶ, ರಾಜ್ಯ ಮತ್ತು ಸಮಾಜದ ಬಗ್ಗೆ ನಿಜವಾಗಿಯೂ ಕಳಕಳಿ ಇರುವವರಷ್ಟೇ ರಾಜಕೀಯಕ್ಕೆ ಬರುತ್ತಿದ್ದವು. ಹೀಗಾಗಿ ರಾಜಕಾರಣದಲ್ಲಿ ಪ್ರಾಮಾಣಿಕ, ಸರಳ ಮತ್ತು ಸಮರ್ಪಣಾ ಮನೋಭಾವದ ಕಾರ್ಯಕರ್ತರು, ಮುಖಂಡರು ಹಾಗೂ ನಾಯಕರೇ ಇರುತ್ತಿದ್ದರು. ಆದರೆ ಈಗ ಅವರ ಜಾಗದಲ್ಲಿ ಹಿಂಸಾಚಾರಗಳ ತಜ್ಞರು, ಬೇರೆಯವರನ್ನು ಹೊಡೆಯುವಲ್ಲಿ ಎತ್ತಿದ ಕೈ ಹೊಂದಿರುವವರು ಹಾಗೂ ತಮ್ಮ ರಕ್ತದಲ್ಲೇ ದಬ್ಬಾಳಿಕೆಯ ನೀತಿಯನ್ನು ಉಳಿಸಿಕೊಂಡವರು ಬಂದು ಸೇರಿಕೊಂಡಿದ್ದಾರೆ. ಹೀಗಾಗಿ ರಾಜಕೀಯ ನಾಯಕರು ಪೊಗದಸ್ತಾದ ಗೂಂಡಾಗಳನ್ನು ಸಾಕುತ್ತಿದ್ದಾರೆ. ಕೆಲ ನಾಯಕರಂತೂ ತಾವು ಗೂಂಡಾಗಳನ್ನು ಸಾಕಿರುವುದಾಗಿ ನಾಚಿಕೆ ಬಿಟ್ಟು ಹೇಳಿಕೊಳ್ಳುತ್ತಾರೆ. ಈ ನಾಯಕರಿಗೆ ಅಕ್ಕಪಕ್ಕ ಗೂಂಡಾಗಳನ್ನು ಇರಿಸಿಕೊಂಡು ಓಡಾಡುವುದೊಂದು ಶೋಕಿಯಾಗಿದೆ. ನಾವು ಗೂಂಡಾಗಳನ್ನು ದುರಸ್ತಿ ಮಾಡಿ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಜೊತೆಗೆ ಇರಿಸಿಕೊಂಡು ಓಡಾಡುತ್ತೇವೆ ಎಂದು ಕೂಡ ಅವರು ನಿರ್ಲಜ್ಜೆಯಿಂದ ಹೇಳುತ್ತಾರೆ!

ಆದರೆ ಒಂದು ಮಾತ್ರ ನಿಜ; ಗೂಂಡಾಗಳ ಕೈಯಲ್ಲಿ ಸಿಲುಕಿಕೊಂಡಿರುವ ರಾಜಕೀಯವನ್ನು ಮರಳಿ ನಮ್ಮ ಕೈಗೆ ತೆಗೆದುಕೊಳ್ಳದಿದ್ದರೆ ಭವಿಷ್ಯದಲ್ಲಿ ಬಹಳ ಕಷ್ಟವಿದೆ. ಗೂಂಡಾಗಳನ್ನು ನಿಯಂತ್ರಿಸದೆ ಇದ್ದರೆ ಅವರೇ ನಮ್ಮನ್ನೂ, ರಾಜಕಾರಣವನ್ನೂ ತಮ್ಮ ಕೈಗೊಂಬೆ ಮಾಡಿಕೊಳ್ಳುತ್ತಾರೆ. ರಾಜಕೀಯ ಪಕ್ಷಗಳ ಕಾರ್ಯಕರ್ತರ ಹೆಸರಿನಲ್ಲಿ ಎಲ್ಲಿಯವರೆಗೆ ಸಮಾಜಕ್ಕೆ ಕಂಟಕವಾದ ಜನರನ್ನು ಪೋಷಿಸಲಾಗುತ್ತದೆಯೋ ಅಲ್ಲಿಯವರೆಗೂ ಅಂತಹ ಸಮಾಜದ್ರೋಹಿಗಳು ಚಿಗಿತುಕೊಳ್ಳುತ್ತಲೇ ಇರುತ್ತಾರೆ. ಅವರು ನಮ್ಮಂತಹವರಿಗೆ ಮುಜುಗರ ಉಂಟುಮಾಡುತ್ತಲೇ ಇರುತ್ತಾರೆ.

ಹೀಗಾಗಿ ರಾಜಕಾರಣ ಸ್ವಚ್ಛವಾಗಬೇಕು ಅಂದರೆ ರಾಜಕಾರಣದೊಳಗಿನ ಗೂಂಡಾ ಸಂಸ್ಕೃತಿಯನ್ನು ಮೊದಲು ನಾಶಪಡಿಸಬೇಕು. ಅದನ್ನು ಮಾಡುವವರು ಯಾರು ಎಂಬುದೇ ದೊಡ್ಡ ಪ್ರಶ್ನೆ.

ಒದುಗರ ಒಣಿ

ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹೆಚ್ಚು ಮಾನ್ಯವಾದ ಮಾರ್ಗ

ಸ್ವತಂತ್ರ ಚಿಂತನೆ, ಸ್ವತಂತ್ರ ಕರ್ತವ್ಯನಿರ್ವಹಣೆಗಳಿಗೆ - ಅವು ಸಂವಿಧಾನಬದ್ಧವಾಗಿದ್ದಾಗಲೂ ಸಹ ರಾಜಕಾರಣದಲ್ಲಿ ಹೆಚ್ಚಿನ ಅವಕಾಶವಿಲ್ಲವೆಂಬುದನ್ನು ಉಪರಾಷ್ಟ್ರಪತಿ ಹುದ್ದೆಯಿಂದ ಜಗದೀಪ್ ಧನ್‌ಕರ್ ನಿರ್ಗಮನ ಸೂಚಿಸುತ್ತಿದೆ. ಸ್ವಾಭಿಮಾನವಿರುವ ರಾಜಕಾರಣಿಗಳಿಗೆ ತಮ್ಮ ತಮ್ಮ ಪಕ್ಷಗಳ ನಿಲುವುಗಳು ಕೂಡ ಕೆಲವೊಮ್ಮೆ ಬೇಡದ ಅಂಕುಶಗಳಾಗಿ ಬಿಡುತ್ತವೆ. ಮನಮೋಹನ್ ಸಿಂಗ್ ರಂಥವರು ಅವಮಾನಗಳನ್ನು ಹೇಗೋ ನುಂಗಿಕೊಂಡು ಸಹಿಸಿಕೊಳ್ಳುತ್ತಾರೆ; ಧನಕರ್‌ರಂಥವರು ಪದತ್ಯಾಗ ಮಾಡಿ ಹೊರಬರುತ್ತಾರೆ. ಎರಡನೆಯ ಮಾರ್ಗ ಹೆಚ್ಚು ಮಾನ್ಯವೆಂದು ತೋರುತ್ತದೆ.

ಜಿ.ಎಲ್. ಕೃಷ್ಣ ಬೆಂಗಳೂರು

ಶಿಕ್ಷಣದ ವಸ್ತುನಿಷ್ಠ ಅವಲೋಕನ

ವಿಶ್ವವಾಣಿಯಲ್ಲಿ ಪ್ರಕಟವಾದ ಸಿಬಿಎಸ್‌ಸಿ ಪರೀಕ್ಷಾ ಮಾದರಿ ಅಳವಡಿಕೆಯಿಂದ ಯಾರಿಗೆ ಲಾಭ ? ಎಂಬ ಲೇಖನವು ನಮ್ಮ ರಾಜ್ಯದ ಶಿಕ್ಷಣದ ವಸ್ತುನಿಷ್ಠ ಅವಲೋಕನವನ್ನು ಮಾಡಿದೆ. ಕಡಿಮೆ ಅಂಕ ನಿಗದಿ ಪಡಿಸಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಕುಗ್ಗಿಸುವ ಕೆಲಸ ಮಾಡಲಾಗುತ್ತಿದೆ. ನಾವೆಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಕಲಿಯುವಾಗ ಈಗಿನ ಪಠ್ಯಕ್ರಮ ಹಾಗೂ ಪರೀಕ್ಷಾ ನೀತಿಗಿಂತಲೂ ಕಠಿಣ ನಿಯಮಗಳಿದ್ದವು. 7 ತರಗತಿಗೆ ಮುಲ್ಕಿ ಪರೀಕ್ಷೆ ಇತ್ತು. ಇಂದಿನ ಮಕ್ಕಳು ಅಂದಿನ ಮಕ್ಕಳಿಗಿಂತ ಎಲ್ಲಾ ವಿಷಯದಲ್ಲಿ ಮುಂದಿದ್ದಾರೆ. ಹೀಗಿರುವಾಗ ಗುಣಮಟ್ಟದ ಶಿಕ್ಷಣ ಒದಗಿಸುವುದನ್ನು ಬಿಟ್ಟು, 80 ಅಂಕಕ್ಕೆ 13 ಅಂಕ ಪಡೆದರೆ ನೀನು ಪಾಸ್ ಆಗುತ್ತೀ ಎಂದರೆ, ಯಾವ ಮಕ್ಕಳು ತಾನೇ ಗಂಭೀರವಾಗಿ ಕಲಿಯಲು ಸಾಧ್ಯ? ಮಕ್ಕಳು ನಾವಂದುಕೊಂಡಂತೆ ದಡ್ಡರಿಲ್ಲ. ನಮ್ಮ ವ್ಯವಸ್ಥೆಯಲ್ಲಿ ದೋಷವಿದೆ. ಅವುಗಳನ್ನು ಮುಚ್ಚಿ ಹಾಕುವ ಗಡಿಬಿಡಿಯಲ್ಲಿ ಪದೇ ಪದೇ ಪರೀಕ್ಷಾ ನೀತಿ ಬದಲಾಯಿಸಿದರೆ ಭವಿಷ್ಯದಲ್ಲಿ ಉನ್ನತ ಶಿಕ್ಷಣದ ಹಂತದಲ್ಲಿ ಮತ್ತೆ ಕಲಿಕಾ ಹಿನ್ನಡೆ ಅನುಭವಿಸುತ್ತಾರೆ. ಮತ್ತೆ ಮಕ್ಕಳು ವೈಫಲ್ಯದಿಂದ ಮುಜುಗರಕ್ಕೊಳಗಾಗಿ ಅಕ್ರಮ ಮಾರ್ಗ ಹಿಡಿಯುವ ಸಾಧ್ಯತೆ ಇದೆ. ಅಂಕಣದಲ್ಲಿ ವಿವರಿಸಿದಂತೆ ಸಿಬಿಎಸ್‌ಸಿ ಪರೀಕ್ಷಾ ವ್ಯವಸ್ಥೆ ಅಚ್ಚುಕಟ್ಟಾಗಿದೆ. ಯಾವುದೇ ಅಕ್ರಮಕ್ಕೆ ಆಸ್ಪದ ನೀಡದಂತೆ ಪರೀಕ್ಷೆ ನಡೆಸುತ್ತಾರೆ. ಪರೀಕ್ಷೆಯ ಪ್ರಾರಂಭದಿಂದ ಫಲಿತಾಂಶ ಬರುವ ತನಕ ಯಾವುದೇ ವಿವಾದ, ಗೊಂದಲ ಸೃಷ್ಟಿಸುವುದಿಲ್ಲ. ಆದರೆ ರಾಜ್ಯ ಪಠ್ಯಕ್ರಮದಲ್ಲಿ ವಿವಾದ ಬಿಟ್ಟರೆ ಬೇರೆನಿಲ್ಲ. ಮಕ್ಕಳ ಭವಿಷ್ಯದ ದೃಷ್ಟಿಯಿಂದ ಯೋಚಿಸಿ ಶಾಶ್ವತ ಪರಿಹಾರ ನೀತಿ ಜಾರಿಗೊಳಿಸಬೇಕು

ಕುಸುಮಾ ಆರ್

ಜಿಎಸ್‌ಟಿ ಗೊಂದಲ ನಿವಾರಿಸಿ

ತಾವು ಖರೀದಿಸಿದ ವಸ್ತುಗಳಿಗೆ ಜಿಎಸ್‌ಟಿ ಪಾವತಿಸುವುದು ಗ್ರಾಹಕರೇ ಹೊರತು ವರ್ತಕರಲ್ಲ. ಅದನ್ನು ಸಂಗ್ರಹಿಸಿ ಸರಕಾರಕ್ಕೆ ಸಲ್ಲಿಸುವುದು ಮಾತ್ರ ಅವರು. ಇದರ ಲೆಕ್ಕಪತ್ರಗಳು, ಸಲ್ಲಿಸಬೇಕಾದ ರಿಟರ್ನ್‌ಗಳು ಇತ್ಯಾದಿಗಳಿಗೆ



ತಗಲುವ ನಿರ್ವಹಣಾ ವೆಚ್ಚವನ್ನೂ ವರ್ತಕರು ತಮ್ಮ ಲಾಭಾಂಶದಲ್ಲಿ ಸೇರಿಸಿ ಗ್ರಾಹಕರಿಂದಲೇ ವಸೂಲು ಮಾಡದೆ ಇರಲಾರರು. ಆದರೆ ಬೀದಿಬದಿಯ ಅವಿದ್ಯಾವಂತ, ಅಸಂಘಟಿತ ವ್ಯಾಪಾರಿಗಳು ಇದನ್ನೆಲ್ಲ ಮಾಡುವ ಬಗೆ ಹೇಗೆ?

ಚಿದಂಬರ ಕಾಕತ್ಕರ್, ಮಂಗಳೂರು

ಒದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಸಂಜಯನಗರ ಕಿಟ್ಟಿ, ಬೆಂಗಳೂರು**
ವಿಶ್ವೇಶ್ವರ ಭಟ್ಟರ ಹುಟ್ಟುಹಬ್ಬದಂದು ಅವರ ಮಾಜಿ ಪ್ರೇಯಸಿಯರೆಲ್ಲ ಸೇರಿ ಒಟ್ಟಿಗೆ ಏನು ಗಿಫ್ಟ್ ಕೊಟ್ಟರು?
– **ನವಿಲುಗರಿ!**

- **ರಾಘೋಬ, ಮೈಸೂರು**
ಭಟ್ರೇ, ಕಾಲ್ತುಳಿತದಿಂದ ಮನನೊಂದಿರುವ ಕೆ.ಎಸ್.ಸಿ.ಎ ಅಧ್ಯಕ್ಷ ರಘುರಾಮಭಟ್ಟರು ವಿ.ಭಟ್ಟರನ್ನು ಸೂಕ್ತ ಪ್ರಾಯಶ್ಚಿತ್ತ ಸೂಚಿಸಿ ಎಂದು ಕೇಳಿದರೆ ಏನಂದಾರು?
– **ಪ್ರೇಕ್ಷಕರ ಯಾವುದಾದರೂ ಸ್ಟ್ಯಾಂಡಿಗೆ ಸ್ಟ್ಯಾಂಪೆಡ್ ಸಂತ್ರಸ್ತರ ಹೆಸರಿಡಿ!**

- **ತಗಡೂರು ಸುಬ್ಬಣ್ಣ, ನಂಜನಗೂಡು**
ಭಟ್ರೇ, ನಿಮಗೆ ಅರವತ್ತಾದಂತೆ ಕಾಣುವುದಿಲ್ಲವಲ್ಲ?
– **ಮೊದಲೇ ಹೇಳಿದ್ರೆ, ಮೂವತ್ತಾರು ಅಂತಿದ್ನಲ್ಲೋ!**

- **ರಾಘವೇಶ್ವರ ಶಿರೋಳ, ರಬಕವಿ**
ಭಟ್ರೇ, ನಿಮಗೆ ಅರವತ್ತಾಗಿದ್ದರ ವಿಶೇಷವೇನು?
– **ಕತ್ತೆಗೂ ವಯಸ್ಸಾಗುತ್ತದೆ ಅಂತೀಯಾ?!**

- **ವಿಜಯಲಕ್ಷ್ಮಿ ಸಿ., ಕನಕಪುರ**
ಭಟ್ರೇ, ನಾನು ಪ್ರೀತಿಯ ಕೊರತೆಯಿಂದ ಬಳಲುತ್ತಿದ್ದೇನೆ ಅಂತ ನಿಮಗೆ ಅನಿಸುತ್ತಿದೆಯಾ?
– **ಆ ಪ್ರಶ್ನೆ ಈಗ ಯಾಕೆ ಬಂತು ಅಂತ ಅನಿಸುತ್ತಿದೆ!**

- **ರೂಪಾ ಶ್ರೀಧರ, (ಇಮೇಲ್ ಮೂಲಕ)**
ಭಟ್ರೇ, ಸಾಲ ಮಾಡಿ ತುಪ್ಪ ತಿನ್ನಬೇಕು ಅಂತಾರಲ್ಲ?
– **ಅಷ್ಟು ಕಡಿಮೆ ಹಣಕ್ಕೆ ಈಗ ಸಾಲ ಮಾಡಬೇಕಿಲ್ಲ?!**

- **ತೇಜಸ್ವಿ ಅರುಣ್, (ಇಮೇಲ್ ಮೂಲಕ)**
ಭಟ್ರೇ, ಕಾರು ಬೇಡ, ಬೈಕೇ ಇರಲಿ ಅಂತಾಳಲ್ಲ?
– **ಸ್ಪರ್ಶ ಸುಖ ಯಾರಪ್ಪಂದು ?!**

- **ನಾಗಪ್ಪ ಗುತ್ತೇದಾರ, ಬೆಂಗಳೂರು**
ಭಟ್ರೇ, ಕನ್ನಡದ ಸಿನಿಮಾಗಳಿಗೆ ಯಾಕೆ ಇಂಥ ಗತಿ?
– **ಪ್ರೇಕ್ಷಕರು ಮನೆಯಲ್ಲಿಯೇ ಇರಲಿ ಸಿನಿಮಾ ಮಂದಿ ಎಂದು ಅಪೇಕ್ಷಿಸಿದ್ದಾರಂತೆ!**

- **ನರೇಂದ್ರ ಸುಗ್ಗಲ, ನೊಣವಿನಕೆರೆ**
ಭಟ್ರೇ, ಪ್ರೀತಿಸುವಾಗ ಹಾಡು ಹಾಡಲೇಬೇಕಾ?
– **ಆದರೆ ಯಾರಿಗೂ ಕೇಳಿಸಬಾರದು!**

- **ನಾಗರಾಜ ದಂಡಿನ, ಧಾರವಾಡ**
ಭಟ್ರೇ, ಟ್ಯೂಶನ್ ಗೆ ಹೋದರೂ ತಲೆಗೆ ಹತ್ತುವುದಿಲ್ಲವಲ್ಲ?
– **ಬಾರ್‌ಗೆ ಹೋಗಿ ಟ್ರೈ ಕೊಡಬೇಕಿತ್ತು!**

ಇಷ್ಟೊಂದು ಮಿನುಗುತಾರೆ, ಎಲ್ಲಿವರೆಗೆ ಇರುತಾರೆ?

ಕಾಡುದಾರಿ
ಹರೀಶ್ ಕೇರ
vveditoped@gmail.com

'ಲೈಟುಗಳನ್ನು ಆರಿಸಿ ಹೊರಗೆ ಬಂದು ಕುಳಿತುಕೊಳ್ಳಿ' ಎಂದರು ಆ ಹೋಂಸ್ಟೇ ಮಾಲಿಕ. ನಾವು ಹಾಗೇ ಮಾಡಿದೆವು. ಆಗ ರಾತ್ರಿ ಏಳು ಗಂಟೆ. ಕತ್ತಲಾಗಿತ್ತು. ಮಲೆನಾಡಿನ ಆ ಕಾಡಿನ ನಡುವಿನ ಮನೆ ಮೌನವಾಗಿತ್ತು. ಕತ್ತಲಿಗೆ ಕಣ್ಣುಗಳು ಹೊಂದಿಕೊಳ್ಳುತ್ತಿರುವಂತೆ, ಹೊರಗೆ ಒಂದೊಂದೇ ನಕ್ಷತ್ರಗಳು ಮಿನುಗಲು ಆರಂಭಿಸಿದಂತಾಯಿತು. ನಕ್ಷತ್ರಗಳಲ್ಲ ಅವು ಮಿಂಚುಹುಳಗಳು. ಮೊದಲಿಗೆ ಒಂದೊಂದೇ ಮಿನುಗಿದವು. ಬಳಿಕ ಗುಂಪಾಗಿ, ಗೊಂಚಲು ಗೊಂಚಲಾಗಿ. ನೆಲದಲ್ಲೂ ಮಿಂಚು, ಮರಗಳ ಮೇಲೂ ಮಿನುಗು, ಗಾಳಿಯಲ್ಲೂ ಮಿಣುಕು. ಒಮ್ಮೆ ಇಡೀ ಪರಿಸರ ಕತ್ತಲಾಗುತ್ತಿತ್ತು. ಮರುಕ್ಷಣ ಜಗ್ಗನೆ ಬೆಳಕಾಗುತ್ತಿತ್ತು. ಒಮ್ಮೆ ಪೂರ್ವದಿಕ್ಕಿನಿಂದ ಪಶ್ಚಿಮಕ್ಕೆ ಮಿಂಚಿನ ಗೆರೆಯೆಳೆದಂತೆ ಸಾಲಾಗಿ ಹೊಳೆದರೆ, ಇನ್ನೊಮ್ಮೆ ಉತ್ತರದಿಂದ ದಕ್ಷಿಣಕ್ಕೆ ಹೊಳೆಯೊಂದು ಹರಿದಂತೆ. ಮತ್ತೊಮ್ಮೆ ಸಾಗರದ ಅಲೆ ಉಕ್ಕಿ ಬಂದಂತೆ ದೂರದಿಂದ ಹತ್ತಿರಕ್ಕೆ. ನಿರ್ದೇಶಕನೇ ಇಲ್ಲದ ಪರಿಸರದ ಮಾಯಾರೂಪಕವೊಂದು ನಮ್ಮೆದುರು ನಡೆಯುತ್ತಿರುವಂತೆ ಇತ್ತು ಆ ದೃಶ್ಯ.

'ನಾನು ಲೈಟ್ ಆರಿಸಲು ಹೇಳಲು ಎರಡು ಕಾರಣ– ಒಂದು, ಬಲ್ಬಿನ ಬೆಳಕು ಇದ್ದರೆ ಇಷ್ಟು ಸೊಗಸಾಗಿ ಇವು ಕಾಣುವುದಿಲ್ಲ, ಎರಡನೆಯದು, ಅವು ಲೈಟಿನ ಬೆಳಕಿಗೆ ಕಕ್ಕಾಬಿಕ್ಕಿ ಆಗಿಬಿಡುತ್ತವೆ. ಈಗ ಅವುಗಳ ಮಿಲನದ ಸಮಯ. ನೋಡಿ ಅಲ್ಲಿ, ಕೆಳಗೆ ನೆಲದಲ್ಲಿ ಹೊಳೆಯುತ್ತಿರುವುದೆಲ್ಲ ಹೆಣ್ಣು ಮಿಂಚುಹುಳಗಳು. ಮೇಲೆ ಹಾರಾಡುತ್ತಿರುವವು ಗಂಡುಹುಳಗಳು. ಈ ಕತ್ತಲಿನಲ್ಲಿ ಮಿನುಗುವ ಬೆಳಕಿನ ಮೂಲಕ ಅವು ಒಂದಕ್ಕೊಂದು ಸಂದೇಶ ಕಳಿಸುತ್ತವೆ. ಇಲ್ಲಿ ಲಕ್ಷಾಂತರ ಹುಳಗಳಿವೆ ತಾನೆ? ಒಂದೊಂದು ಗಂಡಿನ ಮಿನುಗುವ ಲಯವೂ ಒಂದೊಂದು ಥರ. ಯಾವುದೋ ಒಂದು ನಿರ್ದಿಷ್ಟ ಹೆಣ್ಣು, ಇನ್ಯಾವುದೋ ಒಂದು ನಿರ್ದಿಷ್ಟ ಗಂಡಿಗೆ ಪಸಂದ್ ಆಗಬೇಕು. ಆ ಸಂದೇಶವೂ ಅವುಗಳ ಬೆಳಕಿನ ಮೂಲಕವೇ. ನಂತರ ಅವು ಕೂಡಿ ಮೊಟ್ಟೆ ಇಟ್ಟು ಮರಿ ಮಾಡಬೇಕು. ವಿದ್ಯುತ್ತಿನ ಪ್ರಬಲ ಬೆಳಕು ಅದನ್ನು ಕಾಣಲು ಬಿಡುವುದೇ ಇಲ್ಲ. ಬೆಳಕಿನ ಮೂಲಕ ಸಂದೇಶ ಕಳಿಸುವುದು ಸಾಧ್ಯವಾಗದೇ ಹೋದಾಗ ಅವು ಕೂಡಲಾಗದೇ ಸಾಯುತ್ತವೆ. ಇಂದು ಮಿಂಚುಹುಳಗಳು ಅಳಿಯುತ್ತಿರುವುದಕ್ಕೆ ನಾವು ಮಾಡುತ್ತಿರುವ ಬೆಳಕಿನ ಮಾಲಿನ್ಯ ದೊಡ್ಡ ಕಾರಣಭಿ ಎಂದರು ಅವರು. ದೊಡ್ಡ ಡಿಗ್ರಿ ಕಲಿತು, ಬೆಂಗಳೂರಿನಲ್ಲಿದ್ದ ಕೈತುಂಬ ಸಂಬಳ ಬರುವ ಕೆಲಸ ಬಿಟ್ಟು, ಊರಿನಲ್ಲಿ ಪರಿಸರದೊಂದಿಗೆ ಒಂದಾಗಿ ಇರುವ, ಕೃಷಿ ಮಾಡುವ ಉತ್ಸಾಹದಿಂದ ಬಂದ ವ್ಯಕ್ತಿ.

ಅತ್ಯಂತ ನಿರುಪದ್ರವಿ ಹುಳಗಳಾದ ಇವು ನಮ್ಮ ಬಾಲ್ಯವನ್ನು ಶ್ರೀಮಂತಗೊಳಿಸಿದ್ದವು ಅಂತ ನಮ್ಮಲ್ಲಿ ಕೆಲವರಾದರೂ ನೆನಪಿಸಿಕೊಳ್ಳದೇ ಇರಲಾರರು. ಬಯಲುಸೀಮೆಯಲ್ಲೂ ತಂಪು ಪ್ರದೇಶದಲ್ಲಿ, ಹೊಳೆ–ಕೆರೆಗಳ ಬದಿಯಲ್ಲಿ ಕಾಣಬಹುದಾದರೂ ಮಲೆನಾಡಿನವರಿಗೆ ಇದರ ನಂಟು ಹೆಚ್ಚು. ಮುಂಗಾರಿನ ಮೊದಲ ದಿನಗಳಲ್ಲಿ ಪಶ್ಚಿಮ ಘಟ್ಟಗಳು ಈ ಮಿಂಚುಹುಳಗಳ ಮಿನಿಯೇಚರ್ ಬಲ್ಬು ಮಾಲೆಗಳನ್ನು ಹೊದೆಸಿದಂತೆ ಕಂಗೊಳಿಸುತ್ತವೆ. ಒಂದೆರಡು ಮಳೆ ಬಿದ್ದರೆ ಸಾಕು ಇವು ಭುಗಿಲೇಳುತ್ತವೆ. ಆಗೆಲ್ಲ ನಮಗೆ ಇವುಗಳನ್ನು ಹಿಡಿದು ಗಾಜಿನ ಜಾಡಿಯಲ್ಲಿ ತುಂಬುವ ಹುಚ್ಚು. ನಾಲ್ಕು ಹುಳ ಗಾಜಿನ ಜಾಡಿಯಲ್ಲಿ ಹಾಕಿ ಮನೆಯೊಳಗಿಟ್ಟರೆ ಇಡೀ ರಾತ್ರಿ ಬೆಳಗುತ್ತ ಇಂದ್ರಲೋಕದ ಫೀಲ್ ಕೊಡುತ್ತಿದ್ದವು. ಅದರೊಳಗೆ ಗಾಳಿಯಾಡಲು ಒಂದು ರಂಧ್ರ. ಅವು ತಿನ್ನಲಿ ಎಂದು ಹಣ್ಣಿನ ಚೂರು. ಪಾಪ, ಅವು ಏನನ್ನೂ ತಿನ್ನುವುದಿಲ್ಲ ಎಂಬುದು ನಮಗೆ ಆಗ ಗೊತ್ತಿರಲಿಲ್ಲ. ಯಾಕೆಂದರೆ ತಿನ್ನುವ ಕೆಲಸವನ್ನೆಲ್ಲ ಅವು ಪ್ಯೂಪಾ ಆಗಿರುವಾಗಲೇ ಮುಗಿಸಿರುತ್ತವೆ. ಅವು ದೊಡ್ಡದಾಗಿ ಹಾರುವ ಹಂತಕ್ಕೆ ಬಂದ ಬಳಿಕ ಸಂತಾನೋತ್ಪಾದನೆ ಮಾತ್ರ ಅವುಗಳ ಕೆಲಸ. ಒಂದೇ ತಿಂಗಳ ಜೀವನ. ಇದೆಲ್ಲ ಗೊತ್ತಿದ್ದರೆ ಅಂದು ಅವುಗಳನ್ನು ಹಿಡಿದು ಬಂಧಿಸುತ್ತಿರಲಿಲ್ಲವೆನಿಸುತ್ತದೆ.

ಮಿಣುಕು ಹುಳ ಯಾಕೆ ಮಿನುಗುತ್ತದೆ ಎಂಬುದಕ್ಕೆ ಅಜ್ಜಿ ಕತೆ ಹೇಳುತ್ತಿದ್ದರು. ಅವರ ಪ್ರಕಾರ, ಅಳಿದುಹೋಗಿರುವ ನಮ್ಮ ಹಿರಿಯರು ನಮ್ಮನ್ನು ನೋಡಲು ರಾತ್ರಿಗಳಲ್ಲಿ ಮಿಂಚು ಹುಳವಾಗಿ ಆಗಮಿಸುತ್ತಾರೆ. ಬಹುಶಃ ನಾವು ಅವುಗಳನ್ನು ಹಿಡಿದು ಹಿಂಸೆ ಕೊಡದಿರಲಿ ಎಂಬ ಉದ್ದೇಶದಿಂದಲೇ ಅವರು ಹಾಗೆ ಹೇಳುತ್ತಿದ್ದರೆಂದು ತೋರುತ್ತದೆ. ಜಪಾನಿ ಸಂಸ್ಕೃತಿಯಲ್ಲಿ ಮಿಣುಕು ಹುಳಗಳಿಗೆ ಪವಿತ್ರ ಸ್ಥಾನವೇ ಇದೆ.

ಅವುಗಳನ್ನು ಹಿಡಿಯಲು ಕಲಿಯುವ ಮೊದಲು, ಅವು ಬೆಳಗುವುದನ್ನು ನೋಡಿ ಈ ಹುಳಗಳು ಬಿಸಿ ಬಿಸಿ ಇರಬಹುದು ಎಂದು ಯೋಚಿಸುತ್ತಿದ್ದುದನ್ನು ಈಗ ನೆನೆದರೆ ನಗು ಬರುತ್ತದೆ. ಅಣ್ಣ ಮೊದಲ ಸಲ ಮಿಂಚು ಹುಳ ಹಿಡಿದು ಅಂಗೈ ಮೇಲಿಟ್ಟುಕೊಂಡು 'ಅಯ್ಯೋ ಬಿಸಿ' ಎಂದು ನಾಟಕವಾಡಿದ್ದು, ಅದನ್ನು ನಂಬಿ ಕಂಗಾಲಾದದ್ದು ಕೂಡ ನೆನಪು. ಆದರೆ ಈ ಬೆಳಕು ಹೊಮ್ಮಿಸುವ ಇವುಗಳ ಪೃಷ್ಠಭಾಗವೇನೂ ಬಿಸಿಯಾಗಿರುವುದಿಲ್ಲ. ಅದು ಚಂದ್ರನ ಬೆಳಕಿನಂಥದ್ದು. ಲ್ಯುಸಿಫೆರಿನ್ ಎಂಬ ರಾಸಾಯನಿಕವನ್ನು ಆಕ್ಸಿಲ್ಯುಸಿಫೆರಿನ್ ಎಂಬ ಇನ್ನೊಂದು ರಾಸಾಯನಿಕವಾಗಿ ಬದಲಾಯಿಸುವ ಮೂಲಕ ಆ ಕ್ರಿಯೆಯಲ್ಲಿ ಬೆಳಕು ಬಿಡುಗಡೆಯಾಗುವಂತೆ ಮಾಡುವುದು ಈ ಕ್ರಿಯೆಯ ಹಿಂದಿನ ವೈಜ್ಞಾನಿಕ ರಹಸ್ಯ. ಅದೇನೂ ತನಗೆ ದಾರಿ ಕಾಣಲಿ ಎಂದು ಹಾಗೆ ಮಾಡುವುದಲ್ಲ. ಗಂಡು ಹೆಣ್ಣನ್ನು– ಹೆಣ್ಣು ಗಂಡನ್ನು ಹುಡುಕಿಕೊಳ್ಳಲು ಇರುವ ವ್ಯವಸ್ಥೆಯದು. ಹಾಗೇ ತನ್ನನ್ನು ಬೇಟೆಯಾಡಲು ಬರುವ ಕ್ರಿಮಿಕೀಟಗಳಿಗೆ ಕೊಡುವ ಎಚ್ಚರಿಕೆಯೂ ಹೌದು. ಈ ಎಚ್ಚರಿಕೆಯನ್ನು ಮೀರಿ ಇವುಗಳನ್ನು ಹಿಡಿದು ಭಕ್ಷಿಸಿದರೆ ಆ ಬೇಟೆಗಾರ ಕ್ರಿಮಿ ವಿಷ ಸೇವಿಸಿದಂತೆಯೇ ಸರಿ. ಅಷ್ಟು ಕಹಿಯಾದ ಸ್ಟಿರಾಯ್ಡ್‌ಗಳನ್ನು ಅದು ಬಿಡುತ್ತದೆ.

ಮಿಂಚುಹುಳ ಎಂದ ಕೂಡಲೆ ಕುವೆಂಪು ಬರೆದ 'ರಾಮಾಯಣ ದರ್ಶನಂ' ಮಹಾಕಾವ್ಯದ ಒಂದು ದೃಶ್ಯ ನೆನಪಾಗುತ್ತದೆ. ರಾಮನ ವನವಾಸ. ಸೀತೆಯನ್ನು ರಾವಣ ಅಪಹರಿಸಿದ್ದಾನೆ. ಸುಗ್ರೀವನೊಂದಿಗೆ ಮೈತ್ರಿಯಾಗಿ, ವಾಲಿವಧೆಯೂ ಆಗಿ ಸುಗ್ರೀವ ಕಿಷ್ಕಿಂಧೆಗೆ ತೆರಳಿ ರಾಮ ಲಕ್ಷ್ಮಣರು ಮಾಲ್ಯವಂತ ಪರ್ವತದ ಗುಹೆಯಲ್ಲಿ ತಂಗಿದ್ದಾರೆ. ಘೋರ ಭೀಷಣ ಮಳೆಗಾಲ. ಥಂಡಿ ಹಿಡಿಸಿದ ಆ ಮಲೆನಾಡಿದ ಮಳೆಗಾಲದ ಮಳೆಗಾಲದ ಐದು ತಿಂಗಳು ಕಳೆಯುತ್ತ ಬಂದರೂ ಸುಗ್ರೀವನ ಸುಳಿವಿಲ್ಲ. ಸೀತಾನ್ವೇಷಣೆಗೆ ನೆರವಾಗುತ್ತೇನೆ ಎಂದಿದ್ದ ಕಪಿವೀರನ ಸದ್ದಿಲ್ಲ. ಆತಂಕ ಒಳಗೊಳಗೇ ಮಡುಗಟ್ಟುತ್ತದೆ. ಮರೆತನೇನು? ಲಕ್ಷ್ಮಣ ಕೋಪದಿಂದ ಹೂಂಕರಿಸುತ್ತಾನೆ. ಆದರೆ ರಾಮನೇ ಅವನನ್ನು ಸುಮ್ಮನಿರಿಸುತ್ತಾನೆ. ಈ ಭಯಂಕರ ಮಳೆ ಕಳೆದ ಮೇಲೆ ಬಾ ಎಂದು ನಾನೇ ಅವನಿಗೆ ಹೇಳಿದ್ದೇನೆ ಎನ್ನುತ್ತಾನೆ. ಅಷ್ಟರಲ್ಲಿ ಬಂತು ಅಶ್ವಯುಜ ಮಾಸ.

ಅರಳಿದುವು ಕಣ್ಣಾಲಿ : ಘೋರಾಂಧಕಾರದಾ
ಸಾಗರದಿ ತೇಲಿ ಬಹ ಹನಿಮಿಂಚಿನಂತೆವೋಲ್,
ಮಿಂಚುಂಬುಳೊಂದೊಯ್ಯನೊಯ್ಯನೆಯೆ
ಪೊಕ್ಕುದಾ
ಕಗ್ಗತ್ತಲೆಯ ಗವಿಗೆ, ತೇಲುತೀಜುತ ಮೆಲ್ಲ
ಮೆಲ್ಲನೆಯೆ ಹಾರಾಡಿ ನಲಿದಾಡಿತಲ್ಲಲ್ಲಿ,
ಮಿಂಚಿನ ಹನಿಯ ಚೆಲ್ಲಿ, ಮಿಂಚಿನ ಹನಿಯ
ಸೋರ್ವ
ಮಿಂಚುಂಬನಿಯ ಪೋಲ್ವ
ಮಿಂಚುಂಬುಳುವನಕ್ಷಿ
ಸೋಲ್ವಿನಂ ನೋಡಿ, ರಾಮನ ಕಣ್ಗೆ ಹನಿ
ಮೂಡಿ,
ತೊಯ್ದತ್ತು ಕೆನ್ನೆ : ತೆಕ್ಕನೆ ತುಂಬಿದುದು ಶಾಂತಿ
ತನ್ನಾತ್ಮಮಂ ! ಮತ್ತೆಮತ್ತೆ ನೋಡಿದನದಂ.
ಸಾಮಾನ್ಯಮಂ, ಆ ಅನಿರ್ವಚನೀಯ
ದೃಶ್ಯಮಂ !

ಕಗ್ಗತ್ತಲು ಕವಿದ ರಾಮನ ಬದುಕಿಗೆ ಭರವಸೆಯ ಬೆಳಕು ಬಂದುದು ಒಂದು ಸಣ್ಣ ಮಿಂಚುಹುಳದ ಮೂಲಕ! ವಾಲ್ಮೀಕಿಯಂಥ ಆದಿಕವಿಗೂ ಹೊಳೆಯದ ದೃಶ್ಯವೊಂದು ಮಲೆನಾಡಿನ ಈ ಮಹಾಕವಿಗೆ ಝಗ್ಗನೆ ಹೊಳೆದುಬಿಟ್ಟಿದೆ. ಕಾರ್ಗತ್ತಲಲ್ಲಿ ತಡಕಾಡುತ್ತಿರುವವನಿಗೆ ಅಶ್ವಯುಜ ಮಾಸದ ಮಳೆ ಇಳಿಯುತ್ತ ಬಂದ ಆ ರಾತ್ರಿಯಲ್ಲಿ ಗವಿಯೊಳಗೆ ಮೆಲ್ಲಮೆಲ್ಲನೆ ಹಾರಾಡುತ್ತ ಬಂದ ಮಿಂಚುಹುಳವೊಂದು ಆಸೆಯ ಹಣತೆಗೆ ಕಿಡಿ ಹಚ್ಚಿತು. ನೋಡಿದ ರಾಮನ ಕಣ್ಣು ಹನಿಗೂಡಿತು, ಆತ್ಮವನ್ನು ಶಾಂತಿ ತುಂಬಿತು. ಅನಿರ್ವಚನೀಯ ದೃಶ್ಯವನ್ನು ಮತ್ತೆ ಮತ್ತೆ ನೋಡಿದ, ಕೆನ್ನೆ ತೋಯಿಸಿಕೊಂಡ. ಇದು ವಾಲ್ಮೀಕಿಗೆ ಕಾಣದ ಶ್ರೀರಾಮ, ನಮ್ಮ ಮಲೆನಾಡಿನ ಮಿಂಚುಹುಳದ ಮಹಿಮೆ!

ಮಿಂಚುಹುಳಗಳ ಬಗ್ಗೆ ಇತ್ತೀಚೆಗೆ ಓದಿದ ಕೆಲವು ಸುದ್ದಿಗಳನ್ನು ಹೇಳಲೇಬೇಕು. ಎಲ್ಲ ಕಡೆಯಲ್ಲೂ ಈ ಹುಳಗಳು ಅಷ್ಟಿಷ್ಟು ಕಂಡುಬರುತ್ತವೆ. ಇತ್ತೀಚೆಗೆ, ಬೆಂಗಳೂರಿನಲ್ಲೂ ಕೆಲವೆಡೆ ಇವುಗಳನ್ನು ಕಂಡಿದ್ದೇವೆ, ಆದರೆ ನಗರದ ಒಳಗಲ್ಲ, ಹೊರಗೆ ಎಂದು ಸಂಶೋಧಕರು ಹೇಳಿದ್ದಾರೆ. ಅದೇನೂ ಸಿಹಿ ಸುದ್ದಿಯಲ್ಲ. ತೀವ್ರ ನಗರೀಕರಣದ ಮೊದಲು ಇವುಗಳನ್ನು ಬೆಂಗಳೂರಿನ ಹಸಿರು ಇದ್ದೆಡೆಗಳಲ್ಲಿ ಕಾಣಬಹುದಿತ್ತು. ಈಗ ಜಿಕೆವಿಕೆ, ಬನ್ನೇರಘಟ್ಟ, ಹೆಸರಘಟ್ಟ, ನಂದಿಬೆಟ್ಟ ಮೊದಲಾದ ಕಡೆಗಳಿಗೆ ಅಲ್ಪ ಸಂಖ್ಯೆಗೆ ಸೀಮಿತವಾಗಿವೆಯಂತೆ. ಅವೂ ಕೂಡ ಕೃತಕ ಬೆಳಕಿನ ಏಟಿಗೆ ಅಳಿಯುವ ಸಾಧ್ಯತೆ ಹೆಚ್ಚು. ಮಿಂಚುಹುಳಗಳು ಇರುವುದು ಆ ಪರಿಸರ ಚೆನ್ನಾಗಿದೆ ಎನ್ನುವುದರ ಸೂಚಕ. ಅವು ಇರಬೇಕಿದ್ದರೆ ಮಣ್ಣು ಆರೋಗ್ಯವಾಗಿರಬೇಕು, ಸಾಕಷ್ಟು ಹಸಿರು ಇರಬೇಕು, ವಾತಾವರಣದಲ್ಲಿ ಆರ್ದ್ರತೆ ಇರಬೇಕು. ಹೊಗೆ ಮತ್ತು ಕೃತಕ ಬೆಳಕಿನ ಹಾವಳಿ ಇರಬಾರದು.

80ರ ದಶಕದ ಬಾಲಿವುಡ್ ಚಲನಚಿತ್ರಗಳಲ್ಲೂ ಮತ್ತು ಮಕ್ಕಳ ಬೆಡ್‌ಟೈಮ್ ಕಥೆಗಳಲ್ಲೂ ಸಾಮಾನ್ಯವಾಗಿದ್ದ ಮಿಣುಕುಹುಳುಗಳು ಈಗ ಅಸ್ತಿತ್ವದ ಬಿಕ್ಕಟ್ಟನ್ನು ಎದುರಿಸುತ್ತಿವೆ ಎಂಬುದು ಭಾರತೀಯ ವನ್ಯಜೀವಿ ಸಂಸ್ಥೆ (WII) ಸಹಯೋಗದೊಂದಿಗೆ ಇಬ್ಬರು ವಿಜ್ಞಾನಿಗಳು ನಡೆಸಿದ ರಾಷ್ಟ್ರವ್ಯಾಪಿ ಅಧ್ಯಯನದಿಂದ ಗೊತ್ತಾಗಿದೆ. ಇವರು ಮಿಂಚುಹುಳುಗಳ ಇತ್ತೀಚಿನ ಗಣತಿ ಮಾಡಿದ್ದಾರೆ. ಕೇವಲ ಒಂದು ವರ್ಷದೊಳಗೆ ದೇಶಾದ್ಯಂತ ಅವುಗಳ ಸಂಖ್ಯೆಯಲ್ಲಿ 76 ಪ್ರತಿಶತದಷ್ಟು ಕುಸಿತ ಆಗಿದೆಯಂತೆ. ಇದು ಕಳವಳಕಾರಿ. ಡೆಹ್ರಾಡೂನ್‌ನ ಗ್ರಾಫಿಕ್ ಎರಾ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಡಾ. ವೀರೇಂದ್ರ ಪ್ರಸಾದ್ ಉನಿಯಾಲ್ ಮತ್ತು ಡಾ. ನಿಧಿ ರಾಣಾ ಅವರು ನಡೆಸಿದ ಗಣತಿಯಿದು. 'ಬಹುಶಃ ಇವುಗಳನ್ನು ನೋಡುತ್ತಿರುವ ಕೊನೆಯ ತಲೆಮಾರು ನಾವೇ ಆದರೂ ಅಚ್ಚರಿಯಿಲ್ಲ' ಎನ್ನುತ್ತಾರೆ ವಿಜ್ಞಾನಿಗಳು.

ಮಿಂಚುಹುಳುಗಳು ಸಾಮಾನ್ಯವಾಗಿ ಸಮಶೀತೋಷ್ಣ ಮತ್ತು ಉಷ್ಣವಲಯದ ಹವಾಮಾನದಲ್ಲಿ ಕಂಡುಬರುತ್ತವೆ. ಮುಖ್ಯವಾಗಿ ತೇವಾಂಶವುಳ್ಳ ಜೌಗು ಪ್ರದೇಶ, ಕಾಡುಪ್ರದೇಶಗಳಲ್ಲಿ. ಇದು ಅವುಗಳಿಗೆ ಉಳಿದು ಬೆಳೆಯಲು ಸೂಕ್ತ ಪರಿಸರ. ಅವುಗಳೇಕೆ ಅಳಿಯುತ್ತಿವೆ ಮತ್ತು ಅವುಗಳನ್ನು ಉಳಿಸಿಕೊಳ್ಳುವುದು ಹೇಗೆ ಎಂಬ ಬಗ್ಗೆ ಹೆಚ್ಚಿನ ಭಾಷಣದ ಅಗತ್ಯವಿಲ್ಲವೆನಿಸುತ್ತದೆ. ನಮಗೆಲ್ಲರಿಗೂ ಗೊತ್ತಿರುವ ಕಾರಣಗಳೇ– ಅರಣ್ಯನಾಶ, ಜಲಮೂಲಗಳ ಮಾಲಿನ್ಯ, ದಟ್ಟ ರಾತ್ರಿಗಳಲ್ಲೂ ಕೃತಕ ಬೆಳಕಿನ ಹಾವಳಿ, ಜವುಗು ನೆಲಗಳ ನಾಶ, ಕ್ರಿಮಿನಾಶಕಗಳ ಮಿತಿಮೀರಿದ ಬಳಕೆ ಇತ್ಯಾದಿ. ನಾನು ಮೇಲೆ ಹೇಳಿದ ಹೋಂಸ್ಟೇ ಓನರ್‌ನಂತೆ ಸ್ವಲ್ಪ ಸೂಕ್ಷ್ಮತೆ ಇದ್ದರೂ ಸಾಕು, ಅವುಗಳನ್ನು ಉಳಿಸಿಕೊಳ್ಳಬಹುದು.

ನಡೆ ನುಡಿ
ಕೆ.ಎಂ.ಶೇಖರ, ಹುಳಿಮಾವು

ಭಾಷಿ ಅಲ್ಲ ಬದ್ಕ್ ವಿಶ್ವ ಕುಂದಾಪ್ರ ಕನ್ನಡ ದಿನ

ಹೌದು. ಹೀಗೊಂದು ಧ್ಯೇಯವಾಕ್ಯದಡಿಯಲ್ಲಿ ಪ್ರಾದೇಶಿಕ ಭಾಷೆಯೊಂದರ ಸಂಭ್ರಮದ ಆಚರಣೆಗೆ ಸಹೃದಯ ಸಮಾನ ಮನಸ್ಕರು ಒಂದೆಡೆ ಸೇರಿ ನಿಗದಿಪಡಿಸಿಕೊಂಡ ದಿನ.ದಕ್ಷಿಣದ ಉಡುಪಿಯ ಗಡಿಯಿಂದ ಹಿಡಿದು ಉತ್ತರದ ಶಿರೂರಿನ ತನಕ, ಪೂರ್ವದ ಹೆಬ್ರಿ –ಸೋಮೇಶ್ವರ ದಿಂದ ಪಶ್ಚಿಮದ ಅರಬ್ಬೀ ಸಮುದ್ರದ ಕರಾವಳಿ ಉದ್ದಗಲಕ್ಕೂ ವಾಸವಿರುವ ಜನರ ಆಡುಭಾಷೆಯೇ ಈ ಕುಂದಗನ್ನಡ.ಕೃಷಿಯೇ ಪ್ರಧಾನವಾಗಿರುವ ಈ ಪ್ರದೇಶದ ಜನರು ತಮ್ಮ ವಿಶಿಷ್ಟವಾದ ಸಂಸ್ಕೃತಿ ಮತ್ತು ಆಚರಣೆಯ ಮೂಲಕ ಹೆಸರಾದವರು. ಕಲೆ, ಸಾಹಿತ್ಯ,ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿ,ಪ್ರಾದೇಶಿಕ ಅಭಿವೃದ್ಧಿಗೂ ಕೈಲಾದಷ್ಟು ಸಹಾಯವನ್ನು ಮಾಡುತ್ತಾ ಬದುಕನ್ನು ಕಟ್ಟಿಕೊಂಡವರು.ದಿನಬಳಕೆಯಲ್ಲಿ ಬಳಸುವ ಭಾಷೆಯಲ್ಲೇ ಬದುಕನ್ನು ಮೆಚ್ಚಿಕೊಂಡವರು. ತನ್ನೂರಿನ ಅಭಿವೃದ್ಧಿಯ ಕನಸಿನ ಜೊತೆಯಲ್ಲೇ ವಿಶ್ವದ ಬೇರೆ ಬೇರೆ ಪ್ರದೇಶಗಳಲ್ಲಿ ಉದರನಿಮಿತ್ತ ಕಾಯಕದಲ್ಲಿ ತೊಡಗಿಸಿಕೊಂಡಿದ್ದರೂ, ತಾವಾಡುವ ಭಾಷೆಯ ಬಗ್ಗೆ ಅಪಾರ ಅಭಿಮಾನವನ್ನು ಇಟ್ಟುಕೊಂಡವರು.

ವರ್ಷದ ಹೆಚ್ಚಿನ ಎಲ್ಲಾ ದಿನಗಳು ಒಂದಲ್ಲ ಒಂದು ವಿಚಾರಕ್ಕೆ ಅದರದ್ದೇ ಆದ ದಿನಾಚರಣೆಯನ್ನು ಹೊಂದಿದ್ದು,ನಮ್ಮ ಅಭಿಮಾನದ ಭಾಷೆಗಾಗಿ ಒಂದು ನಿಗದಿತ ದಿನವನ್ನು ಯಾಕೆ ಮೀಸಲಿಡಬಾರದೆಂದು ಆಲೋಚಿಸಿ,ಆರು ವರ್ಷಗಳ ಹಿಂದೆ, ಕೃಷಿ ಪ್ರಧಾನವಾದ ಕುಂದಾಪುರ ಹಾಗೂ ಸುತ್ತ ಮುತ್ತಲಿನ ಪ್ರದೇಶದಲ್ಲಿ ಕೃಷಿ ಚಟುವಟಿಕೆಯ ಭಾಗವಾಗಿ ಭತ್ತ ನಾಟಿ ಮುಗಿಸಿ,ಪ್ರಥಮ ಹಬ್ಬದ ವಾತಾವರಣದ ಆಚರಣೆಗೆ ಸೂಕ್ತವಾದ ದಿನವೇ ಆಷಾಡ ಮಾಸದ ಕರ್ಕಾಟಕ ಅಮಾವಾಸ್ಯೆ ಅಥವಾ ಆಟಿ ಅಮಾವಾಸ್ಯೆಯೇ ಹೆಚ್ಚು ಸೂಕ್ತವೆಂದು ನಿರ್ಧರಿಸಿದರು. ಕುಂದಾಪ್ರ ಕನ್ನಡವೆಂಬ ಭಾಷೆ, ಮಣ್ಣಿನ ಗುಣ,ಸಾಹಿತ್ಯಸಂಸ್ಕೃತಿಯ ಇಂಪು ವಿಶ್ವದಾದ್ಯಂತ ಪಸರಿಸುವ ದೃಷ್ಟಿಯಿಂದ ವಿಶ್ವ ಕುಂದಾಪ್ರ ಕನ್ನಡ ದಿನಾಚರಣೆಯನ್ನು ಆಚರಿಸುವ ನಿರ್ಧಾರವನ್ನು ಅಂದು ತೆಗೆದುಕೊಳ್ಳಲಾಯಿತು. ಸಾಮಾಜಿಕ ಜಾಲತಾಣದ ಮೂಲಕ ವ್ಯಾಪಕ ಪ್ರಚಾರ ಗಿಟ್ಟಿಸಿಕೊಂಡ ವಿಶ್ವ ಕುಂದಾಪ್ರ ಕನ್ನಡ ದಿನಾಚರಣೆಯು ಇಂದು ಕೇವಲ ಆ ಭಾಷೆ ಮಾತನಾಡುವ ಕುಂದಾಪುರ,ಬೈಂದೂರು, ಕಾರ್ಕಳ, ಭಟ್ಕಳ,ಉಡುಪಿ ಹಾಗೂ ಬ್ರಹ್ಮಾವರ ತಾಲ್ಲೂಕುಗಳಿಗಷ್ಟೇ ಸೀಮಿತವಾಗಿರದೇ, ಸಾಗರದಾಚೆಯೂ ಕೂಡ ಸಂಭ್ರಮದಿಂದ ಆಚರಿಸುತ್ತಿದ್ದಾರೆ.

ಬದುಕು ಕಟ್ಟಿಕೊಳ್ಳಲು ಪರವೂರಿಗೆ ಹೋದ ಈ ಪ್ರಾಂತ್ಯದ ಜನರು ತಾವಾಡುವ ಕುಂದಾಪ್ರ ಭಾಷೆಯ ತೇರನ್ನು ಸಂಘಟಿತರಾಗಿ ಎಳೆಯುತ್ತಿದ್ದಾರೆ. ದೂರದ ಮುಂಬೈ,ಲಂಡನ್ , ಯುಎಇಯಲ್ಲಿಯೂ ಸಡಗರದಿಂದ ವಿಶ್ವ ಕುಂದಾಪ್ರ ದಿನಾಚರಣೆಯನ್ನು ಆಚರಿಸುತ್ತಿದ್ದಾರೆ. ಭಾಷಾ ವ್ಯಾಮೋಹದಿಂದಲೇ ತಾವೆಲ್ಲರೂ ಒಂದಾಗಿ ಅಮಾವಾಸ್ಯೆಯಂದು ಹುಟ್ಟಿದೂರಿನ ಸಂಸ್ಕೃತಿ, ಕ್ರೀಡೆ, ಆಚರಣೆಗಳನ್ನು ವೈಭವೀಕರಿಸಿ, ಅದ್ದೂರಿಯಿಂದ ಅನೇಕ ಕಾರ್ಯಕ್ರಮಗಳನ್ನು ಸಂಯೋಜಿಸುತ್ತಾರೆ. ವಿಶ್ವ ಕುಂದಾಪ್ರ ದಿನಾಚರಣೆ ಆರಂಭವಾದ ಬಳಿಕ ಈ ಭಾಷೆಗೊಂದು ಸಮಗ್ರವಾದ ವೇದಿಕೆ ಬೇಕೆಂಬ ನಿಟ್ಟಿನಲ್ಲಿ ಸರಕಾರದ ಮೇಲೆ ಒತ್ತಡ ತಂದು ಈಗಾಗಲೇ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕುಂದಗನ್ನಡ ಅಧ್ಯಯನ ಪೀಠ ಆರಂಭಗೊಂಡಿದ್ದು, ಸರಕಾರ 50 ಲಕ್ಷ ರೂಪಾಯಿಗಳ ಅನುದಾನವನ್ನು ಮೀಸಲಿರಿಸಿದೆ. ಬೆಂಗಳೂರಿನಲ್ಲಿರುವ ಕುಂದಾಪ್ರ ಕನ್ನಡ ಪ್ರತಿಷ್ಠಾನ ದಿನಾಂಕ 26 ಹಾಗೂ 27 ರ ಶನಿವಾರ ಮತ್ತು ಭಾನುವಾರದಂದು ನಗರದ ನಂದಿ ಲಿಂಕ್ಸ್ ಮೈದಾನದಲ್ಲಿ ಕುಂದಾಪುರ ಮೂಲದ ಅನೇಕ ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಚರಣೆಗಳನ್ನು ಹಮ್ಮಿಕೊಳ್ಳಲಾಗಿದೆ. 'ಕುಂದ್ರಾಪ್ರದ್ ಹಿಂದಾಪ್ರ' ಎಂಬ ಹೆಮ್ಮೆಯ ಬಿಗುಮಾನದೊಂದಿಗೆ ಆ ಪ್ರದೇಶದ ಜನರು ತಾವಾಡುವ ಭಾಷೆಯ ಮೂಲಕವೇ ಸಂಘಟಿತರಾಗುತ್ತಿರುವುದು ನಿಜಕ್ಕೂ ಶ್ಲಾಘನೀಯವಾದದ್ದು. ಅವರೇ ಹೇಳುವ ಹಾಗೆ –ಇದ್ ಭಾಷಿ ಅಲ್ಲ ಬದ್ಕ್. ನಮ್ಮ ಅಬ್ಬಿ ಭಾಷಿ ಮಂಡಿ ಮೇಲ್ ಹೊತ್ಕಂಡ್ ಮೆರಸ್ತೋ!

ಇಂಡಿಯನ್ ಮ್ಯಾನ್ ಎಂಬ ನಂಬಿಕೆ ಬೆಸೆಯುವ ಬಸ್!

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಒಂದು ದೇಶ ತನ್ನ ಗಡಿಯ ಸುತ್ತ ತಂತಿಬೇಲಿ ಹಾಕಿ, ಗನ್ನು ಕೊಟ್ಟು ಸೈನಿಕರನ್ನು ನಿಯೋಜಿಸುವುದೆಂದರೆ ದೇಶ ದೇಶಗಳ ನಡುವೆ ನಂಬಿಕೆ, ಸಹಬಾಳ್ವೆ ಎಂಬುದು ಹೊರಟುಹೋಗಿ ಅಪನಂಬಿಕೆ, ಶತ್ರುತ್ವ, ಕುಟಿಲ ನೀತಿಗಳೇ ಹೆಚ್ಚುತ್ತಿವೆ ಎಂದರ್ಥ. ಹಿಂದೆ, ಪರಸ್ಪರರ ಸಂಪರ್ಕ, ಸಂವಹನ ಮತ್ತು ನಂಬಿಕೆಗಳೇ ಬದುಕಿನ ಭಾಗವಾಗಿದ್ದವು. ಚೀನಾದಂತಹ ಆಕ್ರಮಣಕಾರಿ ನೀತಿಯುಳ್ಳ ದೇಶಗಳು, ಭಯೋತ್ಪಾದನೆಯನ್ನೇ ಜೀವಾಳ ಮಾಡಿಕೊಂಡ ಪಾಕಿಸ್ತಾನದಂತಹ ರಾಷ್ಟ್ರಗಳು, ಅಪನಂಬಿಕೆ ಮೂಲಕ ದ್ವಿ ನೀತಿ ಅನುಸರಿಸುವ ಅಮೆರಿಕ–ಪಾಶ್ಚಾತ್ಯ ಕೂಟಗಳಿಗೆಲ್ಲ, ಪ್ರಪಂಚವೇ ನನ್ನ ಬಂಧು ಬಳಗ, ಕುಟುಂಬ ಎನ್ನುತ್ತ ಬಲಿಷ್ಠ ದೇಶವಾಗುತ್ತ ಹೊರಟಿರುವ ಭಾರತ ಮಾತ್ರವೇ ಇಂತಹ ಸ್ನೇಹಸಂಬಂಧಗಳ ಬೆಸುಗೆಗೆ ಪ್ರಾಮಾಣಿಕ ಆರಂಭಿಕನಾಗಬಲ್ಲದು ಎಂಬುದಕ್ಕೆ ಹಲವು ನಿದರ್ಶನಗಳಿವೆ.

ಭಾರತವು ಚೀನಾದ ಒನ್ ಬೆಲ್ಟ್ ಒನ್ ರೋಡ್ ಪ್ರಾಜೆಕ್ಟ್‌ಗೆ ಅಧಿಕೃತವಾಗಿ ಸೇರಿಲ್ಲ, ಮುಖ್ಯವಾಗಿ ಚೀನಾ ಪಾಕಿಸ್ತಾನ್ ಎಕನಾಮಿಕ್ ಕಾರಿಡಾರ್ (CPEC) ಯೋಜನೆ ಪಾಕ್ ನಿಯಂತ್ರಣದಲ್ಲಿ ಇರುವ ಭಾರತದ ಕಾಶ್ಮೀರ ಭಾಗವನ್ನು ಒಳಗೊಂಡಿರುವ ಕಾರಣದಿಂದ ಭಾರತ ತನ್ನ ಭೂಸ್ವಾಮ್ಯಕ್ಕೆ ಧಕ್ಕೆ ಎಂಬ ಪ್ರತಿಭಟನಾರ್ಥವಾಗಿ ಇದರಿಂದ ಹೊರಗುಳಿದಿದೆ. ಇದಲ್ಲೆ ಪ್ರತಿಯಾಗಿ ಭಾರತ ತನ್ನದೇ ಆದ ಭಾರತದ ಪ್ರದೇಶಗಳಲ್ಲಿ ಮತ್ತು ಹತ್ತಿರದ ದೇಶಗಳಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡಿದೆ ಮತ್ತು ಇವೆಲ್ಲವೂ ಪರಸ್ಪರರ ಗೌರವ, ನಂಬಿಕೆ, ಅಭಿವೃದ್ಧೀ ಹೆಚ್ಚಿಸುವಂತಹ ಯೋಜನೆಗಳು. ಹೀಗಾಗಿ, ಚೀನಾ, ಪಾಕಿಸ್ತಾನದಂತಹ ದೇಶಗಳ ಯೋಜನೆಗಳಿಗಿಂತಲೂ ಭಾರತದ ಯೋಜನೆಗಳಿಗೆ ವಿಶ್ವಮಟ್ಟದಲ್ಲಿ ಇರುವ ಗೌರವ ವಿಶೇಷವಾದುದು.

ಬಿಮ್ಸ್ಟೆಕ್(BIMSTEC- Bangladesh, Bhutan, India, Myanmar, Nepal, Sri Lanka and Thailand) ಮೂಲಕ ವಿವಿಧ ದೇಶಗಳೊಂದಿಗೆ ಬಲವಾದ ಸಂಪರ್ಕ ಮತ್ತು ಸಹಕಾರ ಅಭಿವೃದ್ಧಿಯ ಪ್ರಯತ್ನಕ್ಕೆ ಬಲವಾದ ಸಹಾಯ, ಸಹಕಾರವಿರುವುದು ಭಾರತದ ನಂಬಿಕೆಯ ನಡೆತೆಗೆ ಸಾಕ್ಷಿ. ಇರಾನ್, ರಷ್ಯಾ ಸೇರಿದಂತೆ ದೇಶಗಳಿಗೆ ಸಂಪರ್ಕಣಾ ಮಾರ್ಗ ಸ್ಥಾಪಿಸುವ ಇಂಟರ್‌ನ್ಯಾಷನಲ್ ನಾರ್ತ್–ಸೌತ್ ಟ್ರಾನ್ಸಿಟ್ ಕಾರಿಡಾರ್ ಯೋಜನೆಗೂ ಸಮರ್ಪಕ ಬೆಂಬಲವಿರುವ ಸಾಕ್ಷಿ. ಬಾಂಗ್ಲಾದೇಶ, ಭಾರತ, ಮಾಯನ್ಮಾರ್ ರಾಷ್ಟ್ರಗಳೊಂದಿಗೆ ಬಾಂಗ್ಲಾದೇಶ–ಚೀನಾ–ಭಾರತ–ಮಾಯಾನ್ಮಾರ್ ಆರ್ಥಿಕ ಕಾರಿಡಾರ್ ಅಕ್ಕಪಕ್ಕದ ದೇಶದೊಂದಿಗಿನ ಸಹಬಾಳ್ವೆ ತತ್ವದ ದ್ಯೂತಕ ಯೋಜನೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಸಾಗರಕೂಟ, ಶ್ರೀಲಂಕಾದಲ್ಲಿ ಪೆಟ್ರೋಲಿಯಂ ಹಬ್ ಬಂದರು ನಿರ್ಮಾಣಗಳೆಲ್ಲವೂ ಭಾರತವು ಇತರರೊಂದಿಗೆ ಸಂಬಂಧಗಳನ್ನು ಬೆಸೆಯಬಲ್ಲುದೆ ಹೊರತು, ವಿನಾಶಕಾರಕ ನಡೆಯನ್ನು ತೋರದ, ಬಯಸದ ದೇಶವಾಗಿ ಇಂದು ವಿಶ್ವಗಮನ ಸೆಳೆಯುತ್ತಿದೆ.

ಸ್ನೇಹತ್ವದ ಅತಿದೊಡ್ಡ ಪ್ರತೀಕವೆಂಬಂತೆ ಭಾರತವು ಕಿಭಿಅಈ (ಅಮೇರಿಕ, ಆಸ್ಟ್ರೇಲಿಯಾ ಮತ್ತು ಜಪಾನ್) ರಾಷ್ಟ್ರಗಳೊಂದಿಗೆ ಸಮೀಪದ ಪ್ರದೇಶಗಳಲ್ಲಿ ಸಂಚಾರ ಮತ್ತು ಪರಿಕಲ್ಪನೆಗಳ ಕೇಂದ್ರ ಯೋಜನೆಗಳನ್ನು ರೂಪಿಸಲು ಮುಂದಾಳತ್ವವಹಿಸಿದೆ. ಇಷ್ಟೆಲ್ಲ ಸ್ನೇಹ, ನಂಬಿಕೆ, ಸಂಬಂಧಗಳ ಬೆಸುಗೆ ಬಯಸುತ್ತಿರುವ ಭಾರತದಿಂದ 50ರ ದಶಕದಲ್ಲೇ ಜಗತ್ತಿನಲ್ಲೇ ಒಂದು ಮಾದರಿ ಮಹಾನಂಬಿಕೆಯ ಮಾಹಾಯಾನದ ಬಸ್ ಆರಂಭಿಸಿತ್ತು ಎಂದರೆ ಸೋಜಿಗವೇ ಸರಿ!

ಜಗತ್ತು ಆಗಷ್ಟೇ ಆಧುನಿಕತೆಗೆ ತೆರೆದುಕೊಳ್ಳುತ್ತಿತ್ತು. ಯುರೋಪಿಯನ್ ಸಮಾಜದ ಯುವಸಮುದಾಯವು ಹೊರ ಜಗತ್ತಿನ ಸಂಸ್ಕೃತಿ, ಆಚಾರ–ವಿಚಾರಗಳ ಅನ್ವೇಷಣೆಗೆ, ಅದರ ಆಸ್ವಾದನೆ ಕಡೆಗೆ ಹೊರಟಿತು. ಇದೇ ಸಂದರ್ಭದಲ್ಲಿ 1957ರಲ್ಲಿ ಆರಂಭವಾಗಿದ್ದೇ 'ಇಂಡಿಯಾ ಮ್ಯಾನ್' ಎಂಬ ಮ್ಯಾಜಿಕ್ ಬಸ್!

ಅಲ್ಬರ್ಟ್ ಟೂರ್ಸ್ ಅಂಡ್ ಟ್ರಾವೆಲ್ ಎಂಬ ಖಾಸಗಿ ಸಂಸ್ಥೆಯು ಲಂಡನ್ ನಗರದಿಂದ ಭಾರತದ ಕೊಲ್ಕತ್ತವರೆಗಿನ 50ದಿನಗಳ ಕಾಲ ಪ್ರಯಾಣಿಸುವ ಜಗತ್ತಿನ ಸುದೀರ್ಘ ಪ್ರಯಾಣ ಬಸ್ ಸೇವೆಯನ್ನು ಆರಂಭಿಸಿತು. ಯೂರೋಪ್ ಖಂಡದ ಲಂಡನ್, ಡೋವರ್, ಒಸ್ಟೆಂಡ್, ಫ್ರಾಂಕ್‌ಫರ್ಟ್, ಮ್ಯುನಿಕ್, ವಿಯೆನ್ನಾ, ಇಸ್ತಾಂಬುಲ್ ನಗರಗಳು ಮತ್ತು ಮಧ್ಯಪ್ರಾಚ್ಯ ಮಧ್ಯ ಏಷ್ಯಾದ ಅಂಕಾರಾ, ಟೆಹ್ರಾನ್, ಕಾಬೂಲ್ ನಗರಗಳು ಮತ್ತು ದಕ್ಷಿಣ ಏಷ್ಯಾದ ಲಾಹೋರ್, ಅಮೃತಸರ, ದೆಹಲಿ, ಆಗ್ರಾ, ಅಲಹಾಬಾದ್, ವಾರಣಾಸಿಯಿಂದ ಕೊಲ್ಕತ್ತಾದವರೆಗೆ ಈ ಬಸ್ ಪ್ರಯಾಣದ ಮಹಾಯಾತ್ರೆ ಸಾಗಿತ್ತು.

ಒಟ್ಟು 16 ಸಾವಿರ ಕಿಮೀ.ಗೂ ಅಧಿಕ ಪ್ರಯಾಣ ಹಾದಿಯನ್ನು ಹೊಂದಿದ್ದು, ಒಟ್ಟು 45 ದಿನಗಳ ಅವಧಿ ಇದಾಗಿತ್ತು. ದೀರ್ಘ ಅವಧಿಗೆ ತಕ್ಕಂತೆ ಇಂಡಿಯನ್ ಮ್ಯಾನ್ ಬಸ್, ತನ್ನ ಪ್ರಯಾಣಿಕರಿಗಾಗಿ ಸಕಲ ಸಿದ್ಧತೆಗಳನ್ನು ಮಾಡಿಕೊಂಡ ಐರಾವತದಂತೆಯೇ ಇತ್ತು. ಡಬಲ್ ಡೆಕ್ಕರ್ (ಎರಡು ಮಹಡಿಗಳ ಬಸ್), ಎಸಿ ವ್ಯವಸ್ಥೆ, ಲೌಂಜ್ ಸೀಟಿಂಗ್, ಅಡುಗೆಮನೆ ಮತ್ತು ಊಟ ಮಾಡುವ ಜಾಗ, ಮಲಗುವ ಬಂಕ್‌ಗಳು, ಪುಸ್ತಕಗಳು, ಆಟಗಳು ಇತ್ಯಾದಿಗಳ ಲೈಬ್ರರಿ, ರೇಡಿಯೋ ಮತ್ತು ಮನರಂಜನೆ, ಅಗತ್ಯವಿದ್ದ ಸ್ಥಳಗಳಿಗೆ ಸರ್ವೆಂಟ್ ಅಥವಾ ಗೈಡ್ ಸೇರಿದಂತೆ ಸಕಲ ಸೌಕರ್ಯಗಳೊಂದಿಗೆ ಒಂದು ಆಧುನಿಕ ಪ್ರವಾಸದ ನೌಕೆಯಂತೆ ರೂಪುಗೊಂಡಿತ್ತು.

ಪಾಶ್ಚಾತ್ಯ ಪ್ರವಾಸಿಗಳು, ಪತ್ರಕರ್ತರು, ಲೇಖಕರು, ವಿದ್ಯಾರ್ಥಿಗಳು, ಉತ್ಸುಕಿಗಳು, ರಾಜತಾಂತ್ರಿಕರು, ವ್ಯಾಪಾರಿಗಳು, ಹಿಪ್ಪಿ ಟ್ರೇಲ್ ಪ್ರವಾಸಿಗರು ಈ ಬಸ್ ಯಾತ್ರೆಯ ಪ್ರಯಾಣಿಕರಾಗಿದ್ದರು. ಅಂದಿನ ಕಾಲದಲ್ಲಿ, ಇಂಡಿಯನ್ ಬಸ್, ಮ್ಯಾಜಿಕ್ ಬಸ್, ದಿ ಇಂಡಿಯನ್ ಮ್ಯಾನ್, ರಸ್ತೆ ಮೇಲಿನ ಹಡಗು ಎಂದೆಲ್ಲ ಅನ್ವರ್ಥನಾಮಗಳಿಂದ ವಿಶ್ವಪ್ರಸಿದ್ಧಿ ಪಡೆದಿತ್ತು! ಲಂಡನ್ ಟು ಕೊಲ್ಕತ್ತಾ ಟು ಲಂಡನ್ ಎಂದು ಬಸ್ ಮೇಲೆ ದಪ್ಪನೆಯ ಅಕ್ಷರದಿಂದ ಬರೆಯಲಾಗಿದ್ದ ದಿ ಇಂಡಿಯನ್ ಮ್ಯಾನ್ ಎಂಬ ಬಸ್, 1957ರ ಏಪ್ರಿಲ್ 15ರಂದು 18 ರಾಷ್ಟ್ರಗಳ ಪ್ರಮುಖ ನಗರಗಳ ಮೂಲಕ, ಸತತ 50ದಿನಗಳ ತನ್ನ ಮೊದಲ ಪ್ರಯಾಣವನ್ನು ಲಂಡನ್ ನಗರದಿಂದ ಆರಂಭಿಸಿ ಭಾರತದ ಕೊಲ್ಕತ್ತಾಗೆ ಜೂನ್ 5ರಂದು ಬಂದು ತಲುಪಿತು. ಮೊದಲ ಯಾತ್ರೆಯಲ್ಲಿ ಒಟ್ಟು 24 ಪ್ರಯಾಣಿಕರಿದ್ದು, 32,700 ಕಿಮೀ ದೂರ ಕ್ರಮಿಸಿದ್ದ ಇದರ ಪ್ರಯಾಣದರ ಆಗಿನ 85 ಪೌಂಡ್ ಆಗಿತ್ತು. ಕೊಲ್ಕತ್ತೆಯಿಂದ ಹಿಂದಿರುಗುವ ರಿಟರ್ನ್ ಟಿಕೆಟ್ ದರ 65 ಪೌಂಡ್ ಆಗಿತ್ತು.

ಹದಿನೆಂಟು ದೇಶಗಳು, ಹತ್ತಾರು ಗಡಿಪ್ರದೇಶಗಳು, ನೂರಾರು ನಗರಪಟ್ಟಣಗಳು, ಬೃಹತ್ ಬೆಟ್ಟಗುಡ್ಡಗಳು, ಕಡಿದಾದ ಕಣಿವೆಪ್ರದೇಶಗಳು, ಸರಿಯಾದ ವ್ಯವಸ್ಥೆ ಇರದಂತಹ ರಿಮೋಟ್ ಏರಿಯಾಗಳ ಜತೆಗೆ ಡಖಾಯತಿಗೆ ಹೆಸರಾದ ಜಾಗಗಳನ್ನು ಸುರಕ್ಷಿತವಾಗಿ ದಾಟಿ ಸುಗಮ ಪ್ರಯಾಣವನ್ನು ತನ್ನ ಪ್ರಯಾಣಿಕರಿಗೆ ಒದಗಿಸುತ್ತಿದ್ದವು ಈ ಎರಡು ಬಸ್ಸುಗಳು! ರಾಯಲ್ ಏರ್‌ಫೋರ್ಸ್ ಅಧಿಕಾರಿಯಾಗಿದ್ದ ಓಸ್ವಾಲ್ಡ್ ಜೋಸೆಫ್ ಗೆರೋ ಫಿಷರ್ (ಪ್ಯಾಡಿ) ಎಂಬಾತ ಪಶ್ಚಿಮ ದೇಶಗಳಿಂದ ಭಾರತಕ್ಕೆ ಒಂದು ವಾಣಿಜ್ಯ ಬಸ್ ಸಾರಿಗೆಯ ಕನಸು ಕಂಡು ಸಾಕಾರಗೊಳಿಸಿದವನು.

ಮ್ಯಾಜಿಕ್ ಬಸ್‌ಯಾನವು ಒಬ್ಬೊಬ್ಬ ಪ್ರಯಾಣಿಕನಿಗೆ ಒಂದೊಂದು ಬಗೆಯ ವಿಶಿಷ್ಟ ಅನುಭವ ನೀಡಿತ್ತು. ಹಲವು ಸಂಸ್ಕೃತಿಗಳನ್ನು, ಜನರುಗಳನ್ನು ಏಕಕಾಲದಲ್ಲಿ ಬೇಟಿಯಾಗುವ ಮೂಲಕ ಬದುಕಿನಲ್ಲಿ ಹೊಸತನವನ್ನು ಸ್ಫೂರ್ತಿಯನ್ನು ಕಂಡುಕೊಂಡರು. ಇಂಥಾದ್ದೇ ಒಂದು ಪ್ರಯತ್ನವನ್ನು ರೋರಿ ಮ್ಯಾಕ್ಲೀನ್ ಎಂಬ ಪ್ರವಾಸಿ ಲೇಖಕ ತನ್ನ ವಿಶಿಷ್ಟ ಅನುಭವವನ್ನು ಪುಸ್ತಕ ರೂಪದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾನೆ.

ಎಪ್ಪತ್ತರ ದಶಕದಲ್ಲಿ ಪಾಶ್ಚಾತ್ಯ ಯುವಕರು ಹಿಪ್ಪಿ ಟ್ರೇಲ್ ಮೂಲಕ ತಾವೇ ನಡೆಸಿದ ಅಸಾಧಾರಣ ಆತ್ಮ ಅನ್ವೇಷಣೆಯ ಹಾದಿಯಲ್ಲಿ ಯೂರೋಪ್‌ನಿಂದ ಭಾರತವರೆಗೆ ಹೊರಟ ಸುದೀರ್ಘ ಪ್ರವಾಸದ ಕುರಿತು, Magic Bus: On the Hippie Trail from Istanbul to India ಎಂಬ ಪುಸ್ತಕದಲ್ಲಿ ಈ ಯಾತ್ರೆಯ ಅನನ್ಯ ಕಥೆಯನ್ನು ವಿವರಿಸಲು ಪ್ರಯತ್ನಿಸಲಾಗಿದೆ. 1960–70ರ ಪ್ರಯಾಣಿಕರ ಫೋಟೋಗಳು, ಡೈರಿಗಳು, ಬ್ಲಾಗ್‌ಗಳು ಇಂದಿಗೂ ಲಭ್ಯವಿವೆ.

ದಿ ಟೈಮ್ಸ್‌ನಲ್ಲಿ ಲೇಖಕ ಇಯಾನ್ ಫ್ಲೆಮಿಂಗ್ ಅವರಿಗೆ ಮಾಜಿ ಕಾರ್ಯದರ್ಶಿ ಮತ್ತು ಜೇಮ್ಸ್ ಬಾಂಡ್ ಸರಣಿಯ ಪಾತ್ರ ಮಿಸ್ ಮನಿಪೆನ್ನಿಗೆ ಸ್ಫೂರ್ತಿಯಾಗಿದ್ದ ದಂಪತಿಗಳ ಮಗನೇ ಈ ಪುಸ್ತಕದ ಲೇಖಕ. ಪ್ರಸ್ತುತ, ರಾಯಲ್ ಸೊಸೈಟಿ ಆಫ್ ಲಿಟರೇಚರ್‌ನ ಫೆಲೋ ಮತ್ತು ವಾರ್ಷಿಕ ಶೆರ್ಬೋರ್ನ್ ಟ್ರಾವೆಲ್ ರೈಟಿಂಗ್ ಫೆಸ್ಟಿವಾದ ಸ್ಥಾಪಕ ಮತ್ತು ಮೇಲ್ವಿಚಾರಕರಾಗಿದ್ದಾರೆ. ಇಷ್ಟೆಲ್ಲ ಹಿನ್ನಲೆ ಇರುವ ರೋರಿ ಮ್ಯಾಕ್ಲೀನ್ 70ರ ದಶಕಗಳಲ್ಲಿ ಲಕ್ಷಾಂತರ ಪಾಶ್ಚಾತ್ಯ ಯುವಕರು ಬ್ರಿಟನ್, ಜರ್ಮನಿ, ಫ್ರಾನ್ಸ್ ಮತ್ತು ಅಮೆರಿಕದಿಂದ ಹೇಗೆ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪಯಣಕ್ಕಾಗಿ ಹಿಪ್ಪಿ ಟ್ರೇಲ್ ಮೂಲಕ ಭಾರತದತ್ತ ಪ್ರಯಾಣಿಸಿದರು ಎಂಬುದನ್ನು ವಿವರಿಸುತ್ತಾರೆ.

ಪಾಶ್ಚಾತ್ಯ ಪ್ರಯಾಣಿಕರು ಲಂಡನ್‌ನಿಂದ ಇಸ್ತಾಂಬುಲ್‌ಗೆ (ಟರ್ಕಿ), ಅಲ್ಲಿಂದ ಇರಾನ್, ಅಫ್ಘಾನಿಸ್ತಾನ, ಪಾಕಿಸ್ತಾನದ ಮೂಲಕ ಭಾರತಕ್ಕೆ ಬಸ್ ಅಥವಾ ಟ್ರಕ್‌ಗಳಲ್ಲಿ ಪ್ರಯಾಣಿಸುತ್ತಿದ್ದರು. ಅವರ ಗುರಿ ವಿಶೇಷವಾಗಿ ಭಾರತದ ಕಾಶಿ, ಹಿಮಾಚಲ ಪ್ರದೇಶ, ಗೋವಾದಂತಹ ಪ್ರದೇಶಗಳು ಮತ್ತು ಇಲ್ಲಿರುವ ಆಶ್ರಮಗಳು, ಆಧ್ಯಾತ್ಮಿಕ ಕೇಂದ್ರಗಳು ಹೆಚ್ಚು ಆಕರ್ಷಣೆಯಾಗಿದ್ದವು. ಬಸ್ ಪ್ರಯಾಣಗಳ ಅನುಭವ, ಯೋಗ, ಅಧ್ಯಾತ್ಮ ಮತ್ತು ಗುರುಗಳಂತಹ ಆಧ್ಯಾತ್ಮದ ಹುಡುಕಾಟದಲ್ಲಿ ತೊಡಗಿದ್ದನ್ನು ಲೇಖಕ ಕಣ್ಣಾರೆ ಕಂಡಿದ್ದಾರೆ, ಅನುಭವಿಸಿ ನೋಡಿ ಸಾಧ್ಯಂತ ವಿಷಯಗಳನ್ನು ತಮ್ಮ ಪುಸ್ತಕದಲ್ಲಿ ವಿವರಿಸಲು ಯತ್ನಿಸಿದ್ದಾರೆ.

ಇದು ಪ್ರವಾಸವಲ್ಲ, ಪರಿವೃತ್ತಿಯ ಪ್ರಾರಂಭ ಎಂದೇ ಪರಿಗಣಿಸುವ ಈ ಪುಸ್ತಕ 11 ಅಧ್ಯಾಯಗಳನ್ನು ಒಳಗೊಂಡಿದ್ದು, ಯಾವ ಸಾಹಸಮಯ ಸಿನಿಮಾಗೂ ಕಡಿಮೆಯಿಲ್ಲದ ಕಥಾನಕ ಹೊಂದಿದೆ. ಮೊದಲ ಅಧ್ಯಾಯದಿಂದ ಕೊನೆಯವರೆಗೆ, ಪಾಶ್ಚಾತ್ಯ ಹಿಪ್ಪಿ ಜೀವನ, ಇಸ್ತಾಂಬುಲ್ ಜೀವನ, ಅಸ್ಥಿರತೆಯುಳ್ಳ ಇರಾನ್, ಅಫ್ಘಾನಿಸ್ತಾನ, ಪಾಕಿಸ್ತಾನ–ಗಡಿಗಳ ರಾಜಕೀಯ ಅಸ್ಥಿರತೆ, ಭಾರತ–ತಲೆಕೆಡಿಸುವ, ಹುಚ್ಚೆಬ್ಬಿಸುವ ಶಾಂತಿ ಇಲ್ಲಿ ಸಿಗುತ್ತದೆ ಎನ್ನುತ್ತಾರೆ ಲೇಖಕ!

ಗಡಿದಾಟಿ ಭಾರತ ಪ್ರವೇಶಿಸಿದ ಮೇಲೆ ಲೇಖಕರಿಗೆ ದೆಹಲಿ, ವಾರಾಣಸಿ, ಗೋವಾ, ಧರ್ಮಶಾಲಾ ಮುಂತಾದ ಸ್ಥಳಗಳಲ್ಲಿ ಯಾತ್ರಿಕರೊಂದಿಗೆ ಆಧ್ಯಾತ್ಮಿಕ ಅನುಭವಗಳು ನಡೆಯುತ್ತವೆ. ಎಲ್ಲರಿಗೂ ಭಾರತ ಶಾಶ್ವತ ಉತ್ತರಗಳನ್ನು ಕೊಡುವ ಶಕ್ತಿಯುಳ್ಳದ್ದಾದರೂ, ಪ್ರಶ್ನೆಗಳನ್ನು ಕೇಳುವ ಶಕ್ತಿ ಖಂಡಿತವಾಗಿಯೂ ನೀಡುತ್ತದೆ ಎನ್ನುತ್ತಾರೆ. ಜಾಗತಿನ ವಿಶಿಷ್ಟ ಬಸ್ ಎಂದು ಗುರುತಿಸಿಕೊಂಡಿದ್ದ ಇಂಡಿಯಾ ಮ್ಯಾನ್, ಇರಾನ್ ಕ್ರಾಂತಿ, ಅಫ್ಘಾನಿಸ್ತಾನದ ಮೇಲೆ ಸೋವಿಯತ್ ಆಕ್ರಮಣ, ಪಾಕ್–ಭಾರತ ಗಡಿ ಗೊಂದಲಗಳು, ಅಗ್ಗದ ವಿಮಾನ ಸೇವೆಗಳ ಲಭ್ಯತೆ, ಪಾಶ್ಚಾತ್ಯ ನೀತಿಗಳಲ್ಲಿನ ಬದಲಾವಣೆಯಿಂದಾಗಿ 1980ರ ವೇಳೆಗೆ ಬಸ್ ಸ್ಥಗಿತಗೊಂಡಿತು, ಹಿಪ್ಪಿ ಟ್ರೇಲ್ ನಕ್ಷೆಯಲ್ಲಿ ಮಾಯವಾಗಿ ಹೋಯಿತು.

ಮಹಾಕಾವ್ಯದ ಅನುಭವವನ್ನು ಮರುಸೃಷ್ಟಿಸುವ ಗುರಿ ಹೊಂದಿ, ಲಂಡನ್ಗೆ ಬಸ್ ಪ್ರಯಾಣವನ್ನು ಅಡ್ವೆಂಚರ್ಸ್ ಓವರ್‌ಲ್ಯಾಂಡ್ ಪ್ರಯತ್ನ ಆರಂಭಿಸಿತು. 2023ಕ್ಕೆ ಯೋಜಿಸಲಾದ ಈ ಪ್ರಯಾಣವು 22 ದೇಶಗಳನ್ನು ಒಳಗೊಳ್ಳುವ ಗುರಿ ಹೊಂದಿತ್ತು. ಆದರೆ, ಗಡಿಪ್ರಯಾಣ ನಿರ್ಬಂಧಗಳು, ಕೋರೊನಾದಂತಹ ಸಮಸ್ಯೆಗಳು ಈ ಪ್ರಯತ್ನವನ್ನು ವಿಫಲಗೊಳಿಸಿತು. ಹೀಗಿದ್ದರೂ, ಈ ಮಹಾಕಾವ್ಯ ಪ್ರಯಾಣದ ಚೈತನ್ಯವನ್ನು ಪುನರುಜ್ಜೀವನಗೊಳಿಸಲು ಸದಾ ಪ್ರಯತ್ನಗಳು ನಡೆಯುತ್ತಿವೆ. ಶಾಂತಿ, ಅಭಿವೃದ್ಧಿ ಮತ್ತು ನಂಬಿಕೆಗೆ ಪರ್ಯಾಯವಾಗಿರುವ ಭಾರತ ದೇಶದಿಂದ ಮಾತ್ರವೇ ಇಂತಹ ಪ್ರಯತ್ನ ನಡೆಯಬಲ್ಲದು!

ಕಳಕಳಿ
ಎಚ್. ಆನಂದರಾಮ ಶಾಸ್ತ್ರೀ

ಎನ್ನ ಬಸವಣ್ಣನ ಮಲಿನಗೊಳಿಸದಿರಿ

ವೀರಶೈವ–ಲಿಂಗಾಯತ ಮತದ ಚಟುವಟಿಕೆಗಳ ಕೇಂದ್ರಸ್ಥಾನವೆನ್ನಬಹುದಾದ ದಾವಣಗೆರೆಯಲ್ಲಿ ಹುಟ್ಟಿ ಬೆಳೆದವನು ನಾನು. ನನಗೀಗ 74ರ ಇಳಿ ವಯಸ್ಸು. ಹಳೆ ಊರಿನ ಪ್ರತಿಷ್ಠಿತ ಬೀದಿಯಾದ ಚೌಕಿಪೇಟೆಯಲ್ಲಿ ವಾಸವಾಗಿದ್ದ ನಾನು ಬಾಲ್ಯದಿಂದಲೂ ವೀರಶೈವರ–ಲಿಂಗಾಯತರ ಗೆಳೆತನ ಹೊಂದಿದ್ದವನು. ಆ ಮತದವನಲ್ಲವಾದರೂ ಅವರ ಮನೆಗಳಲ್ಲಿ ಉಂಡು–ಆಡಿ ಬೆಳೆದವನು. ಅವರ ವಿವಿಧ ಮಠಾಧೀಶರ ಪಾದಗಳಿಗೆ ಎರಗಿದವನು. ಶ್ರಾವಣ ಮಾಸದಲ್ಲಿ ಬಕ್ಕೇಶ್ವರ ದೇವಸ್ಥಾನದಲ್ಲಿ–ವಿರಕ್ತಮಠದಲ್ಲಿ ಪ್ರವಚನ ಕೇಳುವುದು, ಬಸವ ಜಯಂತಿಯ ಸಂದರ್ಭದಲ್ಲಿ ಹಿರಿಯರೊಬ್ಬರ ನೇತೃತ್ವದಲ್ಲಿ ಪ್ರತಿದಿನ ಬೆಳಗ್ಗೆ ವಚನ ಕೀರ್ತನೆಗಳನ್ನು ಹಾಡುತ್ತ ನಡೆಯುತ್ತಿದ್ದ ಪ್ರಭಾತ ಫೇರಿಯಲ್ಲಿ ಪಾಲ್ಗೊಳ್ಳುವುದು, ಬಸವ ಜಯಂತಿಯಂದು ಊರಿನ ಹಲವೆಡೆ ನಡೆಯುತ್ತಿದ್ದ ವಚನ ಕಂಠಪಾಠ ಸ್ಪರ್ಧೆಗಳಲ್ಲಿ ಭಾಗವಹಿಸುವುದು, ಮುಂತಾದ ಅರ್ಥಪೂರ್ಣ ಚಟುವಟಿಕೆಗಳಲ್ಲಿ ಬಾಲಕನಾಗಿ ಪ್ರತಿ ವರ್ಷ ಭಾಗವಹಿಸುತ್ತಿದ್ದವನು.

ನನ್ನ ಬಾಲ್ಯದ ಈ ಜೀವನ ಕ್ರಮವು ಬಸವಣ್ಣನವರು ಮತ್ತು ಇತರ ಶರಣರು ವಚನಗಳಲ್ಲಿ ಸಾರಿದ ತತ್ತ್ವ–ಆದರ್ಶಗಳಿಂದ ಪ್ರೇರಿತವಾದಂಥವು. ಅನಂತರದಲ್ಲೂ ನಾನು, ವಚನಗಳು ಹೇಳುವ ತತ್ತ್ವ–ಆದರ್ಶಗಳನ್ನು ಜೀವನದಲ್ಲಿ ರೂಢಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಲೇಬಂದಿದ್ದೇನೆ. ವೀರಶೈವ–ಲಿಂಗಾಯತ ಮತೀಯರಲ್ಲೂ, ಅನ್ಯಮತೀಯರಲ್ಲೂ ನನ್ನಂತಹ ಲಕ್ಷಾಂತರ ಮಂದಿ ಇದ್ದಾರೆ. ಅವರೆಲ್ಲರ ನಂಬಿಕೆಗಳಿಗೆ ಪೆಟ್ಟು ಬೀಳುವಂತಹ ಬೆಳವಣಿಗೆಗಳು ಈಚೆಗೆ ನಡೆಯುತ್ತಿರುವುದು ಬಹಳ ದುಃಖದ ಸಂಗತಿ. 'ವೀರಶೈವ–ಲಿಂಗಾಯತ' ಒಂದೇ, ಬೇರೆ ಬೇರೆ, ಎಂಬ ವಿವಾದ, ಅದು ಪ್ರತ್ಯೇಕ ಧರ್ಮ, ಪ್ರತ್ಯೇಕ ಧರ್ಮವಲ್ಲ, ಎಂಬ ವಿವಾದ, ಮೀಸಲಾತಿ ಬೇಕು, ಬೇಡ, ಎಂಬ ವಿವಾದ, ಇವುಗಳು ಸಮಾಜದಲ್ಲಿ ಇಂದು ನಿರ್ಮಿಸುತ್ತಿರುವ ಗೋಜಲುಗಳನ್ನು ಕಂಡಾಗ ನನ್ನಂತಹ ಸಾಮಾನ್ಯರಿಗೆ, 'ಹಾಗಾದರೆ ಬಸವಣ್ಣ ನಾನು ನಂಬಿದಂತಹ ರೀತಿಯಲ್ಲಿ ಇರಲಿಲ್ಲವೇ?' ಎಂದು ಅನುಮಾನ ಹುಟ್ಟುವಂತಾಗಿದೆ!

ಸಂಬಂಧಿಸಿದ ಎಲ್ಲ ಮಠಾಧೀಶರಲ್ಲಿ, ಮುಖಂಡರಲ್ಲಿ, ವಿದ್ವಾಂಸರಲ್ಲಿ ನನ್ನ ವಿನಂತಿ ಇಷ್ಟೇ: ನಾನು ನಂಬಿರುವ ಬಸವಣ್ಣ, ಜೀವನಾದರ್ಶವನ್ನು ಸರಳವಾಗಿ ತಿಳಿಸಿಕೊಟ್ಟ, ರೂಪಿಸಿಕೊಟ್ಟ, ಪ್ರತಿಪಾದಿಸಿದ ಶರಣ ಮಹಾನುಭಾವ. ಆತನನ್ನು ಕುಗ್ಗಿಸಿ, ತಿರುಚಿ, ನಿಮ್ಮ ನಿಮ್ಮ ಮೂಗಿನ ನೇರಕ್ಕೆ ಹೊಂದಿಸಬೇಡಿ. ನಿಮ್ಮ ನಿಮ್ಮ ಉದ್ದೇಶಸಾಧನೆಗಾಗಿ ಆತನನ್ನು ಮಲಿನಗೊಳಿಸಬೇಡಿ. ಆತನು ಮಾನವಕುಲಕ್ಕೆ ಜೀವನಾದರ್ಶವನ್ನು ತೋರಿದ–ಸಾರಿದ ಶರಣನಾಗಿ ಉಳಿಯಲು ಬಿಡಿ.

(ಹಿರಿಯ ಸಾಹಿತಿ, ಅಂಕಣಕಾರ)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 80

ಸಮಾಚಾರ ಸಣ್ಣದಲ್ಲ

ಎಸಿ ಸಮಸ್ಯೆ: ಎಐ ವಿಮಾನ ವಾಪಸ್!

ಮಲಪ್ಪುರಂ: ಏರ್ ಇಂಡಿಯ ವಿಮಾನಯಾನ ಸಂಸ್ಥೆಯ 'ಯು ಟರ್ನ್' ಪ್ರಹಸನಗಳು ಮುಂದುವರಿದೇ ಇವೆ. ಈ ಬಾರಿ ಎಸಿ ಸಮಸ್ಯೆಯ ಕಾರಣ 2 ಗಂಟೆ ಹಾರಾಟದ ಬಳಿಕ ಏರ್ ಇಂಡಿಯ ವಿಮಾನ ವಾಪಸಾಗಿದೆ. ಕಲ್ಲಿಕೋಟೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬುಧವಾರ ದೋಹಾಕ್ಕೆ ತೆರಳುತ್ತಿದ್ದ ಏರ್ ಇಂಡಿಯ ಎಕ್ಸ್‌ಪ್ರೆಸ್ ವಿಮಾನ ಟೇಕಾಫ್ ಆದ 2 ಗಂಟೆಗಳಲ್ಲೇ ಹೊರಟಿದ್ದಲ್ಲಿಗೇ ವಾಪಸಾಗಿದೆ. ಪೈಲಟ್‌ಗಳು ಮತ್ತು ಸಿಬ್ಬಂದಿ, ಪ್ರಯಾಣಿಕರು ಸೇರಿ 188 ಜನರಿದ್ದ ಎಐ-375 ವಿಮಾನ ಕಲ್ಲಿಕೋಟೆಯಿಂದ ಬೆಳಗ್ಗೆ 9.07ಕ್ಕೆ ಹೊರಟು ಬೆಳಗ್ಗೆ 11.12ಕ್ಕೆ ವಾಪಸ್ ಬಂದಿಳಿದಿದೆ. ವಿಮಾನದ ಕ್ಯಾಬಿನ್ ಎಸಿಯಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ವಿಮಾನ ವಾಪಸಾಗಿದೆ, ಇದೇನೂ ಎಮರ್ಜೆನ್ಸಿ ಲ್ಯಾಂಡಿಂಗ್ ಅಲ್ಲ. ಮಧ್ಯಾಹ್ನ 1.30ರ ವೇಳೆಗೆ ಪ್ರಯಾಣಿಕರಿಗೆ ಬೇರೆ ವಿಮಾನ ವ್ಯವಸ್ಥೆಯಾಗಲಿದೆ. ಅಲ್ಲಿಯವರೆಗೆ ಪ್ರಯಾಣಿಕರಿಗೆ ಆಹಾರ-ನೀರು ಒದಗಿಸಲಾಗುವುದು ಎಂದು 'ಎಐ' ಅಧಿಕಾರಿಗಳು ತಿಳಿಸಿದ್ದಾರೆ.

ಕಾರು ಡಿಕ್ಕಿ: ನಾಲ್ವರು ಕನ್ವರ್ ಯಾತ್ರಿ ಸಾವು

ಗ್ವಾಲಿಯರ್: ಮಧ್ಯಪ್ರದೇಶ ರಾಜ್ಯದಲ್ಲಿ ರಸ್ತೆ ಬದಿ ನಡೆದುಕೊಂಡು ಸಾಗುತ್ತಿದ್ದ ಕನ್ವರ್ ಯಾತ್ರಿಗಳಿಗೆ ಅತಿ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದ್ದು, ಒಂದೇ ಕುಟುಂಬದ ನಾಲ್ವರು ಸಾವಿಗೀಡಾದರು. ಗ್ವಾಲಿಯರ್-ಶಿವಪುರಿ ಲಿಂಕ್ ರಸ್ತೆಯಲ್ಲಿ ಮಂಗಳವಾರ ತಡರಾತ್ರಿ ಅಪಘಾತವಾಗಿದೆ. ಉತ್ತಿಲ ಗ್ರಾಮದ ಭದವ್ನಾ ಕುಂಡ್ ಬಳಿ ನಡೆದುಕೊಂಡು ಹೋಗುತ್ತಿದ್ದ ಕನ್ವರ್ ಯಾತ್ರಿಗಳಲ್ಲಿ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದ್ದು, 7 ಯಾತ್ರಿಗಳು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇಂದೋರ್ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ(ಆರ್‌ಟಿಒ) ನೋಂದಣಿ ಸಂಖ್ಯೆಯಿದ್ದ ಕಾರು ಅತಿ ವೇಗವಾಗಿ ಚಲಿಸುತ್ತಿದ್ದಾಗ ಟಯರ್ ಸ್ಫೋಟಗೊಂಡ ಪರಿಣಾಮ ಚಾಲಕನ ನಿಯಂತ್ರಣ ತಪ್ಪಿ ಯಾತ್ರಿಕರಿಗೆ ಡಿಕ್ಕಿ ಹೊಡೆದು ಬಳಿಕ ರಸ್ತೆಬದಿಯ ಕಂದಕಕ್ಕೆ ಬಿದ್ದಿದೆ ಎಂದು ಕಂಪು ಪೊಲೀಸ್ ಠಾಣೆಯ ಅಧಿಕಾರಿ ಅಮರ್ ಸಿಂಗ್ ಸಿಕಾವರ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ತಿರುಮಲ 'ಶ್ರೀವಾಣಿ ದರ್ಶನ' ಟಿಕೆಟ್ ಸೇವೆ

ತಿರುಮಲ: ತಿರುಮಲದಲ್ಲಿ ತಿಮ್ಮಪ್ಪನ ಶೀಘ್ರ ದರ್ಶನ ಸೇವೆಗಾಗಿ ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಮಂಡಳಿ ಹೊಸದಾಗಿ 'ಶ್ರೀವಾಣಿ ದರ್ಶನ' ಟಿಕೆಟ್ ಸೇವೆಯನ್ನು ಬುಧವಾರ ಆರಂಭಿಸಿದೆ. ಟಿಕೆಟ್ ವಿತರಣಾ ಕೇಂದ್ರವನ್ನು ತಿರುಮಲದಲ್ಲಿನ ಅನ್ನಮಯ್ಯ ಭವನದ ಎದುರು ಟಿಟಿಡಿ ಅಧ್ಯಕ್ಷ ಬಿ.ಆರ್.ನಾಯ್ಡು ಉದ್ಘಾಟಿಸಿದರು. ಈ ಸಂದರ್ಭದಲ್ಲಿ, ಟಿಕೆಟ್ ಸುಲಭ ವಿತರಣೆಗಾಗಿ 60 ಲಕ್ಷ ರು. ವೆಚ್ಚದಲ್ಲಿ ಅತ್ಯಾಧುನಿಕ ಮೂಲಸೌಕರ್ಯಗಳನ್ನು ಒಳಗೊಂಡ ಹೊಸ ಕೌಂಟರ್‌ಗಳನ್ನು ನಿರ್ಮಿಸಲಾಗಿದೆ ಎಂದರು. ಶ್ರೀವಾಣಿ ದರ್ಶನ ಟಿಕೆಟ್‌ಗಾಗಿ ಭಕ್ತರು ಬೆಳಗ್ಗೆ 5 ಗಂಟೆಯಿಂದಲೇ ಸರತಿ ಸಾಲಿನಲ್ಲಿ ನಿಂತಿದ್ದರು. ಆಹಾರ ಪದಾರ್ಥಗಳ ಗುಣ ಮಟ್ಟ ಪರೀಕ್ಷೆಗೆಂದೇ ಅತ್ಯಾಧುನಿಕ ಪ್ರಯೋಗಾಲಯ ಸಜ್ಜುಗೊಳಿಸಲಾಗಿದೆ.

ರಾ.ಹೆ. ಅಪಘಾತ: 27 ಸಾವಿರ ಸಾವು

ದೆಹಲಿ: 2025ರ ಮೊದಲ ಆರು ತಿಂಗಳಲ್ಲಿ (ಜ.1ರಿಂದ ಜೂ.31ರವರೆಗೆ) ದೇಶಾದ್ಯಂತದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಡೆದ ರಸ್ತೆ ಅಪಘಾತಗಳಲ್ಲಿ ಒಟ್ಟು 26,770 ಜನರು ಸಾವಿಗೀಡಾಗಿದ್ದಾರೆ ಎಂದು ಕೇಂದ್ರ ರಸ್ತೆ ಸಾರಿಗೆ-ಹೆದ್ದಾರಿ ಸಚಿವ ನಿತಿನ್ ಗಡ್ಕರಿ ರಾಜ್ಯಸಭೆಗೆ ಲಿಖಿತ ಉತ್ತರ ನೀಡಿದರು. ಸಂಸದರ ಪ್ರಶ್ನೆಯೊಂದಕ್ಕೆ ಬುಧವಾರ ಉತ್ತರಿಸಿದ ಅವರು, 2024ರಲ್ಲಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ (ಎನ್‌ಎಚ್) 52,609 ಅಪಘಾತಗಳಾಗಿವೆ ಎಂದು ಹೇಳಿದರು. ಕಳೆದ ಮೂರು ವರ್ಷಗಳಲ್ಲಿ 1,12,561 ಕಿಮೀ ರಾಷ್ಟ್ರೀಯ ಹೆದ್ದಾರಿಗಳಿಗೆ ರಸ್ತೆ ಸುರಕ್ಷತಾ ಲೆಕ್ಕಪರಿಶೋಧನೆ ನಡೆಸಲಾಗಿದೆ ಎಂದು ಮತ್ತೊಂದು ಪ್ರಶ್ನೆಗೆ ಗಡ್ಕರಿ ಉತ್ತರಿಸಿದರು.

ಮತದಾರ ಪಟ್ಟಿ: 18 ಲಕ್ಷ ಮೃತರ ಹೆಸರು!

ಪಟನಾ: ಬಿಹಾರ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಸದ್ಯ ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ 'ವಿಶೇಷ ಕ್ಷಿಪ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆ ವೇಳೆ ಚುನಾವಣಾ ಆಯೋಗದ ಸಿಬ್ಬಂದಿ ಮತ್ತು ಅಧಿಕಾರಿಗಳು ಮತದಾರರ ಮನೆ ಬಾಗಿಲಿಗೆ ಭೇಟಿ ನೀಡಿದಾಗ 18 ಲಕ್ಷ ಜನರು ಅದಾಗಲೇ ಸಾವನ್ನಪ್ಪಿದ್ದಾರೆ ಎಂದು ತಿಳಿದು ಬಂದಿದೆ. ಈವರೆಗೆ ಶೇ.98.01ರಷ್ಟು 'ವಿಶೇಷ ಕ್ಷಿಪ್ರ ಪರಿಷ್ಕರಣೆ' ಕಾರ್ಯವಾಗಿದೆ. ಶುಕ್ರವಾರಕ್ಕೆ ಕೊನೆಗೊಳ್ಳಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

{ ಮಲ್ಲಿಕಾರ್ಜುನ ಖರ್ಗೆ } ಕಾಂಗ್ರೆಸ್ ಅಧ್ಯಕ್ಷ

ಉಪ ರಾಷ್ಟ್ರಪತಿ ಜಗದೀಪ್ ಧನಕರ್ ದಿಢೀರ್ ರಾಜೀನಾಮೆ ನೋಡಿದರೆ 'ದಾಲ್ ಮೇ ಕುಚ್ ಕಾಲಾ ಹೈ'(ಪಲ್ಯದಲ್ಲೇನೋ ಸೀದು ಹೋದಂತೆ) ಎನಿಸುತ್ತಿದೆ. ಮೋದಿ ಸರಕಾರ ಈ ಬಗ್ಗೆ ಸ್ಪಷ್ಟನೆ ನೀಡಬೇಕಿದೆ. ಬಿಜೆಪಿ, ಆರ್‌ಎಸ್‌ಎಸ್‌ನವರಿಗಿಂತಲೂ ಹೆಚ್ಚಾಗಿಯೇ ಧನಕರ್ ಅವರು ಪಕ್ಷ- ಸಂಘವನ್ನು ಸಮರ್ಥಿಸಿಕೊಳ್ಳುತ್ತಿದ್ದರು. ಅಂತಹವರೇ ರಾಜೀನಾಮೆ ನೀಡಿರುವುದು ಆಘಾತಕಾರಿ.

ಜಾಗತಿಕ ಉಗ್ರ ಸಂಘಟನೆ ಅಲ್ ಖೈದಾ ಜತೆಗೆ ನಂಟಿರುವ 'ಎಕ್ಯುಐಎಸ್' | ದೆಹಲಿ, ನೊಯಿಡಾ, ಅಮಹದಾಬಾದ್, ಮೊದಸಾದಲ್ಲಿ ನಾಲ್ವರ ಬಂಧನ | ಸಾಮಾಜಿಕ ಮಾಧ್ಯಮ ಮೂಲಕ ಪರಸ್ಪರ ಸಂವಹನ

ಗುಜರಾತ್ ಎಟಿಎಸ್‌ನಿಂದ 4 ಉಗ್ರರ ಸೆರೆ

ಅಹಮದಾಬಾದ್: ಜಾಗತಿಕ ಭಯೋತ್ಪಾದಕ ಸಂಘಟನೆ 'ಅಲ್ ಖೈದಾ' ಜತೆ ನಂಟು ಹೊಂದಿದ್ದ ಹೊಸ ಉಗ್ರ ಸಂಘಟನೆಯೊಂದನ್ನು ಪತ್ತೆ ಹಚ್ಚಿರುವ ಗುಜರಾತ್ ರಾಜ್ಯದ 'ಭಯೋತ್ಪಾದನಾ ನಿಗ್ರಹ ದಳ'(ಎಟಿಎಸ್) ಪೊಲೀಸರು, ನಾಲ್ವರು ಭಯೋತ್ಪಾದಕರನ್ನು ಬುಧವಾರ ಬಂಧಿಸಿದ್ದಾರೆ.

ದೆಹಲಿ, ನೊಯಿಡಾ, ಗುಜರಾತಿನ ಅಹಮದಾಬಾದ್ ಮತ್ತು ಅರಾವಳಿ ಜಿಲ್ಲೆಯ ಮೊದಸಾದಲ್ಲಿ ತಲಾ ಒಬ್ಬ ಉಗ್ರನನ್ನು ಬಂಧಿಸಲಾಗಿದೆ. ದೆಹಲಿಯಲ್ಲಿ ಮೊಹಮ್ಮದ್ ಫೈಕ್, ಅಹಮದಾಬಾದ್‌ನಲ್ಲಿ ಮೊಹಮ್ಮದ್ ಫರ್ದೀನ್, ಅರಾವಳಿ ಜಿಲ್ಲೆಯ ಮೊದಾಸಾದಿಂದ ಸೆಫುಲ್ಲಾ ಖುರೇಶಿ ಮತ್ತು ಉತ್ತರ ಪ್ರದೇಶದ ನೊಯಿಡಾದಿಂದ ಜೀಶನ್ ಅಲಿಯನ್ನು ಬಂಧಿಸಲಾಗಿದೆ.

ನಾಲ್ವರೂ ಭಯೋತ್ಪಾದಕರು ದೇಶದಲ್ಲಿ ದೊಡ್ಡ ಮಟ್ಟದ ಭಯೋತ್ಪಾದಕ ದಾಳಿ ನಡೆಸಲು ಸಂಚು ರೂಪಿಸಿದ್ದರು. ಸಾಮಾಜಿಕ ಮಾಧ್ಯಮಗಳ ಮೂಲಕ ಪರಸ್ಪರ ಸಂಪರ್ಕ ಹೊಂದಿದ್ದರು. ಈ ಕುರಿತು ತನಿಖೆ ಮುಂದುವರಿಸಲಾಗಿದೆ ಎಂದು ಗುಜರಾತ್ 'ಭಯೋತ್ಪಾದನಾ ನಿಗ್ರಹ ದಳ'ದ ಪೊಲೀಸರು ಸುದ್ದಿಸಂಸ್ಥೆಗೆ ಬುಧವಾರ ವಿವರಿಸಿದ್ದಾರೆ.

ಖೋಟಾ ನೋಟು: ಬಂಧಿತ ಭಯೋತ್ಪಾದಕರು ನಾಲ್ವರೂ ನಕಲಿ ನೋಟುಗಳ ಜಾಲದಲ್ಲೂ ಕಾರ್ಯನಿರತರಾಗಿದ್ದರು. ಯುವಜನರನ್ನು ವಾಟ್ಸಾಪ್ ಮೂಲಕ ಸಂಪರ್ಕಕ್ಕೆ ತೆಗೆದುಕೊಂಡು ಕಟ್ಟರ್‌ವಾದದ ಕುರಿತು ತಲೆಗೆ ತುಂಬುವ ಚಟುವಟಿಕೆಯಲ್ಲೂ ನಿರತರಾಗಿದ್ದರು. ಹಾಗೆ, ಉಗ್ರವಾದದತ್ತ ಆಕರ್ಷಿತರಾದವರನ್ನು 'ಎಕ್ಯುಐಎಸ್' ಚಟುವಟಿಕೆಗಳಿಗೆ ಬಳಸಿಕೊಳ್ಳುವುದು ಇವರ ಇರಾದೆಯಾಗಿತ್ತು ಎಂದು ಎಟಿಎಸ್ ಅಧಿಕಾರಿಗಳು ತಿಳಿಸಿದ್ದಾರೆ.

ಏನಿದು 'ಎಕ್ಯುಐಎಸ್'?

'ಎಕ್ಯುಐಎಸ್' ಅರ್ಥಾತ್ 'ಅಲ್ ಖೈದಾ ಇಂಡಿಯನ್ ಸಬ್ ಕಾಂಟಿನೆಂಟ್' ಎಂಬುದು ಉಗ್ರ ಸಂಘಟನೆಯಾಗಿದೆ. ಇದು ಜಾಗತಿಕ ಮಟ್ಟದ ಭಯೋತ್ಪಾದಕ ಸಂಘಟನೆಯಾದ 'ಅಲ್ ಖೈದಾ' ಜತೆಗೆ ಸಂಬಂಧ ಹೊಂದಿದೆ. ಭಾರತ ಸೇರಿದಂತೆ ವಿಶ್ವದ ವಿವಿಧೆಡೆ ಭಯೋತ್ಪಾದನಾ ಕೃತ್ಯಗಳನ್ನು ನಡೆಸುವುದಕ್ಕೆ ಅಗತ್ಯವಾದ ಯುವಜನರನ್ನು ದಕ್ಷಿಣ ಏಷ್ಯಾ ವಲಯದಲ್ಲಿ ಗುರುತಿಸಿ ನೇಮಿಸಿಕೊಳ್ಳುವ, ಆ ಬಳಿಕ ಉಗ್ರ ಕೃತ್ಯಗಳನ್ನು ನಡೆಸುವುದಕ್ಕೆ ಅಗತ್ಯವಾದ ತರಬೇತಿ ನೀಡುವ ಕೆಲಸವನ್ನು 'ಎಕ್ಯುಐಎಸ್' ಮಾಡುತ್ತಿದೆ.

20-25 ವರ್ಷ ವಯೋಮಾನ

ಎಲ್ಲಾ ಆರೋಪಿಗಳೂ 20-25 ವರ್ಷ ವಯೋಮಾನದವರಾಗಿದ್ದಾರೆ. ನಾಲ್ವರೂ 'ಅಲ್ ಖೈದಾ ಇಂಡಿಯನ್ ಸಬ್ ಕಾಂಟಿನೆಂಟ್'(ಎಕ್ಯುಐ ಎಸ್-ಅಲ್ ಖೈದಾ ಭಾರತೀಯ ಉಪ ಖಂಡ) ಉಗ್ರ ಸಂಘಟನೆ ಜತೆ ಗುರುತಿಸಿಕೊಂಡವರಾಗಿದ್ದಾರೆ. ಗುಪ್ತಚರ ಇಲಾಖೆಯ ನಿಖರ ಮಾಹಿತಿ ಮೇರೆಗೆ ನಾಲ್ವರನ್ನೂ ಬಂಧಿಸಲಾಗಿದೆ. ಅದಕ್ಕೂ ಮುನ್ನ ಹಲವು ದಿನಗಳಿಂದ ನಾಲ್ವರೂ ಉಗ್ರರ ಚಲನವಲನ, ಸಾಮಾಜಿಕ ಮಾಧ್ಯಮ ಸಂವಹನಗಳ ಮೇಲೆ ನಿಗಾ ಇರಿಸಲಾಗಿತ್ತು. ನಾಲ್ವರೂ ದೇಶದಲ್ಲಿ ದೊಡ್ಡ ಮಟ್ಟದ ಭಯೋತ್ಪಾದಕ ಕೃತ್ಯಕ್ಕೆ ಸಂಚು ನಡೆಸುತ್ತಿರುವುದು ಖಚಿತವಾದ ಬಳಿಕ ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಲಾಯಿತು ಎಂದು 'ಎಟಿಎಸ್'ನ ಡಿಐಜಿ ಸುನಿಲ್ ಜೋಷಿ ಸುದ್ದಿಗಾರರಿಗೆ ಬುಧವಾರ ವಿವರಿಸಿದ್ದಾರೆ. ಸದ್ಯ ತನಿಖೆ ನಡೆಸಲಾಗುತ್ತಿದ್ದು, ಇನ್ನಷ್ಟು ಸಂಗತಿಗಳು ಸದ್ಯದಲ್ಲೇ ಹೊರಬರುವ ನಿರೀಕ್ಷೆ ಇದೆ ಎಂದೂ ಹೇಳಿದ್ದಾರೆ.

ದೆಹಲಿಯಲ್ಲೂ ಇದೇ ಮಾದರಿ

'ಅಲ್-ಖೈದಾ' ಉಗ್ರ ಸಂಘಟನೆ ಜತೆಗೆ ಸಂಪರ್ಕ ಹೊಂದಿದ್ದ 'ಎಕ್ಯುಐಎಸ್' ರೀತಿಯಲ್ಲೇ ಹುಟ್ಟಿಕೊಂಡಿದ್ದ ಹೊಸತೊಂದು ಭಯೋತ್ಪಾದಕ ಘಟಕವನ್ನು ದೆಹಲಿ ಪೊಲೀಸರು 2024ರ ಆಗಸ್ಟ್‌ನಲ್ಲಿ ಪತ್ತೆ ಹಚ್ಚಿದ್ದರು. ಆ ಬಳಿಕ ಉತ್ತರ ಪ್ರದೇಶ, ಜಾರ್ಖಂಡ್ ಮತ್ತು ರಾಜಸ್ಥಾನ ರಾಜ್ಯಗಳಿಂದ ಒಟ್ಟು 14 ಭಯೋತ್ಪಾದಕರನ್ನು ಬಂಧಿಸಿದ್ದರು.

ಲೋಕಸಭೆ ಚುನಾವಣೆ: ಕರ್ನಾಟಕದಲ್ಲೂ ಕಳ್ಳಾಟ

ರಾಹುಲ್ ಗಾಂಧಿ ಆರೋಪ

ದೆಹಲಿ: ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳಲ್ಲಿ ಅಕ್ರಮ ನಡೆಯುತ್ತಿದೆ. 2024 ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕದಲ್ಲಿನ ಮತದಾನ ಪ್ರಕ್ರಿಯೆಯಲ್ಲೂ 'ಭಯಂಕರ್ ಚೋರಿ'(ಭಾರೀ ಕಳವು) ನಡೆದಿದೆ ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಬುಧವಾರ ಗಂಭೀರ ಆರೋಪ ಮಾಡಿದ್ದಾರೆ.

ಸಂಸತ್ ಭವನದ ಹೊರಗೆ ಸುದ್ದಿಗಾರರ ಜತೆ ಮಾತನಾಡಿದ ರಾಹುಲ್, ಮತಗಳ ಕಳವು ಹೇಗೆ ಮಾಡಲಾಗುತ್ತಿದೆ ಎಂಬುದು ತಿಳಿಯಲೆಂದೇ ಕರ್ನಾಟಕದ ಒಂದು ಲೋಕಸಭಾ ಕ್ಷೇತ್ರವನ್ನು ಉದಾಹರಣೆಯಾಗಿಟ್ಟುಕೊಂಡು ಮತದಾನ ಪ್ರಕ್ರಿಯೆ, ಮತಗಳ ಹಂಚಿಕೆ ಪ್ರಮಾಣ ಮೊದಲಾದ ಅಂಶಗಳನ್ನು ಆಳವಾಗಿ ಅಧ್ಯಯನ ಮಾಡಲಾಗಿದೆ. ಆಗಲೇ ಮತಗಳ ಕಳವು ಹೇಗೆಲ್ಲಾ ನಡೆಯುತ್ತಿದೆ ಎಂಬುದು ಸ್ಪಷ್ಟವಾಗಿ ನಮಗೆ ತಿಳಿದುಬಂದಿತು ಎಂದಿದ್ದಾರೆ. ನಾವು ಕಂಡುಕೊಂಡ 'ಮತ ಕಳವು' ಸತ್ಯಸಂಗತಿಯನ್ನು ಸದ್ಯದಲ್ಲೇ ಚುನಾವಣಾ ಆಯೋಗ ಮತ್ತು ಜನರ ಮುಂದೆ ಬಯಲು ಮಾಡುತ್ತೇವೆ. ಚುನಾವಣಾ ಪ್ರಕ್ರಿಯೆಯಲ್ಲಿನ ಕಪ್ಪು-ಬಿಳುಪು ಸಂಗತಿ ತೆರೆದಿಡುತ್ತೇನೆ ಎಂದರು.

ಕರ್ನಾಟಕ ಮಾತ್ರವಲ್ಲ, ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿಯೂ ಇಂತಹುದೇ ಕಳ್ಳಾಟ ಮಾಡಿ ಚುನಾವಣೆ ಗೆಲ್ಲಲಾಗಿದೆ. ಈಗ ಬಿಹಾರದಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲೂ ಇಂತಹುದೇ 'ಕಪ್ಪು-ಬಿಳುಪು' ತಂತ್ರ ನಡೆಯಲಿದೆ. ಅದು ಈ ಬಾಗಿ ನಡೆಯಲು ಬಿಡುವುದಿಲ್ಲ ಎಂದು ದೃಢವಾಗಿ ಹೇಳಿದರು.

ಬಿಹಾರದಲ್ಲಿ ಸದ್ಯ ನಡೆಯುತ್ತಿರುವ ಮತದಾರರ ಪಟ್ಟಿಯ 'ವಿಶೇಷ ಕ್ಷಿಪ್ರ ಪರಿಷ್ಕರಣೆ'(ಎಸ್‌ಐಆರ್)ಯ ಬಗೆಗೂ ನಮಗೆ ಅನುಮಾನವಿದೆ ಎಂದು ಕಾಂಗ್ರೆಸ್ ನಾಯಕ ಹೇಳಿದರು.

ಕಂಗಾಲಾಗಿರುವ ಬಾಲಿವುಡ್ ನಟಿ ವಿಡಿಯೊ ವೈರಲ್

ಸಹಾಯಕ್ಕೆ ಯಾಚಿಸಿ ತನುಶ್ರೀ ದತ್ತಾ ಸೆಲ್ಫಿ

ಮುಂಬೈ: 2004ರಲ್ಲಿ 'ಮಿಸ್ ಇಂಡಿಯ' ಕಿರೀಟ ಮುಡಿಗೇರಿಸಿಕೊಂಡ, 'ಮಿಸ್ ಯುನಿವರ್ಸ್' ಸ್ಪರ್ಧೆಯಲ್ಲಿ 6ನೇ ಸ್ಥಾನದವರೆಗೂ ಹೋಗಿದ್ದ ಒಂದು ಕಾಲದ ಬಾಲಿವುಡ್ ನಟಿ ತನುಶ್ರೀ ದತ್ತಾ, ಈಗ ಮುಂಬೈನ ಅಪಾರ್ಟ್‌ಮೆಂಟ್‌ನಲ್ಲಿ ಏಕಾಂಗಿಯಾಗಿ ಕಣ್ಣೀರಿಡುತ್ತಿದ್ದಾರೆ.

'ನನಗೆ ಬಹಳ ತೊಂದರೆ ಆಗುತ್ತಿದೆ, ಸಹಾಯ ಮಾಡಿ' ಎಂದು ಅಂಗಲಾಚಿದ್ದಾರೆ. ಕಣ್ಣೀರಿಡುತ್ತಾ ಸೆಲ್ಫಿ ವಿಡಿಯೊ ಮಾಡಿ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. '2020ರಿಂದಲೂ ಬಹಳ ಕಷ್ಟ ಅನುಭವಿಸುತ್ತಿರುವೆ. ಮನೆಯೊಳಗೆ ಇದ್ದರೂ ಹೊರಗಿನಿಂದ ಬಹಳ ಹಿಂಸೆ ನೀಡಲಾಗುತ್ತಿದೆ. ನಿರಂತರ ಬಾಗಿಲು ಬಡಿಯುವುದು, ಜೋರು ಶಬ್ದ ಮಾಡಿ ಹೆದರಿಸುವುದು ನಡೆಯುತ್ತಿದೆ. ಶಬ್ದ ಕೇಳಬಾರದೆಂದು ಸದಾ ಹೆಡ್‌ಫೋನ್ ಧರಿಸುವಂತಾಗಿದೆ. ಅಪಾರ್ಟ್‌ಮೆಂಟ್ ಸೊಸೈಟಿಗೆ ಹೇಳಿದರೂ ಪ್ರಯೋಜನವಾಗಿಲ್ಲ. ಪೊಲೀಸರಿಗೂ ಕರೆ ಮಾಡಿದ್ದೆ. ಮನೆಗೆ ಬಂದ ಪೊಲೀಸರು, ಠಾಣೆಗೆ ಬಂದು ಲಿಖಿತ ದೂರು ನೀಡಿ ಎಂದು ಹೇಳಿದರು. ಆರೋಗ್ಯ ಪೂರ್ಣ ಹದಗೆಟ್ಟಿದ್ದು, ಠಾಣೆಗೂ ಹೋಗಲಾಗಿಲ್ಲ. ಮನೆ ಕೆಲಸಕ್ಕೆ ನೇಮಿಸಿಕೊಂಡರೆ ಅವರು ಕಳವು ಮಾಡುತ್ತಿದ್ದಾರೆ. ಯಾರನ್ನೂ ನಂಬಲಾಗುತ್ತಿಲ್ಲ. ನಾನೇ



ಮನೆ ಕೆಲಸ ಮಾಡಿಕೊಳ್ಳಬೇಕಿದೆ. ಹೊರಹೋಗಿ ವೃತ್ತಿನಿರತಳಾಗಲೂ ಅಸಾಧ್ಯವಾಗಿದೆ. ದಯಮಾಡಿ ಯಾರಾದರೂ ಸಹಾಯ ಮಾಡಿ' ಎಂದೂ ಕಣ್ಣೀರಿಟ್ಟಿದ್ದಾರೆ.

ಆದರೆ, ತನುಶ್ರೀ ಮಾನಸಿಕ ಆರೋಗ್ಯದ ಬಗೆಗೆ ಇನ್‌ಸ್ಟಾಗ್ರಾಂ ಬಳಕೆದಾರರಲ್ಲಿ ಕೆಲವರು ಅನುಮಾನ ವ್ಯಕ್ತಪಡಿಸಿ ಚಿಕಿತ್ಸೆ ಪಡೆಯಲು ಸಲಹೆ ನೀಡಿದ್ದಾರೆ.

ನಟ ನಾನಾ ಪಾಟೇಕರ್ ಸಿನಿಮಾ ಸೇರಿದಂತೆ ಹಲವು ಹಿಂದಿ ಚಿತ್ರಗಳಲ್ಲಿ ನಟಿಸಿದ್ದ ದತ್ತಾ, 2018ರಲ್ಲಿ ಕ್ಯಾಸ್ಟಿಂಗ್ ಕೌಚ್(ಸಿನಿಮಾ ನಟನೆಗಾಗಿ ಲೈಂಗಿಕ ಶೋಷಣೆ) ಬಗ್ಗೆ 'ಮೀ ಟೂ' ಆಂದೋಲನಕ್ಕೆ ಮೊದಲಿಟ್ಟಿದ್ದರು ಎಂಬುದನ್ನು ನೆನಪಿಸಿಕೊಳ್ಳಬಹುದು.

ಗದ್ದಲದ ಕಾರಣ ಉಭಯ ಸದನ ಕಲಾಪ ಗುರುವಾರಕ್ಕೆ ಮುಂದೂಡಿಕೆ

ಪ್ರತಿಭಟನೆ: 3ನೇ ದಿನವೂ ನಡೆಯದ ಕಲಾಪ

ದೆಹಲಿ: ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಕ್ಷಿಪ್ರಗತಿ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆ ಮತ್ತು ಪಾಕಿಸ್ತಾನ ವಿರುದ್ಧದ ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆಗೆ ಒತ್ತಾಯಿಸಿ ಪ್ರತಿಪಕ್ಷಗಳು ಸತತವಾಗಿ ಬುಧವಾರದ ಕಲಾಪಕ್ಕೆ ಅಡ್ಡಿಪಡಿಸಿದ್ದರಿಂದ ಸಂಸತ್ತಿನ ಉಭಯ ಸದನಗಳ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು. ಜು.21ರಂದು ಸಂಸತ್ ಮುಂಗಾರು ಅಧಿವೇಶನ ಆರಂಭಗೊಂಡ ನಂತರ ಸತತ 3ನೇ ದಿನವೂ ಸದನ ಕಲಾಪ ಮುಂದೂಡಿದಂತಾಗಿದೆ.

ಲೋಕಸಭೆಯಲ್ಲಿ ಬುಧವಾರ ಬೆಳಗ್ಗೆ ಪ್ರಶ್ನೋತ್ತರ ಅವಧಿಯಲ್ಲಿ ಫಲಕ ಹಿಡಿದು 'ಬಿಹಾರ್ ಕಾ ಎಸ್‌ಐಆರ್ ವಾಪಸ್ ಲೋ' (ಬಿಹಾರದಲ್ಲಿ ನಡೆದಿರುವ ಎಸ್‌ಐಆರ್ ರದ್ದುಗೊಳಿಸಿ) ಎಂದು ಘೋಷಣೆ ಕೂಗುತ್ತಾ ಪ್ರತಿಪಕ್ಷಗಳ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟಿಸಿದರು. ಆಗ ಮೊದಲಿಗೆ ಮಧ್ಯಾಹ್ನ 12 ಗಂಟೆಗೆ, ಆ ಬಳಿಕ ಮಧ್ಯಾಹ್ನ 2 ಗಂಟೆಗೆ,

16 ಗಂಟೆ ಚರ್ಚೆಗೆ ಸಮ್ಮತಿ

ಆಪರೇಷನ್ ಸಿಂದೂರ್ ವಿಚಾರವಾಗಿ ರಾಜ್ಯಸಭೆಯಲ್ಲಿ ಒಟ್ಟು 16 ಗಂಟೆಗಳ ಕಾಲ ಚರ್ಚೆಗೆ ಅವಕಾಶ ಮಾಡಿಕೊಡಲು ಸರಕಾರ ಸಮ್ಮತಿಸಿದೆ. ಮಂಗಳವಾರದಿಂದಲೇ ಚರ್ಚೆ ಆರಂಭಿಸಲು ಸಿದ್ಧ ಎಂದೂ ಸಭಾ ನಾಯಕರು ಸದನದಲ್ಲಿ ಬುಧವಾರ ಪ್ರಕಟಿಸಿದರು.

ನಂತರ ಸಂಜೆಗೆ ಕಲಾಪ ಮುಂದೂಡಲಾಯಿತು. ಮರಳಿ ಸದನ ಸೇರಿದಾಗಲೂ ಪ್ರತಿಪಕ್ಷಗಳ ಪ್ರತಿಭಟನೆ-ಘೋಷಣೆ ಮುಂದುವರಿದಿದ್ದರಿಂದ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು. ನಿಮ್ಮನ್ನು ಆಯ್ಕೆ ಮಾಡಿದ ಜನರ ಆಶಯ-ಆಕಾಂಕ್ಷೆಗಳಿಗೆ ತಕ್ಕಂತೆ ವರ್ತಿಸಬೇಕು. ಜನರ ಜೀವನ ಸುಲಭಗೊಳಿಸುವ ವಿಷಯಗಳ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಆದರೆ ನೀವು ಬೀದಿಯಲ್ಲಿ ವರ್ತಿಸುವಂತೆ ನಡೆದುಕೊಳ್ಳುತ್ತಿದ್ದೀರಿ ಎಂದು ಪ್ರತಿಭಟನಾ ನಿರತ ಸಂಸದರ ವರ್ತನೆಗೆ ಸ್ಪೀಕರ್ ಓಂ ಬಿರ್ಲಾ ಅಸಮಾಧಾನ ವ್ಯಕ್ತಪಡಿಸಿದರು. ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದೂ ಎಚ್ಚರಿಸಿದರು. ರಾಜ್ಯಸಭೆಯಲ್ಲೂ ಪ್ರತಿಪಕ್ಷಗಳು ಪ್ರತಿಭಟಿಸಿದ್ದರಿಂದ ಕಲಾಪವನ್ನು ಎರಡು ಬಾರಿ ಮುಂದೂಡಲಾಯಿತು. ನಂತರ ಎಲ್ಲಾ ಕಲಾಪ ಸ್ಥಗಿತಗೊಳಿಸಿ ಗುರುವಾರಕ್ಕೆ ಮುಂದೂಡಲಾಯಿತು. 'ಪ್ರತಿಪಕ್ಷಗಳ ಬೇಡಿಕೆ ಪರಿಗಣಿಸದಿರುವುದರಿಂದಲೇ ಕಲಾಪಕ್ಕೆ ಅಡ್ಡಿಯಾಗುತ್ತಿದೆ. ಇದಕ್ಕೆ ಸರಕಾರದ ಮೊಂಡುತನವೇ ಕಾರಣ' ಎಂದು ಟಿಎಂಸಿ ಸಂಸದ ಡೆರೆಕ್ ಒ ಬ್ರಿಯಾನ್ ಕಿಡಿಕಾರಿದರು.

ಜನಗಣತಿಗೆ ಸಕಲ ಸಿದ್ಧತೆ, ಡಾಟಾ ಸಂಗ್ರಹ: ಸಚಿವ

ದೆಹಲಿ: 2027ರ ಜನಗಣತಿಗೆ ಸಿದ್ಧತೆಯನ್ನು ಈಗಾಗಲೇ ಆರಂಭಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಲೋಕಸಭೆಗೆ ಮಾಹಿತಿ ನೀಡಿದೆ.

ಜಾತಿ-ಜನ ಗಣತಿ ಕಾರ್ಯತಂತ್ರ ಕುರಿತು ಚರ್ಚಿಸಲು ಜು.3-4ರಂದು ದೆಹಲಿಯಲ್ಲಿ ದೊಡ್ಡ ಮಟ್ಟದ ಸಭೆ ನಡೆಸಿ, ಮೊಬೈಲ್ ಆ್ಯಪ್ ಮೂಲಕ ಡಿಜಿಟಲ್ ಡಾಟಾ ಸಂಗ್ರಹ, ಜನಗಣತಿ ನಿರ್ವಹಣೆ ಮತ್ತು ಮಾನಿಟರಿಂಗ್ ಸಿಸ್ಟಮ್ ಪೋರ್ಟಲ್ ಮೂಲಕ ನಿರ್ವಹಣೆ ಮತ್ತು ಮೇಲ್ವಿಚಾರಣೆ, ಸ್ವಯಂ-ಎಣಿಕೆ, ಜನಗಣತಿ ಸಿಬ್ಬಂದಿಯ ತರಬೇತಿ ಮತ್ತಿತರ ಪ್ರಮುಖ ವಿಷಯಗಳ ಕುರಿತು ಚರ್ಚಿಸಲಾಗಿದೆ. ಜನಗಣತಿ ಕಾರ್ಯಾಚರಣೆಗಳ ನಿರ್ದೇಶಕರು ಮತ್ತು ಹಿರಿಯ ಅಧಿಕಾರಿಗಳು, ರಿಜಿಸ್ಟ್ರಾರ್ ಜನರಲ್ ಮತ್ತು ಸೆನ್ಸಸ್ ಕಮಿಷನರ್ ಕಚೇರಿ ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು ಎಂದು ಗೃಹ ಖಾತೆ ಸಹಾಯಕ ಸಚಿವ ನಿತ್ಯಾನಂದ ರೈ ಲೋಕಸಭೆಗೆ ಲಿಖಿತ ಉತ್ತರ ನೀಡಿದ್ದಾರೆ. ಹವಾಮಾನ ಮತ್ತು ಕಾರ್ಯತಂತ್ರದ ಕಾರಣ 2 ಹಂತಗಳಲ್ಲಿ ಗಣತಿ ಪ್ರಕ್ರಿಯೆ ನಡೆಸಲಾಗುವುದು. ಮೊದಲಿಗೆ 2026ರ ಅ.1ರಿಂದ ಕೇಂದ್ರಾಡಳಿತ ಪ್ರದೇಶ ಲಡಾಖ್, ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಗಣತಿಗಳು ಆರಂಭವಾಗಲಿದೆ. ಬಳಿಕ 2027ರ ಮಾ.1ರಿಂದ ದೇಶದ ಬಹುತೇಕ ಕಡೆ ಗಣತಿ ನಡೆಸಲಾಗುವುದು. ಡಿಜಿಟಲ್ ಡೇಟಾ ಸಂಗ್ರಹಿಸುವುದು ಮತ್ತು ಜಾತಿ ಗಣತಿ ಇದರಲ್ಲಿ ಸೇರಿರುತ್ತದೆ ಎಂದು ಸಚಿವರು ತಿಳಿಸಿದ್ದಾರೆ. ಈ ಹಿಂದೆ 2011ರಲ್ಲಿ ಕೊನೆ ಬಾರಿಗೆ ಗಣತಿ ನಡೆದಿತ್ತು. ಕೋವಿಡ್ ಕಾರಣ 2021ರ ಗಣತಿ ಮುಂದೂಡಲಾಗಿತ್ತು.

ಬಂಗಲೆ, ಬಿಎಂಡಬ್ಲ್ಯು, ₹12 ಕೋಟಿ ಕೇಳಿದ ಪತ್ನಿ

ವಿದ್ಯಾವಂತೆ, ಹೀಗೆ ಬೇಡದಿರಿ, ದುಡಿದು ಬದುಕಿ: ಸುಪ್ರೀಂ

ದೆಹಲಿ: ತನ್ನನ್ನು ತ್ಯಜಿಸಲು ಮುಂದಾಗಿರುವ ಪತಿಯಿಂದ ಜೀವನಾಂಶವಾಗಿ 'ಮುಂಬೈ ನಗರದಲ್ಲಿ ದೊಡ್ಡ ಮನೆ, ಬಿಎಂಡಬ್ಲ್ಯು ಕಾರು, 12 ಕೋಟಿ ರು.' ಪರಿಹಾರ ಕೇಳಿದ್ದ ಪತ್ನಿಯೊಬ್ಬರಿಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಪೀಠ, 'ನೀವು ವಿದ್ಯಾವಂತರಲ್ಲವೇ? ನೀವೇ ದುಡಿಯಬಹುದಲ್ಲವೇ? ಹೀಗೆ ಬೇಡಬಾರದು' ಎಂದು ತಿಳಿಹೇಳಲು ಯತ್ನಿಸಿದ ಪ್ರಸಂಗ ಮಂಗಳವಾರ ನಡೆದಿದೆ.

ಮದುವೆಯಾಗಿ 18 ತಿಂಗಳಿಗೇ ತನ್ನನ್ನು ಮನೋರೋಗಿ ಎಂದು ಬಿಂಬಿಸಿ ತ್ಯಜಿಸಲು ಮುಂದಾದ ಮುಂಬೈ ನಗರದ ಸಿರಿವಂತ ಪತಿಯಿಂದ ಪತ್ನಿ ಭಾರೀ ಪ್ರಮಾಣದ ಪರಿಹಾರ ಕೋರಿದ್ದರು. ಆದರೆ, ಮಹಿಳೆ ಉನ್ನತ ಪದವೀಧರೆ, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ವೃತ್ತಿನಿರತೆ ಎಂಬುದು ತಿಳಿದ ಬಳಿಕ 'ಬೇರೊಬ್ಬರ ಹಣಕ್ಕೆ ಆಸೆ ಪಡುವ ಬದಲು ದುಡಿದು ತಿನ್ನುವುದು ಉತ್ತಮ ಅಲ್ಲವೇ' ಎಂದು ನ್ಯಾಯಮೂರ್ತಿಗಳು ಬುದ್ಧಿಮಾತು ಹೇಳಲೆತ್ನಿಸಿದರು. 'ನೀವು ಎಂಬಿಎ ಪದವೀಧರೆ ಇದ್ದೀರಿ. ನಿಮಗಾಗಿ ನೀವೇ ಸಂಪಾದಿಸಿಕೊಳ್ಳಬೇಕು, ಬೇರೆಯವರ ಮುಂದೆ ಕೈಚಾಚಬಾರದು. ಬೆಂಗಳೂರು, ಹೈದರಾಬಾದ್ ಮತ್ತಿತರೆಡೆ ವೃತ್ತಿಗೆ ಹೇರಳ ಅವಕಾಶಗಳಿವೆ. 4 ಕೋಟಿ ರು. ಅಥವಾ ಮುಂಬೈ ಫ್ಲ್ಯಾಟ್ ಕೊಡಲು ಪತಿ ಈಗಾಗಲೇ ಒಪ್ಪಿದ್ದಾರೆ. ಅದನ್ನು ಪಡೆದು ಜೀವನ ನಿರ್ವಹಣೆ ಮಾಡಬಹುದಲ್ಲವೇ?' ಎಂದು ಪ್ರಶ್ನಿಸಿದರು.

ನಾನು ಮನೋರೋಗಿ ಎಂದು ಬಿಂಬಿಸಿ ಮದುವೆಯನ್ನು ರದ್ದುಗೊಳಿಸಲು ಸಹ ಪ್ರಯತ್ನಿಸಿದ್ದಾರೆ. ನಾನು ನಿಮಗೆ ಸ್ಕಿಜೋಫ್ರೇನಿಯಾ ರೋಗಿಯಂತೆ ಕಾಣುತ್ತೇನೆಯೇ? ಎಂದು ಮಹಿಳೆ ನ್ಯಾಯಮೂರ್ತಿಗಳನ್ನೇ ಪ್ರಶ್ನಿಸಿದರು. ಪತಿ ಭಾರೀ ಶ್ರೀಮಂತ. ಹಾಗಾಗಿ ನಾನು ಕೇಳಿರುವಷ್ಟು ಪರಿಹಾರ ಕೊಡಲಿ ಎಂದು ಮಹಿಳೆ ವಾದಿಸಿದರು. ಒಂದೊ, ಮುಂಬೈನಲ್ಲಿನ ಫ್ಲ್ಯಾಟ್ ಪಡೆದುಕೊಳ್ಳಿ. ಇಲ್ಲವೇ 4 ಕೋಟಿ ರು. ಜೀವನಾಂಶ ಪಡೆದು ಪುಣೆ, ಹೈದರಾ ಬಾದ್, ಬೆಂಗಳೂರಿನಲ್ಲಿ ಮನೆ ಖರೀದಿಸಿ ಐಟಿ ಉದ್ಯೋಗ ಮುಂದುವರಿಸಿರಿ ಎಂದರು.

ನಕಲಿ ರಾಯಭಾರ ಕಚೇರಿ: ಗಾಜಿಯಾಬಾದ್ ವ್ಯಕ್ತಿ ಸೆರೆ

ಲಖನೌ: ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ 'ವೆಸ್ಟ್ ಆರ್ಟಿಕಾ' ಹೆಸರಲ್ಲಿ ನಕಲಿ ರಾಯಭಾರ ಕಚೇರಿ ನಡೆಸುತ್ತಿದ್ದ ವಂಚಕನನ್ನು ನೊಯಿಡಾ ವಿಶೇಷ ಪೊಲೀಸ್ ಕಾರ್ಯಪಡೆ(ಎಸ್‌ಟಿಎಫ್) ಬಂಧಿಸಿದೆ.

ಗಾಜಿಯಾಬಾದ್‌ನ ಕವಿ ನಗರ ನಿವಾಸಿಯಾದ ಆರೋಪಿ ಹರ್ಷವರ್ಧನ್ ಜೈನ್, ತಾನು ಪ್ರಧಾನಿ, ರಾಷ್ಟ್ರಪತಿ ಮತ್ತಿತರ ಗಣ್ಯರ ಜತೆ ನಿಂತಿರುವಂತೆ ಫೋಟೊಗಳನ್ನು ಸೃಷ್ಟಿಸಿ ಜನರನ್ನು ನಂಬಿಸುತ್ತಿದ್ದ. ವಿವಿಧ ದೇಶಗಳಲ್ಲಿ ನೌಕರಿ ಕೊಡಿಸುವ ಭರವಸೆ ನೀಡಿ ವಂಚಿಸುತ್ತಿದ್ದ. ನಕಲಿ ಕಂಪನಿಗಳ ಹೆಸರಲ್ಲಿ ಹವಾಲಾ(ಅಕ್ರಮವಾಗಿ ಹಣ ವರ್ಗಾವನೆ) ದಂಧೆ ನಡಸುತ್ತಿದ್ದ. ಆರೋಪಿಗೆ ವಿವಾದಾತ್ಮಕ ಕಾವಿಧಾರಿ ಚಂದ್ರಸ್ವಾಮಿ, ಶಸ್ತ್ರಾಸ್ತ್ರ ವ್ಯಾಪಾರಿ ಅದ್ನಾನ್ ಖಶೋಗಿ ಸಂಬಂಧವಿದೆ ಎಂಬುದು ತನಿಖೆ ವೇಳೆ ತಿಳಿದುಬಂದಿದೆ.

ಬಾಡಿಗೆ ಮನೆಯಲ್ಲಿ ನಕಲಿ ರಾಯಭಾರ ಕಚೇರಿ ನಡೆಸುತ್ತಾ, ಪಶ್ಚಿಮ ಆರ್ಟಿಕಾ, ಸಬೋರ್ಗಾ, ಪೌಲ್ವಿಯಾ ಮತ್ತು ಲೊಡೋನಿಯಾ ಹೆಸರಿನಲ್ಲಿ ಅಸ್ತಿತ್ವದಲ್ಲಿಯೇ ಇಲ್ಲದ ದೇಶಗಳ ರಾಯಭಾರಿ ಎಂದು ತನ್ನನ್ನು ಪರಿಚಯಿಸಿಕೊಳ್ಳುತ್ತಿದ್ದ. ನಕಲಿ

ರಾಜತಾಂತ್ರಿಕ ನಂಬರ್ ಪ್ಲೇಟ್‌ಗಳಿರುವ ಐಷಾರಾಮಿ ಕಾರುಗಳಲ್ಲಿ ಸಂಚರಿಸುತ್ತಿದ್ದ. ಈತನಿಂದ 2011ರಲ್ಲಿ ಸ್ಯಾಟಲೈಟ್ ಫೋನ್ ವಶಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿತ್ತು. ಆರೋಪಿಯಿಂದ 44.7 ಲಕ್ಷ ರು. ನಗದು, ಹಲವು ವಿದೇಶಿ ಕರೆನ್ಸಿಗಳು, ನಕಲಿ ಕಂಪನಿಗಳ ದಾಖಲೆಪತ್ರಗಳು, ಹಲವಾರು ನಕಲಿ ಪಾಸ್‌ಪೋರ್ಟ್‌ಗಳು, ನಕಲಿ ರಬ್ಬರ್ ಸ್ಟ್ಯಾಂಪ್ಸ್, 4 ಐಷಾರಾಮಿ ಕಾರು ವಶಪಡಿಸಿಕೊಳ್ಳಲಾಗಿದೆ. ಕವಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಎಡಿಜಿಪಿ ಅಮಿತಾಭ್ ಯಶ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಪಾಕ್ ಸರಣಿ ಸಾಲಗಾರ, ಮತಾಂಧ: ಭಾರತ ಕಿಡಿ

ವಿಶ್ವಸಂಸ್ಥೆ: 'ನಮ್ಮ ನೆರೆಯ ದೇಶ ಮತಾಂಧತೆಯಲ್ಲಿ ಮುಳುಗಿರುವ ಸರಣಿ ಸಾಲಗಾರ ದೇಶವಾಗಿದೆ' ಎಂದು ಪಾಕಿಸ್ತಾನದ ಹೆಸರು ಹೇಳದೇ ವಿಶ್ವಸಂಸ್ಥೆಯಲ್ಲಿ ಭಾರತ ತೀವ್ರ ಸ್ವರೂಪದ ವಾಗ್ದಾಳಿ ನಡೆಸಿದೆ.



ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಉನ್ನತ ಮಟ್ಟದ ಸಮಿತಿಗೆ ಜುಲೈ ತಿಂಗಳಲ್ಲಿ ಪಾಕಿಸ್ತಾನಕ್ಕೆ ಅಧ್ಯಕ್ಷತೆ ವಹಿಸುವ ಅವಕಾಶ ಸಿಕ್ಕಿದೆ. ಪಾಕ್ ಅಧ್ಯಕ್ಷತೆಯಲ್ಲಿ ನಡೆದ ಬಹುಪಕ್ಷೀಯ ಮತ್ತು ವಿವಾದಗಳ ಶಾಂತಿಯುತ ಇತ್ಯರ್ಥ ಮೂಲಕ ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಉತ್ತೇಜಿಸುವ ಕುರಿತ ಮುಕ್ತ ಚರ್ಚೆ ವೇಳೆಯೇ ಪಾಕಿಸ್ತಾನವನ್ನು ಪರೋಕ್ಷವಾಗಿ ಭಾರತ ತರಾಟೆಗೆ ತೆಗೆದುಕೊಂಡಿದೆ.

ಅಂತಾರಾಷ್ಟ್ರೀಯ ಶಾಂತಿ-ಭದ್ರತೆ ವಿಚಾರ ಚರ್ಚಿಸುತ್ತಿರುವಾಗ ಒಂದು ವಿಷಯವನ್ನು ಹೇಳಲೇಬೇಕಿದೆ. ಜಾಗತಿಕವಾಗಿ ಎಲ್ಲಾ ದೇಶಗಳೂ ಗೌರವಿಸಬೇಕಾದ ಕೆಲವು ಮೂಲ ತತ್ವಗಳಿವೆ ಎಂದು ಗುರುತಿಸುವುದು ಅತ್ಯಗತ್ಯ. ಅದರಲ್ಲೊಂದು ಬಲು ಮುಖ್ಯವಾದ ವಿಷಯವೆಂದರೆ 'ಭಯೋತ್ಪಾದನೆ ವಿಚಾರದಲ್ಲಿ ಸ್ವಲ್ಪವೂ ಸಹಿಷ್ಣುತೆ ಹೊಂದಿರಬಾರದು' ಎಂಬುದಾಗಿದೆ. ಭಯೋತ್ಪಾದನೆಗೆ ಉತ್ತೇಜನ ನೀಡುವ, ಉಗ್ರರನ್ನು ಸೃಷ್ಟಿಸಿ ಸಲಹುವ ದೇಶಗಳಿಗೆ ತಕ್ಕ ಪಾಠ ಕಲಿಸಲೇಬೇಕಿದೆ ಎಂದು ವಿಶ್ವಸಂಸ್ಥೆಯಲ್ಲಿನ ಭಾರತದ ಖಾಯಂ ಪ್ರತಿನಿಧಿ ರಾಯಭಾರಿ ಪರ್ವತನೇನಿ ಹರೀಶ್ ಹೇಳಿದರು.

ಭಯೋತ್ಪಾದನೆ ಪ್ರಚೋದಿಸುವ ದೇಶಗಳು ಸದ್ಯದಲ್ಲೇ ದೊಡ್ಡ ಬೆಲೆ ತೆರಬೇಕಾಗುತ್ತದೆ ಎಂಬ ಭಾರತದ ದಿಟ್ಟ ಮಾತುಗಳನ್ನು ಹೇಳಿದಾಗ ಪಾಕ್ ವಿದೇಶಾಂಗ ಸಚಿವರೂ ಆಗಿರುವ ಉಪ ಪ್ರಧಾನಿ ಇಶಾಕ್ ದಾರ್ ಮುಕ್ತ ಚರ್ಚಾ ಸಭೆಯ ಅಧ್ಯಕ್ಷತೆ ವಹಿಸಿದ್ದರು ಎಂಬುದು ಗಮನಾರ್ಹ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರೂ ಇದೇ ಸಭೆಯಲ್ಲಿ ಭಾಷಣ ಮಾಡಿದ್ದರು.

ಸಂಬಂಧ ಸುಧಾರಣೆಗೆ ಮಾಲ್ಡೀವ್ಸ್ ಭಿನ್ನ ಯತ್ನ

ಮಾಲೆ: ಹೊಸ ಅಧ್ಯಕ್ಷರಾಗಿ ಮೊಹಮ್ಮದ್ ಮುಯಿಝು ಆಯ್ಕೆಯಾದ ಬಳಿಕ ಭಾರತದ ಸ್ನೇಹವನ್ನು ಕಡೆಗಣಿಸಿ ಚೀನಾದತ್ತ ಹೊರಳಿದ್ದ ದ್ವೀಪ ರಾಷ್ಟ್ರ 'ರಿಪಬ್ಲಿಕ್ ಆಫ್ ಮಾಲ್ಡೀವ್ಸ್', ಈಗ ಮತ್ತೆ ಭಾರತದತ್ತ ನೋಡಲಾರಂಭಿಸಿದೆ.

ದೇಶದ 60ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರನ್ನೇ ಮುಖ್ಯ ಅತಿಥಿಯಾಗಿ ಆಹ್ವಾನಿಸಿದೆ. ಲಕ್ಷ ದ್ವೀಪಗಳಿಗೆ ಭೇಟಿ ನೀಡಿದ್ದ ಪ್ರಧಾನಿ ಮೋದಿ ಅವರು, ಬೇರೆ ದ್ವೀಪ ರಾಷ್ಟ್ರಗಳಿಗೆ ಪ್ರವಾಸ ಹೋಗುವ ಬದಲು ನಮ್ಮದೇ ದೇಶದ ಲಕ್ಷ ದ್ವೀಪ ಗಳಿಗೆ ಪ್ರವಾಸ ಹಮ್ಮಿಕೊಳ್ಳಿ ಎಂಬ ಸಂದೇಶ ನೀಡಿದ್ದಕ್ಕೆ ಮಾಲ್ಡೀವ್ಸ್ ಸಚಿವರಿಬ್ಬರು ವ್ಯಂಗ್ಯವಾಡಿದ್ದರು. ಆ ಬಳಿಕ ಭಾರತೀಯರು, ಬಾಯ್ಕಾಟ್ ಮಾಲ್ಡೀವ್ ಅಭಿಯಾನ ಆರಂಭಿಸಿದ್ದರಿಂದ ಮಾಲ್ಡೀವ್ಸ್ ಪ್ರವಾಸೋದ್ಯಮಕ್ಕೆ ದೊಡ್ಡ ಪೆಟ್ಟು ಬಿದ್ದಿತ್ತು. 2 ವರ್ಷಗಳಿಂದ ಭಾರತ-ಮಾಲ್ಡೀವ್ಸ್ ಸಂಬಂಧ ಹದಗೆಟ್ಟಿತ್ತು. ಅಂದು, ಭಾರತ, ಪ್ರಧಾನಿ ಮೋದಿ ಅವರ ಬಗ್ಗೆ ವ್ಯಂಗ್ಯವಾಡಿ ಅವಮಾನ ಮಾಡಿದ್ದ ಮಾಲ್ಡೀವ್ಸ್, ಈಗ ಮೋದಿ ಅವರನ್ನೇ ಮುಖ್ಯ ಅತಿಥಿಯಾಗಿ ಆಹ್ವಾನಿಸಿರುವುದು ಭಾರತೀಯರ ಹುಬ್ಬೇರುವಂತೆ ಮಾಡಿದೆ. ಪ್ರಧಾನಿ ಮೋದಿ ಜು.25-26ರಂದು ಮಾಲ್ಡೀವ್ಸ್‌ಗೆ ಭೇಟಿ ನೀಡಲಿದ್ದಾರೆ. ಈ ಮೂಲಕ ಸಂಬಂಧ ಸುಧಾರಿಸಿಕೊಂಡು ಭಾರತದ ಪ್ರವಾಸಿಗರನ್ನು ಆಕರ್ಷಿಸಲು ಮಾಲ್ಡೀವ್ಸ್ ಯತ್ನಿಸುತ್ತಿದೆ ಎನ್ನಲಾಗಿದೆ.

5 ವರ್ಷಗಳ ಬಳಿಕ ಚೀನಾಗೆ ವೀಸಾ ವಿತರಣೆ

ಚೀನಿಯರಿಗೆ ಭಾರತದಿಂದ ಪ್ರವಾಸಿ ವೀಸಾ ವಿತರಣೆ ಆರಂಭ

ಬೀಜಿಂಗ್: ಭಾರತದ ಪೂರ್ವ ಲಡಾಕ್‌ನ ಗಾಲ್ವಾನ್ ಕಣಿವೆಯಲ್ಲಿ 5 ವರ್ಷಗಳ ಹಿಂದೆ ಭಾರತ-ಚೀನಾ ಸೈನಿಕರ ನಡುವೆ ಸಂಘರ್ಷ ನಡೆದ ನಂತರ ಹದಗೆಟ್ಟಿದ್ದ ದ್ವಿಪಕ್ಷೀಯ ಸಂಬಂಧವನ್ನು ಸುಧಾರಿಸುವ ಯತ್ನಕ್ಕೆ ಕೇಂದ್ರ ಸರಕಾರ ಮುಂದಾಗಿದೆ. ಸಂಬಂಧ ಸುಧಾರಣೆಯ ಭಾಗವಾಗಿ ಗುರುವಾರದಿಂದ ಚೀನಾ ಪ್ರಜೆಗಳಿಗೆ ಪ್ರವಾಸಿ ವೀಸಾ ನೀಡುವುದನ್ನು ಪುನರಾರಂಭಿಸುತ್ತಿದೆ.

ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಭಾರತ 2020 ರಲ್ಲಿ ಚೀನೀ ಪ್ರಜೆಗಳಿಗೆ ಪ್ರವಾಸಿ ವೀಸಾ ನೀಡುವುದನ್ನು ಸ್ಥಗಿತಗೊಳಿಸಿತ್ತು. ನಂತರದಲ್ಲಿ ಪೂರ್ವ ಲಡಾಖ್ ಗಡಿ ವಿವಾದ-ಸೈನಿಕರ ಸಂಘರ್ಷ ಹಿನ್ನೆಲೆ ವೀಸಾ ವಿತರಣೆ ಸ್ಥಗಿತ ಮುಂದುವರೆದಿತ್ತು. ಈಗ ಪ್ರವಾಸಿ ವೀಸಾ ನೀಡಲು ಮುಂದಾಗಿರುವ ಕೇಂದ್ರ ಸರಕಾರ, ಬೀಜಿಂಗ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯಲ್ಲಿ ಚೀನಾ ಪ್ರಜೆಗಳು ಪ್ರವಾಸಿ ವೀಸಾಗೆ ಅರ್ಜಿ ಸಲ್ಲಿಸಬಹುದು ಎಂದು ಹೇಳಿದೆ. ಪ್ರವಾಸಿ ವೀಸಾಗೆ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಕ್ರಮಗಳು, ಬೀಜಿಂಗ್, ಶಾಂಘೈ ಮತ್ತು ಗುವಾಂಗ್ಝೌನಲ್ಲಿರುವ ಭಾರತೀಯ ವೀಸಾ ಅರ್ಜಿ ಕೇಂದ್ರಗಳಲ್ಲಿ ಚೀನೀ ಪ್ರಜೆಗಳು ಸಲ್ಲಿಸಬೇಕಾದ ದಾಖಲೆಗಳ ವಿವರಗಳನ್ನು ಇತ್ತೀಚಿನ ಭಾರತೀಯ ರಾಯಭಾರ ಕಚೇರಿಯ ಅಧಿಸೂಚನೆಯಲ್ಲಿ ನೀಡಲಾಗಿದೆ. ಪ್ರವಾಸಿ ವೀಸಾ ನೀಡುವುದಕ್ಕೆ ಮತ್ತೆ ಆರಂಭಿಸುವ ಭಾರತದ ನಡೆಯನ್ನು ಚೀನಾ ವಿದೇಶಾಂಗ ಸಚಿವಾಲಯ ಸ್ವಾಗತಿಸಿದೆ. ಇದು ಗಡಿಯಾಚೆಗಿನ ಪ್ರಯಾಣವನ್ನು ಸುಗಮಗೊಳಿಸಲು ಸಕಾರಾತ್ಮಕ ಕ್ರಮವಾಗಿದೆ ಎಂದು ಚೀನಾ ವಿದೇಶಾಂಗ ಸಚಿವಾಲಯ ವಕ್ತಾರ ಗುವೊ ಜಿಯಾಕುನ್ ಪ್ರತಿಕ್ರಿಯಿಸಿದ್ದಾರೆ. ವಿದೇಶಾಂಗ ಸಚಿವ ಎಸ್.ಜೈಶಂಕರ್ ಇತ್ತೀಚೆಗೆ ಬೀಜಿಂಗ್ ಭೇಟಿ ವೇಳೆ ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರ ಜತೆ ಚರ್ಚಿಸಿದ ಕೆಲ ದಿನಗಳ ಬಳಿಕ ಪ್ರವಾಸಿ ವೀಸಾ ಪುನರಾರಂಭವಾಗಿರುವುದು ಉಲ್ಲೇಖಾರ್ಹ.

ಸಮಾಚಾರ ಸಣ್ಣದಲ್ಲ

ಡಿಪ್ಲೋಮಾ ತರಬೇತಿಗೆ ಅರ್ಜಿ ಆಹ್ವಾನ

ಹೊಸಪೇಟೆ: ಜಿಲ್ಲೆಯ ಎಸ್‌ಎಸ್‌ಎಲ್‌ಸಿ, ಐಟಿಐ ಮತ್ತು ಡಿಪ್ಲೋಮ ಪಾಸ್ ಅಥವಾ ಫೇಲ್‌ದ ವಿದ್ಯಾರ್ಥಿಗಳಿಗೆ ವಿವಿಧ ಅಲ್ಪಾವಧಿ ತರಬೇತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಮರಿಯಮ್ಮನಹಳ್ಳಿ ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರು ತಿಳಿಸಿದ್ದಾರೆ. ಹೊಸಪೇಟೆಯ ಹರಿಹರ ರಸ್ತೆ ಮರಿಯಮ್ಮನಹಳ್ಳಿಯಲ್ಲಿರುವ ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿ.ಟಿ.ಮತ್ತು ಟಿ.ಸಿ.) 2025-26ನೇ ಸಾಲಿನ ಅಲ್ಪಾವಧಿ ತರಬೇತಿಗಳಾದ ಟೂಲ್ ರೂಂ ಮಷಿನಿಸ್ಟ್, ಸಿಎನ್‌ಸಿ ಟೆಕ್ನಾಲಜಿಸ್ಟ್, ಟರ್ನರ್, ಮಿಲ್ಲರ್, ಗ್ರಿಂಡರ್, ಫಿಟ್ಟರ್, ಕ್ಯಾಡ್, ಕ್ಯಾಮ್ ಕೋರ್ಸ್‌ಗಳಿಗೆ, ಎಸ್.ಎಸ್.ಎಲ್.ಸಿ, ಐಟಿಐ, ಡಿಪ್ಲೋಮ ಪಾಸ್/ಫೇಲ್ ಮತ್ತು ಬಿ.ಇ. ಓದುತ್ತಿರುವ ಪಾಸಾದ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, (ಜಿ.ಟಿ. ಮತ್ತು ಟಿ.ಸಿ.) ಹೊಸಪೇಟೆ ಇವರನ್ನು ಖುದ್ದಾಗಿ ಅಥವಾ ಮೊ. 8722999929, 7795969915, 9845416198ಗೆ ಸಂಪರ್ಕಿಸಬಹುದಾಗಿದೆ. ಜುಲೈ. 31ರೊಳಗಾಗಿ ಅರ್ಜಿ ಸಲ್ಲಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಸಹಾಯ ಗುಂಪು ಅರ್ಜಿ ಆಹ್ವಾನ

ಹೊಸಪೇಟೆ: ಸಂಜೀವಿನಿ ಎನ್‌ಆರ್‌ಎಲ್‌ಎಂ ಯೋಜನೆಯಡಿ ಜಿಲ್ಲಾ ಪಂಚಾಯತ್‌ನಲ್ಲಿ ಸ್ಥಾಪಿಸುವ ಅಕ್ಕ ಕೆಫೆ ಕ್ಯಾಂಟಿನ್‌ನಲ್ಲಿ ಕನಿಷ್ಠ 10 ವರ್ಷ ಕ್ಯಾಂಟೀನ್ ವಿಭಾಗದಲ್ಲಿ ಅನುಭವವಿರುವ ಶುಚಿರುಚಿಯಾದ ಆಹಾರ ತಯಾರಿಸಲು ಆಸಕ್ತಿ ಇರುವ ಅರ್ಹ ಸ್ವ-ಸಹಾಯ ಗುಂಪುಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ಆಸಕ್ತಿ ಇರುವ ಜಿಲ್ಲೆಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಸ್ವ-ಸಹಾಯ ಗುಂಪುಗಳು ಅರ್ಜಿ ಸಲ್ಲಿಸಬಹುದು. ಜು.22 ರಿಂದ ಜು.28 ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಯೋಜನಾ ನಿರ್ದೇಶಕರ ವಿಭಾಗ ಕಲಾವತಿ ಜಿಲ್ಲಾ ವ್ಯವಸ್ಥಾಪಕರು (ಕೌಶಲ) ಮೊ.9538740865 ಇವರನ್ನು ಸಂಪರ್ಕಿಸಬಹುದು ಎಂದು ಜಿಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೋಹಮ್ಮದ್ ಅಕ್ರಮ್ ಅಲಿ ಷಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಿಟೈಲ್ ಔಟ್‌ಲೇಟ್ ಸ್ಥಾಪನೆಗೆ ಅವಕಾಶ

ಹೊಸಪೇಟೆ: ಗಡಿವಿಜನಲ್ ರಿಟೇಲ್ ಸೇಲ್ಸ್ ಹೆಡ್ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಬಳ್ಳಾರಿ. ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಹೊಸಪೇಟೆ ಹೋಬಳಿಯ ಅನಂತಶಯನಗುಡಿ ಗ್ರಾಮದ ಸರ್ವೆ ನಂ.92/20 ರ ವಿಸ್ತೀರ್ಣ 0.52 ಎಕರೆ ಜಮೀನನಲ್ಲಿ 40 ಕೆಎಲ್ ಸಾಮರ್ಥ್ಯದ ಪೆಟ್ರೋಲಿಯಂ ಕ್ಲಾಸ್ ಎ ಮತ್ತು 20 ಕೆಎಲ್ ಸಾಮರ್ಥ್ಯದ ಪೆಟ್ರೋಲಿಯಂ ಕ್ಲಾಸ್ ಬಿ, ಒಟ್ಟು 60 ಕೆಎಲ್ ಸಾರ್ಮರ್ಥ್ಯದ ಪೆಟ್ರೋಲ್ ಮತ್ತು ಡೀಸೆಲ್ ಬಂಕ್ ಸ್ಥಾಪನೆ ಮಾಡಲು ನಿರಾಪೇಕ್ಷಣ ಪ್ರಮಾಣ ಪತ್ರ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈಶ್ವರ್‌ನಾಗ್ ಪುಣ್ಯಮೂರ್ತಿ ತಂದೆ ಸುಬ್ರಮಣ್ಯ ಪುಣ್ಯಮೂರ್ತಿ ವಾಸ 31ನೇ ವಾರ್ಡ್ ದೀಪಾಯನ ಶಾಲೆ ಹತ್ತಿರ ಎನ್‌ಸಿ ಕಾಲೋನಿ ಇವರನ್ನು ಫ್ರಾಂಚೈಸಿಯನ್ನಾಗಿ ನೇಮಕ ಮಾಡಿದ್ದು, ಈ ಜಮೀನಿನಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬಂಕ್ ಸ್ಥಾಪನೆ ಮಾಡಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲು ಸಾರ್ವಜನಿಕರಿಂದ ಅಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

ಡಿಡಿ ಮನೆ ಮೇಲೆ ಲೋಕಾ ದಾಳಿ

ಕೊಪ್ಪಳ: ಇಲ್ಲಿನ ಜಿಲ್ಲಾ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಯ ಉಪ ನಿರ್ದೇಶಕ ಶೇಕು ಚೌವ್ಹಾಣ ಮನೆ ಮೇಲೆ ಲೋಕಾಯುಕ್ತ ಪೊಲೀಸರು ಬುಧವಾರ ಬೆಳ್ಳಂ ಬೆಳಗ್ಗೆ ದಾಳಿ ಮಾಡಿ, ಖಡತ ಪರೀಶಿಲನೆ ಮಾಡಿದರು. ಅಧಿಕಾರಿ ಶೇಕು ಚೌವ್ಹಾಣ ಮಲಗಿರುವಾಗಲೇ ದಾಳಿ ನೆಡಸಿ ಶಾಕ್ ನೀಡಿದ್ದಾರೆ. ಬೆಳಗ್ಗೆಯೇ ಮನೆ ಬಾಗಿಲು ಬಡಿದ ಲೋಕಾ ಅಧಿಕಾರಿಗಳನ್ನು ಕಂಡು ಶೇಕು ಕಕ್ಕಾ-ಬಿಕ್ಕಿ ಆಗಿದ್ದಾರೆ. ಆದಾಯ ಮೀರಿದ ಆಸ್ತಿಗಳಿಕೆಯ ದೂರಿನ ಮೇರಿಗೆ ದಾಳಿ ಲೋಕಾಯುಕ್ತರು ದಾಳಿ ಮಾಡಿದ್ದಾರೆ. ಹುಬ್ಬಳಿ ಮತ್ತು ಕೊಪ್ಪಳದಲ್ಲಿ ಲೋಕಾ ಪೊಲೀಸರು ದಾಳಿ ಮಾಡಿದ್ದು, ಕೊಪ್ಪಳದ ಅಭಿಷೇಕ ಬಡಾವಣೆ ಹಾಗೂ ಕೀರ್ತಿ ಕಾಲನಿಯಲ್ಲಿನ ಮನೆ ಮೇಲೆ ಎರಡು ಕಡೆ ಲೋಕಾಯುಕ್ತ ಪೋಲೀಸರು ದಾಳಿ ಮಾಡಿದ್ದಾರೆ. ಲೋಕಾಯುಕ್ತ ಇನ್ಸ್ ಪೆಕ್ಟರ್ ಸುನೀಲ್ ಮೇಗಳಮನಿ ನೇತೃತ್ವದಲ್ಲಿ ದಾಳಿ ಮಾಡಿದ್ದ ಲೋಕಾಯುಕ್ತರು, ಸಂಜೆ ವರೆಗೆ ದಾಖಲಾತಿ ತಡಕಾಡಿದರು. ದಾಳಿ ವೇಳೆ 13 ಸೈಟ್, ಕೊಪ್ಪಳದಲ್ಲಿ 2 ಮನೆ, ಹುಬ್ಬಳ್ಳಿಯಲ್ಲಿ 1 ಮನೆ, 54 ಲಕ್ಷ ನಗದು, 26 ಲಕ್ಷ ಬ್ಯಾಂಕ್ ಬ್ಯಾಲೆನ್ಸ್, 7 ಎಕರೆ ಕೃಷಿ ಜಮೀನು, 750 ಗ್ರಾಂ ಚಿನ್ನ, 4 ಕೆಜಿ ಬೆಳ್ಳಿ ಪತ್ತೆ ಆಗಿದೆ ಎಂದು ಲೋಕಾಯುಕ್ತ ಅಧಿಕಾರಿಗಳ ಮೂಲಗಳು ತಿಳಿಸಿವೆ.

ವಿರಾಮ
ಪ್ರತಿ ಭಾನುವಾರ

{ಡಾ.ಜಿ.ಪರಮೇಶ್ವರ್} ಗೃಹ ಸಚಿವರು

ಜಿಲ್ಲೆಯಲ್ಲಿ ಪ್ರಗತಿಯಲ್ಲಿರುವ ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆಯನ್ನು ಚುರುಕುಗೊಳಿಸಿ ಆಗಸ್ಟ್ ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು. ವಿವಿಧ ಯೋಜನೆಗಳಿಗೆ ಸಂಬಂಧಿಸಿದ ಭೂಸ್ವಾಧೀನದ ಪರಿಹಾರ ನೀಡಿದ್ದೇವೆ. ಆದರೆ ಕಾಮಗಾರಿ ಪೂರ್ಣಗೊಳಿಸಿಲ್ಲ. ಅಧಿಕಾರಿಗಳು ಅರ್ಧಕ್ಕೆ ನಿಂತಿರುವ ಕಾಮಗಾರಿಯನ್ನು ಮುಂದುವರೆಸಿ ಪೂರ್ಣಗೊಳಿಸಬೇಕು.



ಗ್ರಾಮಗಳಿಗೆ ಜಿಪಂ ಸಿಇಒ ಈಶ್ವರ್ ಕಾಂದೂ ಭೇಟಿ | ಜೆಜೆಎಂ ಕಾಮಗಾರಿ ಪರಿಶೀಲನೆ

ಎಲ್ಲಾ ಮನೆಗೆ ನಳ ಸಂಪರ್ಕ ಕಲ್ಪಿಸಿ

ರಾಯಚೂರು: ರಾಯಚೂರು ತಾಲೂಕಿನ ಯರಗೇರಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಸ್ಥರಿಗೆ ಜಲಜೀವನ್ ಮೀಷನ್ ಯೋಜನೆಯಡಿ ಆಗಸ್ಟ್ 02 ರೊಳಗೆ ಗ್ರಾಮದ ಪ್ರತಿ ಮನೆಮನೆಗೆ ನಳದ ನೀರು ಸಂಪರ್ಕ ಕಲ್ಪಿಸಲು ಅಗತ್ಯ ಕ್ರಮ ಜರುಗಿಸಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕಾಂದೂ ಅವರು ನಿರ್ದೇಶನ ನೀಡಿದರು.

ಯರಗೇರಾ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮದಲ್ಲಿ ಅನುಷ್ಠಾನ ಮಾಡಿರುವ ಜಲಜೀವನ್ ಮೀಷನ್ ಯೋಜನೆಯ ಕಾಮಗಾರಿ ವೀಕ್ಷಣೆ ನಡೆಸಿ ಅವರು ಮಾತನಾಡಿದರು.

ನಳದ ಸಂಪರ್ಕವನ್ನು ಎಲ್ಲಾ ಮನೆಗಳಿಗೆ ಸರಿಯಾಗಿ ಕಲ್ಪಿಸಬೇಕು. ದೊಡ್ಡ ನಳ ಹಾಗೂ ಗುಣಮಟ್ಟ ನಳಗಳನ್ನು ಅಳವಡಿಸಬೇಕು ಎಂದು ಏಜೆನ್ಸಿಯವರಿಗೆ ಹಾಗೂ ಜೆಇ ಅವರಿಗೆ ಇದೆ ವೇಳೆ ಸಿಇಓ ಅವರು ನಿರ್ದೇಶನ ನೀಡಿದರು. ಮುಂದಿನ 10 ದಿನದೊಳಗಾಗಿ ಸಂಪೂರ್ಣವಾಗಿ ಅಂದಾಜು ಪಟ್ಟಿ ಪ್ರಕಾರ ಕೆಲಸ ಅನುಷ್ಠಾನವಾಗಬೇಕು ಎಂದರು.

ಗ್ರಾಮದಲ್ಲಿ ಎಷ್ಟು ವಾರ್ಡಗಳಿವೆ. ಎಫ್.ಟಿ.ಕೆ ಕಿಟ್ ಮುಖಾಂತರ ಎಷ್ಟು ನೀರಿನ ಮೂಲಗಳನ್ನು ಪರೀಕ್ಷೆ ಮಾಡಿಸಿದ್ದೀರಿ ಎಂದು ಇದೆ ವೇಳೆ ಸಿಇಓ ಅವರು ಪಿಡಿಓ ಅವರಿಗೆ ಪ್ರಶ್ನಿಸಿದರು. 15 ದಿನಗಳ ಹಿಂದೆ ಎಫ್.ಟಿ.ಕೆ ಕಿಟ್ ಮೂಲಕ ಪರೀಕ್ಷೆ ಮಾಡಿಸಿದ್ದೇವೆ.

ಜೆಜೆಎಮ್ ಟ್ರಯಲ್ ರನ್ ಆಗಿಲ್ಲ. ಜೆಜೆಎಮ್ ಪೈಪಲೈನ್ ಮೂಲಕ ನೀರು ಹೋಗುವುದಿಲ್ಲ. ಹಳೆ ಪೈಪಲೈನ್ ಮೂಲಕ ನೀರು ಸರಬರಾಜು ಆಗುತ್ತಿದೆ ಎಂದು ಪಿಡಿಓ ಪ್ರತಿಕ್ರಿಯಿಸಿದರು.

ಪಿಡಿಓ, ಜೆಇಗೆ ಎಚ್ಚರಿಕೆ: ಕೆಲವೊಂದು ಏರಿಯಾಗಳಲ್ಲಿ ಮಾತ್ರ ಟ್ರಯಲ್ ರನ್ ಮಾಡಿದ್ದೇವೆ ಎಂದು ಜೆಇ ದೊಡ್ಡಬಸಪ್ಪ ತಿಳಿಸಿದರು. ತಾವುಗಳು ನೀಡುವ ಮಾಹಿತಿಯಲ್ಲಿ ವ್ಯತ್ಯಾಸ ಕಾಣಿಸುತ್ತಿದೆ. ಪಿಡಿಓ ಮತ್ತು ಜೆಇ ನಡುವೆ ಸಮನ್ವಯ ಇರುವುದಿಲ್ಲ ಎಂಬುದು ಕಂಡು ಬರುತ್ತಿದೆ. ಇದು ಸರಿಯಲ್ಲ. ಪರಸ್ಪರ ಸಮನ್ವಯದಿಂದ ಕೆಲಸ ಮಾಡಬೇಕು ಎಂದು ಇದೆ ವೇಳೆ ಸಿಇಓ ಅವರು ಎಚ್ಚರಿಕೆ ನೀಡಿದರು.

ಜೆಜೆಎಮ್ ಕಾಮಗಾರಿ ಸ್ಥಳದಲ್ಲಿ ಅಥವಾ ರೋಡ್ ಕಟ್ಟಿಂಗ್ ಮಾಡಿದ ಸ್ಥಳದಲ್ಲಿ ವಾರದೊಳಗೆ ಗುಣಮಟ್ಟದ ರಸ್ತೆ ನಿರ್ಮಿಸಿ ಸರಿಯಾಗಿ ಕೆಲಸ ಮಾಡಬೇಕು. ನೀರಿನ ಪ್ರಮಾಣ ಸರಿಯಾಗಿ ಪರಿಶೀಲಿಸಿ ಮನೆಗಳಿಗೆ ನೀರು ಸರಾಗವಾಗಿ ಹೋಗುವಂತಾಗಬೇಕು ಎಂದು ಇದೆ ವೇಳೆ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಜೆಇ ಹಾಗೂ ಏಜೆನ್ಸಿಯವರಿಗೆ ಸೂಚನೆ ನೀಡಿದ ಸಿಇಓ ಅವರು, ಜೆಜೆಎಂ ಕಾಮಗಾರಿಯನ್ನು ಗಂಭೀರವಾಗಿ ಪರಿಗಣಿಸಿ ನಿಗದಿತ ಸಮಯದಲ್ಲಿ ಪೂರ್ಣಗೊಳಿಸಬೇಕೆಂದು ತಾಕೀತು ಮಾಡಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಪವಾರ, ಕಾರ್ಯನಿರ್ವಾಹಕ ಅಭಿಯಂತರರು, ಸಹಾಯಕ ನಿರ್ದೇಶಕರು, ಸಹಾಯಕ ಅಭಿಯಂತರರು, ಗ್ರಾ.ಪಂ ಅಧ್ಯಕ್ಷರು, ಸದಸ್ಯರು, ಪಿಡಿಓ, ಐಇಸಿ ಸಂಯೋಜಕರು ಹಾಗೂ ಗ್ರಾ.ಪಂ ಸಿಬ್ಬಂದಿ ಹಾಜರಿದ್ದರು.

ಯರಗೇರಾ ಗ್ರಾಮಕ್ಕೆ ಜಿಪಂ ಸಿಇಒ ಈಶ್ವರ್ ಕಾಂದೂ ಭೇಟಿ ನೀಡಿ ಪರಿಶೀಲಿಸಿದರು.

200 ಮನೆಗಳು ಹೆಚ್ಚುವರಿ ಇದ್ದರೆ ಅದನ್ನು ಪರಿಶೀಲಿಸಿ ಸೂಕ್ತ ಕ್ರಮವಹಿಸಬೇಕು ಎಂದು ಸಹಾಯಕ ಅಭಿಯಂತರರಿಗೆ ನಿರ್ದೇಶನ ನೀಡಿದರು. ಇದನ್ನು ಪರಿಶೀಲಿಸಿ ಹಸ್ತಾಂತರ ಮಾಡಿಕೊಳ್ಳಬೇಕೆಂದು ಪಿಡಿಓ ಅವರಿಗೆ ಸೂಚಿಸಿದರು. ಇದು ಯಾವುದೇ ಕಾರಣಕ್ಕೂ ವಿಳಂಬವಾಗಬಾರದು.

– **ಈಶ್ವರ್ ಕಾಂದೂ,** ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ವಾರದ ಗಡುವು

ಒಂದು ವರ್ಷವಾದರೂ ಜೆಜೆಎಮ್ ಕಾಮಗಾರಿಗಳು ಮುಗಿಯದೇ ಇರುವುದಕ್ಕೆ ಕೆಡಿಪಿ ಹಾಗೂ ಇನ್ನಿತರೇ ಸಭೆಗಳಲ್ಲಿ ಚರ್ಚೆಯಾಗುತ್ತಿದೆ. ನಿರಂತರ ಅನುಸರಣೆ ಮಾಡಿ ವಾರದಲ್ಲಿ ನಿರಂತರವಾಗಿ ಕೆಲಸ ಮಾಡಿ ಜೆಜೆಎಮ್ ಕಾಮಗಾರಿ ಪೂರ್ಣಗೊಳಿಸುವಂತೆ ಸಹಾಯಕ ಅಭಿಯಂತರರಿಗೆ ಇದೆ ವೇಳೆ ಸಿಇಓ ಅವರು ಗಡುವು ವಿಧಿಸಿದರು.

ಸೌಲಭ್ಯಗಳಿಗೆ ಪ್ರತಿಭಟನೆ

ರಾಯಚೂರು: ಬಾಲಕರ ಪದವಿ ಪೂರ್ವ ಅಂಬೇಡ್ಕರ್ ವಸತಿ ನಿಲಯದ ವಿದ್ಯಾರ್ಥಿಗಳು ವಸತಿ ನಿಲಯದಲ್ಲಿ ಮೂಲಭೂತ ಸೌಲಭ್ಯಗಳು ಸೇರಿದಂತೆ ಇತರೆ ಬೇಡಿಕೆಗಳಿಗೆ ಒತ್ತಾಯಿಸಿ ವಸತಿ ನಿಲಯದ ವಿದ್ಯಾರ್ಥಿಗಳು ದಲಿತ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ವಸತಿ ನಿಲಯದ ಮುಂದೆ ಪ್ರತಿಭಟನೆ ನಡೆಸಲಾಯಿತು.

ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿನ ಬಿಜನಗೇರಾ ಬಾಲಕರ ಪದವಿ ಪೂರ್ವ ಅಂಬೇಡ್ಕರ್ ವಸತಿ ನಿಲಯದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ ನಿಲಯ ಮೇಲ್ವಿಚಾರಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಘೋಷಣೆ ಕೂಗಿದರು.

ಪದವಿ ಪೂರ್ವ ಬಾಲಕರ ಅಂಬೇಡ್ಕರ್ ವಸತಿ ನಿಲಯದ ವಿದ್ಯಾರ್ಥಿಗಳು ಸಾಕಷ್ಟು ಸಮಸ್ಯೆ ಗಳಿಂದ ತೊಂದರೆಗೀಡಾಗಿದ್ದಾರೆ. ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ಸಿಗಬೇಕಾದ ಮೂಲಭೂತ ಸೌಕರ್ಯಗಳು ಕಣ್ಮರೆಯಾಗಿವೆ, ವಸತಿ ನಿಲಯದ ವಿದ್ಯಾರ್ಥಿಗಳ ಮೂಲಭೂತ ಸೌಕರ್ಯಗಳ ಈಡೇರಿಸಿ ನಿಲಯ ಮೇಲ್ವಿಚಾರಕರು ನಿರ್ಲಕ್ಷ್ಯ ವಹಿಸಿದ್ದು ಅಮಾನತು ಮಾಡಬೇಕು ಎಂದು ಒತ್ತಾಯಿಸಿದರು.

ವಸತಿ ನಿಲಯಗಳಲ್ಲಿ ಸರಿಯಾಗಿ ಕುಡಿಯುವ ನೀರಿನ ವ್ಯವಸ್ಥೆಯಲ್ಲಿಲ್ಲ, ನಿತ್ಯ ಕುಡಿಯುವ, ಶೌಚಾಲಯವಿಲ್ಲದಂತಾಗಿದೆ ಕುಡಿಯಲು ಮತ್ತು ಬಳಕೆಮಾಡಲು ಶುದ್ಧ ನೀರು ಇಲ್ಲ, ಶೌಚಾಲಯಗಳು ಸ್ವಚ್ಛತೆ ಇಲ್ಲದೇ ಇರುವುದರಿಂದ ತೊಂದರೆ ಅನುಭವಿಸುಂತಾಗಿದೆ, ವಿದ್ಯಾರ್ಥಿಗಳಿಗೆ ಕ್ರೀಡಾ ಸಾಮಾಗ್ರಿ ನೀಡುವ ವ್ಯವಸ್ಥೆ ಇದ್ದರೂ ವಸತಿ ನಿಲಯದಲ್ಲಿ ನೀಡಿಲ್ಲ, ಅನುದಾನ ದುರ್ಬಳಕೆ ಯಾಗುತ್ತಿದೆ ಆರೋಪಿಸಿದರು. ಪ್ರತಿ ದಿನ ಪತ್ರಿಕೆಗಳು ಹಾಗು ಮಾಸ ಪತ್ರಿಕೆಗಳು ವಿತರಣೆ ಮಾಡುತ್ತಿಲ್ಲ,ಕೊಠಡಿಯಲ್ಲಿ ಫ್ಯಾನ್ ಮತ್ತು ಕಿಟಕಿಗಳು ಇಲ್ಲ, ಗ್ರಂಥಾಲಯ ವ್ಯವಸ್ಥೆ ಇಲ್ಲ, ಕೊಠಡಿಯಲ್ಲಿ ಸರಿಯಾಸ ಬೆಡ್‌ಶೀಟ್ ಮತ್ತು ಟೀ ಶರ್ಟ್ ನೀಡುತ್ತಿಲ್ಲ, ಸೂಲಾರ್ ವ್ಯವಸ್ಥೆ ಕಲ್ಪಿಸಲು ಅನುದಾನವಿದ್ದರೂ ಮಾಡುತ್ತಿಲ್ಲ, ಆಹಾರ ಮಾಡುವ ಸ್ವಚ್ಛತೆ ಕಾಪಾಡುತ್ತಿಲ್ಲವೆಂದು ಆರೋಪಿಸಲಾಯಿತು.

ಪ್ರತಿಭಟನೆಯಲ್ಲಿ ಜಿಲ್ಲಾ ಸಂಚಾಲಕ ಮೌನೇಶ ಜಾಲವಾಡಗಿ, ಚನ್ನಬಸವ ಯಾಪಲಪರ್ವಿ, ಪಾಲರಾಜ್ ಕುರ್ಡಿ, ಜಿಲ್ಲಾ ಪ್ರ.ಕಾರ್ಯದರ್ಶಿ ರವಿ ಕುಮಾರ ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬೇಡಿಕೆಗಳಿಗೆ ಒತ್ತಾಯಿಸಿ ವಸತಿ ನಿಲಯದ ವಿದ್ಯಾರ್ಥಿಗಳು ದಲಿತ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ವಸತಿ ನಿಲಯದ ಮುಂದೆ ಪ್ರತಿಭಟನೆ ನಡೆಸಲಾಯಿತು.

ಬಾಲ್ಯವಿವಾಹ: ಜಾಗೃತಿ ಅಗತ್ಯ

ಸರಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ''ಬಾಲ್ಯವಿವಾಹ, ಪೋಕ್ಸೋ ಕಾಯ್ದೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಬಳ್ಳಾರಿ: ಗ್ರಾಮೀಣ ಭಾಗಗಳಲ್ಲಿ ಬಾಲ್ಯವಿವಾಹಗಳಿಗೆ ಪ್ರೋತ್ಸಾಹ ನೀಡುತ್ತಿರುವ ಪೋಷಕರಿಗೆ ಬಾಲ್ಯವಿವಾಹ ಕುರಿತು ಇನ್ನೂ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಬಾದನಹಟ್ಟಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಲ್ಲಿಕಾರ್ಜುನ ಹೇಳಿದರು. ಕುರುಗೋಡು ತಾಲೂಕಿನ ಬಾದನಹಟ್ಟಿ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ''ಬಾಲ್ಯವಿವಾಹ, ಪೋಕ್ಸೋ ಕಾಯ್ದೆ ಮತ್ತು ಮೂಡ ನಂಬಿಕೆಗಳು ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆ'' ಕುರಿತು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬಾದನಹಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿ ಯಲ್ಲಿ ಹೆಚ್ಚು ಬಾಲ್ಯವಿವಾಹ ನಡೆಯುತ್ತಿರು ವುದು ವಿಷಾದಕರ ಸಂಗತಿ ಎಂದರು. ಮುಖ್ಯ ಗುರುಗಳಾದ ನಿರ್ಮಲ ಅವರು ಮಾತನಾಡಿ, ಎಲ್ಲಾ ಮಕ್ಕಳು ಬಾಲ್ಯವಿವಾಹ ತಡೆಗೆ ಮುಂದಾಗಬೇಕು ಎಂದರು. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರವಿಕುಮಾರ್, ಪಂಚಾಯಿತಿ ಅಧ್ಯಕ್ಷರು, ಸದಸ್ಯರು ಹಾಗೂ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪತ್ರಕರ್ತರದು ಸಾರ್ಥಕ ಸೇವೆ: ಶಾಸಕ ಕೃಷ್ಣನಾಯಕ್

ಹೂವಿನಹಡಗಲಿ: ಪತ್ರಕರ್ತರು ಪ್ರಮುಖ ವಿಷಯಗಳನ್ನು, ಸಮಸ್ಯೆಗಳನ್ನು ಪರಿಹಾರಗಳನ್ನು ಕುರಿತು ಬರೆಯುವ ಮೂಲಕ ಜನಸಾಮಾನ್ಯರಿಗೆ ವಿಷಯವನ್ನು ಮುಟ್ಟಿಸುವ ಸಾರ್ಥಕ ಕೆಲಸವನ್ನು ಮಾಡುತ್ತಾರೆ ಎಂದು ಶಾಸಕ ಎಲ್.ಕೃಷ್ಣನಾಯಕ್ ಹೇಳಿದರು.

ಪಟ್ಟಣದ ಎಸ್‌ಆರ್‌ಎಂಪಿಪಿ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಧ್ವನಿ ಸಂಘದಿಂದ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿಯ ರಾಜ್ಯಾಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ್ ಮಾತನಾಡಿ, ಪತ್ರಕರ್ತರನ್ನು ಬಳಸಿಕೊಂಡು ಬಿಸಾಕುತ್ತಿದ್ದಾರೆ, ಸಾವಿನ ಭಯ ಬಿಟ್ಟು ನಗ್ನ ಸತ್ಯವನ್ನು ಬರೆಯುತ್ತಿರುವ ಪತ್ರಕರ್ತರು ಬೀದಿಯಲ್ಲಿದ್ದಾರೆ ಎಂದರು ಇಂದಿನ ಸರಕಾರಗಳು ಪತ್ರಕರ್ತರನ್ನು ಬೀದಿಯಲ್ಲಿ ನಿಲ್ಲಿಸಿ ಬಿಟ್ಟಿದ್ದಾರೆ, ಪತ್ರಕರ್ತರು ಜನತೆಯ ಧ್ವನಿ ಸರಕಾರ ಮತ್ತು ಜನರ ಮಧ್ಯೆ ಇರುವ ಸೇತುವೆ ಪತ್ರಕರ್ತರು ಸ್ಥಿತಿಯಲ್ಲಿದ್ದರೂ ಕೂಡ ಅದನ್ನು ಯೋಚನೆ ಮಾಡಿದೆ ಸಮಾಜಕ್ಕಾಗಿ ದುಡಿಯುತ್ತಿದ್ದಾರೆ ಎಂದರು. ಸರಕಾರದ ಚರ್ಮ ಬಹಳ ದಪ್ಪವಾಗಿದೆ ಪತ್ರಕರ್ತರ ಜೀವನ ಬಣ್ಣದ ಜಗತ್ತಿನಲ್ಲಿ ಕಳೆದುಹೋಗುತ್ತಿದೆ ಎಂದರು.

ಕೊಟ್ಟೂರಿನ ಯೋಗಿರಾಜೇಂದ್ರ ಶಿವಾಚಾರ್ಯ ಸ್ವಾಮೀಜಿ, ಸದ್ಗುರು ಶಿವಯೋಗಿ ಮಂಜುನಾಥ ಹಾಲಸ್ವಾಮಿಗಳು, ಡಾ.ರಾಮಸ್ವಾಮಿ ರಾಕೇಶಯ್ಯ ಕಾರ್ಯಕ್ರಮದ ಸಾನಿಧ್ಯವಹಿಸಿದ್ದರು.

ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಬೀರಬ್ಬಿ ಬಸವರಾಜ, ಪುರಸಭೆ ಅಧ್ಯಕ್ಷರಾದ ಗಂಟಿ ಜಮಾಲಾಬಿ, ಎಸ್‌ಆರ್ ಎಂಪಿಪಿ ಕಾಲೇಜಿನ ಪ್ರಾಚಾರ್ಯ ವಿಜಯಕುಮಾರ್ ಹೇಮಪ್ಪ, ಮಹಾಬಲೇಶ್ವರ ದಿವಾಕರ್, ವಿಜಯಲಕ್ಷ್ಮಿ, ಕೋಡಿಹಳ್ಳಿ ಕೊಟ್ರೇಶ್, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್. ಎಎನ್. ಹಳ್ಳಿಗುಡಿ, ಡಿ.ಪರಶುರಾಮಪ್ಪ, ತಾಲೂಕ ಪಂಚಾಯಿತಿ ಇಒ ಉಮೇಶ್, ಕಾ.ನಿ.ಪ.ಧ್ವನಿ ತಾಲೂಕು ಅಧ್ಯಕ್ಷ ವೀರೇಶ್ ಕಲ್ಮಠ ಉಪಸ್ಥಿತರಿದ್ದರು.

ಹೂವಿನಹಡಗಲಿ ಪಟ್ಟಣದ ಎಸ್‌ಆರ್‌ಎಂಪಿಪಿ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಧ್ವನಿ ಸಂಘದಿಂದ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆಯನ್ನು ಶಾಸಕ ಎಲ್.ಕೃಷ್ಣನಾಯಕ್ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಪತ್ರಕರ್ತರ ಸೇವೆ ಅಪಾರವಾಗಿದೆ, ಅವರು ಸಮಾಜದ ನಾಲ್ಕನೇ ಅಂಗವಾಗಿ ಕಾರ್ಯ ನಿರ್ವಹಿಸುತ್ತಾರೆ, ಅನೇಕ ಕಷ್ಟ ನಷ್ಟಗಳ ಮಧ್ಯದಲ್ಲಿಯೂ ಪತ್ರಕರ್ತರು ಸಮಾಜ ಸೇವೆಯನ್ನು ಮಾಡುತ್ತಿದ್ದಾರೆ.

– **ಎಲ್.ಕೃಷ್ಣನಾಯಕ್,** ಶಾಸಕ

ಜಿಲ್ಲಾಡಳಿತ ಭವನಕ್ಕೆ ನುಗ್ಗಿದ ಜಾನುವಾರು

ಕೊಪ್ಪಳ: ಮುಖ್ಯದ್ವಾರದ ಮುಂದೆ ಜಮಾಯಿಸಿದ್ದ ನೂರಾರು ಹಸು- ಎತ್ತು, ಸಾವಿರಾರು ಕುರಿ- ಮೇಕೆ. ಕಣ್ಣಾಯಿಸಿದಲ್ಲೆಲ್ಲ ಜಾನುವಾರು, ಎಲ್ಲೆಡೆ ಅಂಬಾ... ಎಂಬ ಶಬ್ದ.

ಭದ್ರತಾ ಸಿಬ್ಬಂದಿಯ ವಿರೋಧ ಲೆಕ್ಕಿಸದೇ ಕಾಂಪೌಂಡ್ ಗೆ ನುಗ್ಗಿ ಕೆರೆಗೆ ಇಳಿದ ಜಾನುವಾರು. ಹೋರಾಟಗಾರರು ಮತ್ತು ರೈತರ ಮುಖದಲ್ಲಿ ಏನೋ ಸಾಧಿಸಿದ ಭಾವ.

ಈ ಎಲ್ಲ ದೃಶ್ಯಗಳು ಕಂಡು ಬಂದಿದ್ದು ಕೊಪ್ಪಳದ ಜಿಲ್ಲಾಡಳಿತ ಭವನದ ಮುಂದೆ ಮತ್ತು ಬಲ್ಡೋಟ ಕಾರ್ಖಾನೆ ಒತ್ತುವರಿ ಮಾಡಿರುವ ಬಸಾಪೂರ ಕೆರೆ ಸಮೀಪದಲ್ಲಿ. ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಹಾಗೂ ಕೊಪ್ಪಳ ಪರಿಸರ ಹಿತ ರಕ್ಷಣಾ ವೇದಿಕೆ ಜಂಟಿ ಕ್ರಿಯಾ ಸಮೀತಿ ನೇತೃತ್ವದಲ್ಲಿ ಜಾನುವಾರುಗಳೊಂದಿಗೆ ಪ್ರತಿಭಟಿಸಲಾಯಿತು. ಬಸಾಪೂರ ಕೆರೆ ಸುತ್ತಲಿನ ನಾನಾ ಗ್ರಾಮಗಳ ರೈತರು ಏಕಾಏಕಿ ನೂರಾರು ಜಾನುವಾರು, ಸಾವಿರಾರು ಕುರಿಯೊಂದಿಗೆ ಜಿಲ್ಲಾಡಳಿತ ಭವನದ ಮುಂದೆ ಬಂದು, ಜಿಲ್ಲಾಡಳಿತ ಭವನಕ್ಕೆ ನುಗ್ಗಿಸಲು ಯತ್ನಿಸಿದರು. ಭದ್ರತಾ ಸಿಬ್ಬಂದಿ ಹರಸಾಹಸ ಮಾಡಿ, ಪ್ರವೇಶ ದ್ವಾರದ ಮುಂದೆ ಜಾನುವಾರುಗಳನ್ನು ತಡೆದು ನಿಲ್ಲಿಸಿದರು.

ಸುಮಾರು 1 ಗಂಟೆಗೂ ಹೆಚ್ಚು ಕಾಲ, ಜಿಲ್ಲಾಡಳಿತ ಭವನದ ಪ್ರವೇಶ ದ್ವಾರ ಸಂಪೂರ್ಣ ಬಂದ್ ಆಗಿತ್ತು. ರಾಜ್ಯ ಸರಕಾರ ಮತ್ತು ಬಲ್ಡೋಟಾ ಕಾರ್ಖಾನೆ ವಿರುದ್ಧ ಘೋಷಣೆ ಕೂಗಿದ ಹೋರಾಟಗಾರರು ಕೂಡಲೇ ಬಸಾಪೂರ ಕೆರೆಯನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ರೈತರು ಮತ್ತು ಭದ್ರತಾ ಸಿಬ್ಬಂದಿ ಜತೆಗೆ ವಾಗ್ವಾದ ನಡೆಯಿತು. ಯಾರಿಗೂ ಜಗ್ಗದ ಹೋರಾಟಗಾರರು ಸಾವಿರಾರು ಜಾನುವಾರುಗಳನ್ನು ನಿರ್ಮಾಣ ಹಂತದಲ್ಲಿನ ಪ್ರವೇಶ ದ್ವಾರದ ಮೂಲಕ ಕೆರೆಗೆ ನುಗ್ಗಿಸಿ, ನೀರು ಕುಡಿಸಿದರು. ಹೋರಾಟಗಾರರಾದ ಅಲ್ಲಮಪ್ರಭು ಬೆಟ್ಟದೂರು, ಬಸವರಾಜ ಶೀಲವಂತರ, ಕೆ.ಬಿ.ಗೋನಾಳ, ಸೇರಿ ಇತರರು ಇದ್ದರು.



ಕೊಪ್ಪಳದ ಜಿಲ್ಲಾಡಳಿತ ಭವನದ ಮುಂದೆ ನಿಂತಿರುವ ಜಾನುವಾರುಗಳ ದಂಡು

ಆದರೆ, ಬಲ್ಡೋಟಾ ಕಾರ್ಖಾನೆ ಬಸಾಪುರ ಗ್ರಾಮದ ಕೆರೆ ಒತ್ತುವಾರಿ ಮಾಡಿ, ಕಾಂಪೌಂಡ್ ಹಾಕಿಕೊಂಡು, ಕೆರೆಯನ್ನು ಮುಚ್ಚುತ್ತಿದೆ. ಇದರಿಂದ ಈ ಭಾಗದ ಜಾನುವಾರುಗಳಿಗೆ ಕುಡಿಯಲು ನೀರು ಇಲ್ಲದಂತಾಗಿದೆ. ಹಲವು ಬಾರಿ ಮನವಿ ಮಾಡಿದರೂ ಅಧಿಕಾರಿಗಳು ಕೆರೆಗೆ ಹೋಗಲು ಅವಕಾಶ ಕಲ್ಪಿಸಲಿಲ್ಲ. ಈ ಹಿನ್ನೆಲೆ ಜಾನುವಾರುಗಳೊಂದಿಗೆ ಪ್ರತಿಭಟನೆ ನಡೆಸಲಾಯಿತು.

– ಶಿವಪ್ಪ, ರೈತ

ಕೊಪ್ಪಳ ನಗರದ ಸಮೀಪ ಬಲ್ಡೋಟಾ ಕಾರ್ಖಾನೆ ನಿರ್ಮಾಣಕ್ಕೆ ಸಾಕಷ್ಟು ವಿರೋಧ ವ್ಯಕ್ತವಾಗಿದೆ. ಹೋರಾಟದ ಫಲವಾಗಿ, ಕೆರೆಯನ್ನ ಯಥಾಸ್ಥಿತಿ ಕಾಪಾಡಬೇಕು. ಸಾರ್ವಜನಿಕರ ಅನುಕೂಲಕ್ಕೆ ಮುಕ್ತವಾಗಿ ಇಡುವಂತೆ ನ್ಯಾಯಾಲದ ಆದೇಶ ಮಾಡಿತ್ತು. ಆದರೆ, ಈಗ ಕೆರೆಗೆ ಪ್ರವೇಶ ಬಂದ್ ಮಾಡಿದ್ದಾರೆ. ಕಾಂಪೌಂಡ್ ಒಳಗೆ ಯಾರಿಗೆ ಪ್ರವೇಶ ನೀಡಲ್ಲ. ಹೀಗಾಗಿ ಕುರಿ ದನಗಳಿಗೆ ಕುಡಿಯಲು ನೀರಲ್ಲ. ಕೂಡಲೇ ಬಸಾಪುರ ಕೆರೆ ಸಾರ್ವಜನಿಕರಿಗೆ ಮುಕ್ತವಾಗಿ ಮಾಡಬೇಕು ಎಂದು ಕೆರೆಗೆ ಜಾನುವಾರು ನುಗ್ಗಿಸಿದ್ದೇವೆ.

– **ಅಲ್ಲಮಪ್ರಭು ಬೆಟ್ಟದೂರು,** ಹೋರಾಟಗಾರ

ಗವಿಮಠಕ್ಕೆ ಅಕ್ಕಿ, ತುಪ್ಪ ಅರ್ಪಣೆ

ಕೊಪ್ಪಳ: ಇಲ್ಲಿನ ಸಂಸ್ಥಾನ ಗವಿಮಠಕ್ಕೆ ವಿಜಯಪುರದ ಸಿದ್ದೇಶ್ವರ ಸಂಸ್ಥೆ ಹಾಗೂ ಸಿದ್ದಸಿರಿ ಸೌಹಾರ್ದ ಸಹಕಾರಿಯಿಂದ ಅಕ್ಕಿ, ತುಪ್ಪ, ವಿಭೂತಿ- ಕುಂಕುಮ ಬುಧವಾರ ಅರ್ಪಿಸಲಾಯಿತು.

ಗವಿಸಿದ್ದೇಶ್ವರ ಮಠದ ದಾಸೋಹಕ್ಕಾಗಿ 101 ಕ್ವಿಂಟಲ್ ಅಕ್ಕಿ ಹಾಗೂ 5 ಕೆಜಿ ಆಕಳ ತುಪ್ಪ ಹಾಗೂ 5001 ವಿಭೂತಿ, 5 ಕೆಜಿ ಕುಂಕುಮ

ಸಿದ್ದೇಶ್ವರ ಸಂಸ್ಥೆ ಹಾಗೂ ಸಿದ್ದಸಿರಿ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರೂ ಆಗಿರುಬ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ನೇತೃತ್ವದಲ್ಲಿ ನೀಡಲಾಯಿತು. ಶ್ರೀಮಠಕ್ಕೆ ಭೇಟಿ ನೀಡಿ, ಗವಿಸಿದ್ದೇಶ್ವರ ಶ್ರೀಗಳ ಆಶೀರ್ವಾದ ಪಡೆದುಕೊಂಡರು. ರಾಮನಗೌಡ ಬಾ.ಪಾಟೀಲ್ ಯತ್ನಾಳ ಗೋರಕ್ಷಾ ಕೇಂದ್ರದಲ್ಲಿ ಸಿದ್ದಪಡಿಸಲಾದ ವಿಭೂತಿ, ಕುಂಕುಮ, ಅಲ್ಲಿನ ದೇಸಿ ಆಕಳಿನ ತುಪ್ಪ ನೀಡಲಾಯಿತು. ಶ್ರೀ ಸಿದ್ದೇಶ್ವರ ಸಂಸ್ಥೆಯ ಅಧ್ಯಕ್ಷ ಬಸಯ್ಯ ಹಿರೇಮಠ, ಉಪಾಧ್ಯಕ್ಷ ಸಂಗನಬಸಪ್ಪ ಸಜ್ಜನ, ನಿರ್ದೇಶಕರಾದ ಬಸವರಾಜ ಸೂಗೂರ, ಸದಾಶಿವ ಗುಡ್ಡೋಡಗಿ, ಎನ್.ಎಂ.ಗೊಲಾಯಿ, ಮಲ್ಲಿಕಾರ್ಜುನ ಹಕ್ಕಾಪಕ್ಕಿ, ಮಲಕಪ್ಪ ಗಾಣಿಗೇರ, ಸಾಯಿಬಣ್ಣ ಭೋವಿ, ಸಿದ್ದಸಿರಿ ಸೌಹಾರ್ದ ಸಹಕಾರಿ ಸಂಘದ ನಿರ್ದೇಶಕರಾದ ಪ್ರಭುಗೌಡ ದೇಸಾಯಿ, ಕನಕಗೌಡ ಇದ್ದರು.

ಕೊಪ್ಪಳದ ಗವಿಮಠ ಈ ನಾಡಿನ ಜನರ ಕಣ್ಣುಗಳಂತಿದೆ. ಇಲ್ಲಿ ನೂರಾರು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾರೆ. ಇದರಿಂದ ಸಿದ್ಧೇಶ್ವರ ಸಂಸ್ಥೆಯಿಂದ 101 ಕ್ವಿಂಟಲ್ ಅಕ್ಕಿ ಹಾಗೂ 5001 ವಿಭೂತಿ, 5 ಕೆಜಿ ಕುಂಕುಮ ಹಾಗೂ 5 ಕೆಜಿ ತುಪ್ಪ ಗವಿಮಠಕ್ಕೆ ಅರ್ಪಿಸಲಾಗಿದೆ.

– **ಬಸನಗೌಡ ಪಾಟೀಲ್ ಯತ್ನಾಳ,** ಉಚ್ಚಾಟಿತ ಶಾಸಕ

ಕೊಪ್ಪಳ ನಗರದ ಶ್ರೀ ಗವಿಸಿದ್ದೇಶ್ವರ ಮಠದ ದಾಸೋಹಕ್ಕೆ ಅಕ್ಕಿ-ತುಪ್ಪ ವಿಭೂತಿ-ಕುಂಕುಮ ಸಮರ್ಪಿಸಿದ ವಿಜಯಪುರದ ಶ್ರೀ ಸಿದ್ದೇಶ್ವರ ಸಂಸ್ಥೆ ಹಾಗೂ ಸಿದ್ದಸಿರಿ ಸೌಹಾರ್ದ ಸಹಕಾರಿ ಮುಖಂಡರು ಶ್ರೀಗಳೊಂದಿಗೆ ಬುಧವಾರ ಮಾತನಾಡಿದರು.

ಮಕ್ಕಳು ಶಾಲೆಗಳಿಂದ ಹೊರಗುಳಿಯಬಾರದು

ಬಳ್ಳಾರಿ: ಮಕ್ಕಳು ನಿರಂತರವಾಗಿ ಶಾಲೆಗೆ ಬರಬೇಕು. ತಮ್ಮ ಸಹಪಾಠಿಗಳನ್ನು ಸಹ ಶಾಲೆಗೆ ಕರೆದುಕೊಂಡು ಬರಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಹೇಳಿದರು.

ಜಿಲ್ಲಾ ಮಟ್ಟದ ಕಾಣೆಯಾದ ಮಕ್ಕಳ ಪತ್ತೆಯ ಕಾರ್ಯಪಡೆ ತಂಡದ ಜತೆಗೂಡಿ ಬಳ್ಳಾರಿ ತಾಲೂಕಿನ ಕೊರ್ಲಗುಂದಿ ಗ್ರಾಮದ ಸರಕಾರಿ ಪ್ರೌಢಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಶಾಲಾ ಮಕ್ಕಳಿಗೆ ಹಮ್ಮಿಕೊಂಡಿದ್ದ ಮಕ್ಕಳ ರಕ್ಷಣೆ, ಬಾಲ್ಯವಿವಾಹ ತಡೆ ಮತ್ತು ಪೋಕ್ಸೋ ಕಾಯ್ದೆ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಮೇಲೆ ಲೈಂಗಿಕ ಕಿರುಕುಳ, ದೌರ್ಜ್ಯನ್ಯ ಮತ್ತು ಮಾನಸಿಕ-ದೈಹಿಕ ಹಿಂಸೆ ನಡೆಯುತ್ತಿರುವ ಕುರಿತು ಮಾಧ್ಯಮಗಳಲ್ಲಿ ವರದಿಯಾಗುತ್ತಿರುವುದು ಕಂಡುಬರುತ್ತಿವೆ. ಹಾಗಾಗಿ ಮಕ್ಕಳು ಶಾಲೆಯಿಂದ ಹೊರಗುಳಿಯಬಾರದು. ಪ್ರತಿದಿನ ಶಾಲೆಗೆ ಬರಬೇಕು. ಪೋಷಕರು ಸಹ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು. ಈ ಕುರಿತು ಶಿಕ್ಷಕರು ನಿಗಾವಹಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆ ನಾಗಪ್ಪ ಮಾತನಾಡಿ, ನಿಮ್ಮ ಸುತ್ತ-ಮುತ್ತ ಬಾಲ್ಯವಿವಾಹ, ಲೈಂಗಿಕ ದೌರ್ಜನ್ಯ, ಬಾಲಕಾರ್ಮಿಕ ಹಾಗೂ ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳು ಕಂಡು ಬಂದರೆ ತಕ್ಷಣ ಮಕ್ಕಳ ಸಹಾಯವಾಣಿ 1098/112 ಕರೆ ಮಾಡಿ ತಿಳಿಸಬೇಕು ಎಂದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಉಮಾದೇವಿ ಅವರು ಮಾತನಾಡಿ, ನಿರಂತರ ಗೈರು ಹಾಜರಾದ ಮಕ್ಕಳ ಮನೆ ಭೇಟಿ ನೀಡಿ ಪೋಷಕರ ಮನವೊಲಿಸಿ ಪುನಃ ಶಾಲೆಗೆ ಕರೆದುಕೊಂಡು ಬರಲು ಶಿಕ್ಷಣ ಇಲಾಖೆಯಿಂದ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ನಂತರ ತಂಡದ ಸದಸ್ಯರು ಕೊರ್ಲಗುಂದಿ ಗ್ರಾಮ ಪಂಚಾಯಿತಿಗೆ ಆಕಸ್ಮಿಕ ಭೇಟಿ ನೀಡಿ ಮಕ್ಕಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದರು. ಮಹಿಳೆಯರ ಮತ್ತು ಮಕ್ಕಳು ಕಾವಲು ಸಮಿತಿಯ ಸಭೆಯನ್ನು ಪ್ರತಿ ತ್ರೈಮಾಸಿಕಕ್ಕೊಮ್ಮೆ ನಡೆಸಿ ಸಭೆಯ ನಡವಳಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲು ಸೂಚಿಸಿದರು. ಇದೇ ವೇಳೆ ಮಕ್ಕಳ ವಿಶೇಷ ಗ್ರಾಮಸಭೆ ಹಮ್ಮಿಕೊಂಡು ಶಾಲೆಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತೆ ತಿಳಿಸಿದರು.

ಬಳಿಕ ಕೊರ್ಲಗುಂದಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಸೌಕರ್ಯ, ಒದಗಿಸುತ್ತಿರುವ ವೈದ್ಯಕೀಯ ಸೇವೆಗಳ ಕುರಿತು ಮಾಹಿತಿ ಪಡೆದುಕೊಂಡರು ಮತ್ತು ಕಿಶೋರಿಯರಿಗೆ ವೈಯಕ್ತಿಕ ಶುಚಿತ್ವ ಕುರಿತು ಅರಿವು ಮೂಡಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ಮೋಕ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಕಾಳಿಂಗ, ಜಿಲ್ಲಾ ಬಾಲನ್ಯಾಯ ಮಂಡಳಿಯ ಸದಸ್ಯೆ ಪುಷ್ಪಲತಾ, ರೀಡ್ಸ್ ಸಂಸ್ಥೆಯ ನಿರ್ದೇಶಕ ತಿಪ್ಪೇಸ್ವಾಮಿ, ಶಿಕ್ಷಣ ಇಲಾಖೆಯ ಅಧಿಕಾರಿಗಳಾದ ವೇದಾವತಿ, ರವಿಚಂದ್ರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳಾದ ಸಿ.ಈಶ್ವರ ರಾವ್, ಚನ್ನಬಸಪ್ಪ ಪಾಟೀಲ್, ಸುಧಾ, ನೋಶಿನ್, ಲಲಿತಮ್ಮ, ಶಾಲೆಯ ಮುಖ್ಯಗುರುಗಳಾದ ಭಾರತಿ, ರಮೇಶ್ ಮತ್ತು ಸಹಶಿಕ್ಷಕರು, ಶಿಲ್ಪಾ, ಲಕ್ಷ್ಮೀ, ಬಸಮ್ಮ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜಿಲ್ಲಾ ಮಟ್ಟದ ಕಾಣೆಯಾದ ಮಕ್ಕಳ ಪತ್ತೆಯ ಕಾರ್ಯಪಡೆ ತಂಡದ ಜತೆಗೂಡಿ ಬಳ್ಳಾರಿ ತಾಲೂಕಿನ ಕೊರ್ಲಗುಂದಿ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಮಾತನಾಡಿದರು.

ಶಾಲೆಯಿಂದ ಹೊರಗುಳಿದ ಮಕ್ಕಳು ಬಾಲ್ಯವಿವಾಹ, ಲೈಂಗಿಕ ದೌರ್ಜನ್ಯ, ಮಕ್ಕಳು ನಾಪತ್ತೆ, ಬಾಲಕಾರ್ಮಿಕಗಳಂತ ಪ್ರಕರಣಗಳು ಪೊಲೀಸ್ ಠಾಣೆಗಳಲ್ಲಿ ದೂರುಗಳು ದಾಖಲಾಗುತ್ತಿದ್ದು, ಮಕ್ಕಳು ಇಂತಹ ಸಂದರ್ಭದಲ್ಲಿ ಪೊಲೀಸ್ ತುರ್ತು ಸಹಾಯವಾಣಿ 112 ಹಾಗೂ ಮಕ್ಕಳ ಸಹಾಯವಾಣಿ 1098 ಗೆ ಸಂಪರ್ಕಿಸುವ ಮೂಲಕ ಸಹಾಯ ಪಡೆಯಬಹುದಾಗಿದೆ.

– **ಚಂದ್ರಕಾಂತ್ ನಂದಾರೆಡ್ಡಿ ,** ಹಿರಿಯ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ

ಬಿಲ್ ಬಾಕಿ: ವಾಹನ ಜಪ್ತಿಗೆ ತಡೆಯಾಜ್ಞೆ

ಸಿಂಧನೂರು: ತಾಲೂಕಿನ ವೀರಾಪುರ ಗ್ರಾಮದಲ್ಲಿ ಕಳೆದ 15 ವರ್ಷಗಳ ಹಿಂದೆ ನಿರ್ಮಿಸಿದ ಪ್ರಾಥಮಿಕ ಶಾಲಾ ಕಟ್ಟಡದ ಕಾಮಗಾರಿ ಬಿಲ್ ಅನ್ನು ಗುತ್ತಿಗೆದಾರರಿಗೆ ಪಾವತಿಸುವಲ್ಲಿ ವಿಳಂಬ ಧೋರಣೆ ಅನುಸರಿಸಿದ ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆಯ ವಾಹನ ಜಪ್ತಿಗೆ ಹಿರಿಯ ಶ್ರೇಣಿ ನ್ಯಾಯಾಲಯ ಆದೇಶಿಸಿದ ಬೆನ್ನಲ್ಲೇ ಎಚ್ಚೆತ್ತ ಅಧಿಕಾರಿಗಳು ತಡೆಯಾಜ್ಞೆ ಪಡೆದ ಪ್ರಕರಣ ಬೆಳಕಿಗೆ ಬಂದಿದೆ.

ಏನಿದು ಪ್ರಕರಣ?: ತಾಲ್ಲೂಕಿನ ವೀರಾಪುರ ಗ್ರಾಮದಲ್ಲಿ ?4 ಲಕ್ಷ ವೆಚ್ಚದಲ್ಲಿ ಶಾಲಾ ಕಟ್ಟಡ ನಿರ್ಮಿಸಲು ಪಂಚಾಯತ್ ರಾಜ್ ಇಲಾಖೆಯಿಂದ ಪ್ರಥಮ ದರ್ಜೆ ಗುತ್ತಿಗೆದಾರ ಚನ್ನಬಸಪ್ಪ ಪಂಪರೆಡ್ಡೆಪ್ಪ ಹತ್ತಿಗುಡ್ಡ ಗುತ್ತಿಗೆ ಪಡೆದಿದ್ದರು. ಕಾಮಗಾರಿ ಮುಗಿಸಿದ್ದರಿಂದ, ಬಿಲ್ ಪಾವತಿಸುವಂತೆ ಹನ್ನೊಂದು ವರ್ಷ ಇಲಾಖೆ ಕಚೇರಿಗೆ ಅಲೆದಾಡಿದರೂ ಬಿಲ್ ಬಿಡುಗಡೆ ಮಾಡಲು ಅಧಿಕಾರಿಗಳು ಸತಾಯಿಸಿದ ಕಾರಣ ಗುತ್ತಿಗೆದಾರರು ಕಾನೂನು ಮೊರೆ ಹೋಗಿದ್ದರು. ನ್ಯಾಯಾಲಯ ಬಾಕಿ ಮೊತ್ತ ರು. 2.12 ಲಕ್ಷಕ್ಕೆ ಬಡ್ಡಿಸೇರಿಸಿ ಒಟ್ಟು ರು. 8.22 ಲಕ್ಷ ಗುತ್ತಿಗೆದಾರರಿಗೆ ನೀಡಬೇಕು ಎಂದು ಮಾ.15ರಂದು ಆದೇಶ ಹೊರಡಿಸಿತ್ತು. ಆದರೂ ಅಧಿಕಾರಿಗಳು ಬಿಲ್ ಪಾವತಿಸಿದ್ದಿಲ್ಲ. ಸಿಂಧನೂರಿನ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕಚೇರಿಯಲ್ಲಿ ಗುತ್ತಿಗೆದಾರರ ಪರ ವಕೀಲ ಮಿಥುನ್ ಕುಮಾರ ಸಮ್ಮುಖದಲ್ಲಿ ಅಧಿಕಾರಿಗಳು ತಡೆಯಾಜ್ಞೆ ತಂದು ವಾಹನ ಬಿಡುಗಡೆಗೊಳಿಸಿದ್ದಾರೆ.

ಎನ್‌ಎಚ್‌ಪಿಸಿಯಲ್ಲಿ ಅಪ್ರೆಂಟಿಸ್‌ಶಿಪ್ ಅವಕಾಶ

ಕೇಂದ್ರ ಸರಕಾರದ ಇಂಧನ ಸಚಿವಾಲ ಯದ ಅಧೀನದಲ್ಲಿ ಕಾರ್ಯನಿರ್ವ ಹಿಸುತ್ತಿರುವ ರಾಷ್ಟ್ರೀಯ ಜಲವಿದ್ಯುತ್ ಶಕ್ತಿ ನಿಗಮ (ಎನ್ ಎಚ್‌ಪಿಸಿ) ತನ್ನಲ್ಲಿನ ವಿವಿಧ ಘಟಕಗಳಲ್ಲಿ ಒಂದು ವರ್ಷದ ಅವಧಿಗೆ ಐಟಿಐ (150) ಡಿಪ್ಲೋಮಾ (75) ಹಾಗೂ ಪದವಿ ಪೂರ್ಣಗೊಳಿಸಿದ(126) ಒಟ್ಟು 361 ಅಭ್ಯರ್ಥಿಗಳಿಗೆ ಶಿಶಿಕ್ಷು ತರಬೇತಿ (ಅಪ್ರೆಂಟಿಸ್‌ಶಿಪ್) ನೀಡಲು ಮುಂದಾಗಿದ್ದು ಇದಕ್ಕಾಗಿ ಪ್ರತಿಭಾನ್ವಿತ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಈಗಾಗಲೇ ಅಪ್ರೆಂಟಿಸ್‌ಶಿಪ್ ಪಡೆಯುತ್ತಿರುವವರು ಅರ್ಜಿ ಸಲ್ಲಿಸಲು ಅವಕಾಶವಿಲ್ಲ. ಅಗತ್ಯತೆಗೆ ಅನುಗುಣ ವಾಗಿ ಎರಡು ವರ್ಷಗಳ ತನಕವೂ ವಿಸ್ತರಣೆಯೂ ಆಗಬಹುದು.

ಅರ್ಹತೆಗಳೇನು?: ಐ.ಟಿ.ಐ/ಡಿಪ್ಲೊಮಾ/ಬಿ.ಕಾಂ/ಬಿಎಸ್ಸಿ/ಬಿ.ಇ/ಎಂ.ಬಿ.ಎ/ಪದವಿ/ಎಲ್.ಎಲ್.ಬಿ/ಎಂಎ ಪದವಿ ಪೂರ್ಣಗೊಳಿಸಿರಬೇಕು.

ವಯಸ್ಸು: ಅಭ್ಯರ್ಥಿಗಳು ಕನಿಷ್ಠ 18ರಿಂದ ಗರಿಷ್ಠ 30 ವರ್ಷದೊಳಗಿರಬೇಕು. ಕಂಪನಿಯ ನಿಯಮಾನುಸಾರ ಮೀಸಲು ವರ್ಗಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಆಗಸ್ಟ್-11.

ಅಭ್ಯರ್ಥಿಗಳ ಆಯ್ಕೆ ಹೇಗೆ?: ಅಭ್ಯರ್ಥಿಗಳನ್ನು ರೋಸ್ಟರ್ ಕಮ್ ಮೆರಿಟ್ ಮೂಲಕ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಅದರೊಂದಿಗೆ ಯೋಜನೆ / ವಿದ್ಯುತ್ ಕೇಂದ್ರ/ಘಟಕದ ಯೋಜನೆಬಾಧಿತ ಕುಟುಂಬಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ.

ಯಾವ್ಯಾವ ವಿಭಾಗದಲ್ಲಿ ತರಬೇತಿ?

ಸಿವಿಲ್ ಇಂಜಿನಿಯರಿಂಗ್, ಎಲೆಕ್ಟ್ರಿಕಲ್, ಮೆಕ್ಯಾನಿಕಲ್ ಮತ್ತು ಕಂಪ್ಯೂಟರ್ ಸೈನ್ಸ್ ಮೊದಲಾದ ಇಂಜಿನಿಯರಿಂಗ್ ವಿಭಾಗದಲ್ಲಿಯೂ, ಎಚ್.ಆರ್.ಎಕ್ಸಿಕ್ಯೂಟಿವ್, ಫೈನಾನ್ಸ್ ಎಕ್ಸಿಕ್ಯೂಟಿವ್, ಲಾ ಎಕ್ಸಿಕ್ಯೂಟಿವ್ ಮತ್ತು ಪಿ.ಆರ್ ಎಕ್ಸಿಕ್ಯೂಟಿವ್ ಹುದ್ದೆಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಪದವಿ ಪಡೆದವರಿಗೆ ಗ್ರಾಜುಯೇಟ್ ಅಪ್ರೆಂಟಿಶಿಪ್ ನೀಡಲಾಗುತ್ತಿದೆ. ಹಾಗೆಯೇ ಎಲೆಕ್ಟ್ರಿಕಲ್, ಮೆಕಾನಿಕಲ್ ಮತ್ತು ಹೋಟೆಲ್ ಮ್ಯಾನೇಜ್‌ಮೆಂಟ್ ವಿಷಯಗಳಲ್ಲಿ ಡಿಪ್ಲೊಮಾ ಪಡೆದವರು ಡಿಪ್ಲೊಮಾ ಅಪ್ರೆಂಟಿಶಿಪ್‌ಗೆ ಹಾಗೂ ಎಲೆಕ್ಟ್ರಿಷಿಯನ್, ಫ್ಲಂಬರ್ ವೆಲ್ಡರ್, ಕಂಪ್ಯೂಟರ್ ಆಪರೇಟರ್, ಸ್ಟೆನೋಗ್ರಾಫರ್ ಟ್ರೇಡ್‌ಗಳಿಗೆ ಐ.ಟಿ.ಐ ಪೂರ್ಣಗೊಳಿಸಿದವರು ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಕೆ ಹೀಗೆ?: ಅಭ್ಯರ್ಥಿಗಳು ಮೊದಲು ಈ ಕೆಳಗಿನ ವೆಬ್‌ಸೈಟ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅಗತ್ಯವಿರುವ ಎಲ್ಲ ದಾಖಲೆಗಳನ್ನು ಅಪ್ಲೋಡ್ ಮಾಡಿ ಎನ್‌ಪಿಎಸ್/ಎನ್ ಎಟಿಎಸ್ ನೋಂದಣಿ/ದಾಖಲಾತಿ ಸಂಖ್ಯೆ ಪಡೆದ ನಂತರ ಪದವಿ ಮತ್ತು ಡಿಪ್ಲೊಮಾ ಅಪ್ರೆಂಟಿಶಿಪ್‌ಗೆ https://nats.education.gov.inನಲ್ಲಿ ಮತ್ತು ಐಟಿಐ ಅಪ್ರೆಂಟಿಸ್‌ಶಿಪ್‌ಗೆhttps://www.apprenticeship india.gov.in ನಲ್ಲಿ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

ತರಬೇತಿ ಎಲ್ಲೆಲ್ಲಿ?: ಎನ್‌ಎಚ್‌ಪಿಸಿ ಸೂಚಿಸಿದ ಸ್ಥಳಗಳಲ್ಲಿ ತರಬೇತಿ ಪಡೆಯಬೇಕಾಗುತ್ತದೆ.

ಸ್ಟೈಪೆಂಡ್ ಎಷ್ಟು?: ಪ್ರತಿ ತಿಂಗಳು ಸ್ಟೆಪೆಂಡ್ ಸೌಲಭ್ಯ ಇರುತ್ತದೆ. ಐಟಿಐ ಅಪ್ರೆಂಟಿಸ್‌ಷಿಪ್‌ಗೆ 12,000 ರು, ಡಿಪ್ಲೊಮಾ ಅಭ್ಯರ್ಥಿಗಳಿಗೆ 13,500 ರು. ಮತ್ತು ಗ್ರಾಜುಯೇಟ್ ಅಪ್ರೆಂಟಿಸ್‌ಗಳಿಗೆ 15,000 ರು. ನೀಡಲಾಗುತ್ತದೆ. ಕೇಂದ್ರ ಸರಕಾರವು ಎನ್‌ಎಟಿಎಸ್ ಯೋಜನೆಯಡಿಯಲ್ಲಿ ಡೈರೆಕ್ಟ್ ಬೆನಿಫಿಟ್ ಟ್ರಾನ್ಸರ್ (ಡಿಬಿಟಿ) ಮೂಲಕ ಡಿಪ್ಲೊಮಾ ಅಪ್ರೆಂಟೀಸ್‌ಗಳಿಗೆ 4000 ರು., ಪದವೀಧರರಿಗೆ 4,500 ರೂ.ಗಳನ್ನು ನೀಡುವುದನ್ನು ಇದು ಒಳಗೊಂಡಿದೆ. ತರಬೇತಿ ಸ್ಥಳದಲ್ಲಿ ಅಪ್ರೆಂಟೀಸ್‌ಗೆ ಬ್ಯಾಚುಲರ್ ವಸತಿ ಸೌಕರ್ಯವನ್ನು ಒದಗಿಸಬಹುದು. ವಸತಿ ಸೌಕರ್ಯವನ್ನು ಒದಗಿಸದಿದ್ದರೆ, ತಿಂಗಳಿಗೆ 2,500 ರೂ. ಹೆಚ್ಚುವರಿ ಪಾವತಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಹಾಗೂ ಅಧಿಸೂಚನೆಗೆ **ಸಂಪರ್ಕಿಸಬೇಕಾದ ವಿಳಾಸ:** ಎನ್‌ಎಚ್‌ಪಿಸಿ ವೆಬ್ ಸೈಟ್: www.nhpcindia.com

ಭಾರತೀಯ ಕೋಸ್ಟ್ ಗಾರ್ಡ್‌ನಲ್ಲಿ ನೇಮಕಾತಿ

ಭಾರತೀಯ ಕೋಸ್ಟ್ ಗಾರ್ಡ್ ಸಹಾಯಕ ಕಮಾಂಡೆಂಟ್ ಬ್ಯಾಚ್‌ಗೆ ನೇಮಕಾತಿ ಪ್ರಾರಂಭಿಸಿದ್ದು, ಅರ್ಹ ಜನರಲ್ ಡ್ಯೂಟಿ ಮತ್ತು ಟೆಕ್ನಿಕಲ್ ಬ್ರಾಂಚ್‌ಗಾಗಿ ಈ ನೇಮಕಾತಿಯನ್ನು ಬಿಡುಗಡೆ ಮಾಡಲಾಗಿದೆ.

ಆನ್‌ಲೈನ್ ಅರ್ಜಿ ಸಲ್ಲಿಕೆ: ಅರ್ಜಿ ಪ್ರಕ್ರಿ ಯೆಯು ಸಂಪೂರ್ಣವಾಗಿ ಆನ್‌ಲೈನ್ ನಲ್ಲಿ ದ್ದು, ಅಭ್ಯರ್ಥಿಗಳು ಜುಲೈ-8ರಿಂದ ಜುಲೈ 23, 2025ರ ವರೆಗೆ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಅರ್ಹತೆ: ಜನರಲ್ ಡ್ಯೂಟಿಗೆ (ಜಿ.ಡಿ) ಅರ್ಜಿ ಸಲ್ಲಿಸಲು ಬಯಸಿದರೆ, ಯಾವುದೇ ವಿಷಯದಲ್ಲಿ ಪದವಿಯನ್ನು ಹೊಂದಿರಬೇಕು. ಅದೇ ಸಮಯದಲ್ಲಿ, ತಾಂತ್ರಿಕ ಶಾಖೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ಅಥವಾ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್‌ನಲ್ಲಿ ಪದವಿಯನ್ನು ಹೊಂದಿರಬೇಕು. ಎರಡೂ ಶಾಖೆಗಳಲ್ಲಿ ನೇಮಕಾ ತಿಗಾಗಿ, ಶೈಕ್ಷಣಿಕ ಅರ್ಹತೆಯು ಭಾರತದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಆಗಿರಬೇಕು.

ವಯೋಮಿತಿ ಎಷ್ಟಿರಬೇಕು?: ಈ ನೇಮಕಾತಿಗೆ ಅರ್ಜಿ ಸಲ್ಲಿಸಲು ವಯಸ್ಸು ಜುಲೈ 1, 2026ರಂದು 21ರಿಂದ 25 ವರ್ಷ ಗಳ ನಡುವೆ ಇರಬೇಕು. ಅಂದರೆ, ಜುಲೈ 1, 2001ರಿಂದ ಜೂನ್ 30, 2005ರ ನಡುವೆ ಜನಿಸಿರಬೇಕು. ಈ ಹಿಂದೆ ಭೂಸೇನೆ, ನೌಕಾಪಡೆ, ವಾಯುಪಡೆ ಅಥವಾ ಕೋಸ್ಟ್ ಗಾರ್ಡ್‌ನಲ್ಲಿ ಸೇವೆ ಸಲ್ಲಿಸಿದ್ದರೆ, ಗರಿಷ್ಠ ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆ ನೀಡಲಾಗುವುದು.

ಅರ್ಜಿ ಶುಲ್ಕವೆಷ್ಟು?

ಸಾಮಾನ್ಯ, ಒಬಿಸಿ ಮತ್ತು ಇತರ ಎಲ್ಲಾ ವರ್ಗದ ಅಭ್ಯರ್ಥಿಗಳು 300 ರು. ಅರ್ಜಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಆದರೆ ಎಸ್.ಸಿ ಮತ್ತು ಎಸ್.ಟಿ ವರ್ಗಕ್ಕೆ ಈ ಪ್ರಕ್ರಿಯೆಯು ಸಂಪೂರ್ಣವಾಗಿ ಉಚಿತವಾಗಿದೆ.

ಆನ್‌ಲೈನ್ ಅರ್ಜಿ ಸಲ್ಲಿಸುವುದು ಹೇಗೆ?: ಅಭ್ಯರ್ಥಿಗಳು ಮೊದಲು https://joinindiancoastguard.cdac.in/ ವೆಬ್‌ಸೈಟ್‌ಗೆ ಭೇಟಿ ನೀಡಿ. ಮುಖಪುಟದಲ್ಲಿ CGCAT 2027 ಬ್ಯಾಚ್ ಮೇಲೆ ಕ್ಲಿಕ್ ಮಾಡಬೇಕು. ಸುದ್ದಿ/ಘೋಷಣೆಗಳು ವಿಭಾಗಕ್ಕೆ ಹೋಗಿ ಮತ್ತು ಅಪ್ಲಿಕೇಶನ್ ಲಿಂಕ್ ತೆರೆದು, ಹೊಸ ಖಾತೆಯನ್ನು ರಚಿಸಲು, ನೋಂದಾಯಿಸಿ ಮತ್ತು ಅಗತ್ಯವಿರುವ ಮಾಹಿತಿಯನ್ನು ಭರ್ತಿ ಮಾಡಿ. ನೋಂದಣಿಯ ನಂತರ, ಲಾಗಿನ್ ಆಗಿ ಮತ್ತು ನಿಮ್ಮ ಸಂಪೂರ್ಣ ಅರ್ಜಿ ನಮೂನೆಯನ್ನು ಭರ್ತಿ ಮಾಡಿ. ಅಂತಿಮವಾಗಿ ಅರ್ಜಿ ಶುಲ್ಕವನ್ನು ಪಾವತಿಸಿ ಮತ್ತು ಫಾರ್ಮ್ ಅನ್ನು ಸಲ್ಲಿಸಿ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ: https://joinindiancoastguard.cdac.in/

ಗುಪ್ತಚರ ಇಲಾಖೆಯಲ್ಲಿ ನೇಮಕಾತಿಗೆ ಆಹ್ವಾನ

ಭಾರತ ಗೃಹ ಸಚಿವಾಲಯದ ಗುಪ್ತಚರ ಬ್ಯೂರೋ ನಿರುದ್ಯೋಗಿ ಪದವೀಧ ರರಿಗಾಗಿ ಸಹಾಯಕ ಕೇಂದ್ರ ಗುಪ್ತಚರ ಅಧಿಕಾರಿ ಗ್ರೇಡ್-2 ಕಾರ್ಯ ನಿರ್ವಾಹಕ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆ ಯನ್ನು ಬಿಡುಗಡೆ ಮಾಡಿದೆ. ಈ ಅಧಿಸೂಚನೆಯಡಿಯಲ್ಲಿ, ಒಟ್ಟು 3,717 ಸಹಾಯಕ ಕೇಂದ್ರ ಗುಪ್ತಚರ ಅಧಿಕಾರಿ ಗ್ರೇಡ್-2/ಕಾರ್ಯನಿರ್ವಾಹಕ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ.

ವರ್ಗವಾರು ಖಾಲಿ ಹುದ್ದೆಗಳ ವಿವರಗಳು: ಸಾಮಾನ್ಯ ವರ್ಗದ ಹುದ್ದೆಗಳ ಸಂಖ್ಯೆ: 1,537. ಒಬಿಸಿ ವರ್ಗದ ಹುದ್ದೆಗಳ ಸಂಖ್ಯೆ: 946. ಎಸ್.ಸಿ. ವಿಭಾಗದಲ್ಲಿ ಹುದ್ದೆಗಳ ಸಂಖ್ಯೆ: 566, ಎಸ್.ಟಿ. ವಿಭಾಗದಲ್ಲಿ ಹುದ್ದೆಗಳ ಸಂಖ್ಯೆ: 226, ಇಡಬ್ಲ್ಯೂಎಸ್ ವಿಭಾಗದಲ್ಲಿನ ಹುದ್ದೆಗಳ ಸಂಖ್ಯೆ: 442.

ಶೈಕ್ಷಣಿಕ ಅರ್ಹತೆಗಳೇನು?: ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿಯಲ್ಲಿ ಉತ್ತೀರ್ಣರಾಗಿ ರಬೇಕ, ಜತೆಗೆ ಕಂಪ್ಯೂಟರ್ ಕೌಶಲ್ಯವನ್ನೂ ಸಹ ಹೊಂದಿರಬೇಕು.

ವಯೋಮಿತಿ ಎಷ್ಟಿರಬೇಕು?: ಅಭ್ಯರ್ಥಿಗಳ ಕನಿಷ್ಠ ವಯಸ್ಸು 18 ವರ್ಷದಿಂದ 27 ವರ್ಷಗಳ ನಡುವೆ ಇರಬೇಕು. ಅಧಿಸೂಚನೆ ಯಲ್ಲಿ ಸೂಚಿಸಿದಂತೆ ಮೀಸಲು ವರ್ಗಗಳಿಗೆ ವಯಸ್ಸಿನ ಮಿತಿಯಲ್ಲಿ ಸಡಿಲಿಕೆ ಇರುತ್ತದೆ.

ಆನ್‌ಲೈನ್ ಅರ್ಜಿ ಸಲ್ಲಿಕೆ: ಅರ್ಜಿ ಪ್ರಕ್ರಿಯೆಯು ಸಂಪೂರ್ಣವಾಗಿ ಆನ್‌ಲೈನ್ ನಲ್ಲಿದ್ದು. ಅಭ್ಯರ್ಥಿಗಳು ಜುಲೈ 19ರಿಂದ ಆಗಸ್ಟ್ 10, 2025ರ ವರೆಗೆ ಅರ್ಜಿ ಸಲ್ಲಿಸಬಹುದು.

ಆಯ್ಕೆ ಪ್ರಕ್ರಿಯೆ ಹೇಗೆ?

ಆಯ್ಕೆ ಪ್ರಕ್ರಿಯೆಯು ಮೂರು ಹಂತಗಳಲ್ಲಿ ನಡೆಯಲಿದೆ. ಟೈಯರ್-1 ಪರೀಕ್ಷೆ (ವಸ್ತುನಿಷ್ಠ ಪ್ರಕಾರ), ಟೈಯರ್-2 (ವಿವರಣಾತ್ಮಕ ಪ್ರಕಾರ) ಮತ್ತು ಸಂದರ್ಶನ ಇರುತ್ತದೆ. ಈ ಮೂರು ಹಂತಗಳಲ್ಲಿ ಅರ್ಹತೆ ಪಡೆದವರಿಗೆ ಗುಪ್ತಚರ ಬ್ಯೂರೋದಲ್ಲಿ ಉದ್ಯೋಗಾವಕಾಶ ಸಿಗುತ್ತದೆ.

ಪರೀಕ್ಷಾ ಕೇಂದ್ರಗಳು: ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ, ಮಂಗಳೂರು, ಶಿವಮೊಗ್ಗ ಮತ್ತು ಉಡುಪಿ.

ವೇತನ ಎಷ್ಟು?: ಆಯ್ಕೆಯಾದ ಅಭ್ಯರ್ಥಿಗಳಿಗೆ ತಿಂಗಳಿಗೆ ರು. 44,900ರಿಂದ ರು. 1,42,400ರ ವರೆಗೆ ವೇತನ ನೀಡಲಾಗುತ್ತದೆ. ಇತರ ಭತ್ಯೆಗಳು ಮತ್ತು ಸೌಲಭ್ಯಗಳನ್ನು ಸಹ ಒದಗಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ: www.mha.gov.in

ಕೇಂದ್ರ ಆಯುರ್ವೇದ ಸಂಶೋಧನಾ ಮಂಡಳಿ: ನೇಮಕಾತಿಗೆ ಅಧಿಸೂಚನೆ

ಕೇಂದ್ರ ಸರಕಾರದ ಅಧೀನ ಸಂಸ್ಥೆಯಾಗಿರುವ ಸೆಂಟ್ರಲ್ ಕೌನ್ಸಿಲ್ ಫಾರ್ ರಿಸರ್ಚ್ ಇನ್ ಆಯುರ್ವೇದಿಕ್ ಸೈನ್ಸಸ್‌ನಲ್ಲಿ (ಸಿಸಿಆರ್‌ಎಎಸ್) ಗ್ರೂಪ್ ಎ, ಬಿ ಮತ್ತು ಸಿ ವೃಂದದ 394 ವೈದ್ಯಕೀಯ ಮತ್ತು ವೈದ್ಯಕೀಯೇತರ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಿದೆ.

ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಆಗಸ್ಟ್-31

ಅರ್ಜಿ ತಿದ್ದುಪಡಿಗೆ ಅವಕಾಶ: ಸೆಪ್ಟೆಂಬರ್ 3ರಿಂದ 5, 2025

ಪರೀಕ್ಷಾ ಕೇಂದ್ರ: ಬೆಂಗಳೂರು (ಮಾತ್ರ)

ಹುದ್ದೆಗಳ ವಿವರ: ಲೋವರ್ ಡಿವಿಷನ್ ಕ್ಲರ್ಕ್, ಸ್ಟೆನೋಗ್ರಾಫರ್, ಸ್ಟಾಫ್ ನರ್ಸ್, ಲೈಬ್ರರಿ ಕ್ಲರ್ಕ್, ಸೆಕ್ಯೂರಿಟಿ ಇನ್‌ಚಾರ್ಜ್, ಅಸಿಸ್ಟೆಂಟ್ ರಿಸರ್ಚ್ ಆಫೀಸರ್, ಟ್ರಾನ್ಸ್‌ಲೇಟರ್, ರಿಸರ್ಚ್ ಅಸಿ ಸ್ಟೆಂಟ್. ಜೂನಿಯರ್ ಮೆಡಿಕಲ್ ಲ್ಯಾಬೊ ರೇಟರಿ, ಎಂಟಿಎಸ್ ಅಪ್ಪರ್ ಡಿವಿಷನ್ ಕ್ಲರ್ಕ್, ಅಸಿಸ್ಟೆಂಟ್, ಫಾರ್ಮಸಿಸ್ಟ್, ಲ್ಯಾಬೊರೇಟರಿ ಅಟೆಂಡೆಂಟ್, ಡ್ರೈವರ್, ಮೆಡಿಕಲ್ ಲ್ಯಾಬೊರೇ ಟರಿ ಟೆಕ್ನಾಲಜಿಸ್ಟ್ ರಿಸರ್ಚ್ ಆಫೀಸರ್, ಸ್ಟ್ಯಾಟಿಸ್ಟಿಕಲ್ ಅಸಿಸ್ಟೆಂಟ್, ಆಫ್‌ಸೆಟ್ ಮೆಷಿನ್ ಆಪರೇಟರ್ ಹುದ್ದೆಗಳು ಖಾಲಿ ಇವೆ.

ಪರೀಕ್ಷೆ ಹೇಗಿರುತ್ತದೆ?; ಕಂಪ್ಯೂಟರ್ ಆಧಾರಿತ ಪರೀಕ್ಷೆಯ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಆಯಾ ಹುದ್ದೆಗಳಿಗನುಸಾರವಾಗಿ ಪಠ್ಯ ವಿಷಯ ಭಿನ್ನವಾಗಿರುತ್ತದೆ.

ಪ್ರೊಬೇಷನರಿ ಅವಧಿ ಎಷ್ಟು?: ನೇಮಕಗೊಂಡ ಆರಂಭದ ಎರಡು ವರ್ಷಗಳು ಪ್ರೊಬೆಷನರಿ ಅವಧಿ ಆಗಿರುತ್ತದೆ, ಅಭ್ಯರ್ಥಿಗಳ ಕಾರ್ಯದಕ್ಷತೆ ಆಧಾರ ದಲ್ಲಿ ಈ ಅವಧಿ ವಿಸ್ತರಣೆಗೊಳ್ಳಲೂಬ ಹುದು.

ನೇಮಕ ಎಲ್ಲೆಲ್ಲಿ?: ದೇಶದ ಯಾವುದೇ ಭಾಗದಲ್ಲಿ ಕಾರ್ಯನಿರ್ವಹಿಸಲು ಸಿದ್ಧರಿರಬೇಕು.

ಅರ್ಹತೆಗಳೇನು?: ಆಯಾ ಹುದ್ದೆಗನುಸಾರ ವಿದ್ಯಾರ್ಹತೆ ಬೇರೆ ಬೇರೆಯಾಗಿದೆ, ಸಂಬಂಧಿಸಿದ ವಿಷಯಗಳಲ್ಲಿ ಎಂ.ಡಿ, ಎಂ.ಫಾರ್ಮ, ಬಿ.ಎಸ್ಸಿ ನರ್ಸಿಂಗ್ ಪದವಿ, ವಿಜ್ಞಾನ ಸೇರಿದಂತೆ ವಿವಿಧ ವಿಷಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ, ಪಿಯುಸಿ ಮತ್ತು ಡಿಪ್ಲೊಮಾ ಹಾಗೂ ಎಸ್ಸೆಸ್ಸೆಲ್ಸಿ ಪೂರ್ಣಗೊಳಿಸಿರುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಗೆ ಸೂಕ್ತವಾದ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಒಟ್ಟಾರೆ 27ರಿಂದ 40 ವರ್ಷ ದೊಳಗಿನ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶವಿದೆ. ಪರೀಕ್ಷಾ ಪಠ್ಯಕ್ರಮ ಹಾಗೂ ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ: https://ccras.nic.in, ಸಹಾಯವಾಣಿ: 02262337918

ಅರ್ಜಿ ಶುಲ್ಕವೆಷ್ಟು?

ಗ್ರೂಪ್-ಎ ಹುದ್ದೆಗಳಿಗೆ 500 ರು. ಪ್ರೊಸೆಸಿಂಗ್ ಫೀ ಮತ್ತು 1,000 ರು. ಪರೀಕ್ಷಾ ಶುಲ್ಕ ಪಾವತಿಸಲು ಸೂಚಿಸಲಾಗಿದೆ. ಗ್ರೂಪ್-ಬಿ ವೃಂದದ ಹುದ್ದೆಗಳಿಗೆ 200 ರು. ಪ್ರೊಸೆಸಿಂಗ್ ಫೀ ಹಾಗೂ ಪರೀಕ್ಷಾ ಶುಲ್ಕ 500 ರು. ಹಾಗೂ ಗ್ರೂಪ್-ಸಿ ವೃಂದದ ಹುದ್ದೆಗಳಿಗೆ ಪ್ರೊಸೆಸಿಂಗ್ ಮತ್ತು ಪರೀಕ್ಷಾ ಶುಲ್ಕ ಕ್ರಮವಾಗಿ 100 ಹಾಗೂ 200 ರು. ನಿಗದಿಪಡಿಸಲಾಗಿದೆ. ಎಸ್.ಸಿ/ಎಸ್.ಟಿ ವಿಶೇಷ ಚೇತನರು/ಆರ್ಥಿಕ ದುರ್ಬಲ ವರ್ಗ, ಮಹಿಳಾ ಅಭ್ಯರ್ಥಿಗಳು, ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಸಂಪೂರ್ಣ ಶುಲ್ಕ ವಿನಾಯಿತಿ ನೀಡಲಾಗಿದೆ.

ಐಬಿಪಿಎಸ್ ಪಿ.ಓ ಹಾಗೂ ಎಸ್.ಓ ಅರ್ಜಿ ಸಲ್ಲಿಕೆ ಇರುವ ದಿನಾಂಕ ವಿಸ್ತರಣೆ

ದೇಶಾದ್ಯಂತ ಒಟ್ಟು 5,208 ಪ್ರೊಬೆಷನರಿ ಆಫೀಸರ್, (1,007) ಸ್ಪೆಷಲಿಸ್ಟ್ ಆಫೀಸರ್ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿರುವ ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಸಂಸ್ಥೆ ಇದೀಗ ಕೊನೆಯ ದಿನಾಂಕವನ್ನು ವಿಸ್ತರಿಸಿ ಆದೇಶ ಹೊರಡಿಸಿದೆ. ಈ ಹಿಂದೆ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಲು ಜುಲೈ 21 ಕೊನೆಯ ದಿನ ಎಂದು ಹೇಳಲಾಗಿತ್ತು. ಇದೀಗ ಜುಲೈ 28 ರವರೆಗೆ ಅಪ್ಲೈ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅಧಿಕೃತ ವೆಬ್‌ಸೈಟ್ ibps.in ಗೆ ಭೇಟಿ ನೀಡುವ ಮೂಲಕ ಅರ್ಜಿ ಸಲ್ಲಿಸಬಹುದು.

ಬ್ಯಾಂಕ್ ಆಫ್ ಬರೋಡಾ

LB0 ನೇಮಕಾತಿ ಅರ್ಜಿ ಸಲ್ಲಿಕೆ ದಿನಾಂಕ ವಿಸ್ತರಣೆ

ಬ್ಯಾಂಕ್ ಆಫ್ ಬರೋಡಾ, LB0 ನೇಮಕಾತಿ 2025 ಕ್ಕೆ ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಹೆಚ್ಚಿನ ಸಮಯವನ್ನು ನೀಡಿದ್ದು, ಆನ್‌ಲೈನ್ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕವನ್ನು 10 ದಿನಗಳವರೆಗೆ ವಿಸ್ತರಿಸಿದೆ. ಬ್ಯಾಂಕಿನ ವೆಬ್ ಸೈಟ್‌ನಲ್ಲಿ ಬಿಡುಗಡೆಯಾದ ಅಧಿಕೃತ ಸೂಚನೆಯ ಪ್ರಕಾರ, ಅರ್ಜಿ ಪ್ರಕ್ರಿಯೆಯು ಜುಲೈ-4, 2025ರಂದು ಪ್ರಾರಂಭವಾಗಿ ಆಗಸ್ಟ್ 3, 2025ರ ವರೆಗೆ ಮುಂದುವ ರಿಯುತ್ತದೆ. ಅಭ್ಯರ್ಥಿಗಳು ಸಾಧ್ಯವಾದಷ್ಟು ಬೇಗ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

ಗಮನಕ್ಕೆ

ಅಂಕಣದಲ್ಲಿ ಪ್ರಸ್ತುತಪಡಿಸಿದ ಮಾಹಿತಿಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಲೇಖಕರು ಎಲ್ಲ ಪ್ರಯತ್ನಗಳನ್ನು ಮಾಡಿದ್ದಾರೆ. ಆದಾಗ್ಯೂ, ವಿಷಯದ ಸಂಪೂರ್ಣತೆ, ನಿಖರತೆ ಅಥವಾ ಸಮಯೋಚಿತತೆಯನ್ನು ಖಾತರಿಪಡಿಸುವುದಿಲ್ಲ. ಹಾಗಾಗಿ ಅರ್ಜಿ ಸಲ್ಲಿಸುವ ಮೊದಲು ಆಯಾಯ ವೈಬ್‌ಸೈಟ್ ನೋಡಿ ಖಚಿತಪಡಿಸು ವುದು ಉತ್ತಮ. ಯಾವುದೇ ಲೋಪದೋಷಗಳಿಗೆ ಪತ್ರಿಕೆ ಇಲ್ಲವೇ ಲೇಖಕರು ಜವಾಬ್ದಾರರಲ್ಲ.

ಆರ್. ಕೆ. ಬಾಲಚಂದ್ರ
ಲೇಖಕರು, ಬ್ಯಾಂಕಿಂಗ್ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಬೆಂಗಳೂರು.

▶▶ ಅವೈಜ್ಞಾನಿಕ ಕಾಮಗಾರಿ, ಫಲಕಗಳು ನಾಪತ್ತೆ । ರಸ್ತೆಗಳಲ್ಲಿ ಹೆಚ್ಚುತ್ತಲೇ ಇವೆ ಸರಣಿ ಅಪಘಾತ । ಸೂಚನಾ ಲಕವಿಲ್ಲದೇ ಹಲವು ವಾಹನಗಳು ಪಲ್ಟಿ । ಮೂರು ರಾಷ್ಟ್ರೀಯ ಹೆದ್ದಾರಿಗಳ ಅವಘಡಗಳು

ಜಿಲ್ಲೆಯ ಮೂರು ರಾಷ್ಟ್ರೀಯ ಹೆದ್ದಾರಿ ಅವಾಂತರ

ಜಿಲ್ಲಾ ನೋಟ

ದೇವನೂರು ಶ್ರೀನಿವಾಸ್

ಚಾಮರಾಜನಗರ: ಗಡಿ ಭಾಗದ ಚಾಮರಾಜನಗರ ಜಿಲ್ಲೆಯಲ್ಲಿ ಒಂದಲ್ಲ, ಎರಡಲ್ಲ, ಮೂರು ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗಿವೆ. ಆದರೆ ಅವು ಹದಗೆಟ್ಟು ಹೋಗಿ ಅಪಘಾತಗಳು ಸಂಭವಿಸುತ್ತಲೇ ಇವೆ. ಹೆದ್ದಾರಿಗಳಾಗಿದ್ದರೂ ಅಪಘಾತ ಮಾತ್ರ ನಿಂತಿಲ್ಲ. ಆಗಾಗ್ಗೆ ಅಮಾಯಕ ಜನರನ್ನ ಬಲಿ ಪಡೆಯುತ್ತಲೆ ಇವೆ. ಜಿಲ್ಲೆಯಾಗಿ ಎರಡುವರೆ ದಶಕವೇ ಕಳೆದಿದೆ. ಆದರೆ ಹಿಂದುಳಿದ ಜಿಲ್ಲೆ ಎಂಬ ಹಣೆಪಟ್ಟಿಯಿಂದ ಹೊರಬಂದಿಲ್ಲ.

ಮೂರು ಹೆದ್ದಾರಿ: ಜಿಲ್ಲೆಯ ಮೂಲಕ ಮೂರು ರಾಷ್ಟ್ರೀಯ ಹೆದ್ದಾರಿ ಹೋಗಿರುವುದು ಸಂತಸದ ವಿಷಯವಾದರೂ ಸಹ ರಸ್ತೆಯ ಸಮಸ್ಯೆ ಮಾತ್ರ ಒಂದೆಯಾಗಿದೆ. ಹಿಂದೆ ರಸ್ತೆ ಸರಿ ಪಡಿಸದೇ ಅಪಘಾತವಾಗುತ್ತಿತ್ತು. ಇದೀಗ ಹೊಸ ರಸ್ತೆಯಾಗಿಯೂ ರಸ್ತೆ ಅಪಘಾತಗಳು ಬಹಳಷ್ಟು ಆಗುವ ಮೂಲಕ ಸಾವುಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಹೆದ್ದಾರಿಗಳಲ್ಲೇ ಗುಂಡಿ ಬಿದ್ದರೇ ಉಳಿದ ಜಿಲ್ಲಾ ಮುಖ್ಯ ರಸ್ತೆಗಳ ಕತೆ ಏನಾಗಿರಬೇಡ..? ಅಪಘಾತಗಳಿಗೆ ಸಾಕಷ್ಟು ಜನ ಪ್ರಾಣ ತೆತ್ತಿದ್ದರು. ನಂತರ ಸಾರ್ವಜನಿಕರ ಹೋರಾಟದಿಂದಾಗಿ ಒಂದಷ್ಟು ಗುಂಡಿ ಮುಚ್ಚುವ ದುರಸ್ತಿ ಕಾರ್ಯ ನಡೆಯಿತು.

ಟೋಲ್ ಸಂಗ್ರಹ: ಇದೀಗ ಹೊಸ ರಸ್ತೆಯೇ ಆಗಿದ್ದು ಟೋಲ್ ಸಹ ಸಂಗ್ರಹ ಮಾಡುತ್ತಿದ್ದಾರೆ. ಆದರೆ ಜನರ ರಸ್ತೆ ಸಮಸ್ಯೆ ಮಾತ್ರ ತಪ್ಪಿದಂತೆ ಕಾಣುತ್ತಿಲ್ಲ. ಹಲವು ಕಾರಣಗಳಿಂದ ಅಪಘಾತ ಆಗುತ್ತಲೇ ಇವೆ. ಆದರೂ ಸಹ ಕಡಿವಾಣ ಬೀಳುವ ಲಕ್ಷಣಗಳು ಸದ್ಯಕ್ಕೆ ಕಾಣುತ್ತಿಲ್ಲ. ಇದಕ್ಕೂ ಸಹ ಜನ ಹೋರಾಟ ಮಾಡಲು ಸಜ್ಜುಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸೂಚನಾ ಫಲಕ ಇಲ್ಲ: ರಸ್ತೆ ಅಪಘಾತಕ್ಕೆ ಹಲವು ಕಾರಣಗಳಿವೆ. ಅತಿಯಾದ ವೇಗದ ಚಾಲನೆಯೂ ಕೂಡ ಒಂದಾದರೆ ಅವೈಜ್ಞಾನಿಕ ರಸ್ತೆ ಕಾಮಗಾರಿ, ಸಂಚಾರ ಸೂಚನಾ ಫಲಕಗಳನ್ನು ಮತ್ತು ವಿದ್ಯುತ್ ದೀಪಗಳನ್ನು ಅಳವಡಿಸದೇ ಇರುವುದು ಸಹ ಬಹು ದೊಡ್ಡ ಕಾರಣವಾಗಿ ಜಿಲ್ಲೆಯ ರಸ್ತೆಗಳಲ್ಲಿ ವಿಪರೀತ ಅಪಘಾತಗಳು ಸಂಭವಿಸುತ್ತಿವೆ. ಇದನ್ನ ತಪ್ಪಿಸಲು ಸಂಬಂಧಪಟ್ಟ ಇಲಾಖೆಗಳು ಸೂಕ್ತ ಕ್ರಮವಹಿಸಬೇಕಿದೆ.

ಬೆಟ್ಟದ ದಾರಿ ದುರಂತಗಳು: ಇನ್ನು ಮಲೆಮಹದೇಶ್ವರ ಬೆಟ್ಟಕ್ಕೆ ತೆರಳುವ ಮಾರ್ಗದಲ್ಲಂತೂ ಅಪಘಾತಗಳ ಸಂಖ್ಯೆ ಕೇಳುವಂತೆಯೇ ಇಲ್ಲ. ಇತ್ತೀಚಿಗೆ ಹನೂರು ತಾಲೂಕಿನ ತೆಳ್ಳನೂರು-ಬಂಡಳ್ಳಿ ನಿಯಂತ್ರಣ ತಪ್ಪಿ ಖಾಸಗಿ ಬಸ್ ಪಲ್ಟಿಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದು, ಕೆಲವರಿಗೆ ಗಾಯಗಳಾದರೆ. ಕೊಳ್ಳೇಗಾಲದ ಚಿಕ್ಕಿಂದವಾಡಿ ಬಳಿ ಹೆದ್ದಾರಿಯಲ್ಲಿ ಟಿಪ್ಪರ್ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಐವರು ವಿದ್ಯಾರ್ಥಿಗಳು ಮೃತಪಟ್ಟಿದ್ದರು. ಅದಕ್ಕೂ ಮುನ್ನ ಬೆಂಗಳೂರಿನ ನಿವಾಸಿಗಳು ಸಹ ಬೆಟ್ಟಕ್ಕೆ ಬರುವಾಗ ರಸ್ತೆಯ ಬದಿಯ ಕೆರೆಗೆ ಕಾರು ಬಿದ್ದ ನೀರಿನಲ್ಲಿ ಮುಳುಗಿ ಇಬ್ಬರು ಸಾವನ್ನಪ್ಪಿದರು. ಹೀಗೆ ಸಾಕಷ್ಟು ಅಪಘಾತಗಳು ಸಂಭವಿಸುತ್ತಲೇ ಇವೆ. ಅತಿಯಾದ ವೇಗ, ಹೆದ್ದಾರಿಯ ಬದಿಗಳಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸದೇ ಇರುವುದು ತಿರುವುಗಳಲ್ಲಿ ವೇಗ ನಿಯಂತ್ರಣಗಳನ್ನು ಅಳವಡಿಸದೇ ಇರುವುದು ರಸ್ತೆ ಅಪಘಾತಗಳಿಗೆ ಕಾರಣವಾಗುತ್ತಿದೆ.

ಅಪಘಾತ ವಲಯಗಳು: ಜಿಲ್ಲೆಯಲ್ಲಿ ಹಾದು ಹೋಗಿರುವ ಸತ್ಯಮಂಗಲ ರಾ.ಹೆದ್ದಾರಿಯ ಕೊಳ್ಳೇಗಾಲ ತಾಲೂಕಿನ ಹರಳೇ, ಮಧುವನಹಳ್ಳಿ, ಸತ್ತೇಗಾಲ, ಮುಡಿಗುಂಡ ಬೈಪಾಸ್ ರಸ್ತೆಗಳು. ಚಾಮರಾಜನಗರ ತಾಲೂಕಿನ ದೊಡ್ಡರಾಯಪೇಟೆ, ಸೋಮವಾರಪೇಟೆ, ಅಟ್ಟಗೂಳಿಪುರ ಹಾಗೂ ಇನ್ನಿತರೆ ಬೈಪಾಸ್ ರಸ್ತೆಗಳು. ಹನೂರಿನ ತೆಳ್ಳನೂರು-ಬಂಡಳ್ಳಿ ರಸ್ತೆ ಹಾಗೂ ಇನ್ನಿತರೆ ರಸ್ತೆಗಳಲ್ಲಿ ಅಪಘಾತಗಳು ಹೆಚ್ಚಾಗಿ ನಡೆಯುತ್ತಿದೆ. ಇವುಗಳನ್ನು ಅಪಘಾತ ವಲಯಗಳು ಎಂದು ಗುರುತಿಸುವ ಮೂಲಕ ಅಗತ್ಯ ಸಂಚಾರ ನಿಯಂತ್ರಣ ಮತ್ತು ವೇಗ ನಿಯಂತ್ರಣಗಳನ್ನು ಅಳವಡಿಸುವ ಮೂಲಕ ಅಪಘಾತಗಳನ್ನು ನಿಯಂತ್ರಣ ಮಾಡಬೇಕಿದೆ.

ವೇಗಕ್ಕೆ ರಸ್ತೆಯೇ ಕಡಿವಾಣ: ಇದು ಹೇಗೆ ಎನ್ನುತ್ತಿರಾ, ಹೌದು ರಾಷ್ಟ್ರೀಯ ಹೆದ್ದಾರಿ ಸಂತೇಮರಳ್ಳಿಯಿಂದ ಕೊಳ್ಳೇಗಾಲ ಮೂಲಕ ಹೋಗುವ ರಸ್ತೆಯ ಮಾರ್ಗ ಮಧ್ಯದಲ್ಲಿ ಕನಿಷ್ಠ 60 - 70 ರಲ್ಲಿ ಚಾಲನೆ ಮಾಡಿದರೂ ಸ್ವಲ್ಪ ಯಾಮಾರಿದರೂ ವಾಹನ ಪಲ್ಟಿ ಖಚಿತ, ಏಕೆಂದರೆ ಆ ಹೊಸ ರಸ್ತೆಯಲ್ಲೇ ಸಮತಟ್ಟಿಲ್ಲದೇ ವಾಹನಗಳು ಚಾಲಕರ ನಿಯಂತ್ರಣ ತಪ್ಪುತ್ತಿವೆ. ಇಲ್ಲಿ ಮಾತ್ರ ಚಾಲಕರು ಬಹಳ ಜಾಗ್ರತೆಯಿಂದ ವಾಹನ ಚಾಲನೆ ಮಾಡಬೇಕು. ಇಲ್ಲವಾದರೆ ಅಪಘಾತ ಕಟ್ಟಿಟ್ಟ ಬುತ್ತಿ. ರಸ್ತೆಯ ಪರಿಸ್ಥಿತಿ ಹೀಗಿದ್ದರೂ ಈವರವಿಗೂ ಅಪಘಾತವಾದವರ ಮೇಲೆ ಪ್ರಕರಣ ದಾಖಲಾಗಿದೆಯೇ ಹೊರತು ಅವೈಜ್ಞಾನಿಕ ರಸ್ತೆ ಮಾಡಿದವರ ಮೇಲೆ ಒಂದೇ ಒಂದು ಪ್ರಕರಣ ದಾಖಲಾಗಿಲ್ಲ.

ಆಮೆಗತಿಯ ರಸ್ತೆ ನಿರ್ಮಾಣ: ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಬರೋಬರಿ ಏಳೆಂಟು ವರ್ಷಗಳೇ ಕಳೆದರೂ ಮುಗಿಯದೇ ಜನ ಪರದಾಡುವಂತಾಗಿತ್ತು. ಕೆಡಿಪಿ ಸಭೆಗಳಲ್ಲಿ ಗುತ್ತಿದಾರರನ್ನು ಕರೆಸಿದರೂ ಬಾರದೇ ಸಾಕಷ್ಟು ಬಾರಿ ಎಚ್ಚರಿಕೆ ಕೊಟ್ಟು ಕಾಮಗಾರಿ ಬೇಗ ಮುಗಿಸುವಂತೆ ತಾಕೀತು ಮಾಡುವಂತಾಗಿತ್ತು. ಮೂರನಾಲ್ಕು ಜನ ಗುತ್ತಿಗೆದಾರರು ಸಹ ಬದಲಾವಣೆಯಾದರೂ ಆ ಕಾಮಗಾರಿ ಮುಗಿಸಲು ಜನಪ್ರತಿನಿಧಿಗಳು, ಅಧಿಕಾರಿಗಳು ಹರಸಾಹಸ ಮಾಡಬೇಕಾಯಿತು.

ಪ್ರಕರಣ ದಾಖಲು: ಈ ಹಿಂದೆ ದಿ.ಆರ್ .ದ್ರುವನಾರಾಯಣ್ ಸಂಸದರಾಗಿದ್ದಾಗ ಪ್ರಾರಂಭವಾದ ಈ ರಸ್ತೆ ಕಾಮಗಾರಿ ಏಳೆಂಟು ವರ್ಷಗಳ ನಂತರ ಪೂರ್ಣವಾಯಿತು. ರಸ್ತೆ ಕಾಮಗಾರಿ ಮಾಡುವಾಗಲೂ ಸರಿಯಾದ ನಾಮಫಲಕಗಳು ಇಲ್ಲದೇ ಸಾವು - ನೋವುಗಳು ಆಗುತ್ತಿದ್ದವು. ಆ ವೇಳೆ ಕೆಡಿಪಿ ಸಭೆಯಲ್ಲಿ ದ್ರುವನಾರಾಯಣ್ ಮತ್ತು ಜಿಲ್ಲಾಧಿಕಾರಿ ಕಾವೇರಿಯವರು ಅಪಘಾತವಾದಾಗ ವಾಹನ ಸವಾರರಿಗಷ್ಟೇ ಅಲ್ಲದೇ ಅವೈಜ್ಞಾನಿಕ ರಸ್ತೆ ಕಾಮಗಾರಿ ಮಾಡುವವರ ಮೇಲೂ ಪ್ರಕರಣ ದಾಖಲು ಮಾಡಬೇಕು ಎಂದು ಸಭೆಯಲ್ಲಿ ತೀರ್ಮಾನಿಸುತ್ತಿದ್ದಂತೆ ಗುತ್ತಿಗೆದಾರರು ಬೆಚ್ಚಿಬಿದ್ದು ಸರಿಯಾದ ಕ್ರಮವಹಿಸಲು ಮುಂದಾಗಿದ್ದರು. ಇದೀಗ ರಸ್ತೆ ಕಾಮಗಾರಿಯ ಅವೈಜ್ಞಾನಿಕ ಸಮಸ್ಯೆಗೆ ಕಡಿವಾಣಕ್ಕೆ ಅದೇ ಕ್ರಮವಹಿಸಿದರೆ ಮಾತ್ರ ಅಮಾಯಕರ ಪ್ರಾಣ ಬಲಿಗೆ ಬೆಲೆ ಸಿಕ್ಕಂತಾಗುತ್ತದೆ.

ಅಪಘಾತಕ್ಕೆ ಕಾರಣಗಳು: ಅವೈಜ್ಞಾನಿಕ ಕಾಮಗಾರಿ ತಾಲೂಕಿನ ಚಿಕ್ಕಹೊಳೆ ಚೆಕ್‌ಪೋಸ್ಟ್‌ನಿಂದ ಸುವರ್ಣಾವತಿ ಜಲಾಶಯದ ವರೆಗೂ 50 ಮೀ. ಅಂತರದಲ್ಲಿ ವಾಹನ ಬರುತ್ತಿದೆ ಎಂಬುದೆ ಗೊತ್ತಾಗುವುದಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಅಪಘಾತಗಳು ಸಂಭವಿಸುತ್ತಿದೆ. ವೇಗ ನಿಯಂತ್ರಣ ಹಾಗೂ ಸಂಚಾರಿ ನಿಯಮಗಳ ಫಲಕಗಳನ್ನು ಅಳವಡಿಸಿಲ್ಲ. ರಸ್ತೆಯ ಸಮೀಪದ ಚರಂಡಿಗಳನ್ನು ಅವೈಜ್ಞಾನಿಕವಾಗಿ ನಿರ್ಮಾಣ ಮಾಡಲಾಗಿದೆ. ಗ ಚೆಕ್‌ಪೋಸ್ಟ್ ಬಳಿಯ ಹೆದ್ದಾರಿ ಕಾಮಗಾರಿ ಕಳಪೆಯಿಂದ ಕೂಡಿದೆ. ನಿಯಮದ ಪ್ರಕಾರ ಸುಮಾರು 130 ಮೀ, ವರೆಗೆ ಎದುರು ಬರುತ್ತಿರುವ ವಾಹನಗಳು ಕಾಣಬೇಕು. ಆದರೆ ಈ ರಸ್ತೆ ಹೆಚ್ಚಿನ ತಿರುವುಗಳಿಂದ ಕೂಡಿದ್ದು, ಅಪಘಾತಗಳು ಸಂಭವಿಸಲು ಇದು ಕೂಡ ಒಂದು ಕಾರಣವಾಗಿದೆ. ಸೂಕ್ತ ರೀತಿಯಲ್ಲಿ ಸರ್ವೀಸ್ ರಸ್ತೆಗಳನ್ನು ನಿರ್ಮಾಣ ಮಾಡಿಲ್ಲ. ರಸ್ತೆ ಬದಿಯಲ್ಲಿ ವಿದ್ಯುತ್ ದೀಪಗಳು ಇಲ್ಲದೇ ರಾತ್ರಿ ವೇಳೆಯಲ್ಲಿ ಸಂಚಾರ ಮಾಡಲು ಭಯವಾಗುತ್ತಿದೆ ಎನುತ್ತಾರೆ ಪ್ರಯಾಣಿಕರು.

ರಸ್ತೆ ಬದಿ ವಾಹನಗಳ ಪಾರ್ಕಿಂಗ್: ಹೆದ್ದಾರಿಗಳ ನಿಯಾಮವಳಿಯಂತೆ ಈ ಹೆದ್ದಾರಿಯನ್ನು ನಿರ್ಮಾಣ ಮಾಡಿಲ್ಲ. ಹೆದ್ದಾರಿಯನ್ನು ನಿರ್ಮಾಣ ಮಾಡುವಾಗ ವಿವಿಧ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸರ್ವೀಸ್ ರಸ್ತೆಗಳನ್ನು ಹಾಳು ಮಾಡಲಾಗಿದೆ. ರಾತ್ರಿ ವೇಳೆಯಲ್ಲಿ ಸತ್ತಿರಸ್ತೆ ವಾಹನ ಸಂಚಾರ ನಿಷೇಧ ಮಾಡಿರುವುದರಿಂದ ರಸ್ತೆ ಬದಿಯಲ್ಲಿ ಹೆಚ್ಚಿನ ವಾಹನಗಳನ್ನು ಪಾರ್ಕಿಂಗ್ ಮಾಡಲಾಗುತ್ತಿದೆ. ಇದರಿಂದ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಅಗತ್ಯವಾಗಿ ಹೆದ್ದಾರಿಯಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಿಲ್ಲ. ಇದರ ಪರಿಣಾಮವಾಗಿ ಅಪಘಾತಗಳು ಹೆಚ್ಚಾಗುತ್ತಲೇ ಇದೆ.

ಅತಿವೇಗದ ಚಾಲನೆ ಮಲೆ ಮಹದೇಶ್ವರ ಬೆಟ್ಟದ ರಸ್ತೆಯಲ್ಲಿ ಅಪಘಾತ ಹೆಚ್ಚಾಗುತ್ತಿದೆ. ಈ ರಸ್ತೆಯ ಗ್ರಾಮಗಳ ಪರಿಮಿತಿಗಳಲ್ಲಿ ವೇಗವಾಗಿ ಬಸ್, ಟಿಪ್ಪರ್, ಲಾರಿ, ವಾಹನಗಳು ಚಲಿಸುತ್ತವೆ. ಬೈಪಾಸ್ ರಸ್ತೆ ಅಭಿವೃದ್ಧಿಯಿಂದ ಅಜಾಗರೂಕತೆ ಚಾಲನೆ ಸಾಮಾನ್ಯ ಆಗಿದೆ. ಇತ್ತೀಚೆಗೆ ಟಿಪ್ಪರ್ ಹಾಗೂ ಕಾರಿನ ನಡುವೆ ಅಪಘಾತ ಸಂಭವಿಸಿ 5 ಜನರು ಮೃತಪಟ್ಟರು. ಬಂಡಳ್ಳಿ ಬಳಿ ಬಸ್ ಪಲ್ಟಿಯಾಗಿ ಒಬ್ಬ ಮೃತಪಟ್ಟಿದ್ದು, 70 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಪೊಲೀಸರ ಹರ ಸಾಹಸ: ದಿನೇದಿನೇ ಹೆಚ್ಚುತ್ತಿರುವ ಅಪಘಾತಗಳಿಂದ ಬೇಸತ್ತ ಗ್ರಾಮಗಳ ಜನರು ಹೋರಾಟ ಮಾಡಲು ಮುಂದಾದ ಹಿನ್ನಲೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಹಾಗೂ ಜಿಲ್ಲಾ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಅವರು ರಸ್ತೆಗಳಿಗೆ ಭೇಟಿ ನೀಡಿ ಅಲ್ಲಿನ ಜನರ ಜೊತೆ ಮಾತನಾಡಿ, ರಸ್ತೆಯ ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡೆದು ಸದ್ಯಕ್ಕೆ ಅಲ್ಲಲ್ಲಿ ಬ್ಯಾರಿಕೇಡ್ ಅಳವಡಿಸಿದ್ದಾರೆ. ಅಲ್ಲದೇ ಹೆದ್ದಾರಿಯಅಧಿಕಾರಿಗಳೊಂದಿಗೆ ಚರ್ಚಿಸಿ ಕೂಡಲೇ ಕ್ರಮವಹಿಸುವಂತೆ ಸೂಚನೆ ನೀಡಿದ್ದಾರೆ.

▶▶ ಜಿಲ್ಲೆಯಲ್ಲಿ ನಡೆಯದ ಜಂಟಿ ಸಭೆ, ಸಮಾವೇಶ ।'ದೇಶಕ್ಕೆ ಮೋದಿ, ರಾಜ್ಯಕ್ಕೆ ಕುಮಾರಣ್ಣ' ಪ್ರಚಾರ । ಬೂತ್ ಮಟ್ಟದಲ್ಲಿ ಕಾಣುತ್ತಿಲ್ಲ ಮೈತ್ರಿ ಲಕ್ಷಣಗಳು । ಜಂಟಿ ಹೋರಾಟ, ಪ್ರತಿಭಟನೆ. ಸಮಾವೇಶ ದೂರ

ದಳಪತಿಗಳ ಆಸಕ್ತಿ, ಕಮಲ ಪಾಳಯ ವಿರಕ್ತಿ

ಜಿಲ್ಲಾ ನೋಟ

ವೀರೇಶ್ ಎಸ್.ಕೆಂಭಾವಿ ಯಾದಗಿರಿ

ಕಳೆದ ಲೋಕಸಭಾ ಚುನಾವಣೆ ವೇಳೆ ರಾಜ್ಯದಲ್ಲಿ ಮೈತ್ರಿ ಮಾಡಿಕೊಂಡಿರುವ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ನಾಯಕರುಗಳು ಆಗಾಗ ಅಲ್ಲಿ ಇಲ್ಲಿ ಒಟ್ಟಾಗಿ ಕಾಣಿಸಿಕೊಂಡಿದ್ದಾರೆ. ಹಾಗೆಯೇ ಸಭೆ, ಸಮಾವೇಶಗಳು ಕೂಡಾ ಮಾಡಿದ್ದಾರೆ. ಆದರೆ, ಜಿಲ್ಲೆಯಲ್ಲಿ ಮಾತ್ರ ಈ ರೀತಿಯ ಬೆಳವಣಿಗೆಗಳು ಇಲ್ಲಿಯವರೆಗೂ ನಡೆಯದೇ ಇರುವುದು ಮೈತ್ರಿಗೆ ಜಿಲ್ಲೆಯ ಉಭಯ ನಾಯಕರ ಬೆಂಬಲವಿದ್ದಿಯಾ? ಇಲ್ಲವಾ? ಎನ್ನುವ ಬಗ್ಗೆ ಪ್ರಶ್ನೆ ಹುಟ್ಟುಹಾಕಿದೆ.

ಲೋಕಸಭೆ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಂಡು ಗೆಲುವು ಕಂಡಿರುವ ಬಿಜೆಪಿ ಮತ್ತು ಜೆಡಿಎಸ್ ನಾಯಕತ್ವ ಬಿಬಿಎಂಪಿ, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಚುನಾವಣೆಗೆ ಸಹ ಒಟ್ಟಾಗಿ ಮುಂದುವರಿಯಲು ಕಾಯುತ್ತಿದೆ. ಆದರೆ, ಜಿಲ್ಲೆಯಲ್ಲಿ ಉಭಯ ಪಕ್ಷದ ನಾಯಕರು ಯಾವುದೇ ಒಂದು ಚಟುವಟಿಕೆಯಾಗಲಿ, ಸಭೆ ಸಮಾರಂಭಗಳಾಗಲಿ ಜಂಟಿಯಾಗಿ ಇಲ್ಲಿಯವರೆಗೂ ಮಾಡಿಲ್ಲ. ಹೀಗಾಗಿ ಮುಂಬರುವ ಚುನಾವಣೆಯ ನಿರೀಕ್ಷೆಯಲ್ಲಿರುವ ಉಭಯ ಪಕ್ಷದ ಕೆಲವರಿಗೆ ಚಿಂತೆ ಮಾಡುವಂತೆ ಮಾಡಿದೆ.



ಕಾರ್ಯಕರ್ತರಲ್ಲಿ ಗೊಂದಲ : ಇದುವರೆಗೂ ಜಿಲ್ಲೆಯಲ್ಲಿ ರಾಜ್ಯದ ಸಮಸ್ಯೆಗಳ ಕುರಿತು ಇಲ್ಲಿನ ಬಿಜೆಪಿ ಘಟಕ ಪ್ರತಿಭಟನೆ, ಪತ್ರಿಕಾಗೋಷ್ಠಿಗಳನ್ನು ಮಾಡಿಕೊಂಡು ಬರುತ್ತಿದೆ ಯಾದರೂ ಎಲ್ಲಿಯೂ ಕೂಡಾ ಜೆಡಿಎಸ್ ಪಕ್ಷದ ಮುಖಂಡರು ಸೇರಿಸಿಕೊಂಡಿಲ್ಲ. ಹಾಗೂ ಅವರು (ಜೆಡಿಎಸ್) ಕೂಡಾ ಇವರೊಂದಿಗೆ ಕಾಣಿಸಿಕೊಂಡಿಲ್ಲ. ಇದು ಸಹಜವಾಗಿ ಜಿಲ್ಲೆಯ ಮೈತ್ರಿ ಪಕ್ಷಗಳ ಕಾರ್ಯಕರ್ತರಲ್ಲಿ ಗೊಂದಲ ಉಂಟು ಮಾಡಿದೆ.

ಬಿಜೆಪಿಯಿಂದ ನಿರಾಸಕ್ತಿ : ಬಿಜೆಪಿ- ಜೆಡಿಎಸ್ ಮೈತ್ರಿಗೆ ಪ್ರಾರಂಭದಲ್ಲಿ ಅಪಸ್ವರವೆತ್ತಿದ್ದ ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಅವರೇ ಸದ್ಯ ಮೈತ್ರಿ ಕುರಿತು ತೋರಿರುವ ಆಸಕ್ತಿ ಮಿತ್ರ ಪಕ್ಷವಾಗಿರುವ ಕಮಲ ಪಾಳಯದ ಜಿಲ್ಲಾ ನಾಯಕರಲ್ಲಿ ಕಾಣುತ್ತಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿವೆ.ಇತ್ತೀಚೆಗೆ ನಡೆದ ಯಾದಗಿರಿ ನಗರದಲ್ಲಿ 'ಜನರೊಂದಿಗೆ ಜನತಾದಳ'ದ ಕಾರ್ಯಕ್ರಮದ ನಂತರದಲ್ಲಿ ಇಂಥಾದೊಂದು ಪ್ರಶ್ನೆ ರಾಜಕೀಯ ವಲಯದಲ್ಲಿ ಹುಟ್ಟಿಕೊಂಡಿದೆ.

ಸೋಮಣ್ಣಗೆ ಅದ್ದೂರಿ ಸನ್ಮಾನ : ಅಂದು ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಶರಣಗೌಡ ಕಂದಕೂರ ಅವರು, ನಾನು, ಸುರಪುರದ ರಾಜೂಗೌಡ ಕೂಡಿಕೊಂಡು ಜಿಲ್ಲೆಯ ನಾಲ್ಕು ಮತಕ್ಷೇತ್ರಗಳ ಪೈಕಿ ಮೂರು ಕಡೆ ಮೈತ್ರಿ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುವುದಾಗಿ ಹೇಳುವ ಮೂಲಕ ಜಿಲ್ಲೆಯಲ್ಲಿ ಬಿಜೆಪಿಯೊಂದಿಗೆ ಸೇರಿ ಕೆಲಸ ಮಾಡುವುದಾಗಿ ಹೇಳಿಕೊಂಡಿದೆ. ಅಲ್ಲದೇ ಈ ಹಿಂದೆ ಜಿಲ್ಲೆಗೆ ಭೇಟಿ ನೀಡಿದ ಕೇಂದ್ರ ಸಚಿವ ವಿ. ಸೋಮಣ್ಣ ಅವರನ್ನು ಅದ್ದೂರಿಯಾಗಿ ಬರಮಾಡಿಕೊಂಡು , ಸನ್ಮಾನಿಸಿ ಗೌರವಿಸುವ ಮೂಲಕ ಬಿಜೆಪಿಯವರೂ ನಾಚಿಸುವಂತೆ ಅವರಿಂದ ಭೇಷ್ ಎನಿಸಿಕೊಂಡಿದ್ದಾರೆ.

ಜಿಪಂ, ತಾಪಂ ಚುನಾವಣೆಗೆ ಮೈತ್ರಿ ?: ಇಂಥ ಯಾವುದೇ ಮಾತುಗಳು, ಚಟುವಟಿಕೆಗಳು ಬಿಜೆಪಿ ಜಿಲ್ಲಾ ನಾಯಕರಿಂದ ಸಾರ್ವಜನಿಕವಾಗಿ ಎಲ್ಲಿಯೂ ಹೊರಬಂದಿಲ್ಲ. ಚುನಾವಣೆಗೆ ಇನ್ನೂ ಸಮಯವಿದೆ ನಿಜ. ಆದರೆ, ಮುಂಬರುವ ತಾಪಂ/ಜಿಪಂ ಚುನಾವಣೆಯಲ್ಲಿ ಸಮನ್ವಯ ಸಾಧಿಸಲು ಉಭಯ ನಾಯಕರು ಈಗಿನಿಂದಲೇ ತಯಾರಿ ಮಾಡಬೇಕಾಗಿದೆ ಎನ್ನುತ್ತಾರೆ ಬಿಜೆಪಿ ಕಾರ್ಯಕರ್ತರೊಬ್ಬರು.

ತುಟ್ಟಿ ಬಿಚ್ಚದ ಕೇಸರಿ ಪಡೆ : ಈಗಾಗಲೇ ಮೈತ್ರಿ ಮಾಡಿಕೊಂಡು ರಾಜ್ಯದಲ್ಲಿ ಯಶ ಕಂಡಿರುವ ಪಕ್ಷಗಳ ನಾಯಕರಗಳು ತಮ್ಮ ಭಾಷಣಗಳಲ್ಲಿ ರಾಜ್ಯದಲ್ಲಿ ಜೆಡಿಎಸ್ - ಬಿಜೆಪಿ ಮೈತ್ರಿ ಮುಂದುವರಿಯುತ್ತದೆ. ಮೈತ್ರಿಗೆ ಯಾವುದೇ ಭಂಗ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ, ಮೈತ್ರಿ ಕುರಿತು ಜಿಲ್ಲೆಯ ಯಾವೊಬ್ಬ ಬಿಜೆಪಿ ನಾಯಕ ಸಹಿತ ಎಲ್ಲಿಯೂ ಕೂಡಾ ಮಾತಾಡಿಲ್ಲ. ಆದರೆ, ಜೆಡಿಎಸ್ ಶಾಸಕ ಕಂದಕೂರ ಮಾತ್ರ ದೇಶಕ್ಕೆ ಮೋದಿ, ರಾಜ್ಯಕ್ಕೆ ಕುಮಾರಣ್ಣ ಎನ್ನುವ ಮೂಲಕ ಮೈತ್ರಿಗೆ ತಮ್ಮ ನಿಲುವು ಏನು ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ.

ಜಂಟಿ ಹೋರಾಟಗಳಿಲ್ಲ : ಜಿಲ್ಲೆಯಲ್ಲಿ ಅನೇಕ ಸಮಸ್ಯೆಗಳು ತಾಂಡವವಾಡುತ್ತಿವೆ. ಆದರೆ, ಇದನ್ನೇ ಅಸ್ತ್ರ ಮಾಡಿಕೊಂಡು ಆಡಳಿತಾರೂಢ ಕಾಂಗ್ರೆಸ್ ಮೇಲೆ ಮೈತ್ರಿ ಪಕ್ಷದ ನಾಯಕರು ಜಂಟಿಯಾಗಿ ಹೋರಾಟ ಮಾಡಿಯೇ ಇಲ್ಲ. ಪಕ್ಷಗಳ ಉನ್ನತ ನಾಯಕರ ನಡುವಿನ ಬಾಂಧವ್ಯ ಬೂತ್ ಮಟ್ಟದಲ್ಲಿ ಕೆಲಸ ಮಾಡಬೇಕಾಗಿದೆ. ಎರಡೂ ಪಕ್ಷಗಳ ಕಾರ್ಯಕರ್ತರು ಒಗ್ಗಟ್ಟಿನ ಮಂತ್ರ ಜಪಿಸಿ ಕಾರ್ಯನಿರ್ವಹಿಸಲು ಜಂಟಿ ಸಮಾವೇಶಗಳನ್ನು ನಡೆಸಬೇಕಾಗುತ್ತದೆ. ಆದರೆ, ಇದು ಮಾತ್ರ ಜಿಲ್ಲೆಯಲ್ಲಿ ಇದುವರೆಗೂ ನಡೆದಿಲ್ಲ. ಹೀಗಾಗಿ ರಾಜ್ಯದ ಮೈತ್ರಿ ಜಿಲ್ಲೆಯಲ್ಲಿಯೂ ಇದೆಯೋ ಅಥವಾ ಇಲ್ಲವೋ ಎನ್ನುವುದು ಉಭಯ ಪಾರ್ಟಿ ಕಾರ್ಯಕರ್ತರಿಗೆ ಪ್ರಶ್ನೆಯಾಗಿಯೇ ಉಳಿದಿದೆ.

ತಮ್ಮ ಪಕ್ಷದ ಸದಸ್ಯತ್ವ ನೋಂದಣಿಗಾಗಿ ಇತ್ತೀಚೆಗೆ ನಿಖಿಲ್ ಕುಮಾರಸ್ವಾಮಿ ಅವರು ಜಿಲ್ಲೆಗೆ ಬಂದಿದ್ದರು. ಆದ್ದರಿಂದ ಅಲ್ಲಿ ನಾವು ಭಾಗವಹಿಸಲು ಬರುವುದಿಲ್ಲ. ಉಳಿದಂತೆ ಜಿಲ್ಲೆಯಲ್ಲಿ ನಮ್ಮ ಪಕ್ಷದ ವತಿಯಿಂದ ಜನಾಕ್ರೋಶ ಹೋರಾಟ ಪ್ರತ್ಯೇಕ ಮಾಡಲಾಗಿದೆ. ಹಾಗಾಗಿ ಮುಂದೆ ಜಂಟಿಯಾಗಿ ಸರಕಾರದ ವೈಫಲ್ಯದ ವಿರುದ್ಧ ಹೋರಾಟ ರೂಪಿಸಲಾಗುವುದು.

-ಬಸವರಾಜಪ್ಪಗೌಡ ವಿಭೂತಿಹಳ್ಳಿ , ಜಿಲ್ಲಾಧ್ಯಕ್ಷರು, ಬಿಜೆಪಿ

ಮೈತ್ರಿಗೆ ನಮ್ಮ ಬೆಂಬಲ ಸದಾ ಇರುತ್ತದೆ. ಅದರಂತೆ ನಮ್ಮ ಶಾಸಕರು ಸಹ ತಮ್ಮ ಭಾಷಣದಲ್ಲಿ 'ದೇಶಕ್ಕೆ ಮೋದಿ ರಾಜ್ಯಕ್ಕೆ ಕುಮಾರಣ್ಣ' ಎನ್ನುವ ಘೋಷಣೆಯೊಂದಿಗೆ ಜಿಲ್ಲೆಯಲ್ಲಿ ಮೂರು ಮೈತ್ರಿ ಅಭ್ಯರ್ಥಿ ಗೆಲ್ಲಿಸುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಹೀಗೆ ನಾವು ನಮ್ಮ ನಾಯಕರ ಆದೇಶ ಪಾಲಿಸುತ್ತಾ ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿದ್ದೇವೆ. ಯಾವುದೇ ಗೊಂದಲ ಬೇಡ.

-ಸುಭಾಷ್ ಚಂದ್ರ ಕಟಕಟಿ, ಜಿಲ್ಲಾಧ್ಯಕ್ಷರು, ಜೆಡಿಎಸ್

ಚಿತ್ತವಿಹಾರ

ಶಾಂತಿಸೂತ್ರ

• ಮಾಯಾ ಬಾಲಚಂದ್ರ

ಇಂದು ಬಹುತೇಕರ ಹುಡುಕಾಟ ಶಾಂತಿ. ಹೊರಗಿನ ಪರಿಸರದ ಶಾಂತಿ, ಮಾನಸಿಕ ಶಾಂತಿ ಅಥವಾ ಆತ್ಯಂತಿಕವಾದ (ಆತ್ಮದ ನೆಲೆಯ) ಶಾಂತಿಯೂ ಆಗಿರಬಹುದು. ಶಾಂತಿಯನ್ನು ಹೊಂದಲು ಎಲ್ಲೋ ಹುಡುಕಾಟ ನಡೆಸಬೇಕಿಲ್ಲ. ಹಾಗೆಂದು ಕುಳಿತಡೆಗೆ ಶಾಂತಿ ತಾನಾಗಿಯೇ ಹುಡುಕಿಕೊಂಡು ಬಂದು ಸೇರುವುದೂ ಇಲ್ಲ. ಶಾಂತಿ ಹೊಂದಬೇಕಾದರೆ ಮೊದಲು ಅಶಾಂತಿಯ ಕಾರಣವನ್ನು ತಿಳಿಯಬೇಕು. ಅಶಾಂತಿಗೆ ಮೂಲ ಕಾರಣವೆಂದರೆ ಮನದಲ್ಲಿ ಆಗಿಂದಾಗ ಮೂಡುವ ಗೊಂದಲ. ಈ ಗೊಂದ ಲವನ್ನು ಬೇರು ಸಹಿತ ಕಿತ್ತೊಗೆಯದೆ, ಬಯಸುತ್ತಿ ರುವ ಶಾಂತಿ ಹತ್ತಿರ ಸುಳಿಯಲಾರದು. ಗೊಂದಲ ನಿವಾರಣೆಯಾದ ಮನಸ್ಸನ್ನು, ಶಾಂತಿ ತಾನಾಗಿಯೇ ಆವರಿಸುತ್ತದೆ.

ಹಿಂದೊಮ್ಮೆ ರಾಜನೊಬ್ಬನ ಮುಂದೆ ಆತನ ಸೈನಿಕರು ತಾವು ಸೆರೆಹಿಡಿದ ಕಪ್ಪು ಬಣ್ಣದ, ರೌದ್ರ ರೂಪದ ಕುದುರೆಯನ್ನು ತಂದು ನಿಲ್ಲಿಸಿದರು. ಆ ಕುದುರೆ ಉಗ್ರ ರೂಪದಿಂದ ಕೆನೆಯುತ್ತ ತಿರುಗುತ್ತಿತ್ತು. ಯಾರ ಕೈಗೂ ಸಿಗುತ್ತಿರಲಿಲ್ಲ. ಅಂತಹ ಕುದುರೆಗೆ ಕಡಿವಾಣ ಹಾಕಲು ಬಲಿಷ್ಠರನೇಕರು ಪ್ರಯತ್ನ ಪಟ್ಟರೂ, ಆ ಕುದುರೆಯನ್ನು ಹಿಡಿದು ನಿಲ್ಲಿಸಲಾ ಗಲಿಲ್ಲ. ಅದು ತನ್ನ ಘೋರ ರೂಪದಿಂದ ಎಲ್ಲರನ್ನೂ ಬೆಚ್ಚಿ ಬೀಳಿಸಿತ್ತು.

ಆ ರಾಜನ ಮಗ, ಬಾಲಕ, ತಾನೇ ಕುದುರೆಯ ಮುಂದೆ ನಿಂತು, ಕೇವಲ ಒಂದೆರಡು ನಿಮಿಷಗಳಲ್ಲಿ ಆ ಕುದುರೆಯನ್ನು ಪಳಗಿಸಿ, ಅದರ ಕಡಿವಾಣ ಹಿಡಿದು ನಿಲ್ಲಿಸಿಯೇ ಬಿಟ್ಟ. ಕುದುರೆ ಶಾಂತವಾಗಿ ನಿಂತಿತು. ರಾಜ ಮುಂದೆ ಬಂದು ''ಮಗು ಇದು ನಿನಗೆ ಹೇಗೆ ಸಾಧ್ಯವಾಯಿತು? ''ಎಂದು ಕೇಳಿದಾಗ, ''ಇದರಲ್ಲಿ ಅಂತಹ ಸಾಹಸವೇನಿಲ್ಲ. ಕುದುರೆ ತನ್ನ ನೆರಳನ್ನೇ ನೋಡಿ ಭಯಪಟ್ಟುಕೊಳ್ಳುತ್ತಿತ್ತು. ಹಾಗಾ ಗಿಯೇ ಅದು ಹಿಂದಕ್ಕೂ ಮುಂದಕ್ಕೂ ಓಡಾಡುತ್ತಿತ್ತು. ಸೂರ್ಯನ ದಿಕ್ಕಿಗೆ ಅಭಿಮುಖವಾಗಿ ಅದನ್ನು ನಿಲ್ಲಿಸಿದೆ. ನೆರಳು ಹಿಂದಕ್ಕೆ ಬಿದ್ದು, ಕುದುರೆಗೆ ಕಾಣ ದಾಗಿ, ಭಯಪಡುವುದು ನಿಂತಿತು ಅಷ್ಟೇ!''ಎಂದ. ಮನಸ್ಸಿನಲ್ಲಿ ಮೂಡುವ ಗೊಂದಲ, ಅದರಿಂದ ಉಂಟಾಗುವ ಭಯ ನಿವಾರಣೆಯಾದರೆ, ಮನಸ್ಸು ಶಾಂತವಾಗಿ ನೆಲೆ ನಿಲ್ಲುತ್ತದೆ ಎನ್ನುವುದನ್ನು ಸಾಬೀತುಪಡಿಸಿದ ಆ ಬಾಲಕ ಅಲೆಕ್ಸಾಂಡರ್. ಇಲ್ಲಿ ಕುದುರೆಗೆ ತನ್ನ ನೆರಳೇ ಗೊಂದಲವನ್ನು ಮೂಡಿಸಿತ್ತು. ಆ ಗೊಂದಲ ನಿವಾರಣೆಯಾದ ಕ್ಷಣವೇ ಕುದುರೆ ಶಾಂತವಾಯಿತು.

ಅನೇಕ ಬಾರಿ ಗೊಂದಲಕ್ಕೆ ಕಾರಣವೂ ಸಹ ಕೇವಲ ನಮ್ಮಲ್ಲಿರುವ ಭ್ರಮೆಯೇ. ಕಾಲ ಕಾಲಕ್ಕೆ ಮನಸ್ಸಿನಲ್ಲಿ ಮೂಡುವ ಗೊಂದಲಗಳನ್ನು, ಅಕಾರಣವಾದ ಭಯವನ್ನು ವಿವೇಚನೆಯಿಂದ ನಿವಾರಿಸುತ್ತಾ ಸಾಗಿದಾಗ ಶಾಂತಿ ಎನ್ನುವುದು ಪ್ರಯತ್ನ ರಹಿತವಾ ಗಿಯೇ ದೊರೆತುಬಿಡುತ್ತದೆ.

ರಾಯಚೂರಿನಲ್ಲಿ ಮುಂಗಾರು ಬಣ್ಣಗಳು!

ನಮ್ಮ ನಾಡಿಗೆ, ಅದರಲ್ಲೂ ಬಯಲುಸೀಮೆಯ ಜನರಿಗೆ ಮುಂಗಾರು ಎಂದರೆ ಬಹಳ ಸಂಭ್ರಮ; ಮುಂಗಾರು ಮಳೆ ಸುರಿಯಿತು ಎಂದರೆ, ಜೀವ ಕಳೆ ಚಿಗುರಿತು ಎಂದೇ ಅರ್ಥ. ಇಂತಹ ಸಂದರ್ಭದಲ್ಲಿ, ರಾಯಚೂರಿನಲ್ಲಿ ಪ್ರತಿ ವರ್ಷ ಮುಂಗಾರು ಹಬ್ಬ ನಡೆಯುತ್ತಿದೆ. ಈ ವರ್ಷ, ಈ ಹಬ್ಬಕ್ಕೆ ಬಣ್ಣ ಕಟ್ಟಿಕೊಟ್ಟಿದ್ದು, ಕುಂಚ ಹಿಡಿದ ಕಲಾವಿದರು ರಚಿಸಿದ ಇಪ್ಪತ್ತೈದು ವರ್ಣಚಿತ್ರಗಳು!

• ಈರಣ್ಣ ಬೆಂಗಾಲಿ

ಅದೇ ತಾನೆ ರಾಯಚೂರಿನಲ್ಲಿ ಮುಂಗಾರು ಮಳೆ ಸುರಿದಿತ್ತು; ಅದರ ತಂಪು ಬಿಸುಪಿನ ವಾತಾವರಣ ಮಾಸುವ ಮುನ್ನವೇ, ಬಣ್ಣಗಳ ಹೊಸ ಲೋಕವೊಂದು ಅಲ್ಲಿ ನಿರ್ಮಾಣವಾಗಿತ್ತು. ಕ್ಯಾನವಾಸ್ ಮೇಲೆ ಅರಳಿ ನಿಂತ ಚಿತ್ರಗಳು ನೋಡುಗರ ಗಮನ ತನ್ನತ್ತ ಸೆಳೆಯುತ್ತಿದ್ದವು. ಇಪ್ಪತ್ತೈದು ಕಲಾವಿದರಿಂದ ಕಲಾಕೃತಿಗಳು ರಚನೆಯಾಗಿದ್ದು, ಕಲಾರಸಿಕರ ಗಮನ ಸೆಳೆಯಿತು; ಜತೆಗೆ, ಈ ವರ್ಷ ಸುರಿದ

ಮುಂಗಾರು ಮಳೆಗೆ ಗೌರವವನ್ನೂ ಸಲ್ಲಿಸಿದಂತಾಗಿತ್ತು.

ಇದಕ್ಕೆ ಕಾರಣವಾದ ಸಂದರ್ಭವೆಂದರೆ, ರಾಯಚೂರಿನ 'ಮುಂಗಾರು ಹಬ್ಬ'ಕ್ಕೆ ಈಗ ಇಪ್ಪತ್ತೈದು ತುಂಬಿದೆ! ರಾಯಚೂರಿನ ಮುನ್ನೂರು ಕಾಪು ಸಮಾಜವು, ಪ್ರತಿವರ್ಷ ಮುಂಗಾರು ಮಳೆ ಬೀಳುವ ಸಮಯದಲ್ಲಿ, 'ಮುಂಗಾರು ಸಾಂಸ್ಕೃತಿಕ ರಾಯಚೂರು ಹಬ್ಬ'ವನ್ನು ವಿಶೇಷವಾಗಿ ಆಚರಿಸುತ್ತಾ ಬಂದಿದೆ. ಈ ಹಬ್ಬಕ್ಕೆ ಇದೀಗ 25 ವರ್ಷ ತುಂಬಿದೆ. 2000ನೇ ಇಸವಿಯಿಂದ ಮುಂಗಾರು ಸಾಂಸ್ಕೃತಿಕ ಹಬ್ಬವು ರೈತರಿಂದ, ರೈತರಿಗಾಗಿ, ರೈತರಿಗೋಸ್ಕರ ಚಾಲನೆ ಆಗಿದೆ.

ಗ್ರಾಮೀಣ ಕ್ರೀಡೆಗಳು

ಭಾರವಾದ ಕಲ್ಲುಗಳನ್ನು ಎತ್ತುಗಳು ಎಳೆಯುವ ಸ್ಪರ್ಧೆ, ಕುಸ್ತಿ ಸ್ಪರ್ಧೆ, ನೃತ್ಯವನ್ನು ಇತರೆ ಕಾರ್ಯಕ್ರಮಗಳನ್ನು ರೈತಾಪಿ ಜನರಿಗೆ ಮನರಂಜನೆ ನೀಡುವ ನಿಟ್ಟಿನಲ್ಲಿಕಾಪು ಸಮಾಜ ಹಮ್ಮಿಕೊಳ್ಳುತ್ತಿದೆ. ಆ ಮೂಲಕ ಸ್ಥಳೀಯ ಜನಪದರನ್ನು, ಗ್ರಾಮೀಣ ಪ್ರತಿಭಾವಂತರನ್ನು ಗುರುತಿಸುವ ಪ್ರಯತ್ನವನ್ನೂ ಮಾಡಿಕೊಂಡು ಬಂದಿದೆ. ಆದರೆ, ಈ ಬಾರಿ ರಜತ ಮಹೋತ್ಸವ ಹಬ್ಬದ ಹಿನ್ನೆಲೆಯಲ್ಲಿ ಈ ಎಲ್ಲಾ ಕಾರ್ಯಗಳ ಜೊತೆ ಜೊತೆಗೆ ವಿಶಿಷ್ಟವಾಗಿ, ಅರ್ಥಪೂರ್ಣವಾಗಿ ಆಚರಿಸಲು



ಕವಿಗೋಷ್ಠಿ, ಗೀತ ಕುಂಚ ಗಾಯನ, ಮುಂಗಾರು ಮ್ಯಾರಥಾನ್, ಚಿತ್ರಕಲಾ ಶಿಬಿರ ಹೀಗೆ ವಿವಿಧ ಚಟುವಟಿಕೆಗಳನ್ನು ಆಯೋಜಿಸಿತ್ತು. ಬಹಳ ಮುಖ್ಯವಾಗಿ ಚಿತ್ರಕಲಾ ಶಿಬಿರವು ಕಲಾಸ್ತಕರ, ಜನಸಾಮಾನ್ಯರ ಮನಸೂರೆಗೊಂಡಿತ್ತು.

ಸ್ಥಳದಲ್ಲೇ ಚಿತ್ರರಚನೆ

ಇತ್ತಿಚೆಗೆ ಜರುಗಿದ ಒಂದು ದಿನದ ಚಿತ್ರಕಲಾ ಶಿಬಿರದಲ್ಲಿ ಮುಂಗಾರು ವಿಷಯವಾಗಿ ಹತ್ತು ಹಲವು ಕಲಾಕೃತಿಗಳು ರಚನೆಗೊಂಡಿದ್ದವು. ರಾಯಚೂರು ಜಿಲ್ಲೆಯ ಹಿರಿಯ ಕಿರಿಯ ಕಲಾವಿದರಿಂದ ರಚನೆಗೊಂಡಕಲಾಕೃತಿಗಳು ಮುಂಗಾರು ಹಬ್ಬಕ್ಕೆ ರಂಗು ತುಂಬಿದ್ದವು.ಕಲಾತ್ಮಕ ಎತ್ತುಗಳು, ಕುಸ್ತಿ, ಗ್ರಾಮೀಣ ನೃತ್ಯ, ಕಲ್ಲಿನ ಗುಂಡು ಎತ್ತುವುದು ಹೀಗೆ ಮುಂತಾದ ಕಲಾಕೃತಿಗಳು ಹಳ್ಳಿ ಸೊಗಡನ್ನು ಪ್ರತಿಬಿಂಬಿಸಿದ್ದವು. ಮುನ್ನೂರು ಕಾಪು ಸಮಾಜದ ಸಾಂಸ್ಕೃತಿಕ ಮನಸ್ಸಿನ ಮುಖಂಡರಾದ ಎ.ಪಾಪರೆಡ್ಡಿ ಅವರು ಕವಿ, ಕಲಾವಿದರಿಗೆ ಪ್ರೋತ್ಸಾಹ ನೀಡಲು ಈ ಬಣ್ಣದ ಚಟುವಟಿಕೆಯನ್ನು ಹಮ್ಮಿಕೊಂಡಿದ್ದು ಸೂಕ್ತವಾಗಿತ್ತು. ಇದರಲ್ಲಿನ ವಿಶೇಷವೆಂದರೆ, ವಿವಿಧ ಕಲಾವಿದರು ಸ್ಥಳದಲ್ಲೇ ಚಿತ್ರ ರಚನೆ ಮಾಡಿದರು. ಕುಂಚಗಳನ್ನು ಬಣ್ಣದಲ್ಲಿ ಅದ್ದಿ, ಅಲ್ಲೇ ನಿಂತು ತಾಳ್ಮೆಯಿಂದ ಚಿತ್ರ ರಚಿಸಿದರು; ಕಲಾವಿದರ ಈ ಕೈಚಳಕವನ್ನು ಕಂಡು ರೈತಾಪಿ, ವ್ಯಾಪಾರಸ್ಥ ಜನರು ಮುದಗೊಂಡರು; ಸ್ಥಳದಲ್ಲೇ ರಚನೆಗೊಂಡ ಕಲಾಕೃತಿಗಳನ್ನು ಕಂಡು ಆನಂದಿಸಿದರು.

ಸ್ಥಳದಲ್ಲೇ ಚಿತ್ರರಚನೆಯ ಈ ಕಾರ್ಯಾಗಾರದಲ್ಲಿ ಇಪ್ಪತ್ತೈದು ವರ್ಣಚಿತ್ರಗಳು ರಚನೆಗೊಂಡವು. ಇಲ್ಲಿನ ವಿಶೇಷವೆಂದರೆ, ಕಲಾವಿದರು ಕ್ಯಾನ್ವಾಸ್ ಮೇಲೆ ಚಿತ್ರ ಬರೆಯುವುದನ್ನು ವಿದ್ಯಾರ್ಥಿಗಳು, ಯುವಜನರು ಕುತೂಹಲದಿಂದ ನೋಡಿದರು; ಅವರಲ್ಲಿ ಕೆಲವರಿಗಾದರೂ ತಾವೂ ಏಕೆ ಚಿತ್ರ ರಚನೆ ಮಾಡಬಾರದು ಎಂಬ ಸ್ಫೂರ್ತಿ ಮೂಡಿರಲೇಬೇಕು. ಈ ಮೂಲಕ, ರಾಯಚೂರಿನ ಈ ವರ್ಷದ ಮುಂಗಾರು ಹಬ್ಬವು ಭವಿಷ್ಯದ ಕಲವಿದರನ್ನೂ ಸೃಷ್ಟಿಸುವಲ್ಲಿ ತನ್ನ ಕೊಡುಗೆ ನೀಡಿದೆ!

ಗ್ರಾಮೀಣ ಬದುಕಿನ ಬಿಂಬಗಳು

ವಿಶೇಷವೆಂದರೆ, ರಾಯಚೂರಿನ ಮುಂಗಾರು ಹಬ್ಬದ ಸಮಯದಲ್ಲ ಈ ವರ್ಷ ಕಲಾವಿದರು ರಚಿಸಿದ ಚಿತ್ರಗಳಲ್ಲಿ ಬಹುತೇಕ ಚಿತ್ರಗಳು, ಗ್ರಾಮೀಣ ಬದುಕಿನ ಬಿಂಬಗಳನ್ನು ಹಿಡಿದಿಟ್ಟಿದ್ದವು. ಉಳುಮೆಯ ಸನ್ನಿವೇಶ, ರೈತನ ದುಡಿಮೆ, ಎತ್ತುಗಳು ಇಂತಹ ದಿನನಿತ್ಯದ ಚಿತ್ರಗಳು, ಬಣ್ಣ ತಳೆದು ಕ್ಯಾನ್‌ವಾಸ್‌ನ ಚೌಕಟ್ಟಿನಲ್ಲಿ ಸೇರಿದ್ದು ವಿಶೇಷ ಎನಿಸಿದೆ.

ರಾಯಚೂರಿನಲ್ಲಿ ಸುರಿದ ಮುಂಗಾರು ಮಳೆಯ ಕಾಮನಬಿಲ್ಲಿನ ವರ್ಣಗಳನ್ನು, ಕ್ಯಾನ್ವಾಸ್ ಮೇಲೆ ಕಲಾವಿದರು ತಮ್ಮ ಸೃಜನಶೀಲತೆಯಿಂದ ಮೂಡಿಸಿದ ಪರಿ ಅನನ್ಯ, ವಿಶೇಷ.



ಧರ್ಮದಿಂದ ಬದುಕುವುದು ನಮ್ಮ ಕರ್ತವ್ಯ

ಅಂದಂದಿಗಾದನಿತು ಬುಡ ಕಟ್ಟಿ ಕಳೆ ತೆಗೆದು
ಚೆಂದಳಿರು ದಿನದಿನಮುಮೊಗೆಯೆ ನೀರೆರೆದು
ಸಂದ ಬಲದಿಂದ ಜಗದಶ್ವತ್ಥ ಸೇವೆಯಲಿ
ನಿಂದಿರುವುದಲೆ ಧರ್ಮ - ಮಂಕುತಿಮ್ಮ॥

ಈ ಜಗತ್ತು ಎನ್ನುವುದೊಂದು ಬೃಹತ್ತಾದ ಅಶ್ವತ್ಥಮರ. ಬೃಹತ್ತಾಗಿ ಬೆಳೆದರಿರುವ ಈ ಅಶ್ವತ್ಥಮರದ ಬುಡಕ್ಕೆ ನಾವುಗಳು ಅಂದಿಗಂದಿಗೆ ಬುಡಕಟ್ಟೆಯನ್ನು ಕಟ್ಟಿ, ಅದರಲ್ಲಿ ಹುಟ್ಟುವ ಬೇರೆಯ ಕಳೆಗಳನ್ನು ಕಿತ್ತೊಗೆದು, ಆ ಮರದಲ್ಲಿ ಚೆಂದಳಿರು ಮೂಡುವ ಹಾಗೆ ಪ್ರತಿದಿನವೂ ಮೊಗೆಮೊಗೆದು ನೀರು ಹಾಕಬೇಕು. ಈ ಕ್ರಿಯೆಯಿಂದ ಬಂದ ಬಲದಿಂದ ಆ ಅಶ್ವತ್ಥಮರ ಬಲು ಹುಲುಸಾಗುವಂತೆ ನೋಡಿಕೊಳ್ಳಬೇಕು. ಈ ಜಗತ್ತು ಎನ್ನುವ ಅಶ್ವತ್ಥಮರವು ಹಾಳಾಗದಂತೆ ನೋಡಿಕೊಳ್ಳುವುದೇ ನಮ್ಮ ನಿಜವಾದ ಧರ್ಮ ಎಂದು ಈ ಪದ್ಯದಲ್ಲಿ ಹೇಳಿದ್ದಾರೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಇಲ್ಲಿ ಈ ವಿಶ್ವವನ್ನು ದೊಡ್ಡ ಅಶ್ವತ್ಥಮರಕ್ಕೆ ಹೋಲಿಸಿದ್ದಾರೆ. ಈ ವಿಶ್ವವೆಂಬ ಅಶ್ವತ್ಥಮರಕ್ಕೆ ಮನುಷ್ಯರಾದ ನಾವುಗಳು ಪ್ರತಿದಿನವೂ ಸಚ್ಚಾರಿತ್ರ, ಧರ್ಮ, ನ್ಯಾಯ, ನೀತಿ, ನಿಸ್ವಾರ್ಥತನಗಳು ಇಲ್ಲದ ಬದುಕು ಹಾಗೂ ಪರಪಕಾರಗಳು, ಸಮಾಜದ ಸೇವೆಗಳೆಂಬುವ ಗುಣಗಳೇ ಬೃಹತ್ತಾದ ಈ ಜಗತ್ತು ಎನ್ನುವ ಅಶ್ವತ್ಥ ಮರಕ್ಕೆ ನಾವು ನೀರೆರೆದು ಪೋಷಿಸುವ ವಿಧಾನವಾಗಿದೆ. ನಾವು ಸತ್ಯದಿಂದ, ನೀತಿಯಾಗಿ ಬಾಳುವುದೇ ಈ ಮರದ ಬುಡಕ್ಕೆ ಬುಡಕಟ್ಟೆಯನ್ನು ನಿರ್ಮಿಸುವುದು, ಪರೋಪಕಾರಗಳು, ನಿಸ್ವಾರ್ಥ ಸೇವೆಗಳೇ ಆ ಮರ ಬೆಳೆಯಲು ನಾವು ಹಾಕುವ ನೀರು, ಸಚ್ಚಾರಿತ್ರದಿಂದ ಕೂಡಿದ ಬದುಕೇ ಆ ಮರದ ಬುಡಕ್ಕೆ ಹಾಕುವ ಗೊಬ್ಬರಗಳು.

ಹಾಗೆಯೇ ನಮ್ಮಲ್ಲಿರುವ ದುಷ್ಟತನ, ಈರ್ಷ್ಯೆ, ಸ್ವಾರ್ಥ, ಅಹಂಕಾರಗಳೆಂಬ ಕಳೆಗಳು ಬೆಳೆದಿದ್ದರೆ ಅದನ್ನು ಆ ಮರದ ಬುಡದಿಂದ ಕಿತ್ತು ಹಾಕಿ, ಈ ಜಗತ್ತು ಎನ್ನುವ ಅಶ್ವತ್ಥ ವೃಕ್ಷ ಹೊಸ ಹೊಸ ಚಿಗುರು, ತಳಿರುವಿನಿಂದ ಕೂಡಿ ಮತ್ತೆ ಮತ್ತೆ ಬೃಹತ್ತಾಗಿ ಬೆಳೆಯುವಂತೆ ನೋಡುವುದೇ ನಿಜವಾದ ಧರ್ಮವಾಗಿದೆ. ಇಂಥಹ ಪ್ರಾಮಾಣಿಕವಾದ ನಮ್ಮ ನಡೆಗಳೇ ಆ ಬೃಹತ್ ಮರವನ್ನು ಶೋಭಾಯಮಾನವಾಗಿರುವಂತೆ ಕಾಪಿಟ್ಟುಕೊಳ್ಳುವುದು. ಅದೇ ನಿಜವಾದ ಮಾನವ ಧರ್ಮವೂ ಸಹ ಆಗಿದೆ. ಅಂದರೆ ಯಾವುದೇ ವ್ಯಕ್ತಿಯು ಈ ಜಗದಲ್ಲಿ ಹುಟ್ಟು ಪಡೆದ ಮೇಲೆ ಸಂಸ್ಕಾರಯುತ ಬದುಕನ್ನು ಮಾಡಬೇಕು. ನಮ್ಮ ಕೃತ್ಯಗಳಿಂದ ಈ ಜಗತ್ತಿಗಾಗಲಿ, ವ್ಯವಸ್ಥೆಗಾಗಲಿ, ಸಮಾಜಕ್ಕಾಗಲಿ, ವ್ಯಕ್ತಿಗಾಗಲಿ ನೋವು ತರವಂತಾದಗಬಾರದು. ಅಂತಹ ಕೃತ್ಯಗಳೇ ಅಧರ್ಮವಾಗುತ್ತದೆ. ಸತ್ಯ ಹಾಗೂ ನಿಷ್ಠೆ ಇವೆರಡೂ ಇದ್ದಲ್ಲಿ ಈ ಜಗತ್ತು ಎನ್ನುವ ಬೃಹತ್ ಅಶ್ವತ್ಥ ವೃಕ್ಷ ಹುಲುಸಾಗಿ ಬೆಳೆಯುತ್ತದೆ. ಹಾಗಾಗಿ ನಮ್ಮಲ್ಲಿರುವ ಷಡ್ವರ್ಗಗಳೆಂಬ ಕಳೆಯನ್ನು ಕಿತ್ತು ಸತ್ಯ, ಧರ್ಮ ರೀತಿಯಲ್ಲಿ ನಡೆದುಕೊಳ್ಳುವುದೇ ಈ ಬೃಹತ್ ಮರವನ್ನು ಬೆಳೆಸಬೇಕಾಗಿದೆ ಎಂಬುದೇ ಈ ಪದ್ಯದ ಅರ್ಥವಾಗಿದೆ.

ಈ ಪದ್ಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಮಾನವೀಯತೆ, ಮನುಷ್ಯತ್ವವೇ ಮುಖ್ಯ ಎಂಬುದು ಕಂಡು ಬರುತ್ತದೆ. ಅದಕ್ಕೇ ಈ ಜಗದಲ್ಲಿ ಜಾನಪದಗಳೆ ಇರಲಿ, ರಾಜ್ಯಗಳೇ ಇರಲಿ, ರಾಷ್ಟ್ರಗಳೇ ಇರಲಿ, ನಾಗರಿಕತೆಯೇ ಇರಲಿ, ಧರ್ಮಗಳೇ ಇರಲಿ, ಗುರು ಸ್ಥಾನಗಳೇ ಇರಲಿ, ಅಧಿಕಾರ ಅಂತಸ್ತುಗಳೇ ಇರಲಿ, ಎಲ್ಲವೂ ಕಾಲನ ಪ್ರವಾಹದಲ್ಲಿ ಕೊಚ್ಚಿ ಹೋಗಿರುವುದನ್ನು ನಾವು ಕಂಡಿದ್ದೇವೆ. ಆದರೆ ಎಲ್ಲವೂ ಕಾಲನ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದರೂ ಸಹ ಇಂದಿಗೂ ಮನುಷ್ಯತ್ವ, ಮಾನವೀಯತೆಯು ನೆಲೆನಿಂತಿದೆ. ಹಾಗಾಗಿಯೇ ಸಂತರಾಗಲಿ, ಮಹಾಂತರಾಗಲಿ, ಪ್ರವಾದಿಗಳಾಗಲಿ, ಬುದ್ಧ, ಬಸವರಿಂದಿಡಿದು ಮಹಾನ್ ವ್ಯಕ್ತಿಗಳ ನೀತಿಗಳು, ಬೋಧನೆಗಳು ಇಂದಿಗೂ ಜಗದಲ್ಲಿ ನಿಂತಿಹವು. ಆದುದರಿಂದ ಈ ವಿಶ್ವ ಎಂಬ ಬೃಹತ್ ಅಶ್ವತ್ಥಮರಕ್ಕೆ ಮಾನವೀಯ ಮೌಲ್ಯಗಳೆಂಬ ನೀರು, ಗೊಬ್ಬರ ಹಾಕಿ, ದುರಾಲೋಚನೆಗಳೆಂಬ ಕಳೆಯನ್ನು ಕಿತ್ತು ಈ ಮರವನ್ನು ಪೋಷಿಸುವುದು ನಮ್ಮ ನಿಮ್ಮೆಲ್ಲರ ಹೊಣೆಯೂ ಆಗಿದೆ.

ಹನಿ ಮಳೆ

ಹಸಿರು ಉಸಿರು

ನಮ್ಮ ಊರಿಗೆ ಬಂದಿದೆ ಶ್ರಾವಣದ ದಿನ
ಜನ ನೀಡಿದ್ದಾರೆ ಪ್ರಕೃತಿಗೆ ಬಾಗಿನ
ಹೊಲ ಗದ್ದೆಗಳಲ್ಲಿ ತುಂಬಿದೆ ಹಸಿರು
ಇಡೀ ವರ್ಷಕ್ಕೆ ಅದೇ ತುಂಬಿದ ಉಸಿರು!

• ಎಂ.ವಿಶ್ವಾಸ್

ನಮ್ಮ ಹಳ್ಳಿಯಲ್ಲಿ ಶ್ರಾವಣ

• ಎಂ ಪರಮೇಶ್ವರ ಮದ್ದಿಹಳ್ಳಿ

ಶ್ರಾವಣ ಮಾಸ ಬಂತೆಂದರೆ ನಮ್ಮ ಹಳ್ಳಿಗಳಲ್ಲಿ ಸಂಭ್ರಮವೋ ಸಂಭ್ರಮ. ಮಳೆ ಆಗಾಗ ಎಂದು ಸುರಿಯುತ್ತಿರುತ್ತದೆ. ಪ್ರಕೃತಿಯಲ್ಲಿ ಗಿಡ ಬಳ್ಳಿ, ಹಸುರಿನ ಹೊದಿಕೆ ಹೊದ್ದಿರುತ್ತದೆ. ಮಳೆ ಸುರಿದು ಇಳೆ ಸಂತೃಪ್ತವಾಗಿರುವ ಈ ದಿನಗಳಲ್ಲಿ, ಜನರಿಗೂ ಬಹಳ ಖುಷಿ; ಹಲವು ಜನಪದ ಆಚರಣೆಗಳಿಗೂ ಶ್ರಾವಣ ಮಾಸ ಹೇಳಿ ಮಾಡಿಸಿದ್ದು.

ನಮ್ಮ ಹಳ್ಳಿಯ ಜನರು ಶ್ರಾವಣದಲ್ಲಿ ದೇವಸ್ಥಾನ, ಗುಡಿಗಳಲ್ಲಿ 'ಹರಿಸೇವೆ' ಅಂತಾ ಮಾಡುತ್ತಾರೆ. ಮನೆ ಮನೆಗೂ ಅಕ್ಕಿ, ಬೇಳೆ ಬೆಲ್ಲ ಹಾಗೂ ಬೆಳೆದ ತರಕಾರಿ ಸಂಗ್ರಹಿಸುವರು. ಕೆಲವರು ಧನ ಸಹಾಯ ಮಾಡುತ್ತಾರೆ. ಒಂದು ದಿನ ಶನಿವಾರ ಹೊಲಗಳಲ್ಲಿ ಇರುವ ದೇವರ ಗುಡಿಗಳಲ್ಲಿ ಪೂಜೆ ಹಾಡು ಭಜನೆ ನೃತ್ಯ ಮಾಡಿ ಪಾಯಸ, ಅನ್ನ ಸಾರು ಮಾಡಿ ದೇವರಿಗೆ ನೈವೇದ್ಯ ಮಾಡಿ ಪ್ರಸಾದ ಸ್ವೀಕರಿಸಿ ಬರುವುದು. ಕೆಲವು ಮನೆಗಳಲ್ಲಿ ಯಕ್ಷಗಾನ



ಧಾಟಿಯಲ್ಲಿ ಶನಿದೇವರ ಕಥೆ ಹಾಡುವುದುಂಟು. ತಿಂಗಳು ಪೂರ್ತಿ ಕೆಲವು ಮನೆಗಳವರು, ಕಥೆ ಓದುವವರನ್ನು ಕರೆದುಕೊಂಡು ಬಂದು ಓದುತ್ತಾರೆ. ಶನಿ ದೇವರ ಗುಡಿಗಳಿಗೆ ಹೋಗುವುದು, ಊರ ದೇವತೆ ಮುತ್ತುರಾಯ ಸ್ವಾಮಿ ಹೊರಡಿಸಿ ಜಲಧಿಗೆ ಹೋಗಿ ಬರುವುದು. ಜಲಧಿ ಎಂದರೆ ಒಂದು ಚಿಕ್ಕ ಭಾವಿಯ ರೀತಿ ಗುಂಡಿ ತೆಗೆಯುವುದು; ಅಲ್ಲಿ ನೀರು ಬರುತ್ತದೆ. ಆ ನೀರಿನ ಸ್ಥಳದಲ್ಲಿ ಉತ್ಸವ ಮೂರ್ತಿಯನ್ನು ಇಟ್ಟು ಪೂಜಿಸಿ, ಕುರುಹು ಎಂದು ಕುರಿಗಳನ್ನು ಆ ದೇವರ ಮೂರ್ತಿ ಸುತ್ತ ತಿರುಗಿಸುತ್ತಾರೆ. ಅದು ಆ ದೇವತೆಯ ಕೃಪೆ ಆ ಮೂಕ ಮೃಗಗಳ ಮೇಲೆ ಇರಲಿ ಎಂಬ ಭಾವ.

ದೇವರನ್ನು ಹೊತ್ತುಕೊಂಡು ಊರಲ್ಲಿ ಹೋಗುವಾಗ ಯಾರಾದರೂ ಸಂಕಲ್ಪ ಇದ್ದರೇ ಮನಸ್ಸಿನಲ್ಲಿ ಆ ಸ್ಥಳ ಅಥವಾ ಅವರಿಗೆ ಒಳ್ಳೆಯದು ಏಳ್ಗೆ ಬೇಕೆಂದರೆ ಸಂಕಲ್ಪಿಸಿಕೊಳ್ಳುತ್ತಾರೆ. ಆ ದೇವರು, ಪಾಲಿಕೆ ಹೊತ್ತವರನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗುತ್ತದೆ ಎನ್ನುವ ಪ್ರತೀತಿ ಉಂಟು. ನಂತರ ಊರಿನ ಮಂದಿಗೆ ಪ್ರಸಾದ ವಿನಿಯೋಗ.

ನಮ್ಮ ಹಳ್ಳಿಯ ಜನರು ವರ್ಷ ಪೂರ್ತಿ ಶ್ರಾವಣ ಮಾಸಕ್ಕೆ ಜಾತಕ ಪಕ್ಷಿಯಂತೆ ಕಾದುಕೊಂಡಿರುತ್ತಾರೆ. ಈ ಮಾಸದಲ್ಲಿ ಪ್ರಕೃತಿಯೂ ಹಸಿರಾಗಿರುತ್ತದೆ, ಜನರ ಮನಸ್ಸೂ ತಂಪಾಗಿರುತ್ತದೆ!

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ದೊಡ್ಡದಾದ ಆರ್ಭಟ (3)
3. ಬೇಟೆಗಾರ(3)
5. ಬಂಗಾರ ಅಥವಾ ಬೆಳ್ಳಿಯ ನಡುಪಟ್ಟಿ (3)
6. ಮಾಲೆಯ ಮಾಡುವ ಇದೆ ಸಲುಗೆ (3)
7. ಸಮರಕ್ಕೆ ಇನ್ನೊಂದು ಹೆಸರಿದು (3)
10. ತೊಂದರೆ ಅಥವಾ ಉಪಟಳ (2)
11. ಮೌನವು ಕೊನೆಗೆ ದೀರ್ಘವಾಗಿದೆ (3)
12. ಒಂದು ಬಗೆಯ ಚರ್ಮವಾದ್ಯ (3)
13. ಮೇಲಕ್ಕೆ ಹತ್ತು ಎನ್ನಿ (2)
16. ಕಚೇರಿಯಲ್ಲಿರುವ ಕಾಗದ ಪತ್ರಗಳ ಕಟ್ಟು (3)
18. ಪೂರ್ವಕ್ಕೆ ಮುಖ ಮಾಡಿ ನಿಂತಾಗ ಬಲಕ್ಕಿರುವ ದಿಕ್ಕು (3)
19. ಹೂವಿನ ಧೂಳಿ (3)
20. ಕಾರಿನಲ್ಲಿ ಹೋಗಿ ಮಾಡಿದ ಬೇಟೆ (3)
21. ಜನ ಮಾಡಿದ ಜೋಪಾನ (3)

ಮೇಲಿಂದ ಕೆಳಕ್ಕೆ

1. ಅಣ್ಣಯ್ಯ ಮಾಡಿದ ಅಪಹಾಸ್ಯ (3)
2. ರುಚಿ ತಿಳಿಸಲು ಬೇಕಲ್ಲ ನಾಲಗೆ (3)
3. ಸೂರ್ಯನ ರಶ್ಮಿ (3)
4. ಮೋಸ, ವಂಚನೆಗೆ ಮತ್ತೊಂದು ಹೆಸರು (4)
5. ನೀರು ಜಿನುಗುವಿಕೆ (3)
8. ಸೇನಾನಿಗೆ ಮತ್ತೊಂದು ಹೆಸರು (4)
9. ಚಳಿಯಾದಾಗ ನಡುಗಿದ್ದು ದ್ವಿರುಕ್ತಿಯಲ್ಲಿ ಬಂದಿದೆ (4)
10. ಮೋಟಾರು ವಾಹನ (2)
11. ಜಲಕ್ಕೆ ಸುಲಭವಾದ ಪದ (2)
13. ಹನ್ನೊಂದನೇ ದಿನ ಉಪವಾಸ (4)
14. ಬಳಿಗೆ ಬಂದ ಗುಂಪು (3)
15. ಮಾರಿಯ ನಡುವೆ ಬಂದಿದೆ ನಮೂನೆ (3)
16. ಧಾನ್ಯ ಸಂಗ್ರಹಿಸುವ ಸ್ಥಳ (3)
17. ಸೂರ್ಯನಂತಿರುವ ಕಾಯುವಿಕೆ (3)

ಕ್ಷಮಿಸುವುದು ಕೂಡ ಸಿಟ್ಟಿನ ಲಕ್ಷಣವೇಎಂದ ಬುದ್ಧ

ಒಂದು ದಿನ ಬುದ್ಧ ತನ್ನ ಶಿಷ್ಯರ ಜೊತೆ ಕುಳಿತಿದ್ದಾಗ, ಸಿಟ್ಟಿನಿಂದ ಆಗಮಿಸಿದ ಒಬ್ಬ ಮನುಷ್ಯ ಬುದ್ಧನ ಮೇಲೆ ಉಗುಳಿ ಬಿಟ್ಟ. ಬುದ್ಧನ ಶಿಷ್ಯರು ಕೆಂಡಾಮಂಡಲರಾದರು, ಪ್ರಧಾನ ಶಿಷ್ಯ ಆನಂದನ ಸಿಟ್ಟು ನೆತ್ತಿಗೇರಿತು, ''ಗುರುವೇ ಆಜ್ಞೆ ಮಾಡು, ನಾನು ಈ ಮನುಷ್ಯನಿಗೆ ಬುದ್ಧಿ ಕಲಿಸುತ್ತೇನೆ'' ಆನಂದ ಬುದ್ಧ ಗುರುವನ್ನು ಬೇಡಿಕೊಂಡ.

ಆದರೆ ಬುದ್ಧ ಶಾಂತ ಚಿತ್ತದಿಂದ ತನ್ನ ಮುಖ ಒರೆಸಿಕೊಳ್ಳುತ್ತ ಮಾತನಾಡಿದ, ''ಮಹಾಶಯ, ನಾನು ಇನ್ನೂ ಕೋಪವನ್ನು ಕಳೆದುಕೊಂಡಿದ್ದೇನೋ ಇಲ್ಲವೋ ಎನ್ನುವುದನ್ನ ಪರೀಕ್ಷೆ ಮಾಡಿಕೊಳ್ಳಲಿಕ್ಕೆ ಸಂದರ್ಭವೊಂದನ್ನು ಸೃಷ್ಟಿಸಿದ್ದಕ್ಕೆ ನಿಮಗೆ ಧನ್ಯವಾದ. ನಿಮ್ಮ ವರ್ತನೆ ನನ್ನಲ್ಲಿ ಸಿಟ್ಟು ಮೂಡಿಸಲಿಲ್ಲ, ನನಗೆ ಖುಷಿಯಾಗುತ್ತಿದೆ. ಇಂಥದೇ ಒಂದು ಸಂದರ್ಭವನ್ನ ನೀವು ಆನಂದನಿಗೂ ಲಭ್ಯ ಮಾಡಿದಿರಿ, ಆನಂದ ಇನ್ನೂ ಸಾಧನೆ ಮಾಡಬೇಕು ಎನ್ನುವ ಸಂದೇಶ ಬಹುಶಃ ಈಗ ಅವನಿಗೆ ತಲುಪಿರಬೇಕು. ಹಾಗಾಗಿ ನಮ್ಮಿಬ್ಬರ ಪರವಾಗಿ ಧನ್ಯವಾದಗಳನ್ನು ಸ್ವೀಕರಿಸಿ. ನಿಮಗೆ ಮತ್ತೆ ಯಾವಾಗಲಾದರೂ ಇನ್ನೊಬ್ಬರ ಮೇಲೆ ಉಗುಳುವ ಮನಸ್ಸಾದರೆ, ನಮ್ಮ ಆಶ್ರಮದ ಬಾಗಿಲು ನಿಮಗಾಗಿ ಸದಾ ತೆರೆದಿರುತ್ತವೆ''.

ಬುದ್ಧನ ಮಾತುಗಳಿಂದ ಆ ವ್ಯಕ್ತಿಗೆ ದಿಗ್ಭ್ರಮೆಯಾಯಿತು. ತನ್ನ ವರ್ತನೆಯಿಂದ ಬುದ್ಧ ಕೆರಳಬಹುದು ಎಂದು ನಿರೀಕ್ಷಿಸಿದವನಿಗೆ ಬುದ್ಧನ ಮಾತುಗಳನ್ನ ಕೇಳಿ ತನ್ನ ಕಿವಿಯನ್ನೇ ನಂಬಲಾಗಲಿಲ್ಲ, ಆ ಇಡೀ ರಾತ್ರಿ ಅವನಿಗೆ ನಿದ್ದೆ ಬರಲಿಲ್ಲ, ಹಾಸಿಗೆಯಲ್ಲಿ ಮಗ್ಗಲು ಬದಲಿಸುತ್ತಲೇ ಇದ್ದ. ಬುದ್ಧನ ಶಾಂತ ಮುಖ, ಅಂತಃಕರಣ ತುಂಬಿದ ಕಣ್ಣುಗಳು ಮತ್ತೆ ಮತ್ತೆ ಅವನ ಕಣ್ಣ ಮುಂದೆ ಬರತೊಡಗಿದವು. ಬುದ್ಧ ಆ ವ್ಯಕ್ತಿಗೆ ಧನ್ಯವಾದ ಹೇಳಿದಾಗ, ಅದು ಕೇವಲ ಶಿಷ್ಟಾಚಾರವಾಗಿರಲಿಲ್ಲ, ಕೇವಲ ತನ್ನ ಸಿಟ್ಟನ್ನ ತೋರಿಸಿಕೊಳ್ಳದಿರುವ ತಂತ್ರವಾಗಿರಲ್ಲ, ಬುದ್ಧ ತನ್ನ ಸಮಗ್ರವನ್ನು ಒಂದಾಗಿಸಿಕೊಂಡು ತನ್ನ ಮನಸ್ಪೂರ್ತಿಯಿಂದ ಧನ್ಯವಾದ ಹೇಳಿದ್ದ,

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಇದರಲ್ಲಿ ಯಾವ ತೋರಿಕೆಯೂ ಇರಲಿಲ್ಲ. ಆ ವ್ಯಕ್ತಿಗೆ ತನ್ನ ಮೇಲೆಯೇ ಅಸಹ್ಯವಾಗತೊಡಗಿತು, ಬುದ್ಧನಂಥ ಮನುಷ್ಯನ ಮೇಲೆ ಉಗುಳಿದ ತನ್ನ ವರ್ತನೆಗಾಗಿ ಆತ ತನ್ನನ್ನು ತಾನು ಕ್ಷಮಿಸಿಕೊಳ್ಳಲಾರದೇ ಹೋದ.

ಮರುದಿನ ಮುಂಜಾನೆ ಆ ವ್ಯಕ್ತಿ ಬುದ್ಧನ ಬಳಿ ಹೋಗಿ, ಅವನ ಪಾದಗಳ ಮುಂದೆ ಅಡ್ಡ ಬಿದ್ದ, ''ಕ್ಷಮಿಸು ಗುರುವೇ ನನ್ನಿಂದ ಮಹಾ ಅಪರಾಧವಾಗಿದೆ'' ಬುದ್ಧನನ್ನು ಬೇಡಿಕೊಂಡ.

''ಆಗಿ ಹೋದದ್ದನ್ನ ಮರೆತುಬಿಡು, ಕ್ಷಮೆ ಕೇಳುವ ಅವಶ್ಯಕತೆ ಏನಿಲ್ಲ'' ಬುದ್ಧ ಆ ವ್ಯಕ್ತಿಯನ್ನು ಎಬ್ಬಿಸಿ ಮಾತನಾಡಿಸಿದ.

ಬುದ್ಧ ಗಂಗಾನದಿಯ ದಂಡೆಯ ಮೇಲೆ ಕುಳಿತಿದ್ದ. ತನ್ನ ಮುಂದೆ ಇನ್ನೂ ದೀನನಾಗಿ ನಿಂತಿದ್ದ ಆ ಮನುಷ್ಯನನ್ನು ಕುರಿತು ಮಾತು ಮುಂದುವರೆಸಿದ, ''ಆ ನದಿಯನ್ನ ನೋಡು, ಪ್ರತಿ ಕ್ಷಣ ಎಷ್ಟೊಂದು ನೀರು ಹರಿದು ಹೋಗುತ್ತಿದೆ. ಆ ಘಟನೆ ನಡೆದು ಇಪ್ಪತ್ನಾಲ್ಕು ಗಂಟೆಯಾಗಿ ಹೋಯ್ತು, ಯಾವ ಭಾವ ಆ ಸಮಯದಲ್ಲಿ ನಿನ್ನಲ್ಲಿ ಇತ್ತೋ ಅದನ್ನು ಇನ್ನೂ ಯಾಕೆ ಹೊತ್ತುಕೊಂಡಿರುವೆ, ಮರೆತುಬಿಡು ಆಗಿ ಹೋದದ್ದನ್ನ''.

ಬುದ್ಧ ತನ್ನ ಮಾತು ಮುಂದುವರೆಸಿದ, ''ನನಗೆ ನಿನ್ನ ಮೇಲೆ ನಿಜವಾಗಿಯೂ ಸಿಟ್ಟು ಬಂದಿರಲಿಲ್ಲ ಹಾಗಾಗಿ ನಾನು ನಿನ್ನ ಕ್ಷಮಿಸುವುದು ಹೇಗೆ? ಕ್ಷಮಿಸುವುದು ಕೂಡ ಒಂದು ಬಗೆಯ ಸೊಕ್ಕು ಅದನ್ನು ಸಿಟ್ಟು ಬಂದವ ಮಾತ್ರ ಮಾಡಬಲ್ಲ. ನಿನಗೆ ನಿಜವಾಗಿಯೂ ಕ್ಷಮೆ ಬೇಕನಿಸಿದರೆ, ಆನಂದನ ಕ್ಷಮೆ ಕೇಳು, ಅವನಿಗೆ ನಿನ್ನನ್ನು ಕ್ಷಮಿಸುವುದು ಸಾಧ್ಯವಾಗಬಹುದು''.

ನಿಜವೇ ಅಲ್ಲವೇ? ನಾವು ಯಾರಿಗಾದರೂ ಸಹಾಯ ಮಾಡಿದ್ದೀವಿ ಎಂದು ಹೇಳಿಕೊಳ್ಳುವುದು, ಕ್ಷಮಿಸಿದ್ದೀವಿ ಎಂದು ಸಮಾಧಾನ ಮಾಡುವುದು ಎಲ್ಲವೂ ನಾವು ಮಾಡಿದ ಕೆಲಸವನ್ನ ಮತ್ತೆ ಎತ್ತಿ ಹಿಡಿಯುವಂತಹವು. ಇಂತಹ ಕ್ರಿಯೆಗಳಿಂದ ಮಾಡಿದ ಕೆಲಸದ ಮಹತ್ವ ಕೂಡ ಕಳೆದುಹೋಗುತ್ತದೆ. ಬದುಕನ್ನು ಅರ್ಥ ಮಾಡಿಕೊಂಡು ಮಾಗಿದಷ್ಟೂ ಹೆಚ್ಚು ಜಾಗ್ರತರಾಗುತ್ತಾ ಹೋಗುತ್ತೇವೆ. ಇಂತಹ ಅಂತರ್‌ಪ್ರಜ್ಞೆ ನಮ್ಮೆಲ್ಲರಲ್ಲೂ ಜಾಗ್ರತವಾಗಲಿ.

ಸಾಂಬಾರಿನಲ್ಲಿ ಬೆಲ್ಲ?

ತಿಂಡಿ ತಿನಿಸಿಗಾಗಿ, ಬೆಂಗಳೂರು ನಗರದ ದರ್ಶಿನಿಗೆ ಹೋಗಿ, ಇಡ್ಲಿ ಸಾಂಬಾರು ಪಡೆಯಿರಿ; ಡಿಪ್ ಆದರೂ ಅಷ್ಟೆ, ಸೆಪರೇಟ್ ಆದರೂ ಅಷ್ಟೆ, ಹೆಚ್ಚಿನ ದರ್ಶಿನಿಗಳಲ್ಲಿ, ಸಾಂಬಾರಿಗೆ ಬೆಲ್ಲ ಹಾಕಿರುತ್ತಾರೆ! ಗಮನಿಸಿ ನೋಡಿ, ಸಾಂಬಾರು ಸಿಹಿ ಸಿಹಿ ರುಚಿಯನ್ನು ಹೊಂದಿರುತ್ತದೆ. ಸಾಂಬಾರಿಗೆ ಯಾಕೆ ಬೆಲ್ಲ ಎಂದು ವಿಚಾರಿಸಿದರೆ, ರುಚಿ ಹೆಚ್ಚಿಸಲು ಹಾಕಲಾಗಿದೆ ಎಂಬ ಉತ್ತರ ದೊರಕೀತು! ಜತೆಗೆ, ಗ್ರಾಹಕರು ಅದನ್ನು ಇಷ್ಟಪಡುತ್ತಾರೆ, ಕೆಲವರು ಕೇಳುತ್ತಾರೆ ಎಂಬ ಸಮರ್ಥನೆಯೂ ದೊರೆತೀತು! ಇನ್ನೂ ಒಂದು ಒಳಗುಟ್ಟಿದೆ: ಅದೇನೆಂದರೆ, ಉಡುಪಿ ಶೈಲಿಯಲ್ಲಿ ತಯಾರಿಸಿದ ಸಾಂಬಾರಿಗೆ ಬೆಲ್ಲ ಬೇಕೇ ಬೇಕು ಎಂಬ ತಿಳಿವಳಿಕೆ ಎಲ್ಲೆಡೆ ಸೇರಿಹೋಗಿದೆ. ಸಾಂಬಾರು ಮಾತ್ರವಲ್ಲ, ರಸಂ ಅಥವಾ ತಿಳಿಸಾರಿಗೂ ಬೆಲ್ಲ ಸೇರಿಸುವುದುಂಟು; ಏಕೆ ಎಂದರೆ, ಅದೇ ಉತ್ತರ : ರುಚಿಗಾಗಿ! ಆದ್ದರಿಂದ, ಹೆಚ್ಚಿನ ದರ್ಶಿನಿ ಶೈಲಿಯ ರೆಸ್ಟಾರೆಂಟುಗಳಲ್ಲಿ ಸಾಂಬಾರು ಸೇವಿಸುವಾಗ, ಸ್ವಲ್ಪ ಸ್ವಲ್ಪವೇ ಬೆಲ್ಲವೂ ನಿಮ್ಮ ದೇಹದೊಳಗೆ ಸೇರಬಹುದು!

ಇದರಿಂದ ಏನು ತೊಂದರೆ, ರುಚಿ ಇದೆಯಲ್ಲ ಎನ್ನಬಹುದು. ಜನಸಾಮಾನ್ಯರಿಗೆ ತೊಂದರೆ ಇರಲಿಕ್ಕಿಲ್ಲ, ಆದರೆ ಮಧುಮೇಹ ಅಥವಾ ಸಕ್ಕರೆ ಕಾಯಿಲೆ (ಡಯಾಬಿಟಿಸ್) ಇದ್ದವರಿಗೆ ಇದರಿಂದ ಹಾನಿ ಆಗಬಹುದು. ಇಡ್ಲಿಯು ಉತ್ತಮ ಉಪಾಹಾರ ಎಂದು ಚಪ್ಪರಿಸಿ ತಿಂದಾಗ, ಮಧುಮೇಹ ಇರುವವರು ತಮಗೆ ಗೊತ್ತಿಲ್ಲದಂತೆ ಸ್ವಲ್ಪ ಬೆಲ್ಲವನ್ನು, ಸಾಂಬಾರಿನ ಜತೆ ಸೇವಿಸುತ್ತಿದ್ದಾರೆ! ಸಕ್ಕರೆ ಕಾಯಿಲೆ ಇದ್ದವರು ಸಕ್ಕರೆ ಅಥವಾ ಬೆಲ್ಲವನ್ನು ಸೇವಿಸದೇ ಇರುವಂತೆ ವೈದ್ಯರು ಶಿಫಾರಸು ಮಾಡುವುದು ಸಹಜ; ಮೇಲ್ಕಂಡಂತೆ ಸಾಂಬಾರು ಸೇವಿಸಿದವರು, ಸ್ವಲ್ಪಸ್ವಲ್ಪವೇ ತಮ್ಮ ಆರೋಗ್ಯಕ್ಕೆ ಹಾನಿ ಉಂಟುಮಾಡಿಕೊಳ್ಳುವ ಸಾಧ್ಯತೆ ಇದೆ.

ಹಾಗಿದ್ದಲ್ಲಿ, ಕೆಲವರಿಗೆ ಬೆಲ್ಲ, ಸಕ್ಕರೆ ವ್ಯರ್ಜ್ಯ ಎನಿಸಿದ್ದಾಗ, (ಮಧುಮೇಹ ಇದ್ದವರಿಗೆ ಅಥವಾ ವೈದ್ಯರ ಶಿಫಾರಸು ಪಡೆದವರಿಗೆ) ಇಡ್ಲಿ ಸಾಂಬಾರು ಸೇವಿಸುವಾಗ ಏನು ಮಾಡಬೇಕು? ಉತ್ತರ ಸರಳ: ಅಂತಹವರು ಮಾತ್ರ ದರ್ಶಿನಿಯ ಸಾಂಬಾರನ್ನು ಸೇವಿಸಬೇಡಿ!

• ಅಜಯ್

ಸಮಾಚಾರ ಸಣ್ಣದಲ್ಲ

ತನ್ವಿ, ವೆನ್ನಲ ಮುನ್ನಡೆ

ಸೋಲೊ (ಇಂಡೋನೇಷ್ಯಾ): ಭಾರತದ ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮಾ ಅವರು ಏಷ್ಯಾ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್ ಪಂದ್ಯದ ಮೂರನೇ ಸುತ್ತಿಗೆ ಮುನ್ನಡೆದರು. ಎರಡನೇ ಶ್ರೇಯಾಂಕದ ತನ್ವಿ ಬುಧವಾರ ಎರಡನೇ ಸುತ್ತಿನಲ್ಲಿ 21-6, 21-6 ರಿಂದ ಯುಎಇಯ ವೈದೇಹಿ ಕಾಳಿದಾಸನ್ ಅವರನ್ನು ಸೋಲಿಸಿದರು. 16 ವರ್ಷ ವಯಸ್ಸಿನ ತನ್ವಿ ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದರು. ವೆನ್ನಲ ಕಲಗೊಟ್ಲ ಮತ್ತು ತನ್ವಿ ರೆಡ್ಡಿ ಅಂದ್ಲೂರಿ ಸಹ ಮೂರನೇ ಸುತ್ತಿಗೆ ಮುನ್ನಡೆದರು. ಕಲಗೊಟ್ಲ 21-6, 21-10ರಿಂದ ಕಜಕಸ್ತಾನದ ಅಲಿಸಾ ಕುಲಶೋವಾ ಅವರನ್ನು, ಅಂದ್ಲೂರಿ 21-9, 21-10ರಿಂದ ಮಕಾವುವಿನ ಉಂಗ್ ಚಿಯೊಕ್ ಇಯಾನ್ ಅವರನ್ನು ಮಣಿಸಿದರು. ಪುರುಷರ ಸಿಂಗಲ್ಸ್‌ನಲ್ಲಿ ಅನ್ಸ್ ನೇಗಿ ಮತ್ತು ಪ್ರಣವ್ ರಾಮ್ ನಾಗಲಿಂಗ್ ಸಹ ನೇರ ಸೆಟ್‌ಗಳ ಗೆಲುವಿನೊಡನೆ ಮೂರನೇ ಸುತ್ತಿಗೆ ತಲುಪಿದರು. ನೇಗಿ 21-16, 21-15ರಿಂದ ಸಿಂಗಪುರದ ಡಿಂಗ್ ಹಾನ್ ಜಿನ್ ಅವರನ್ನು, ಪ್ರಣವ್ 21-15. 21-7 ರಿಂದ ಮ್ಯಾನ್ಮಾರ್‌ನ ಲಾಲ್ ಝುಯಿಡಿಕ ಅವರನ್ನೂ ಹಿಮ್ಮೆಟ್ಟಿಸಿದರು. ಭಾರತದ ಇಬ್ಬರಿಗೂ ಮೊದಲ ಸುತ್ತಿನಲ್ಲಿ ಬೈ ದೊರಕಿತ್ತು.

ವಿರಾಮ
ಪ್ರತಿ ಭಾನುವಾರ

ಇಂಗ್ಲೆಂಡ್-ಟೀಮ್ ಇಂಡಿಯಾ 4ನೇ ಟೆಸ್ಟ್ | ಜೈಸ್ವಾಲ್, ಸಾಯಿ ಸುದರ್ಶನ್ ಅರ್ಧ ಶತಕ

ಭಾರತ ಗೌರವಾರ್ಹ ಮೊತ್ತ

ಮ್ಯಾಂಚೆಸ್ಟರ್: ಇಲ್ಲಿನ ಓಲ್ಡ್‌ಟ್ರಾಫರ್ಡ್‌ನಲ್ಲಿ ಬುಧವಾರ ಆರಂಭಗೊಂಡ ಭಾರತ-ಇಂಗ್ಲೆಂಡ್ ನಡುವಿನ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾ ಮೊದಲ ದಿನ ಉತ್ತಮ ಆರಂಭವನ್ನು ಪಡೆಯಿತು. ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಮತ್ತು ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಸಾಯಿ ಸುದರ್ಶನ್ ಅವರ ಅರ್ಧ ಶತಕಗಳ ನೆರವಿನಿಂದ ಮೊದಲ ದಿನದ ಅಂತ್ಯಕ್ಕೆ ಭಾರತ ತಂಡವು 4 ವಿಕೆಟ್ ನಷ್ಟಕ್ಕೆ 264 ರನ್ ಗಳಿಸಿದೆ.

ಟೀಮ್ ಇಂಡಿಯಾ ಪರವಾಗಿ ರವೀಂದ್ರ ಜಡೇಜಾ ಹಾಗೂ ಶಾರ್ದೂಲ್ ಠಾಕೂರ್ ತಲಾ 19 ರನ್ ಗಳಿಸಿ ಅಜೇಯರಾಗಿ ಕ್ರೀಸ್‌ನಲ್ಲುಳಿದರು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಆರಂಭಿಸಿದ ಟೀಮ್ ಇಂಡಿಯಾಕ್ಕೆ ಉತ್ತಮ ಆರಂಭ ದೊರೆಯಿತು. ಆರಂಭಿಕ ಆಟಗಾರರಾದ ಯಶಸ್ವಿ ಜೈಸ್ವಾಲ್ ಮತ್ತು ಕೆ.ಎಲ್ ರಾಹುಲ್ ಮೊದಲ ವಿಕೆಟ್‌ಗೆ 94 ರನ್ ಕಲೆ ಹಾಕಿದರು. ರಾಹುಲ್ 4 ಬೌಂಡರಿಗಳ ನೆರವಿನಿಂದ 98 ಬಾಲ್‌ಗಳನ್ನು ಎದುರಿಸಿ 46 ರನ್ ಗಳಿಸಿ ಔಟ್ ಆಗುವ ಮೂಲಕ ಅರ್ಧ ಶತಕದಿಂದ ವಂಚಿತರಾದರು.

ರಾಹುಲ್ ಔಟಾದ ನಂತರವೂ ಉತ್ತಮ ಆಟ ಮುಂದುವರೆಸಿದ ಯಶಸ್ವಿ ಜೈಸ್ವಾಲ್, ಸಾಯಿ ಸುದರ್ಶನ್ ಜತೆ ಇನ್ನಿಂಗ್ಸ್ ಮುಂದುವರಿಸಿದರು. ತಾಳ್ಮೆಯ ಇನ್ನಿಂಗ್ಸ್ ಕಟ್ಟಿದ ಜೈಸ್ವಾಲ್ 107 ಎಸೆತಗಳಲ್ಲಿ 10 ಬೌಂಡರಿ ಹಾಗೂ 1 ಸಿಕ್ಸರ್ ಸಹಿತ 58 ರನ್ ಗಳಿಸಿದ್ದಾಗ ಔಟ್ ಆದರು. ಆಗ ಭಾರತದ ಮೊತ್ತ 2 ವಿಕೆಟ್ ನಷ್ಟಕ್ಕೆ 120 ರನ್ ಆಗಿತ್ತು.

ಆ ಬಳಿಕ ಕ್ರೀಸ್‌ಗೆ ಬಂದ ನಾಯಕ ಶುಭ್‌ಮನ್ ಗಿಲ್ ಈ ಸಲವೂ ಉತ್ತಮ ಇನ್ನಿಂಗ್ಸ್ ಆಡುವಲ್ಲಿ ವಿಫಲರಾದರು. 23 ಬಾಲ್‌ಗಳನ್ನು ಎದುರಿಸಿ ಕೇವಲ 12 ರನ್ ಗಳಿಸಿದ್ದ ವೇಳೆ ತಮ್ಮ ವಿಕೆಟ್ ಒಪ್ಪಿಸಿದರು. ಆ ನಂತರ ಸಾಯಿ ಸುದರ್ಶನ್ ಮತ್ತು ರಿಶಭ್ ಪಂತ್ ಮಧ್ಯೆ ಉತ್ತಮ ಜತೆಯಾಟ ಮುಂದುವರಿಯಿತು. 48 ಬಾಲ್ ಎದುರಿಸಿ, 37 ರನ್ ಗಳಿಸಿದ್ದ ವೇಳೆ ರಿಷಭ್ ಪಂತ್ ಗಾಯಾಳುವಾಗಿ ಪೆವಿಲಿಯನ್‌ಗೆ ತೆರಳಿದರು.

ಆ ನಂತರ ಸಾಯಿ ಸುದರ್ಶನ್-ರವೀಂದ್ರ ಜಡೇಜಾ ಮಧ್ಯೆ ಜತೆಯಾಟ ನಡೆಯಿತು. ಭಾರತ ತಂಡದ ಸ್ಕೋರ್ 235 ಆಗಿದ್ದ ವೇಳೆ 151 ಬಾಲ್‌ಗಳನ್ನು ಎದುರಿಸಿ 61 ರನ್ ಗಳಿಸಿದ್ದ ಸಾಯಿ ಸುದರ್ಶನ್ ಔಟ್ ಆದರು. ಬಳಿಕ ಶಾರ್ದೂಲ್ ಠಾಕೂರ್ ಕ್ರೀಸ್‌ಗೆ ಬಂದು ರವೀಂದ್ರ ಜಡೇಜಾಗೆ ಉತ್ತಮ ಬೆಂಬಲ ನೀಡಿ ಭಾರತದ ಇನ್ನಿಂಗ್ಸ್ ಅನ್ನು ಮೊದಲ ದಿನದ ಅಂತ್ಯದ ವರೆಗೂ ಆಧರಿಸಿದರು.

ದಾಖಲೆ ಬರೆದ ಯಶಸ್ವಿ ಜೈಸ್ವಾಲ್

ಅರ್ಧಶತಕದ ಮೂಲಕ ಯಶಸ್ವಿ ಜೈಸ್ವಾಲ್ ಮ್ಯಾಂಚೆಸ್ಟರ್ ಟೆಸ್ಟ್‌ನಲ್ಲಿ ವಿಶೇಷ ದಾಖಲೆಯನ್ನು ಬರೆದಿದ್ದಾರೆ. 50 ವರ್ಷಗಳ ಬಳಿಕ ಮ್ಯಾಂಚೆಸ್ಟರ್‌ನಲ್ಲಿ 50ಕ್ಕೂ ಅಧಿಕ ರನ್ ಗಳಿಸಿದ ಭಾರತದ ಮೊದಲ ಆರಂಭಿಕ ಬ್ಯಾಟ್ಸ್‌ಮನ್ ಎಂಬ ಸಾಧನೆಗೆ ಜೈಸ್ವಾಲ್ ಭಾಜನರಾಗಿದ್ದಾರೆ. 1974ರಲ್ಲಿ ಇಂಗ್ಲೆಂಡ್ ವಿರುದ್ಧ ಕೊನೇ ಬಾರಿ ಮ್ಯಾಂಚೆಸ್ಟರ್‌ನಲ್ಲಿ ಬ್ಯಾಟಿಂಗ್ ದಿಗ್ಗಜ ಸುನೀಲ್ ಗವಾಸ್ಕರ್ ಅರ್ಧಶತಕ ಬಾರಿಸಿದ್ದರು.

ವೆಸ್ಟ್ ಇಂಡೀಸ್, ಆಸ್ಟ್ರೇಲಿಯಾ ಆಟಗಾರರಿಂದ ಗೌರವ

ರಸೆಲ್‌ಗೆ ಗಾರ್ಡ್ ಆಫ್ ಆನರ್

ಕಿಂಗ್‌ಸ್ಟನ್: ಆಸ್ಟ್ರೇಲಿಯಾ ವಿರುದ್ಧದ ದ್ವಿತೀಯ ಟಿ20 ಪಂದ್ಯವನ್ನಾಡುವ ಮೂಲಕ ವೆಸ್ಟ್ ಇಂಡೀಸ್‌ನ ಆಲ್‌ರೌಂಡರ್ ಆ್ಯಂಡ್ರೆ ರಸೆಲ್ ಅವರು ಅಂತಾರಾಷ್ಟ್ರೀಯ ಕ್ರಿಕೆಟ್ ವೃತ್ತಿ ಜೀವನಕ್ಕೆ ತೆರೆ ಎಳೆದರು. ಪಂದ್ಯಕ್ಕೂ ಮುನ್ನ ವೆಸ್ಟ್ ಇಂಡೀಸ್ ಹಾಗೂ ಆಸ್ಟ್ರೇಲಿಯಾ ಆಟಗಾರರು ಅವರಿಗೆ ಗಾರ್ಡ್ ಆಫ್ ಆನರ್ ಸಲ್ಲಿಸಿದರು. ಆದರೆ ವಿಂಡೀಸ್ ಪಂದ್ಯ ಸೋತ ಕಾರಣ ರಸೆಲ್‌ಗೆ ಸೋಲಿನ ವಿದಾಯ ಸಿಕ್ಕಂತಾಯಿತು.

ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿ ಆರಂಭಕ್ಕೂ ಮುನ್ನವೇ ಆ್ಯಂಡ್ರೆ ರಸೆಲ್ ತಮ್ಮ ನಿವೃತ್ತಿ ಪ್ರಕಟಿಸಿದ್ದರು. ಅದರಂತೆ ತವರು ಮೈದಾನ ಜಮೈಕಾದ ಸಬೀನಾ ಪಾರ್ಕ್ ಕ್ರೀಡಾಂಗಣದಲ್ಲಿ ಕೊನೆಯ ಬಾರಿಗೆ ಅಂತಾರಾಷ್ಟ್ರೀಯ ಪಂದ್ಯವಾಡುವ ಮೂಲಕ ವಿದಾಯ ಹೇಳಿದ್ದಾರೆ. ಪಂದ್ಯದಲ್ಲಿ 15 ಎಸೆತಗಳಲ್ಲಿ 36 ರನ್ ಗಳಿಸಿ ಔಟ್ ಆದ ಬಳಿಕ ಪೆವಿಲಿಯನ್‌ಗೆ ಹಿಂತಿರುಗುತ್ತಿದ್ದ ವೇಳೆಯಲ್ಲಿ ಕ್ರೀಡಾಂಗಣದಲ್ಲಿದ್ದ ಪ್ರೇಕ್ಷಕರು ಎದ್ದು ನಿಂತು ಚಪ್ಪಾಳೆ ತಟ್ಟುವ ಮೂಲಕ ತವರಿನ ಆಟಗಾರನಿಗೆ ಗೌರವ ಸಲ್ಲಿಸಿದರು.

ಆ್ಯಂಡ್ರೆ ರಸೆಲ್ ಅವರು 2012 ಹಾಗೂ 2016ರಲ್ಲಿ ಟಿ20 ವಿಶ್ವಕಪ್ ಗೆದ್ದ ವೆಸ್ಟ್ ಇಂಡೀಸ್ ತಂಡದ ಸದಸ್ಯರಾಗಿದ್ದರು. 2019ರಿಂದ ವೆಸ್ಟ್ ಇಂಡೀಸ್ ಪರ ಟಿ20 ಕ್ರಿಕೆಟ್‌ನಲ್ಲಿ ಮಾತ್ರ ರಸೆಲ್ ಆಡುತ್ತಿದ್ದರು. ವೆಸ್ಟ್ ಇಂಡೀಸ್ ಪರ 86 ಟಿ20 ಪಂದ್ಯ ಆಡಿರುವ ರಸೆಲ್ 1122 ರನ್ ಗಳಿಸಿದ್ದಾರೆ, 71 ರನ್ ಅವರ ವೈಯುಕ್ತಿಕ ಅತ್ಯಧಿಕ ಸ್ಕೋರ್.

ವೇಗದ ಬೌಲರ್ ಆಗಿರುವ ರಸೆಲ್ ಒಟ್ಟು 61 ವಿಕೆಟ್‌ಗಳನ್ನು ಪಡೆದಿದ್ದಾರೆ. ವೃತ್ತಿಜೀವನದಲ್ಲಿ ಒಂದೇ ಒಂದು ಟೆಸ್ಟ್ ಪಂದ್ಯವನ್ನು ಮಾತ್ರ ರಸೆಲ್ ವೆಸ್ಟ್ ಇಂಡೀಸ್ ಪರ ಆಡಿದ್ದಾರೆ. 56 ಏಕದಿನ ಪಂದ್ಯಗಳಲ್ಲಿ ವೆಸ್ಟ್ ಇಂಡೀಸ್ ಪರ ಆಡಿರುವ ರಸೆಲ್ ನಾಲ್ಕು ಅರ್ಧಶತಕಗಳನ್ನು ಸೇರಿದಂತೆ 130 ಸ್ಟ್ರೈಕ್ ರೇಟ್‌ನಲ್ಲಿ ಮತ್ತು 27.21 ಸರಾಸರಿಯಲ್ಲಿ 1,034 ರನ್ ಗಳಿಸಿದ್ದಾರೆ. 92 ರನ್‌ಗಳು ಏಕದಿನದಲ್ಲಿ ಅವರ ಅತ್ಯಧಿಕ ಸ್ಕೋರ್ ಆಗಿದ್ದು, ಏಕದಿನ ಪಂದ್ಯಗಳಲ್ಲಿ 70 ವಿಕೆಟ್‌ಗಳನ್ನು ರಸೆಲ್ ಪಡೆದಿದ್ದಾರೆ.

ವೆಸ್ಟ್ ಇಂಡೀಸ್ ಪರ ಆಡಲು ಸಾಧ್ಯವಾದದ್ದು ಹೆಮ್ಮೆಯ ಸಂಗತಿ. ಚಿಕ್ಕವನಿದ್ದಾಗ ವೆಸ್ಟ್ ಇಂಡೀಸ್ ಪರ ಆಡಬಹುದೆಂದು ಊಹಿಸಿಯೂ ಇರಲಿಲ್ಲ. ಯುವ ಆಟಗಾರರಿಗೆ ಸ್ಫೂರ್ತಿಯಾಗಿ ವೆಸ್ಟ್ ಇಂಡೀಸ್ ಜೆರ್ಸಿಯಲ್ಲಿ ನನ್ನನ್ನು ಗುರುತಿಸಿಕೊಳ್ಳಬೇಕೆಂಬುದು ನನ್ನ ಆಸೆ -ಆ್ಯಂಡ್ರೆ ರಸೆಲ್.

-ವೆಸ್ಟ್ ಇಂಡೀಸ್ ಆಟಗಾರ

ಟಿ20 ಶ್ರೇಯಾಂಕ ಪ್ರಕಟ | ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್‌ಗೆ ಅಗ್ರಸ್ಥಾನ

ಜೈಸ್ವಾಲ್: ಶ್ರೇಯಾಂಕದಲ್ಲಿ ಪ್ರಗತಿ

ದುಬೈ: ಐಸಿಸಿ ನೂತನ ಟಿ20 ಶ್ರೇಯಾಂಕ ಪ್ರಕಟಿಸಿದ್ದು, ಕಳೆದ 359ಗಳಿಂದ ಅಂತಾರಾಷ್ಟ್ರೀಯ ಟಿ20 ಪಂದ್ಯ ಆಡಿದ್ದ ಟೀಮ್ ಇಂಡಿಯಾದ ಯುವ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಒಂದು ಸ್ಥಾನದ ಪ್ರಗತಿ ಸಾಧಿಸಿ ಟಾಪ್ 10ನಲ್ಲಿ ಸ್ಥಾನ ಉಳಿಸಿಕೊಂಡಿದ್ದಾರೆ. ಜೈಸ್ವಾಲ್ ಮಾತ್ರ ವಲ್ಲದೆ ಋತುರಾಜ್ ಗಾಯಕ್ವಾಡ್ ಕೂಡ 2 ಸ್ಥಾನಗಳ ಜಿಗಿತ ಕಂಡಿದಾರೆ.

ಜೈಸ್ವಾಲ್ ಕೊನೆಯ ಬಾರಿಗೆ ಭಾರತ ತಂಡದ ಪರ ಟಿ20 ಆಡಿದ್ದು 2024 ಜುಲೈ 30ರಂದಾಗಿದೆ. ಅದಾದ ಬಳಿಕ ಅವರು ಟೆಸ್ಟ್ ಮತ್ತು ಏಕದಿನ ಪಂದ್ಯಗಳನ್ನು ಮಾತ್ರ ಆಡಿದ್ದರೂ, ಅವರು ಒಂದು ಸ್ಥಾನದ ಜಿಗಿತ ಕಂಡು ಸದ್ಯ 673 ರೇಟಿಂಗ್ ಅಂಕದೊಂದಿಗೆ 9ನೇ ಸ್ಥಾನ ಪಡೆದಿದ್ದಾರೆ. ಇನ್ನೊಂದೆಡೆ ಗಾಯಕ್ವಾಡ್ 589 ರೇಟಿಂಗ್ ಅಂಕ ಗಳಿಸಿ 25ನೇ ಸ್ಥಾನಿಯಾಗಿದಾರೆ.

ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಅಗ್ರಸ್ಥಾನ ಉಳಿಸಿಕೊಂಡಿದರೆ, ಭಾರತೀಯ ಯುವ ಎಡಗೈ ಬ್ಯಾಟರ್‌ಗಳಾದ ಅಭಿಷೇಕ್ ಶರ್ಮಾ(829) ಮತ್ತು ತಿಲಕ್ ವರ್ಮಾ(804) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಿಯಾಗಿದ್ದಾರೆ.

ಟಾಪ್-5 ಬ್ಯಾಟರ್‌ಗಳು

ಟ್ರಾವಿಸ್ ಹೆಡ್	847
ಅಭಿಷೇಕ್ ಶರ್ಮಾ	829
ತಿಲಕ್ ವರ್ಮಾ	804
ಫಿಲ್ ಸಾಲ್ಟ್	791
ಜಾಸ್ ಬಟ್ಲರ್	772

ಜಕರ್ ಆಲಿ ಅರ್ಧ ಶತಕ | ಬಾಂಗ್ಲಾದೇಶಕ್ಕೆ ಸತತ ಗೆಲುವು | 15 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿದ್ದ ಪಾಕ್

2ನೇ ಟಿ20 ಪಂದ್ಯ: ಪಾಕಿಸ್ತಾನಕ್ಕೆ ಹೀನಾಯ ಸೋಲು

ಢಾಕಾ: ಬಾಂಗ್ಲಾದೇಶದ ವಿರುದ್ಧದ 2ನೇ ಟಿ20 ಪಂದ್ಯದಲ್ಲೂ ಪಾಕಿಸ್ತಾನ ತಂಡ ಹೀನಾಯವಾಗಿ ಸೋಲನ್ನೊಪ್ಪಿದೆ, ಇಲ್ಲಿನ ಶೇರೆ ಬಾಂಗ್ಲಾ ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಪಾಕಿಸ್ತಾನದ ತಂಡದ ನಾಯಕ ಸಲ್ಮಾನ್ ಅಲಿ ಅಘಾ ಬೌಲಿಂಗ್ ಆಯ್ದುಕೊಂಡಿದ್ದರು.

ಮೊದಲು ಬ್ಯಾಟ್ ಮಾಡಿದ ಬಾಂಗ್ಲಾದೇಶ ತಂಡವು ನಿರೀಕ್ಷಿತ ಆರಂಭ ಪಡೆದಿರಲಿಲ್ಲ. ಆರಂಭಿಕರಾಗಿ ಕಣಕ್ಕಿಳಿದ ಮುಹಮ್ಮದ್ ನಯೀಮ್ (3) ಹಾಗೂ ಪರ್ವೇಝ್ ಹುಸೈನ್ (13) ಬೇಗನೆ ಔಟಾದರೆ, ನಾಯಕ ಲಿಟ್ಟನ್ ದಾಸ್ ಕೇವಲ 8 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ತೌಹಿದ್ ಹೃದೋಯ್ (0) ರನ್ ಗಳಿಸುವ ಮುನ್ನವೇ ಪೆವಿಲಿಯನ್‌ಗೆ ಹಿಂತಿರುಗಿದ್ದರು. ಇದರ ನಡುವೆ ಜಕರ್ ಅಲಿ 55 ರನ್ ಬಾರಿಸುವ ಮೂಲಕ ತಂಡಕ್ಕೆ ಆಸರೆಯಾದರು, ಈ ಅರ್ಧಶತಕದ ನೆರವಿನೊಂದಿಗೆ ಬಾಂಗ್ಲಾದೇಶ ತಂಡವು 20 ಓವರ್‌ಗಳಲ್ಲಿ 133 ರನ್ ಕಲೆ ಹಾಕಿತು.

134 ರನ್‌ಗಳ ಸುಲಭ ಗುರಿ ಬೆನ್ನತ್ತಿದ ಪಾಕಿಸ್ತಾನ ತಂಡವು ಪವರ್ ಪ್ಲೇನಲ್ಲೇ ದಿಢೀರನೆ ಕುಸಿಯಿತು. ಆರಂಭಿಕ ದಾಂಡಿ ಗರಾದ ಫಖರ್ ಝಮಾನ್ (8) ಹಾಗೂ ಸೈಮ್ ಅಯ್ಯೂಬ್ (1) ಬಂದ ವೇಗ ದಲ್ಲೇ ಹಿಂತಿರುಗಿದರೆ, ಆ ಬಳಿಕ ಮೊಹ ಮ್ಮದ್ ಹ್ಯಾರಿಸ್ (0) ಸೊನ್ನೆ ಸುತ್ತಿದರು. ಇನ್ನು ಹಸನ್ ನವಾಝ್ (0) ಹಾಗೂ ಮೊಹಮ್ಮದ್ ನವಾಝ್ (0) ಶೂನ್ಯಗ ಳೊಂದಿಗೆ ಪೆವಿಲಿಯನ್‌ಗೆ ತೆರಳಿದರು.

ಹೀಗೆ ಕೇವಲ 15 ರನ್‌ಗಳಿಗೆ 5 ವಿಕೆಟ್ ಕಳೆದುಕೊಳ್ಳುವ ಮೂಲಕ ಪಾಕಿಸ್ತಾನ ತಂಡವು ತನ್ನ ಟಿ20 ಕ್ರಿಕೆಟ್ ಇತಿಹಾಸದಲ್ಲೇ ಅತ್ಯಂತ ಕಳಪೆ ಆರಂಭ ಪಡೆದು ಕೊಂಡಿತು. ಇದಕ್ಕೂ ಮುನ್ನ 2024 ರಲ್ಲಿ ಬ್ರಿಸ್ಬೇನ್‌ನಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಪಾಕಿಸ್ತಾನ 16 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿದ್ದು ಅತ್ಯಂತ ಕೆಟ್ಟ ದಾಖಲೆಯಾಗಿತ್ತು.

ಆದರೆ ಈ ಬಾರಿ 15 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಅತ್ಯಂತ ಕೆಟ್ಟ ಆರಂಭ ಪಡೆದುಕೊಂಡಿದೆ. ಈ ಮೂಲಕ ಪಾಕ್ ಅತೀ ಕಡಿಮೆ ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಹೀನಾಯ ದಾಖಲೆ ಯೊಂದಕ್ಕೆ ಕೊರಳೊಡ್ಡಿತು. ಈ ಹೀನಾಯ ದಾಖಲೆಯೊಂದಿಗೆ ಬ್ಯಾಟಿಂಗ್ ಮುಂದುವರೆಸಿದ ಪಾಕಿಸ್ತಾನ್ 19.2 ಓವರ್‌ಗಳಲ್ಲಿ 125 ರನ್ ಗಳಿಸಿ ಆಲೌಟ್ ಆಗಿದೆ. ಈ ಮೂಲಕ ಬಾಂಗ್ಲಾದೇಶ್ ತಂಡ 8 ರನ್‌ಗಳ ರೋಚಕ ಜಯ ಸಾಧಿಸಿದೆ.

ಡಕ್‌ವರ್ತ್ ಲೂಯಿಸ್ ನಿಯಮದ ಪ್ರಕಾರ ದಕ್ಷಿಣ ಆಫ್ರಿಕಾಗೆ ಗೆಲುವು

ಇಂಡಿಯಾ ಚಾಂಪಿಯನ್ಸ್‌ಗೆ ಸೋಲು

ನಾರ್ಥಂಪ್ಟನ್: ಇಲ್ಲಿನ ಕೌಂಟಿ ಕ್ರೀಡಾಂಗಣದಲ್ಲಿ ನಡೆದ ವರ್ಲ್ಡ್ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಟೂರ್ನಿಯ 6ನೇ ಪಂದ್ಯದಲ್ಲಿ ಸೌತ್ ಆಫ್ರಿಕಾ ಚಾಂಪಿಯನ್ಸ್ ತಂಡವು ಜಯ ಸಾಧಿಸಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದ ಇಂಡಿಯಾ ಚಾಂಪಿಯನ್ಸ್ ತಂಡದ ನಾಯಕ ಯುವರಾಜ್ ಸಿಂಗ್ ಬೌಲಿಂಗ್ ಆಯ್ದುಕೊಂಡಿದ್ದರು.

ಮೊದಲು ಬ್ಯಾಟ್ ಮಾಡಿದ ಸೌತ್ ಆಫ್ರಿಕಾ ಚಾಂಪಿಯನ್ಸ್ ತಂಡಕ್ಕೆ ಹಾಶಿಮ್ ಆಮ್ಲಾ (22) ಹಾಗೂ ರುಡಾಲ್ಫ್ (24) ಉತ್ತಮ ಆರಂಭ ಒದಗಿಸಿದ್ದರು. ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಸರೆಲ್ ಎರ್ವಿ 15 ರನ್ ಗಳಿಸಿ ಔಟಾದರು.

ಆ ಬಳಿಕ ಆಗಮಿಸಿದ ನಾಯಕ ಎ.ಬಿ ಡಿ.ವಿಲಿಯರ್ಸ್ ಸಿಡಿಲಬರಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದರು. ಇಂಡಿಯಾ ಚಾಂಪಿಯನ್ಸ್ ಬೌಲರ್‌ಗಳನ್ನು ಮನಸೋ ಇಚ್ಛೆ ದಂಡಿಸಿದ ಎ.ಬಿ.ಡಿ ಮೈದಾನದ ಮೂಲೆ ಮೂಲೆಗೂ ಬೌಂಡರಿ-ಸಿಕ್ಸರ್‌ಗಳ ಸುರಿಮಳೆಗೈದರು. ಈ ಮೂಲಕ ಕೇವಲ 30 ಎಸೆತಗಳಲ್ಲಿ 4 ಭರ್ಜರಿ ಸಿಕ್ಸ್ ಹಾಗೂ 3 ಬೌಂಡರಿಗಳೊಂದಿಗೆ 63 ರನ್ ಕಲೆ ಹಾಕಿದರು.

ಎ.ಬಿ.ಡಿಯ ಈ ಸ್ಫೋಟಕ ಅರ್ಧಶತಕದ ನೆರವಿನೊಂದಿಗೆ ಸೌತ್ ಆಫ್ರಿಕಾ ಚಾಂಪಿಯನ್ಸ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 208 ರನ್ ಕಲೆ ಹಾಕಿತು.

209 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಇಂಡಿಯಾ ಚಾಂಪಿಯನ್ಸ್ ತಂಡವು ಮೊದಲ 10 ಓವರ್‌ಗಳಲ್ಲಿ ಕಲೆಹಾಕಿದ್ದು ಕೇವಲ 66 ರನ್‌ಗಳು. ಆ ವೇಳೆಗೆ ರಾಬಿನ್ ಉತ್ತಪ್ಪ (2), ಶಿಖರ್ ಧವನ್ (1), ಸುರೇಶ್ ರೈನಾ (16), ಅಂಬಾಟಿ ರಾಯುಡು (0), ಯೂಸುಫ್ ಪಠಾಣ್ (5) ಹಾಗೂ ಇರ್ಫಾನ್ ಪಠಾಣ್ (10) ವಿಕೆಟ್ ಕಳೆದುಕೊಂಡಿದ್ದರು.

18.2 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 111 ರನ್ ಗಳಿಸಿದ್ದ ವೇಳೆ ಮೈದಾನದಲ್ಲಿ ಬೆಳಕಿನ ಕೊರತೆ ಎದುರಾಯಿತು. ಹೀಗಾಗಿ ಪಂದ್ಯವನ್ನು ಸ್ಥಗಿತಗೊಳಿಸಲಾಯಿತು. ಡಕ್‌ವರ್ತ್ ಲೂಯಿಸ್ ನಿಯಮದ ಪ್ರಕಾರ ಸೌತ್ ಆಫ್ರಿಕಾ ಚಾಂಪಿಯನ್ಸ್ ತಂಡ ವಿಜಯಿ ಎಂದು ಘೋಷಿಸಲಾಗಿದೆ.

ಪಿ.ವಿ. ಸಿಂಧು ಪ್ರಿ. ಕ್ವಾರ್ಟರ್ ಫೈನಲ್‌ಗೆ

ಚೀನಾ ಓಪನ್ ಸೂಪರ್ ಬ್ಯಾಡ್ಮಿಂಟನ್ | ಸಾತ್ವಿಕ್-ಚಿರಾಗ್ ಜೋಡಿಗೆ ಗೆಲುವು

ಚಾಂಗ್‌ಝೌ: ಫಾರ್ಮ್ ಮರಳಿ ಪಡೆಯಲು ಪರದಾಡುತ್ತಿರುವ ಅವಳಿ ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಹಲವು ದಿನಗಳ ಬಳಿಕ ಗೆಲುವಿನ ಹಳಿಗೆ ಮರಳಿದಾರೆ. ಚೀನಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಬುಧವಾರ ನಡೆದ ಮಹಿಳಾ ಸಿಂಗಲ್ಸ್‌ನ ಮೊದಲ ಸುತ್ತಿನ ಪಂದ್ಯದಲ್ಲಿ ಉತ್ಕೃಷ್ಟ ಮಟ್ಟದ ಪ್ರದರ್ಶನ ತೋರುವ ಮೂಲಕ ಮುಂದಿನ ಸುತ್ತಿಗೆ ಲಗ್ಗೆಯಿಟ್ಟದಾರೆ. ಇದೇ ವೇಳೆ ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಕೂಡ ಗೆಲುವಿನಿಂದಿಗೆ ಮುನ್ನಡೆ ಸಾಧಿಸಿದ್ದಾರೆ.

ಮಾಜಿ ವಿಶ್ವ ಚಾಂಪಿಯನ್ ಸಿಂಧು ಅವರು ಜಪಾನ್‌ನ ಆರನೇ ಶ್ರೇಯಾಂಕದ ಟೊಮೊಕಾ ಮಿಯಾಜಾಕಿಯನ್ನು ಮೂರು ಸೆಟ್‌ಗಳ ಮ್ಯಾರಥಾನ್ ಹೋರಾಟದಲ್ಲಿ 21-15, 8-21, 21-17 ಅಂತರದಿಂದ ಗೆಲ್ಲುವ ಮೂಲಕ 16ರ ಸುತ್ತಿಗೆ ಪ್ರವೇಶಿಸಿದರು.

ಪ್ರಸ್ತುತ ವಿಶ್ವದ 15ನೇ ಶ್ರೇಯಾಂಕದಲ್ಲಿರುವ ಸಿಂಧು, ಆರಂಭಿಕ ಗೇಮ್‌ನಲ್ಲಿ ಸತತ ಏಳು ಅಂಕಗಳನ್ನು ಗಳಿಸಿ 13-5 ಮುನ್ನಡೆ ಸಾಧಿಸುವ ಮೂಲಕ ಉತ್ತಮ ಆರಂಭವನ್ನು ಪಡೆದರು. ಅದೇ ಲಯ ಮುಂದುವರಿಸಿ ಪಂದ್ಯವನ್ನು ಸುಲಭವಾಗಿ ತಮ್ಮದಾಗಿಸಿಕೊಂಡರು. ಕಳೆದ ವರ್ಷ ಸ್ವಿಸ್ ಓಪನ್‌ನ ಸೋಲಿನ ಸೇಡನ್ನು ಸಿಂಧು ಈ ಬಾರಿಸಿ ತೀರಿಸಿಕೊಂಡರು.

ಪುರುಷರ ಡಬಲ್ಸ್‌ನಲ್ಲಿ ವಿಶ್ವದ 15ನೇ ಶ್ರೇಯಾಂಕದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಜಪಾನ್‌ನ ಜಪಾನ್‌ನ ಕೇನ್ಯಾ ಮಿತ್ಸುಹಾಶಿ ಮತ್ತು ಹಿರೋಕಿ ಒಕಮುರಾ ವಿರುದ್ಧ 21-13, 21-9 ನೇರ ಗೇಮ್‌ಗಳಿಂದ ಗೆದ್ದು ಬೀಗಿದರು, ಹಾಗಾಗಿ ಆ ಪಂದ್ಯ ಕೇವಲ 31 ನಿಮಿಷಗಳಲ್ಲಿ ಅಂತ್ಯ ಕಂಡಿತು.

ವಿಟಾಕೀಸ್

ಕೊತ್ತಲವಾಡಿಯಲಿ ಆ್ಯಕ್ಷನ್ ಅಬ್ಬರ

ನಟ ಯಶ್ ತಾಯಿ ಪುಷ್ಪ ಅರುಣ್ ಕುಮಾರ್ ನಿರ್ಮಾಣದ ಕೊತ್ತಲವಾಡಿ ಸಿನಿಮಾದ ಟ್ರೇಲರ್ ರಿಲೀಸ್ ಆಗಿದೆ. ಕೊತ್ತಲವಾಡಿ ಎಂಬ ಊರಿನಲ್ಲಿ ನಡೆಯುವ ಕಥೆ ಇದಾಗಿದ್ದು, ರಾಜಕೀಯ ದಂಗಲ್, ಪೊಲೀಸ್ ವ್ಯವಸ್ಥೆ, ಅವಕಾಶವಾದಿತನ, ನಾಯಕನ ಹೋರಾಟ, ಛಲ ಸುತ್ತ ಸಿನಿಮಾ ಸಾಗುತ್ತದೆ. ಹಳ್ಳಿ ಹೈದನಾಗಿ ಪೃಥ್ವಿ ಅಂಬರ್ ರಗಡ್ ಅವತಾರ ತಾಳಿದ್ದು, ನಾಯಕಿಯಾಗಿ ಕಾವ್ಯಾ ಶೈವ ನಟಿಸಿದ್ದಾರೆ. ಗೋಪಾಲ ದೇಶಪಾಂಡೆ ಅದ್ಭುತ ಪಾತ್ರದಲ್ಲಿ ಅಭಿನಯಿಸಿದ್ದು, ರಾಜೇಶ್ ನಟರಂಗ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ.

ಶ್ರೀರಾಜ್ ಕೊತ್ತಲವಾಡಿಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಟ್ರೇಲರ್ ಕ್ವಾಲಿಟಿ ಅದ್ಬುತವಾಗಿದ್ದು, ಒಂದೊಳ್ಳೆಯ ಕಂಟೆಂಟ್ ಇದೆ ಎಂಬುದು ಟ್ರೇಲರ್‌ನಲ್ಲಿ ಸ್ಪಷ್ಟವಾಗುತ್ತದೆ. ರಘೂ ನಿಡುವಳ್ಳಿ ಸಂಭಾಷಣೆ ಟ್ರೇಲರ್‌ಮನ ಹೈಲೆಟ್ ಆಗಿದೆ. ಜನ ಈ ಚಿತ್ರವನ್ನು ಹೇಗೆ ತೆಗೆದುಕೊಳ್ಳುತ್ತಾರೊ ಎಂಬ ಭಯವಿದೆ. ಜನ ನಮ್ಮ ಕೈಬಿಡುವುದಿಲ್ಲ ಎಂಬ ನಂಬಿಕೆಯೂ ಇದೆ ಎಂದು ನಿರ್ಮಾಪಕಿ ಪುಷ್ಪಾ ಅರುಣ್‌ಕುಮಾರ್ ಹೇಳಿದರು.

ಸಿನಿಮಾದ ಹಾಡುಗಳಿಗೆ ವಿಕಾಸ್ ವಸಿಷ್ಠ ಮತ್ತು ಅಭಿನಂದನ್ ಕಶ್ಯಪ್ ಸಂಗೀತ ಸಂಯೋಜಿಸಿದ್ದಾರೆ. ಕಾರ್ತಿಕ್ ಛಾಯಾಗ್ರಹಣ ರಾಮಿಸೆಟ್ಟಿ ಪವನ್ ಸಂಕಲನ ಈ ಚಿತ್ರಕ್ಕಿದೆ. ವಿ.ನಾಗೇಂದ್ರ ಪ್ರಸಾದ್, ಕಿನ್ನಾಳ್ ರಾಜ್, ಪ್ರಮೋದ್ ಮರವಂತೆ, ಗೌಸ್‌ಪಿರ್ ಸಾಹಿತ್ಯ ಈ ಚಿತ್ರಕ್ಕಿದೆ.

ಸಿನಿಮಾ ನಿರ್ದೇಶನದ ಖುಷಿಯ ಜತೆಗೆ ಜವಾಬ್ದಾರಿಯೂ ಹೆಚ್ಚಿದೆ. ಎಲ್ಲರಿಗೂ ಹಿಡಿಸುವ ಸ್ಟೋರಿ ಚಿತ್ರದಲ್ಲಿದೆ. ನಿರ್ಮಾಪಕರ ಸಹಕಾರಿದಿಂದ ಸಿನಿಮಾವನ್ನು ಅಂದುಕೊಂಡಂತೆ ನಿರ್ದೇಶಿಸಲು ಸಾಧ್ಯವಾಗಿದೆ. ಕ್ವಾಲಿಟಿ, ಕಂಟೆಂಟ್ ಎಲ್ಲವೂ ಅದ್ಭುತವಾಗಿದೆ.

- ಶ್ರೀರಾಜ್ ನಿರ್ದೇಶಕ

ಕಮರೊಟ್ಟಿನಲ್ಲಿ ಹಾರರ್ ಸದ್ದು

ಕನ್ನಡದಲ್ಲಿ ತೀರ ಅಪರೂಪ ಎನ್ನಬಹುದಾದ ಪ್ಯಾರಾ ನಾರ್ಮಲ್ ಜಾನರ್‌ನ ಕಮರೊ2 ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಭಾರಿ ಕುತೂಹಲ ಮೂಡಿಸಿದೆ. ಈ ಹಿಂದೆ ತೆರೆಗೆ ಬಂದು ಯಶಸ್ವಿಯಾದ ಕಮರೊಟು ಚೆಕ್ ಪೋಸ್ಟ್ ಸೀಕ್ವೆಲ್ ಆಧರಿಸಿ ಈ ಚಿತ್ರ ಸಿದ್ಧವಾಗಿದೆ. ಹಾರಾರ್ ಕಥಾಹಂದರವನ್ನೂ ಹೊಂದಿರುವ ಈ ಕಮರೊ2 ಆಗಸ್ಟ್ 1 ರಂದು ಬಿಡುಗಡೆಯಾಗಲಿದೆ. ಪವನ್ ಗೌಡ ನಿರ್ಮಾಣದ ಈ ಚಿತ್ರವನ್ನು ಎ.ಪರಮೇಶ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಈ ಚಿತ್ರದಲ್ಲಿ ಪ್ರಿಯಾಂಕಾ ಉಪೇಂದ್ರ ಈವರೆಗೂ ಮಾಡಿರದ ಪಾತ್ರದಲ್ಲಿ ನಟಿಸಿದ್ದಾರೆ. ಕಿರುತೆರೆ ಖ್ಯಾತಿಯ ಅನಂತಸ್ವಾಮಿ, ನಟಿ ರಜನಿ ಭಾರದ್ವಾಜ್ ಈ ಸಿನಿಮಾದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ವಿಶೇಷ ಪಾತ್ರದಲ್ಲಿ ರಾಘವೇಂದ್ರ ರಾಜಕುಮಾರ್ ಅಭಿನಯಿಸಿದ್ದಾರೆ. ಉಳಿದಂತೆ ನೀನಾಸಂ ಅಶ್ವಥ್, ನಾಗೇಂದ್ರ ಅರಸ್, ಮಹೇಶ್ ರಾಜ್, ಬೇಬಿ ಖುಷಿ ಮುಂತಾದವರು ತಾರಾಗಣದಲ್ಲಿದ್ದಾರೆ. ಎ.ಟಿ.ರವೀಶ್ ಸಂಗೀತ ನಿರ್ದೇಶನ, ಪ್ರಜ್ವಲ್ ಗೌಡ ಛಾಯಾಗ್ರಹಣ ಈ ಚಿತ್ರಕ್ಕಿದೆ. ಮಂಗಳೂರು ಉಡುಪಿ, ಚಿಕ್ಕಮಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಇದು ನನ್ನ ನಿರ್ಮಾಣದ ಮೊದಲ ಚಿತ್ರ. ನಾನು ರವಿಚಂದ್ರನ್ ಅವರ ಅಭಿಮಾನಿ. ಹಾಗಾಗಿ ನಮ್ಮ ಸಂಸ್ಥೆಗೆ ಕನಸು ಪಿಕ್ಚರ್ಸ್ ಎಂದು ಹೆಸರಟ್ಟಿದ್ದೇನೆ. ಆಗಸ್ಟ್ 1 ರಂದು ನಮ್ಮ ಚಿತ್ರ ಬಿಡುಗಡೆಯಾಗುತ್ತಿದೆ. ಈ ಸಿನಿಮಾ ಕೂಡ ಪ್ರೇಕ್ಷರನ್ನು ಸೆಳೆಯಲಿದೆ ಎಂಬ ನಂಬಿಕೆ ಇದೆ ಎಂದು ನಿರ್ಮಾಪಕ ಪವನ್ ಗೌಡ ಹೇಳಿದರು.

ಪ್ಯಾರಾ ನರ್ಮಲ್ ಜಾನರ್‌ನ ಕಮರೊಟು ಚೆಕ್ ಪೋಸ್ಟ್ ಎಂಬ ಚಿತ್ರವನ್ನು ನಿರ್ದೇಶನ ಮಾಡಿದ್ದೆ. ಅದರಲ್ಲಿ ಯಾವುದೇ ಪರಿಚಿತ ಕಲಾವಿದರು ಅಭಿನಯಿಸಿರಲಿಲ್ಲ. ಆದರೂ ಆ ಚಿತ್ರ ಅಪಾರ ಮೆಚ್ಚುಗೆ ಪಡೆದು ಯಶಸ್ವಿಯಾಗಿತ್ತು. ಈಗ ಆ ಚಿತ್ರದ ಸೀಕ್ವೆಲ್ ಆಗಿ ಕಮರೊ2 ಚಿತ್ರವನ್ನು ನಿರ್ದೇಶನ ಮಾಡಿದ್ದೇನೆ. ಇದು ಹಾರಾರ್ ಕಥೆಯೊಂದಿಗೆ ಪ್ಯಾರಾ ನಾರ್ಮಲ್ ಜಾನರ್‌ನ ಚಿತ್ರವಾಗಿದೆ.

- ಪರಮೇಶ್ ನಿರ್ದೇಶಕ

ಚಿತ್ರದಲ್ಲಿ ನನ್ನ ಪಾತ್ರ ಚೆನ್ನಾಗಿದೆ. ಯಾವುದೇ ಭಾಷೆಗಳ ಚಿತ್ರಗಳಿಗೂ ಕಡಿಮೆ ಇಲ್ಲದಂತೆ ಗುಣಮಟ್ಟದ ಚಿತ್ರವಾಗಿ ಮೂಡಿಬಂದಿದೆ. ಇಂತಹ ಚಿತ್ರಗಳು ಕನ್ನಡದಲ್ಲಿ ಹೆಚ್ಚಾಗಿ ಮೂಡಿಬರಬೇಕು.

-ಪ್ರಿಯಾಂಕಾ ಉಪೇಂದ್ರ

ತೆರೆಯಲ್ಲಿ ನರಸಿಂಹನ ದಶಾವತಾರ

ಡಾ. ರಾಜಕುಮಾರ್ ಹಾಗೂ ಪುನೀತ್ ರಾಜಮಾರ್ ಅಭಿನಯದ ಭಕ್ತ ಪ್ರಹ್ಲಾದ ಚಿತ್ರವು ಕನ್ನಡದ ಅತ್ಯುತ್ತಮ ಚಿತ್ರಗಳಲ್ಲಿ ಒಂದು. ಈಗ ಅದೇ ಭಕ್ತ ಪ್ರಹ್ಲಾದ ಮತ್ತು ನರಸಿಂಹಾವತಾರ ಕಥೆಯನ್ನು ಮುಂದಿನ ತಲೆಮಾರಿನವರಿಗೆ ತಿಳಿಸಲು ಒಂದು ಅನಿಮೇಷನ್ ಚಿತ್ರ ಸಿದ್ಧವಾಗಿದೆ. ಮಹಾವತಾರ ನರಸಿಂಹ ಎಂಬ ಶೀರ್ಷಿಕೆಯಲ್ಲಿ ಸಿನಿಮಾ ರೆಡಿಯಾಗಿದ್ದು ಚಿತ್ರದ ಟ್ರೇಲರ್ ಸಿನಿಪ್ರಿಯರ ಹೃದಯ ಗೆದ್ದಿದೆ. ಇದೇ ವಾರ ಕನ್ನಡ ಸೇರಿದಂತೆ ಹಿಂದಿ, ತಮಿಳು, ತೆಲುಗು ಹಾಗೂ ಮಲೆಯಾಳಂ ಭಾಷೆಗಳಲ್ಲಿ ಚಿತ್ರ ಬಿಡುಗಡೆಯಾಗಲಿದೆ. ಕನ್ನಡದಲ್ಲಿ ಈ ಚಿತ್ರವನ್ನು ಹೊಂಬಾಳೆ ಫಿಲಂಸ್ ರಾಜ್ಯಾದ್ಯಂತ ಬಿಡುಗಡೆ ಮಾಡುತ್ತಿದೆ.



ಭಕ್ತಪ್ರಹ್ಲಾದ ಸಿನಿಮಾ ನನ್ನನ್ನು ಬಹುವಾಗಿ ಕಾಡಿತು. ನರಸಿಂಹ ಸ್ವಾಮಿ ಕುರಿತು ಸಿನಿಮಾ ಮಾಡುವ ಬಗ್ಗೆ ಚರ್ಚೆ ನಡಿಸಿದೆವು. ಭಕ್ತ ಪ್ರಹ್ಲಾದ ಸೇರಿದಂತೆ ಹಲವು ಚಿತ್ರಗಳು ಮತ್ತು ಪುರಾಣ ಕಥೆಗಳನ್ನು ಓದಿ ಚಿತ್ರಕಥೆ ಸಿದ್ಧ ಮಾಡಿದೆ. ಈ ಮಹಾವತಾರ ನರಸಿಂಹ ಚಿತ್ರಕ್ಕಾಗಿ ನಮ್ಮ ತಂಡ ಐದು ವರ್ಷ ಶ್ರಮಿಸಿದೆ. ಭಕ್ತ ಪ್ರಹ್ಲಾದ ಚಿತ್ರವನ್ನು ಮೂಲವಾಗಿಟ್ಟುಕೊಂಡು ಚಿತ್ರ ಮಾಡಿದ್ದೇವೆ. ಸಂಪೂರ್ಣ ಅನಿಮೇಷ ಚಿತ್ರ ಮಾಡುವುದು ಸುಲಭದ ಮಾತಲ್ಲ. ಸಾಕಷ್ಟು ತಾಂತ್ರಿಕ ಸಮಸ್ಯೆಗಳಿದ್ದು, ಅದನ್ನೆಲ್ಲಾ ಮೀರಿ ನಾಲ್ಕೂವರೆ ವರ್ಷಗಳಲ್ಲಿ ಈ ಚಿತ್ರ ರೂಪಿಸಿದ್ದೇವೆ. ಈ ಸರಣಿಯ ಮುಂದುವರಿದ ಭಾಗವಾಗಿ ಮಹಾವತಾರ ಪರಶುರಾಮ ಸಿನಿಮಾ ಮಾಡಲು ಯೋಜನೆ ಹಾಕಿಕೊಂಡಿದ್ದೇವೆ ಎಂದು ನಿರ್ದೇಶಕ ಅಶ್ವಿನ್ ಕುಮಾರ್ ಹೇಳಿದರು.

ಕ್ಲೀಂ ಪ್ರೊಡಕ್ಷನ್ಸ್‌ನಲ್ಲಿ ಶಿಲ್ಪಾ ಧವನ್ ಚಿತ್ರ ನಿರ್ಮಾಣ ಮಾಡಿದ್ದಾರೆ. ರಾಜ್ಯಾದ್ಯಂತ ಸುಮಾರು ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಮಹಾವತಾರ ನರಸಿಂಹ ಸಿನಿಮಾ ಬಿಡುಗಡೆಯಾಗಲಿದೆ.